ವಿಜ್ಞಾಪನೆ

ಶ್ರೀಯುತ ರಜನೀಕಾಂತಗುಪ್ತರಿಂದ ವಂಗಭಾಷೆಯಲ್ಲಿ ರಚಿತವಾದ 'ಭೀಷ್ಮಚರಿತೆ'ಯನ್ನು ನಾನು ಇಂದಿಗೆ ಬಹು ವರ್ಷಗಳ ಹಿಂದೆ ಓದಿ ಅದನ್ನು ಕನ್ನಡಿಸಿ 'ಆರ್ಯಕೀರ್ತಿ'ಯ ಪ್ರಥಮ ಭಾಗವನ್ನು ಪ್ರಕಟಿಸಿದೊಡನೆಯೇ ಅಚ್ಚು ಹಾಕಿಸಬೇಕೆಂದಿದ್ದೆನು; ಆದರೆ ಆ ಆಲೋಚನೆಯು ಸಾಗಲಿಲ್ಲ. ಈಚೆಗೆ ಅದನ್ನು ಅಚ್ಚು ಹಾಕಿಸಬೇಕೆಂದೆಣಿಸಿ, ಮೂಲದಲ್ಲಿ ಪ್ರಾಸಂಗಿಕವಾಗಿ ಸೂಚಿಸಿರುವ ಕೆಲವು ಸಂಗತಿಗಳನ್ನು ಮಹಾಭಾರತದಲ್ಲಿ ಹೇಳಿರುವಂತೆ ಸ್ವಲ್ಪ ಮಟ್ಟಿಗೆ ವಿವರಿಸಿ, ಮತ್ತೆ ಕೆಲವು ಹೆಚ್ಚು ಸಂಗತಿಗಳನ್ನು ಸೇರಿಸಿ, ಭೀಷ್ಮನ ಪರಿಸ್ಥಿತಿಯೂ ಅವನ ಅಸಾಮಾನ್ಯ ಪಿತೃಭಕ್ತಿ, ಅಪೂರ್ವ ಸತ್ಯಪರಾಯಣತೆ, ಅನನ್ಯ ಪರಾರ್ಥಪರತೆ, ಧರ್ಮಶೀಲತೆ, ಆತ್ಮಸಂಯಮತೆ, ವೀರ್ಯಶೌರ್ಯಾದಿ ಸದ್ಗುಣಗಳೂ ವಿಶದವಾಗುವಂತೆ ಕಥೆಯನ್ನು ಸ್ವಲ್ಪ ವಿಸ್ತರಿಸಿ ಬರೆದಿದ್ದೇನೆ. ಆದರೂ, ಇಷ್ಟು ಸಣ್ಣ ಸಂಪುಟದಲ್ಲಿ ಕುರುಕುಲ ಪ್ರತಿಷ್ಠಾಪನಾಚಾರ್ಯನ ಅದ್ಭುತ ಮಾಹಾತ್ಮ್ಯವು ಅಡಕವಾಗುವುದೂ ಅಲ್ಲ, ನನ್ನಂತಹ ಅಲ್ಪಶಕ್ತನಿಗೆ ನಿಲುಕುವುದೂ ಅಲ್ಲ ಎಂದು ತಿಳಿದು ಇಷ್ಟರಲ್ಲಿಯೇ ವಿರಮಿಸಿರುವೆನು.

ಈ ಕಥೆಯನ್ನು ಬರೆಯುವುದರಲ್ಲಿ, ಪ್ರತಾಪಚಂದ್ರರಾಯ್ ಅವರು ಆಂಗ್ಲೇಯ ಭಾಷೆಗೆ ಪರಿವರ್ತಿಸಿರುವ ಮಹಾಭಾರತದಿಂದ ನನಗೆ ವಿಶೇಷ ಸಾಹಾಯ್ಯವಾಯಿತು. ರಾಜಕಾರ್ಯಪ್ರಸಕ್ತ ರಾವ್‌ಬಹದ್ದೂರ್ ಮ॥ರಾ॥ ಶ್ರೀ ಎಂ. ಶಾಮರಾವ್, ಎಂ ಎ. ಅವರು ನಾನು ಬರೆದಿರುವ ಪುಸ್ತಕವನ್ನು ನೋಡಿ, ಅದು ಪ್ರಕಟಿಸಲು ಅರ್ಹವಾಗಿದೆ ಎಂದು ಹೇಳಿ ನನ್ನನ್ನು ಪ್ರೋತ್ಸಾಹಗೊಳಿಸಿದುದಕ್ಕಾಗಿ ಆ ಮಹನೀಯರನ್ನು ವಂದಿಸುತ್ತೇನೆ.

ನನ್ನ ಮಿತ್ರರಾದ ಮ॥ ರಾ॥ ಶ್ರೀ ಮ. ಆ. ತಿರುಮಲಾಚಾರ್ಯ, ಬಿ.ಎ. ಅವರು ನಾನು ಬರೆದ ಪ್ರತಿಯಲ್ಲಿದ್ದ ಅಕ್ಷರಸ್ಖಾಲಿತ್ಯ ಪುನರುಕ್ತಿಗಳಿಗೆ ಎಡೆಗೊಡದೆ, ಅಚ್ಚು ಹಾಕಿಸುವುದಕ್ಕೆ ತಕ್ಕಂತೆ ಮುಕ್ತಾಫಲದಂತಿರುವ ತಮ್ಮ ಅಕ್ಷರದಲ್ಲಿ, ಒಂದು ಶುದ್ಧ ಪ್ರತಿಯನ್ನು ಬರೆದುಕೊಟ್ಟರು. ಆ ಉಪಕಾರಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೇನೆ.

ಮ|| ರಾ|| ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪ, ಎಂ.ಎ. ಅವರು ಅಡಿಗಡಿಗೆ ನಾನು ಕೊಡುತ್ತಿರುವ ತೊಂದರೆಗೆ ಬೇಸರದೆ, ಪುಸ್ತಕದಲ್ಲಿದ್ದ ನನ್ನ ಭ್ರಮ ಪ್ರಮಾದಗಳನ್ನು ತಿದ್ದಿ ಮುದ್ರಾಂಕನದ ತಪ್ಪುಗಳನ್ನು ಸಾವಧಾನವಾಗಿ ಶೋಧನೆ ಮಾಡುವ ಶ್ರಮವನ್ನು ವಹಿಸಿದುದಕ್ಕಾಗಿ ನಾನು ಅವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ. ಬೆಂಗಳೂರು ಪ್ರೆಸ್ಸಿನವರು ಈ ಪುಸ್ತಕವನ್ನು ಸಕಾಲಕ್ಕೆ ಅಚ್ಚು ಹಾಕಿಕೊಟ್ಟುದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು,
೧೦ ನೆಯ ಜೂಲೈ, ೧೯೩೭.

ಚ. ವಾಸುದೇವಯ್ಯ



ಪ್ರೊ॥ ಎಂ. ಹಿರಿಯಣ್ಣನವರು

FOREWORD

The Mahabharata, as it has for long been accepted, deals primarily with the highest of human values, viz., *mokṣa* or spiritual freedom. But as those who are qualified to pursue that value directly are never many, the bulk of the work is concerned with the other spiritual value of *dharma* which is ancillary to *mokṣa*. The epic is consequently known not only as a *mokṣa-śāstra* but also as a *dharma-śāstra*. It differs, however, from works of the latter class in one important respect. It does not, like the Code of Manu (say), inculcate the principles of *dharma* merely in the abstract. It takes advantage of the varied circumstances in life which, as an epic poem, it has to depict and elucidates, through them, what moral conflict means and how wise and virtuous men behave when confronted with it. It also utilises for a like purpose the numerous episodes, which it happens to include. This concrete way of dealing with *dharma* which the Mahabharata adopts, like the other popular epic of the Ramayana, explains the wide knowledge of the ideal of *dharma* which all classes of our society possess, and their implicit faith in the ultimate success of a life whole-heartedly devoted to its pursuit: *Yato dharmaḥ tato jayaḥ*.

It is from this famous epic that the theme of the present work is drawn. The 'Story of Bhisma', however, is not an episode in it. Bhisma is one of the great moral heroes that figure in the epic, and his story is intertwined with the main narrative almost throughout the work. It is separated here from that narrative, and its details are so readjusted that they constitute a new and systematic whole centring round the brave and noble personality of Bhisma. And, in this form, it is retold in Kannada, in all its bearings on the duty of man and with a fervour which the late Mr. Vasudevaiya, the author of the work, as all who were privileged to come in contact with him knew, showed in supporting everything good and great. But it

is not merely an impressive treatise on what may be described as 'practical ethics' that we have here. The book has a literary quality of its own. It is written in a simple, pure and elevated style; and the account it gives is interspersed with graphic descriptions, such as those of the beauty of nature and the splendour of royal assemblies, that appeal to the imagination of the reader. It is gratifying to find that there will be a reissue of this excellent book, and we are sure that it will be widely read and appreciated.

M.H.

ಮುನ್ನುಡಿ

ಬಹುಕಾಲದಿಂದಲೂ ಅಂಗೀಕೃತವಾಗಿರುವಂತೆ ಮಹಾಭಾರತದಲ್ಲಿ ಪ್ರಥಮತಃ ಮುಖ್ಯವಾಗಿ ನಿರೂಪಿತವಾಗಿರುವುದು, ಪುರುಷಾರ್ಥಗಳಲ್ಲಿ ಅತ್ಯಂತ ಮುಖ್ಯವಾದ ಮೋಕ್ಷದ ವಿಚಾರ. ಆದರೆ, ಮೋಕ್ಷಸಾಧನೆಗೆ ಪ್ರತ್ಯಕ್ಷವಾಗಿ ಅಧಿಕಾರಸಿದ್ಧಿಯನ್ನು ಪಡೆದಿರುವವರ ಸಂಖ್ಯೆಯು ಎಂದೂ ಕಡಿಮೆಯೇ. ಆದಕಾರಣ, ಮೋಕ್ಷಸಹಾಯಕ ಪುರುಷಾರ್ಥವಾದ ಧರ್ಮದ ನಿರೂಪಣೆಗೆ ಮಹಾಭಾರತದ ಬಹುಭಾಗವು ಮೀಸಲಾಗಿದೆ. ಹೀಗಿರುವುದರಿಂದ, ಮಹಾಭಾರತಕ್ಕೆ ಮೋಕ್ಷಶಾಸ್ತ್ರವೆಂದು ಮಾತ್ರವೇ ಅಲ್ಲದೆ ಧರ್ಮಶಾಸ್ತ್ರವೆಂಬ ಹೆಸರೂ ಬಂದಿದೆ. ಆದಾಗ್ಯೂ, ಮಹಾಭಾರತಕ್ಕೂ, ಕೇವಲ ಧರ್ಮಶಾಸ್ತ್ರ ಗ್ರಂಥಗಳಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಮನುಸ್ಮೃತಿ ಮುಂತಾದುವುಗಳಲ್ಲಿರುವಂತೆ ಧಾರ್ಮಿಕ ತತ್ವಗಳು ಮಹಾಭಾರತದಲ್ಲಿ ಕೇವಲ ಸೂತ್ರಾತ್ಮಕ ರೂಪದಲ್ಲಿ ನಿರೂಪವಾಗಿಲ್ಲ. ಮಹಾಭಾರತವು ವೀರಚರಿತಾತ್ಮಕವಾದ ಮಹಾಕಾವ್ಯವಾದುದರಿಂದ ಜೀವನದ ನಾನಾ ಸನ್ನಿವೇಶಗಳಿಗೆ ಸಂಬಂಧಪಟ್ಟ ಘಟನೆಗಳು ಅದರಲ್ಲಿ ಚಿತ್ರಿತವಾಗಿವೆ. ಜೀವನದಲ್ಲಿ ಒದಗುವ ಧರ್ಮಸಂಕಟಗಳೂ, ಅವುಗಳನ್ನು ವಿವೇಕಿಗಳಾದ ಸತ್ಪುರುಷರು ಎದುರಿಸಿ ಕೃತಕೃತ್ಯರಾಗುವ ರೀತಿಗಳೂ, ಆ ಘಟನೆಗಳ ಮೂಲಕ ಮಹಾಭಾರತದಲ್ಲಿ ನಿರೂಪಿತವಾಗಿವೆ. ಮಹಾಭಾರತದಲ್ಲಿ ಬರುವ ಅನೇಕ ಉಪಾಖ್ಯಾನಗಳ ಮೂಲಕವೂ ಅನೇಕ ಧರ್ಮಸೂಕ್ಷ್ಮಗಳೂ ನಿರೂಪಿತವಾಗಿವೆ. ಮಹಾಭಾರತದಲ್ಲೂ, ಅದೇ ಬಗೆಯ ಮತ್ತೊಂದು ಮಹಾಕಾವ್ಯವಾದ ರಾಮಾಯಣದಲ್ಲೂ, ಧರ್ಮನಿರೂಪಣೆಯು ಈ ರೀತಿ ನಡೆದು, ಧರ್ಮಪರಾಯಣತೆಯ ಧ್ಯೇಯದ ಸ್ವರೂಪವೂ, ಭಾರತೀಯರಲ್ಲಿ ಸಮಸ್ತ ವರ್ಗಗಳವರಲ್ಲೂ ನೆಲಸಿರುವ ಪ್ರಬಲವಾದ ಧಾರ್ಮಿಕ ಪ್ರವೃತ್ತಿಯೂ, ಎಲ್ಲಿ ಧರ್ಮದ ಅವಲಂಬನವುಂಟೊ ಅಲ್ಲಿ ಜಯವೆಂಬ ("ಯತೋ ಧರ್ಮಸ್ತತೋ ಜಯಃ" ಎಂಬ) ದಿವ್ಯ ಸಂದೇಶದಲ್ಲಿ ಅವರಿಗಿರುವ ಅಚಲಶ್ರದ್ಧೆಯೂ ಹೃದಯಂಗಮವಾಗಿ ವರ್ಣಿತವಾಗಿವೆ.

"ಭೀಷ್ಮಚರಿತೆ" ಎಂಬ ಈ ಗ್ರಂಥವು ಮಹಾಭಾರತದ ಕಥೆಯ ಆಧಾರದ ಮೇಲೆ ರಚಿತವಾಗಿದೆ. ಭೀಷ್ಮನ ಕಥೆಯು ಮಹಾಭಾರತದ ಒಂದು ಉಪಾಖ್ಯಾನವಲ್ಲ. ಧರ್ಮಾತ್ಮನಾದ ವೀರರಲ್ಲೊಬ್ಬನಾದ ಭೀಷ್ಮನ ಕಥೆಯು ಒಟ್ಟು ಮಹಾಭಾರತದ ಮೂಲ ಕಥೆಗೇ ಹಬ್ಬಿಕೊಂಡು ಬಹುತರವಾಗಿ

ಮಹಾಭಾರತದ ಆದ್ಯಂತವಾಗಿ ಎಲ್ಲೆಲ್ಲೂ ಕಂಡುಬರುತ್ತದೆ. ಹಾಗೆ ಕಂಡು ಬರುವ ಆ ಕಥೆಗೆ ಸಂಬಂಧಪಟ್ಟ ನಾನಾ ಘಟನೆಗಳನ್ನು ಪ್ರತ್ಯೇಕಿಸಿ ಓರಣವಾಗಿ ಒಂದೆಡೆ ಸೇರಿಸುವ ಪ್ರಯತ್ನವು ಈ ಗ್ರಂಥದಲ್ಲಿ ನಡೆದಿದೆ. ಭೀಷ್ಮನು ವೀರಾಗ್ರಣಿಗಳಲ್ಲೊಬ್ಬನಾದ ಮಹಾನುಭಾವ, ಆತನನ್ನು ಕಥಾನಾಯಕನನ್ನಾಗಿಟ್ಟುಕೊಂಡು ಆತನ ಜೀವನಕ್ಕೆ ಸಂಬಂಧಪಟ್ಟ ನಾನಾ ಘಟನೆಗಳನ್ನು ಆತನ ವ್ಯಕ್ತಿತ್ವವು ವ್ಯಕ್ತವಾಗುವಹಾಗೆ ಸಕ್ರಮವಾಗಿಯೂ ಸಮಗ್ರವಾಗಿಯೂ ನೂತನ ರೀತಿಯಲ್ಲಿ ಅಳವಡಿಸಿ ಬರೆದಿರುವ ಗ್ರಂಥವು ಈ "ಭೀಷ್ಮಚರಿತೆ." ಈ ಗ್ರಂಥವನ್ನು ಬರೆದಿರುವವರು ದಿವಂಗತ ಶ್ರೀ ಚ. ವಾಸುದೇವಯ್ಯನವರು. ಉದಾತ್ತವಾದ ಸದ್ವಿಚಾರಗಳಿಗೆಲ್ಲಾ ಅವರು ಪೂರ್ಣಶ್ರದ್ಧೆಯಿಂದ ಒತ್ತಾಸೆಯನ್ನು ನೀಡುತ್ತಿದ್ದರೆಂಬುದನ್ನು ಅವರ ಪರಿಚಯದ ಸುಯೋಗವನ್ನು ಪಡೆದಿದ್ದವರೆಲ್ಲರೂ ಬಲ್ಲರು. ಆ ಶ್ರದ್ಧಾವಂತರು ಮನುಷ್ಯನ ಕರ್ತವ್ಯಬೋಧೆಗೆ ಸಂಬಂಧಪಡುವ ಅಂಶಗಳೆಲ್ಲಾ ಸುವ್ಯಕ್ತವಾಗುವಂತೆ ಭೀಷ್ಮಚರಿತೆಯನ್ನು ಕನ್ನಡಭಾಷೆಯಲ್ಲಿ ಬರೆದಿದ್ದಾರೆ. ಈ ಗ್ರಂಥವು ನೀತಿನಿಷ್ಠೆಯನ್ನು ವಾಚಕರ ಮನಸ್ಸಿನಲ್ಲಿ ಪ್ರತಿಬಿಂಬಿಸಿ ಬೋಧಪ್ರದವಾಗಿರುವ ಗ್ರಂಥವು ಮಾತ್ರವೇ ಅಲ್ಲ. ಇದು ತನ್ನದೇ ಆದೊಂದು ವೈಶಿಷ್ಟ್ಯವನ್ನು ಪಡೆದಿರುವ ಸಾಹಿತ್ಯಕೃತಿಯೂ ಆಗಿದೆ. ಈ ಗ್ರಂಥವು ಸರಳವಾದ, ಶುದ್ಧವಾದ ಮತ್ತು ಉತ್ಕೃಷ್ಟವಾದ ಶೈಲಿಯಲ್ಲಿ ರಚಿತವಾಗಿದೆ. ಈ ಗ್ರಂಥದಲ್ಲಿ, ಪ್ರಕೃತಿಸೌಂದರ್ಯ, ರಾಜಸಭೆಗಳ ವೈಭವ, ಮುಂತಾದುವುಗಳ ಮನಮೋಹಕವಾದ ವರ್ಣನೆಗಳು ಕಣ್ಣಿಗೆ ಕಟ್ಟುವಂತಿವೆ. ಅತ್ಯುತ್ತಮಸಾಹಿತ್ಯಕೃತಿಯಾದ ಈ ಗ್ರಂಥದ ಪುನರ್ಮುದ್ರಣವು ನಡೆಯುವುದೆಂಬ ಸಂಗತಿಯು ಸಂತೋಷಕರವಾಗಿದೆ. ಈ ಗ್ರಂಥವು ಪುನರ್ಮುದ್ರಣವಾದಮೇಲೆ ಬಹುಮಂದಿಗಳು ಇದನ್ನು ಓದಿ ಆನಂದಿಸುವರೆಂದು ನಾವು ನಂಬಿದ್ದೇವೆ.

ಎಂ. ಎಚ್.

ಅರಿಕೆ

ಪರಮಪೂಜ್ಯರೂ, ನಮ್ಮ ತೀರ್ಥರೂಪರವರೂ ಆದ ದಿವಂಗತ ಶ್ರೀ ಚ. ವಾಸುದೇವಯ್ಯನವರಿಂದ ರಚಿತವಾದ 'ಭೀಷ್ಮ ಚರಿತೆ'ಯನ್ನು ಮೊಟ್ಟ ಮೊದಲು ೧೯೨೭ ರಲ್ಲಿ ಪ್ರಕಟಿಸಲಾಯಿತು. ಪುನರ್ಮುದ್ರಣವನ್ನು ಮಾಡಿಸ ಬೇಕೆಂಬ ಯೋಚನೆಯು ಅವರ ಜೀವಿತಕಾಲದಲ್ಲಿ ಅಂತ್ಯದ ವರೆಗೂ ಇತ್ತು. ಆದರೆ ಸಾಧ್ಯವಾಗಲಿಲ್ಲ. ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆ ಯವರು ೧೯೪೭-೧೯೪೮ ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ 'ಆರ್ಯ ಕೀರ್ತಿ'ಯ ಮೊದಲನೆ ಭಾಗವನ್ನು ಪಠ್ಯಪುಸ್ತಕವನ್ನಾಗಿ ನೇಮಿಸಿದುದು ಮಿಕ್ಕ ಪುಸ್ತಕಗಳನ್ನು ಅಚ್ಚು ಹಾಕಿಸುವಂತೆ ಪ್ರೇರೇಪಿಸಿತು. ಆದರೆ ಕಾಲದ ಪರಿಸ್ಥಿತಿಯು ಬರುಬರುತ್ತಾ ಕಠಿಣವಾಗಿ ಕಂಡುಬಂದಿತು. ಹಾಗೂ ಧೈರ್ಯ ಮಾಡಿ 'ಆರ್ಯಕೀರ್ತಿ' ಎರಡನೆ ಭಾಗವನ್ನು ೧೯೪೯ ರಲ್ಲಿ ಅಚ್ಚು ಹಾಕಿಸ ಲಾಯಿತು. ಮದ್ರಾಸಿನ ವಿಶ್ವವಿದ್ಯಾನಿಲಯದವರು ೧೯೫೩-೫೪ ರಲ್ಲಿ ಬಿ.ಎ. ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ಆರಿಸಿದುದರಿಂದಲೂ, ಲೈಬ್ರರಿಗಳಿಗೆ ತೆಗೆದು ಕೊಂಡು ಸಹಾಯಮಾಡಿದುದರಿಂದಲೂ ನಾಲ್ಕನೆಯ ಮುದ್ರಣದ ಪ್ರತಿಗಳು ಮುಗಿದುಹೋಗಿ, ದಕ್ಷಿಣಭಾರತದ ಹಿಂದಿ ಪ್ರವೇಶಿಕ ಪರೀಕ್ಷೆಗೆ ದೇಶ ಭಾಷೆಯ ಪಠ್ಯಪುಸ್ತಕವನ್ನಾಗಿ ನೇಮಿಸಿದುದರಿಂದ ೫ನೆಯ ಮುದ್ರಣಕ್ಕೂ ಅವಕಾಶವಾಯಿತು. ಈ ಕಾರಣಗಳಿಂದ 'ಭೀಷ್ಮ ಚರಿತೆ'ಯನ್ನು ಸಹ ಅಚ್ಚು ಹಾಕಿಸಲು ಧೈರ್ಯವು ಬಂದಿತು. ಈ ರೀತಿ ಪರಿಸ್ಥಿತಿಗಳು ದೂರವಾದು ದರಿಂದ ಎರಡನೆಯ ಮುದ್ರಣಕ್ಕೆ ಪ್ರಯತ್ನ ಮಾಡಲಾಗಿದೆ.

ಸನ್ ಸಾವಿರದ ಒಂಬೈನೂರ ನಲವತ್ತೊಂಬತ್ತನೆಯ ಇಸವಿ ಅಂತ್ಯ ಭಾಗದಲ್ಲಿ "ಭೀಷ್ಮ ಚರಿತೆ"ಯನ್ನು ಅಚ್ಚು ಹಾಕಿಸಬೇಕೆಂಬ ಯೋಚನೆಯು ಬಂದು, ನಮ್ಮ ವಿದ್ಯಾಗುರುಗಳೂ, ನಮ್ಮ ತೀರ್ಥರೂಪರವರ ಪ್ರಿಯ ಶಿಷ್ಯ ರಲ್ಲೊಬ್ಬರಾದ, ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರವರು ಆಗಿದ್ದ ದಿವಂಗತ ಶ್ರೀ ವಿ. ಸುಬ್ರಹ್ಮಣ್ಯಾಯ್ಯರ್, ಬಿ.ಎ. ಯವರನ್ನು ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಟ್ಟು ನನ್ನನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸ ಲಾಗಿ, ಅವರ ದೇಹಸ್ಥಿತಿ ಆಗ್ಗೆ ಸರಿಯಾಗಿ ಇಲ್ಲದೆಯಿದ್ದಾಗ್ಯೂ, ನಮ್ಮ ತೀರ್ಥರೂಪರವರಲ್ಲಿ ಅವರಿಗಿದ್ದ ಗೌರವದಿಂದ ನನ್ನ ವಿಜ್ಞಾಪನೆಗೆ ಮನ್ನಣೆ ಯಿತ್ತು ಒಪ್ಪಿಕೊಂಡರು. ಸ್ವಲ್ಪ ಕಾಲದ ನಂತರ ದೇಹಸ್ಥಿತಿಯು ಬಹಳವಾಗಿ

ಕೆಟ್ಟುದುದರಿಂದ ತಮ್ಮಿಂದ ಸಾಧ್ಯವಿಲ್ಲವಾಗಲಾಗಿ, ಅವರ ಸಹಪಾಠಿಗಳೂ, ಆಪ್ತಮಿತ್ರರೂ ಆಗಿದ್ದ ಶ್ರೀಮಾನ್ ಎಂ. ಹಿರಿಯಣ್ಣ, ಎಂ.ಎ. ಅವರ ಪರಿಚಯವನ್ನು ಮಾಡಿಕೊಟ್ಟರು. ಆ ಸುಸಮಯವನ್ನು ಕಳೆದುಕೊಳ್ಳ ಕೂಡದೆಂದು ಒಡನೆಯೇ ಶ್ರೀಮಾನ್ ಎಂ. ಹಿರಿಯಣ್ಣನವರನ್ನು ಭೇಟಿ ಮಾಡಿ ಅರಿಕೆಮಾಡಿಕೊಂಡೆನು. ಶ್ರೀಮಾನ್‌ರವರು ತಮ್ಮ ಪೂರ್ಣ ಭರವಸೆ ಯನ್ನು ಕೊಟ್ಟು ಅನುಗ್ರಹ ಮಾಡಿದ್ದಾರೆ. ಅವರ ದರ್ಶನವು ನನಗೆ ಒಂದು ಪುಣ್ಯಕ್ಷೇತ್ರಕ್ಕೆ ಹೋಗಿ ದೇವರ ದರ್ಶನ ಮಾಡಿದಂತಾಯಿತು. ಇವರ ಹಿರಿಮೆ, ಸೌಜನ್ಯ, ನಿರಾಡಂಬರರೀತಿ, ಶಾಂತಿ, ಕರ್ತವ್ಯನಿಷ್ಠೆ, ಇವು ಆ ವಯಸ್ಸಿನಲ್ಲಿಯೂ ಒಂದೇ ರೀತಿಯಾಗಿದ್ದಿತು. ಇವರ ಪರಿಶುದ್ಧತೆಯು, ಅವರ ಗಾಂಭೀರ್ಯ, ವರ್ಚಸ್ಸುಗಳಿಂದ ನೋಡಿದ ಒಡನೆಯೇ ತಿಳಿಯಬಹುದಾಗಿದ್ದಿತು. ಬರಿಯ ಮಾತಿನಿಂದಲಾಗಲೀ, ಬರವಣಿಗೆಯ ಮೂಲಕವಾಗಿಯಾಗಲೀ ಹೇಳಲು ಸಾಧ್ಯವೇ ಆಗಲಾರದು. ಈ ಗಣ್ಯವ್ಯಕ್ತಿಗಳು ನಮ್ಮ ಹಿರಿಯರ ಶಿಷ್ಯವರ್ಗಕ್ಕೆ ಸೇರಿದವರೆಂದು ಹೆಮ್ಮೆ ಪಡಲು ಅವಕಾಶವನ್ನು ಕಲ್ಪಿಸಿಕೊಟ್ಟ ದಿವಂಗತ ಶ್ರೀಮಾನ್ ವಿ. ಸುಬ್ರಹ್ಮಣ್ಯಯ್ಯರವರು ವಂದನಾರ್ಹರು. ಇಂತಹವರು ಹಿರಿಯರ ಕಾರ್ಯವು ಬಹು ಪವಿತ್ರವಾದುದೆಂದು ತಿಳಿದು ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಟ್ಟಿರುವುದು ನನ್ನಂತಹವನ ಮೇಲೆ ಇದ್ದ ವಿಶ್ವಾಸವನ್ನು ತೋರಿಸುವುದಲ್ಲದೆ ಅವರ ಕಾರ್ಯನಿಷ್ಠೆಯನ್ನು ತೋರಿಸುತ್ತದೆ. ಇವರು ಅಪ್ಪಣೆಕೊಟ್ಟಿರುವಂತೆ ಪುಸ್ತಕವು ಪುನರ್ಮುದ್ರಣ ವಾಗಿ ಹೊರಬೀಳುತ್ತಲೆ ಸರ್ವರೂ ಓದಿ, ಮೆಚ್ಚುವರು ಎಂಬ ಭರವಸೆಯಿದೆ, ಎಂಬ ನುಡಿಯನ್ನು ಸಾರ್ಥಕಮಾಡಿದಲ್ಲಿ ನನ್ನ ಮನೋರಥವು ಈಡೇರಿ ದಂತಾಗುವುದು ಎಂಬುದರಲ್ಲಿ ಸಂದೇಹವೇಯಿಲ್ಲ.

ನಮ್ಮ ಊರಿನ ಕಳಶಪ್ರಾಯರೂ, ಉದ್ದಾಮ ಸಾಹಿತಿಗಳೂ, ಕನ್ನಡ ಕ್ಕಾಗಿ ಹಗಲಿರುಳು ದುಡಿಯುತ್ತಾಯಿರುವ ರಾಜಸೇವಾಸಕ್ತ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ. ಅವರು ಆಂಗ್ಲೇಯ ಭಾಷೆಯಲ್ಲಿದ್ದ ಮುನ್ನುಡಿಯನ್ನು ಕನ್ನಡಕ್ಕೆ ತರ್ಜುಮೆಮಾಡಿ ಕೊಟ್ಟಿರು ತ್ತಾರೆ. ಅಪರಂಜಿ ಚಿನ್ನಕ್ಕೆ ಮೆರಗುಕೊಟ್ಟಂತೆಲ್ಲಾ ಹೇಗೆ ಹೊಳಪು ಹೆಚ್ಚು ತ್ತದೆ ಅದರಂತೆಯೇ, ದಿವಂಗತ ಶ್ರೀ ಎಂ. ಹಿರಿಯಣ್ಣನವರು ಮುನ್ನುಡಿ ಬರೆದು ಕೊಟ್ಟು ಹೊಳಪನ್ನು ಹೆಚ್ಚಿಸಿ ಪ್ರಕಾಶಮಾಡಿರುತ್ತಾರೆ. ಶ್ರೀಮಾನ್ ವೆಂಕಟ ರಾಮಯ್ಯನವರು ಭಾಷಾಂತರವನ್ನು ಮಾಡಿಕೊಟ್ಟು ಪುಸ್ತಕವನ್ನು ದ್ವಿಗುಣ ವನ್ನಾಗಿ ಮಾಡಿರುತ್ತಾರೆ. ಈ ಮಹನೀಯರು ನಿರ್ವ್ಯಾಜವಾದ ಮನ್ನಣೆಗೆ

ಪಾತ್ರರು. ಇವರ ಉಪಕಾರವು ಚಿರಸ್ಮರಣೀಯವಾದುದು. ಇವರಿಗೆ ನಾನು ಚಿರಋಣಿಯಾಗಿದ್ದೇನೆ.

ದಿವಂಗತ ಶ್ರೀಮಾನ್ ಎಂ. ಹಿರಿಯಣ್ಣನವರ ಮೊಮ್ಮಕ್ಕಳು, ಶ್ರೀಮಾನ್ ಅನಂತಸ್ವಾಮಿಯವರು ಅವರ ತಾತಂದಿರ ಭಾವಚಿತ್ರವನ್ನು ಕೊಟ್ಟು, ಪಡಿಯಚ್ಚನ್ನು ಮಾಡಿಸಿಕೊಳ್ಳಲು ದಯಮಾಡಿ ಅನುಮತಿಕೊಟ್ಟರು. ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳು.

ಈ ಪುಸ್ತಕವನ್ನು ಮರಳಿ ಅಚ್ಚುಹಾಕಿಸಲು ಪ್ರೋತ್ಸಾಹಕೊಟ್ಟು ಮುದ್ರಣಕಾರ್ಯವನ್ನು ತಾವೇ ವಹಿಸಿಕೊಳ್ಳುವೆವೆಂದು ಭರವಸೆಯನ್ನು ಕೊಟ್ಟು, ಅದರಂತೆಯೇ ಸಕಾಲಕ್ಕೆ ಮುದ್ರಿಸಿ ಪ್ರಕಟಿಸುವ ಹೊರೆಯನ್ನು ಹೊತ್ತಿರುವವರು ನನ್ನ ಮಾನ್ಯಮಿತ್ರರೂ, ಮೈಸೂರು ಕಾವ್ಯಾಲಯದ ಮಾಲಿಕರೂ ಆದ ಶ್ರೀಮಾನ್ ಕೂಡಲಿ ಚಿದಂಬರಂರವರು. ಇವರ ಉಪಕಾರವು ನಿರಂತರದಲ್ಲೂ ಸ್ಮರಿಸತಕ್ಕದ್ದಾಗಿದೆ.

ಮಲ್ಲೇಶ್ವರ
ಶ್ರೀ ವಿಜಯನಾಮ ಸಂವತ್ಸರದ ಚೈತ್ರ
ಶುದ್ಧ ಪ್ರತಿಪತ್.

ಜಿ. ವಾ. ರಾಘವೇಂದ್ರಯ್ಯ

ಕೃತಜ್ಞತೆ

ಚಿರಸ್ಮರಣೀಯರಾದ ಶ್ರೀ. ಚ. ವಾಸುದೇವಯ್ಯನವರ ಈ ಕೃತಿಯನ್ನು 'ಕಾವ್ಯಾಲಯ'ದ ಮೂಲಕ ಪ್ರಕಟಿಸಲು ಅವಕಾಶವಿತ್ತ ಅವರ ಪುತ್ರರಿಗೆ ನಾವು ಕೃತಜ್ಞರು.

ಪ್ರಕಾಶಕರು

ವಿಷಯಾನುಕ್ರಮಣಿಕೆ

ಚಿತ್ರಗಳು

ಭೀಷ್ಮಚರಿತ್ರೆ

"ಗೆಲಲು ಬೇಹುದು ಮೊದಲು ತನ್ನನ |
ಒಳಿಕ ಹಗೆಗಳ ಗೆಲಲು ಬೇಕ |
ಗ್ಗಳಸಿದಿಂದ್ರಿಯ ಜಯವ ಗೆಲುವುದೆ ತನ್ನ ಗೆದ್ದುದದು ||"

" ಘನವಿವೇಕಿ ದೃಢಾತ್ಮ ಸದಯನು|
ವನಜನಾಭನಿಗಿಷ್ಟಭಕ್ತನು |
ವಿನಯಪರನಭಿಮಾನಿ ಕಾರ್ಯಾಕಾರ್ಯಸಂವೇದೀ ||
ವಿನುತ ದೇವಜ್ಞನು ಸದಾ ಶಾಂ |
ತನು ಚರಿತ ನಿಸ್ಪೃಹನು ಶೂರನು|
ನೆನೆದಡಾತನ ಗುಣವಗಣ್ಯಾಗಳೆನ್ನ ನಂದನನಾ || "

ಭೀಷ್ಮಚರಿತೆ

ಮೊದಲನೆಯ ಅಧ್ಯಾಯ

ಭೀಷ್ಮನ ಪ್ರತಿಜ್ಞೆ

ಸುಪ್ರಸಿದ್ಧ ಕುರುವಂಶದಲ್ಲಿ ಶಂತನುವೆಂಬ ನರಪತಿಯೊಬ್ಬನು ಜನ್ಮವೆತ್ತಿದನು. ಅವನು ಸರ್ವಗುಣಕ್ಕೂ ಆಧಾರನಾಗಿ ಸರ್ವಸಂಪತ್ತಿಗೂ ಅಧಿಕಾರಿಯಾಗಿ ಹಸ್ತಿನಾಪುರದಲ್ಲಿ ಸುನಿಯಮದಿಂದ ರಾಜ್ಯವನ್ನಾಳುತ್ತ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತಿದ್ದನು. ಅವನ ರಾಜ್ಯಶಾಸನದ ಪ್ರಭಾವದಿಂದ ಸಮಗ್ರರಾಜ್ಯವೂ ಸಿರಿಯನ್ನೈದಿತು. ಸರ್ವತ್ರ ಧರ್ಮಸನ್ಮಾನವೂ ಸುಖಸಮೃದ್ಧಿಯೂ ಕಣ್ಗೊಳಿಸುತ್ತಿದ್ದುವು. ಪ್ರಜೆಗಳು ಸದಾಚಾರವನ್ನು ಅಣುಮಾತ್ರವೂ ಬಿಟ್ಟು ಹೋಗುತ್ತಿರಲಿಲ್ಲ. ಆದುದರಿಂದ ಸಮಸ್ತ ರಾಷ್ಟ್ರವೂ ಶಾಂತಿಪೂರ್ಣವಾಗಿದ್ದಿತು. ಶಂತನುವು ಇಂತಹ ಸುಖಪೂರ್ಣವೂ ಶಾಂತಿಪೂರ್ಣವೂ ಆದ ರಾಜ್ಯಕ್ಕೊಡೆಯನಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಿದ್ದನು.

ಮಹಾರಾಜನಿಗೆ ದೇವವ್ರತನೆಂಬೊಬ್ಬ ಮಗನಿದ್ದನು. ಅವನು ಯೌವನದಶೆಗೆ ಬರುತಲೆ ಅವನ ಪ್ರಶಸ್ತಲಲಾಟವನ್ನೂ, ವಿಶಾಲವಾದ ವಕ್ಷಸ್ಸ್ಥಲವನ್ನೂ, ಆಜಾನುಬಾಹುಗಳನ್ನೂ, ಸ್ಥೂಲವೂ ಉನ್ನತವೂ ಆದ ಕಾಯವನ್ನೂ ಮೆಚ್ಚಿ ಸರ್ವರೂ ಅವನನ್ನು ಪ್ರೀತಿಸುತ್ತಿದ್ದರು. ಕಾಲಕ್ರಮದಲ್ಲಿ ರಾಜಕುಮಾರನು ಸರ್ವಶಾಸ್ತ್ರಗಳಲ್ಲಿಯೂ ಸುಪಂಡಿತನಾದನು. ಅವನು ಬುದ್ಧಿಯಲ್ಲಿ ಅಸಾಧಾರಣನೂ, ಬಲದಲ್ಲಿ ನಿಸ್ಸೀಮನೂ, ಅಧ್ಯವಸಾಯದಲ್ಲಿ ನಿಶ್ಚಲನೂ ಆಗಿದ್ದನು. ಅವನು ಶಾಸ್ತ್ರಜ್ಞಾನ, ಶಸ್ತ್ರಪ್ರಯೋಗ, ವಿಚಾರಶಕ್ತಿ—ಇವುಗಳಲ್ಲಿ ತಂದೆಗೂ ಅಧಿಕನೆನಿಸಿಕೊಂಡನು.

ಮಗನು ಯೌವನಾವಸ್ಥೆಗೆ ಬಂದು ಸರ್ವಗುಣಸಂಪನ್ನನಾಗಿರುವುದನ್ನು ಶಂತನುವು ನೋಡಿ ಹರ್ಷಗೊಂಡು ರಾಷ್ಟ್ರಪುರವಾಸಿಗಳಲ್ಲಿ ಪ್ರಮುಖರಾದವರನ್ನು ಕರೆಯಿಸಿ ಅವರ ಸಮಕ್ಷದಲ್ಲಿ ಮಗನಿಗೆ ಯುವರಾಜಪಟ್ಟವನ್ನು ಕಟ್ಟಿದನು. ಯುವರಾಜನು ಪ್ರವರ್ಧಮಾನನಾಗಿ ಸತ್ಕಾರ್ಯಗಳಿಂದ ಸಕಲ

ಜನ ರಂಜಕನಾದನು. ಅವನ ಪಿತೃಭಕ್ತಿ ಲೋಕವಿಸ್ಮಯಕರವಾದುದು; ಅವನ ಆತ್ಮಸಂಯಮನವು ಅನನ್ಯಾದೃಶವಾದುದು; ಅವನ ಪ್ರಜಾನುರಾಗವು ಅಪೂರ್ವವಾದುದು. ಅವನು ಪ್ರಜೆಗಳ ಹಿತವನ್ನೇ ಸಾಧಿಸುತ್ತಿರುವನು; ವಯೋವೃದ್ಧರನ್ನು ಉಚಿತರೀತಿಯಲ್ಲಿ ಸನ್ಮಾನಿಸುವನು; ಸಮವಯಸ್ಕರನ್ನು ಸೌಜನ್ಯದಿಂದ ಸಂತೋಷಗೊಳಿಸುವನು. ಯುವರಾಜನಾದರೂ ಅವನು ಸುಖಿಕೈಳಸಲಿಲ್ಲ; ಪರಾಕ್ರಮಶಾಲಿಯಾದರೂ ದಯಾದಾಕ್ಷಿಣ್ಯವನ್ನು ತೊರೆಯಲಿಲ್ಲ. ಶತ್ರುಗಳು ಅವನ ಶೌರ್ಯಕ್ಕಂಜುವರು; ಸ್ವಕೀಯರು ಅವನ ಸೌಮ್ಯತೆಗೆ ಸಂತೋಷಿಸುವರು; ಆರ್ತರು ಅವನ ಸಾಹಾಯ್ಯವನ್ನು ಬೇಡುವರು; ಪ್ರಜೆಗಳೆಲ್ಲರೂ ಧರ್ಮಕ್ಕೆ ಆಶ್ರಯನೆಂದು ಅವನನ್ನು ಕೊಂಡಾಡುವರು. ಇಂತು ಮಗನ ಗುಣಕೀರ್ತನವನ್ನು ಕೇಳಿ ಶಂತನುವು ತಾನು ಕೃತಾರ್ಥನೆಂದೆಣಿಸಿದನು; ಇಂದಿನ ವರೆಗೆ ದುರ್ವಹವಾಗಿದ್ದ ರಾಜ್ಯಭಾರವು ಹಗುರವಾಯಿತೆಂದು ಭಾವಿಸಿದನು. ಅವನು ರಾಜಕೀಯ ಕಾರ್ಯಭಾರವನ್ನು ಮಗನಿಗೊಪ್ಪಿಸಿ, ಮಗನ ಶುಶ್ರೂಷೆಯಿಂದ ಸಂತುಷ್ಟನಾಗಿ ನಿಶ್ಚಿಂತನಾಗಿದ್ದನು.

ಈ ತೆರದಲ್ಲಿ ನಾಲ್ಕು ವರ್ಷಗಳು ಕಳೆಯಲು ಶಂತನುವು ಒಂದು ದಿನ ತನ್ನ ಪರಿಜನರೊಡಗೂಡಿ ಬೇಟೆಯಾಡುವುದಕ್ಕೆ ಯಮುನಾತೀರಕ್ಕೆ ಹೋದನು. ರಾಜನು ತಡಿಯ ಬಳಿ ಇದ್ದ ಅಡವಿಯಲ್ಲಿ ಸಂಚರಿಸುತ್ತಿರುವಲ್ಲಿ ಒಂದು ವಿಧ ಪರಿಮಳವನ್ನು ಆಘ್ರಾಣಿಸಿದನು. ಆ ಸುಗಂಧವು ಎತ್ತಣಿಂದ ಬಂದು ಅರಣ್ಯದಲ್ಲಿ ಆಮೋದವನ್ನುಂಟುಮಾಡಿತೊ ಅರಿಯಬೇಕೆಂದು ಇತ್ತತ್ತ ನೋಡುತ್ತಿರುವಲ್ಲಿ ದೇವತಾಸ್ತ್ರೀಯನ್ನು ಹೋಲುವ ರೂಪಲಾವಣ್ಯವತಿಯಾದ ಕನ್ಯೆಯೊಬ್ಬಳು ದೃಷ್ಟಿಗೆ ಬಿದ್ದಳು. ಆ ಚೆಲುವೆಯ ದೇಹ ಪರಿಮಳವೇ ತಂಗಾಳಿಯಲ್ಲಿ ಬೆರೆತು ಅರಣ್ಯವೆಲ್ಲವನ್ನು ಸುರಭಿಮಯವಾಗಿ ಮಾಡಿದುದು. ಶಂತನುವು ಆ ಕನ್ಯೆಯು ವಿಜನವನಕ್ಕೆ ಬಂದುದನ್ನು ಕಂಡು ಕುತೂಹಲಯುತನಾಗಿ— "ನೀನಾರು? ಆವ ಬಗೆಯವಳು? ಈ ಅರಣ್ಯಕ್ಕೆ ಒಬ್ಬಳೇ ಏಕೆ ಬಂದಿರುತ್ತೀಯೆ? ನನ್ನನ್ನು ಮದುವೆಯಾಗುವೆಯಾ?" ಎಂದು ಅವಳನ್ನು ಕೇಳಿದನು. ಅದಕ್ಕಾ ಕನ್ಯೆಯು, "ಮಹಾಶಯನೆ! ನಾನು ದಾಶರಾಜನ ಮಗಳು; ಕುಲದಲ್ಲಿ ನಾವು ಬೆಸ್ತರು; ನಾನು ತಂದೆಯ ಅಧೀನಳು; ಆತನು ಆಗಲೆಂದರೆ ತಾವು ನನ್ನನ್ನು ಮದುವೆಯಾಗಬಹುದು" ಎಂದಳು. ಆ ಮಾತಿಗೊಪ್ಪಿ ಶಂತನುವು ದಾಶರಾಜನಲ್ಲಿಗೆ ಹೋಗಿ, ಮಗಳನ್ನು ತನಗೆ ಕೊಡೆಂದು ಕೇಳಲು, ಅವನು, "ಮಹಾರಾಜನೆ! ನಾನು ಅಂಬಿಗನು; ಕೀಳುಜಾತಿಯವನು; ನೀನು ಭುವನವಿಖ್ಯಾತ

ಕುರುಕುಲದಲ್ಲಿ ಹುಟ್ಟಿದವನು; ಧನಸಂಪತ್ತಿ ಪೂರ್ಣವಾದ ವಿಶಾಲ ರಾಜ್ಯಕ್ಕೊಡೆಯನು; ನಿನ್ನಂತಹ ಶಾಸ್ತ್ರಜ್ಞನೂ ಶಸ್ತ್ರವಿದ್ಯಾವಿಶಾರದನೂ ಆದ ಅರಸನನ್ನು ಎಲ್ಲಿಯೂ ಕಾಣೆನು; ನಿನ್ನ ಸಾಮರ್ಥ್ಯವು ಅನುಪಮ ವಾದುದು, ರೂಪು ಸುರಮ್ಯವಾದುದು, ದೇಹಕಾಂತಿಯು ಮನೋಹರ ವಾದುದು. ನಿನ್ನಂತಹ ಸತ್ಪಾತ್ರನು ನನಗೆ ಎಲ್ಲಿಯೂ ದೊರೆಯನು. ನಾನು ಕನ್ಯಾಪಿತೃವು; ಕನ್ಯೆಯನ್ನು ಸತ್ಪಾತ್ರನಿಗೆ ಕೊಡುವುದು ನನ್ನ ಕರ್ತವ್ಯವು. ಆದರೆ ನೀನು ಕ್ಷತ್ರಿಯ ಕುಲದವನು; ಅಲ್ಲದೆ, ಪುತ್ರವಂತನು. ನನ್ನ ಮಗಳನ್ನು ನಿನಗೆ ಕೊಟ್ಟರೆ ಅವಳ ಹೊಟ್ಟೆಯಲ್ಲಿ ಹುಟ್ಟುವವರು ನಿನ್ನ ಮಗನಿಗೆ ಆಳು ಗಳಾಗುವರೇ ಹೊರತು ಅರಸರಾಗರು. ಆದುದರಿಂದ, ನನ್ನ ಪ್ರಾರ್ಥನೆ ಯೊಂದಿದೆ, ಲಾಲಿಸು; ನಿನ್ನ ತರುವಾಯ, ನನ್ನ ಮಗಳ ಮಗನಿಗೆ ನಿನ್ನ ರಾಜ್ಯವನ್ನು ಕೊಡುವುದಾದರೆ ಅವಳನ್ನು ನಿನಗೆ ಕೊಡುವೆನು" ಎಂದನು.

ಶಂತನುವು ದಾಶರಾಜನ ಪ್ರಾರ್ಥನೆಯನ್ನು ಕೇಳುತ್ತಲೇ ಕಳವಳ ಗೊಂಡನು. ಪುರವಾಸಿಗಳೂ ದೇಶವಾಸಿಗಳೂ ಪ್ರಬುದ್ಧನಾದ ದೇವವ್ರತನ ಗುಣಾತಿಶಯವನ್ನು ಅನುಕ್ಷಣವೂ ಹೊಗಳುತ್ತಿದ್ದರು; ಧರ್ಮಪರಾಯಣರು ಅವನ ಶಾಸ್ತ್ರಜ್ಞಾನವನ್ನೂ ಸತ್ಕಾರ್ಯಗಳನ್ನೂ ಪ್ರಶಂಸಿಸುತ್ತಿದ್ದರು; ವೀರ ಪುರುಷರು ಅವನ ಅಮಿತ ವಿಕ್ರಮವನ್ನು ಸ್ತುತಿಸುತ್ತಿದ್ದರು. ಅಂತಹ ಗುಣಾಢ್ಯನೂ ಪ್ರಾಣಾಧಿಕನೂ ಆದ ಮಗನನ್ನು ವಂಚಿಸಿ ರಾಜ್ಯವನ್ನು ಅನ್ಯನಿಗೆ ಕೊಡುವುದು ದೂಷ್ಯವೆಂದೆಣಿಸಿ ಶಂತನುವು ವಿಮನಸ್ಕನಾಗಿ ದಾಶರಾಜನ ಮಾತಿಗೊಡಂಬಡದೆ ನಿರಾಶೆಯಿಂದ ರಾಜಧಾನಿಗೆ ಹಿಂದಿರುಗಿ ಹೋದನು. ಆದರೆ ಅವನ ಮನಸ್ಸು ಮಾತ್ರ ಆ ಕನ್ಯೆಯಲ್ಲಿಯೇ ನಿಂತಿತು.

ಮಹಾರಾಜನು ಹಸ್ತಿನಾಪುರಕ್ಕೆ ಬಂದು ತನ್ನ ಅಭೀಷ್ಟವು ಕೈಗೂಡ ಲಿಲ್ಲವೆಂದು ಕೊರಗುತ್ತ ಅನ್ನೋದಕಗಳನ್ನು ಬಿಟ್ಟು ಬಡವಾದನು. ದೇವ ವ್ರತನು ತಂದೆಯ ಮಲಿನ ಮುಖವನ್ನು ಕಂಡು ಕಾರಣವರಿಯದೆ ಚಿಂತಿಸುತ್ತ, ಒಂದು ದಿನ ಆತನ ಬಳಿಗೆ ಹೋಗಿ ವಿನಯಪೂರ್ವಕವಾಗಿ ನಮಸ್ಕಾರಮಾಡಿ ಇಂತೆಂದನು:—"ಆರ್ಯರೆ! ರಾಜ್ಯದೊಳಗೆಲ್ಲಿಯೂ ಅಮಂಗಳ ಚಿಹ್ನೆಗಳು ಕಾಣವು; ಸಾಮಂತರಾಜರು ವಿಧೇಯರಾಗಿರುವರು; ಪ್ರಜೆಗಳು ಕ್ಷೇಮ ವಾಗಿರುವರು; ಎಲ್ಲಿ ನೋಡಿದರೂ ಸುಖವೂ ಶಾಂತಿಯೂ ಪುಷ್ಟಿಯೂ ತುಷ್ಟಿಯೂ ಕಣ್ಗೊಳಿಸುತ್ತಿರುವುವು, ಆದರೂ ಯಾವ ಕಾರಣದಿಂದಲೋ ತಮ್ಮ ಮುಖದಲ್ಲಿ ವ್ಯಾಕುಲತೆಯು ತೋರುತ್ತಿರುವುದು; ತಾವು ಖಿನ್ನ ಹೃದಯರಾಗಿರುವಿರಿ; ಎಂದಿನಂತೆ ಸಂತೋಷಚಿತ್ತರಾಗಿ ಪುತ್ರವಾತ್ಸಲ್ಯದಿಂದ

ನನ್ನೊಡನೆ ಮಾತನಾಡುವುದಿಲ್ಲ; ಕುದುರೆಯ ಸವಾರಿ ಹೋಗುವುದಿಲ್ಲ; ದಿನದಿನಕ್ಕೆ ತಮ್ಮ ಶರೀರವು ಕೃಶವಾಗುತ್ತಿರುವುದು; ಮುಖವು ಬೆಳ್ಳಗಾಗುತ್ತಿರುವುದು; ಯಾವ ವ್ಯಾಧಿಯಿಂದ ಈ ವಿಕಾರಗಳು ಹುಟ್ಟಿವೆಯೋ ಅಪ್ಪಣೆಯಾದರೆ ಅದರ ನಿವಾರಣಕ್ಕೆ ತಕ್ಕ ಉಪಾಯವನ್ನು ಮಾಡಲು ಯತ್ನಿಸುವೆನು."

ಶಂತನುವು ದೇವವ್ರತನ ಮಾತನ್ನು ಕೇಳಿ ದಾಶರಾಜನ ಮಗಳಲ್ಲಿ ತನಗೆ ಹುಟ್ಟಿದ್ದ ಅನುರಾಗವನ್ನು ಮಗನಿಗೆ ಹೇಳಲು ಸಂಕೋಚಪಟ್ಟು ಮರೆಸಿ ಇಂತೆಂದನು:—"ಮಗನೇ! ನಮ್ಮ ವಂಶಕ್ಕೆ ಇರುವ ಆಧಾರವೆಲ್ಲವೂ ನೀನೊಬ್ಬನೆ. ನೀನು ಶೂರನು, ಅಸ್ತ್ರವಿದ್ಯೆಯಲ್ಲಿ ಸುದಕ್ಷನು, ಯಾವಾಗಲೂ ಯುದ್ಧಸನ್ನಾಹದಲ್ಲಿಯೇ ಇರುತ್ತೀಯೆ. ಜಗತ್ತಿನಲ್ಲಿ ಯಾವುದೂ ಸ್ಥಿರವಲ್ಲ; ಮನುಷ್ಯದೇಹವು ಅನಿತ್ಯವಾದುದು; ಯಾವ ಸಮಯದಲ್ಲಿ ನಿನಗೇನಾಗುವುದೋ, ಏನು ವಿಪತ್ತು ಬರುವುದೋ ತಿಳಿಯದು. ನಿನಗೇನಾದರೂ ಅಪಾಯವು ಪ್ರಾಪ್ತವಾದರೆ ನಮ್ಮ ಪವಿತ್ರ ಕುಲವು ನಿಸ್ಸಂತತಿಯಾಗುವುದು. ಯಾವನಿಗೆ ಒಬ್ಬನೇ ಮಗನೋ ಅವನನ್ನು ಧರ್ಮವಾದಿಗಳು ಅಪುತ್ರನೆಂದೇ ಭಾವಿಸುವರು. ಅವರು ಹೇಳುವಂತೆ ಒಬ್ಬ ಮಗನು ಮಗನಲ್ಲ, ಒಂದು ಕಣ್ಣು ಕಣ್ಣಲ್ಲ. ನಾನು ಪ್ರತಿ ಕ್ಷಣದಲ್ಲಿಯೂ ಸರ್ವಶಕ್ತನಾದ ಈಶ್ವರನ ಸನ್ನಿಧಿಯಲ್ಲಿ ನಿನ್ನ ಕುಶಲವನ್ನೇ ಪ್ರಾರ್ಥಿಸುತ್ತಿರುವೆನು. ನೀನು ಕ್ಷೇಮವಾಗಿರು. ಆದರೆ ನೀನು ನಿರಂತರವಾಗಿ ಶೌರ್ಯವನ್ನು ತೋರುವುದರಲ್ಲಿಯೇ ನಿರತನಾಗಿರುತ್ತೀಯೆ; ನಿನ್ನ ಪರಾಕ್ರಮವನ್ನೂ ಧನುರ್ವಿದ್ಯೆಯಲ್ಲಿ ನಿನ್ನ ದಕ್ಷತೆಯನ್ನೂ ನೋಡಿದರೆ ರಣರಂಗದಲ್ಲಿಯೇ ನಿನಗೆ ಸಾವೆಂದು ತೋರುವುದು. ಮಗನೇ! ನೀನು ನನಗೆ ಪ್ರಾಣಾಧಿಕನು; ನನಗೆ ಸರ್ವಸ್ವವೂ ನೀನೆ. ನೀನೇನಾಗುವೆಯೋ ಎಂದು ನನಗೆ ಅಪಾರವಾದ ಚಿಂತೆ ಹುಟ್ಟಿರುವುದು. ಶಾಂತಿಯಿಲ್ಲದ ಕಾರಣ ಮನಸ್ಸು ಸುಸ್ಥಿರವಾಗಿ ನಿಲ್ಲದು."

ದೇವವ್ರತನು ತಂದೆಯ ಮಾತನ್ನು ಕೇಳಿ ಕೊಂಚ ಹೊತ್ತು ತಲೆಬಾಗಿ ಚಿಂತಿಸಿದನು. ತರುವಾಯ, ಯಮುನಾ ತೀರಕ್ಕೆ ತಂದೆಯೊಡನೆ ಹೋಗಿದ್ದ ಸಾರಥಿಯನ್ನು ಕರೆದು ತಂದೆ ಬೇಟೆಗೆ ಹೋಗಿದ್ದ ಸಮಯದಲ್ಲಿ ನಡೆದುದೆಲ್ಲವನ್ನೂ ಹೇಳೆಂದನು. ಸಾರಥಿಯು, ಶಂತನುವು ದಾಶರಾಜನ ಮಗಳನ್ನು ಕೇಳಿದುದು, ಶಂತನುವಿನ ತರುವಾಯ ತನ್ನ ಮಗಳ ಮಗನು ರಾಜನಾಗಬಹುದೆಂದರೆ ಅವಳನ್ನು ದಾಶರಾಜನು ಕೊಡಲೊಪ್ಪಿದುದು, ಸತ್ಯವ್ರತನ ಮೇಲಣ ಪ್ರೀತಿಯಿಂದ ಶಂತನುವು ಅದಕ್ಕೊಡಂಬಡದೆ ಹಿಂದಿರುಗಿದುದು, ಇತ್ಯಾದಿ ಸಂಗತಿ

ಗಳೆಲ್ಲವನ್ನೂ ಆನುಪೂರ್ವಿಯಾಗಿ ಸತ್ಯವ್ರತನಿಗೆ ತಿಳಿಸಿದನು. ದೇವವ್ರತನು ಸಾರಥಿಯ ಮಾತನ್ನು ಕೇಳಿ ತಂದೆಯ ಅಭೀಷ್ಟವನ್ನು ಸಲ್ಲಿಸಲು ಯತ್ನಶೀಲನಾದನು. ತಂದೆಯ ಇಷ್ಟಸಾಧನೆಯೂ ಶುಶ್ರೂಷೆಯೂ ತನ್ನ ಕರ್ತವ್ಯಗಳೆಂದೆಣಿಸಿ ದೇವವ್ರತನು ಕಾಲವಿಳಂಬವನ್ನು ಮಾಡದೆ ವಯೋವೃದ್ಧರಾದ ಕ್ಷತ್ರಿಯರನ್ನೊಡಗೊಂಡು ದಾಶರಾಜನ ಬಳಿಗೆ ಹೋಗಿ ಸತ್ಯವತಿಯೆಂಬ ಅವನ ಮಗಳನ್ನು ತನ್ನ ತಂದೆಗೆ ಮದುವೆಮಾಡಿಕೊಡೆಂದು ಕೇಳಿದನು.

ದಾಶರಾಜನು ಕೌರವ ಶ್ರೇಷ್ಠನನ್ನು ಗೌರವದಿಂದ ಆದರಿಸಿ ಉಚಿತಾಸನವನ್ನು ಕೊಟ್ಟು ಕುಳ್ಳಿರಿಸಿದನು. ದೇವವ್ರತನೂ ಅವನೊಡನೆ ಹೋಗಿದ್ದ ವೃದ್ಧಕ್ಷತ್ರಿಯರೂ ಕುಳಿತ ತರುವಾಯ ದಾಶರಾಜನು ದೇವವ್ರತನಿಗೆ ಇಂತೆಂದನು:—"ಯುವರಾಜನೇ! ನೀನು ಶಂತನುವಿನ ವಂಶವರ್ಧನನು; ಸರ್ವಾಂಶದಲ್ಲಿಯೂ ಯೋಗ್ಯನಾದ ನಿನ್ನಂತಹ ಪುತ್ರನನ್ನು ನಾನೆಲ್ಲಿಯೂ ಕಾಣೆನು. ನಿನ್ನ ತಂದೆಗೆ ನಿನ್ನಂತಹ ಮಗನಿರುವಲ್ಲಿ ಅವನಿಗೆ ನನ್ನ ಮಗಳನ್ನು ಕೊಡುವುದು ಹೇಗೆ? ಇಂತಹ ಶ್ಲಾಘ್ಯವಾದ ಸಂಬಂಧವು ಅಪೇಕ್ಷಿಸತಕ್ಕುದೇ ಸರಿ; ಸಾಕ್ಷಾತ್ ಇಂದ್ರನಾದರೂ ಇಂತಹ ಸಂಬಂಧವನ್ನು ಬಿಡನು. ಆದರೆ ನಾನು ಕನ್ಯಾಪಿತೃವು; ನಿನಗೊಂದು ಮಾತನ್ನು ಹೇಳದೆ ತೀರದು; ಮಲಮಗನಿರುವಲ್ಲಿ ನನ್ನ ಮಗಳನ್ನು ಹೇಗೆ ಕೊಡಲಿ? ನಿಮಗೆ ಪರಸ್ಪರ ಶತ್ರುತ್ವವು ಪ್ರಾಪ್ತವಾಗದೆ ತಪ್ಪದು. ನೀನು ಪರಾಕ್ರಮಶಾಲಿ; ನಿನ್ನ ವೈರಕ್ಕೆ ಗುರಿಯಾಗುವರು ಎಂತಹವರೇ ಆಗಲಿ ಬಹು ದಿವಸ ಬಾಳಲಾರರು; ನೀನು ಕೋಪಗೊಂಡರೆ ಯಾರು ತಾನೆ ಉಳಿಯಬಲ್ಲರು? ಪ್ರಸಕ್ತ ವಿಷಯದಲ್ಲಿ ಇದೊಂದು ದೋಷವು ಕಾಣಬರುವುದು, ಬೇರೊಂದೂ ಇಲ್ಲ."

ಪಿತೃಭಕ್ತನಾದ ದೇವವ್ರತನು ದಾಶರಾಜನ ಅಭಿಪ್ರಾಯವನ್ನು ಅರಿತನು. ಆದರೆ ಅವನು ಅಣುಮಾತ್ರವೂ ಚಿಂತಿಸಲಿಲ್ಲ. ದಾಶರಾಜನ ಮಾತಿನಿಂದ ಅವನ ಎದೆ ಕುಂದಲಿಲ್ಲ, ಮುಖವು ಕೆಡಲಿಲ್ಲ, ಪಿತೃಭಕ್ತಿ ಉಡುಗಲಿಲ್ಲ. ಅವನು ಪ್ರಾಣಪರ್ಯಂತ ಸರ್ವಸ್ವವನ್ನೂ ತೆತ್ತು ತಂದೆಯ ಇಷ್ಟಾರ್ಥವನ್ನು ಸಲಿಸುವೆನೆಂದು ನಿಶ್ಚೈಸಿದನು. ಅವನ ಪಿತೃಭಕ್ತಿಯಿಂದ ಸ್ವಾರ್ಥಚಿಂತೆಯೂ ಭೋಗಾಭಿಲಾಷೆಯೂ ದೂರವಾದುವು. ಅವನು ಜಗತ್ತಿಗೆ ದೃಷ್ಟಾಂತಯೋಗ್ಯವಾದ ಸ್ವಾರ್ಥತ್ಯಾಗವನ್ನೂ ವಿಷಯನಿಸ್ಪೃಹತೆಯನ್ನೂ ತೋರಿದನು. ಸತ್ಯವ್ರತನು ಅಲ್ಲಿ ನೆರೆದಿದ್ದ ಕ್ಷತ್ರಿಯರ ಸಮಕ್ಷದಲ್ಲಿ ಶಾಂತಚಿತ್ತತೆಯಿಂದ ಪ್ರಸನ್ನವದನನಾಗಿ ನಿಂತು—"ಸೌಮ್ಯನೆ, ನನ್ನ ಸತ್ಯಪ್ರತಿಜ್ಞೆಯನ್ನು ಆಲಿಸು: ನಿಶ್ಚಯವನ್ನು ಹೇಳುವೆನು ಕೇಳು; ಯಾವನು ಈ ಕನ್ಯೆಯ ಹೊಟ್ಟೆಯಲ್ಲಿ

ಹುಟ್ಟುವನೋ ಅವನೇ ನಮ್ಮ ತಂದೆಯ ತರುವಾಯ ರಾಜನಾಗಲಿ ; ಅವನನ್ನೇ ಕುರುರಾಜ್ಯಾಧಿಪತಿಯೆಂದು ನಾನು ಅಂಗೀಕರಿಸುವೆನು " ಎಂದನು.

ಆ ಮಾತನ್ನು ಕೇಳಿ ದಾಶರಾಜನು—" ಸತ್ಯವ್ರತನೆ! ನಾನು ಹೇಳತಕ್ಕದು ಇನ್ನೊಂದು ಮಾತಿದೆ; ಅದನ್ನೂ ನೀನು ಆಲೋಚಿಸು. ನಾನು ಮಗಳ ಮೇಲಣ ಪ್ರೀತಿಯಿಂದ ಒಂದು ಮಾತನ್ನು ಆಡಿಯೇ ತೀರುವೆನು. ಹೆಣ್ಣು ಮಕ್ಕಳಲ್ಲಿ ಮಮತೆಯುಳ್ಳವರಾರೂ ಈ ಮಾತನ್ನಾಡದಿರುವುದಕ್ಕಾಗದು. ಕೇಳು, ಸತ್ಯವಾದಿಯೆ! ಸತ್ಯವತಿಯ ಸಂತಾನದ ವಿಷಯದಲ್ಲಿ ನೀನು ಮಾಡಿದ ಪ್ರತಿಜ್ಞೆಯು ನಿನ್ನ ಸಚ್ಚರಿತೆಗೆ ಅನುಗುಣವಾದುದೇ ಸರಿ. ನೀನು ಮಹಾನು ಭಾವನು; ಆಡಿದ ಮಾತಿಗೆ ಎಂದೂ ತಪ್ಪುವನಲ್ಲ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ. ಆದರೆ ಮುಂದೆ ನಿನಗಾಗುವ ಮಕ್ಕಳ ವಿಷಯದಲ್ಲಿ ನನಗೆ ಸಂಶಯವು ತೋರುವುದು " ಎಂದನು.

ದೇವವ್ರತನು ದಾಶರಾಜನ ಮಾತನ್ನು ಕೇಳಿ ಚಿತ್ತವೈಕಲ್ಯವನ್ನು ಹೊಂದ ಲಿಲ್ಲ; ಎಂದಿನಂತೆ ಸ್ಥಿರಮನಸ್ಕನಾಗಿ ಇಂತೆಂದು ಪ್ರತಿಜ್ಞೆ ಮಾಡಿದನು :— " ನಾನು ರಾಜ್ಯವನ್ನು ತ್ಯಜಿಸಿದೆನು; ನನ್ನ ಮಕ್ಕಳ ದೆಸೆಯಿಂದ ನಿನಗೆ ಭಯವು ತೋರುವುದಷ್ಟೆ? ಈ ವಿಷಯದಲ್ಲಿ ಇಲ್ಲಿ ನೆರೆದಿರುವ ಶಾಸ್ತ್ರಜ್ಞರಾದ ಕ್ಷತ್ರಿಯರ ಸಾಕ್ಷಿಯಾಗಿ ಇನ್ನೊಂದು ಪ್ರತಿಜ್ಞೆಯನ್ನು ಮಾಡುವೆನು ಕೇಳು :— " ನಾನೆಂದಿಗೂ ಮದುವೆಯಾಗೆನು ; ನಾನು ಇಂದು ಮೊದಲ್ಗೊಂಡು ಯಾವ ಜ್ಜೀವವೂ ಬ್ರಹ್ಮಚಾರಿಯಾಗಿಯೇ ಇರುವೆನು. ತಂದೆಯೇ ಪರಮ ಗುರು; ತಂದೆಯೇ ಪರಮ ಧರ್ಮವು ; ತಂದೆಯೇ ಪರಮ ತಪಸ್ಸು; ತಂದೆ ಪ್ರೀತನಾದರೆ ಸಮಸ್ತ ದೇವತೆಗಳೂ ಪ್ರೀತರಾಗುವರು; ಪರಮ ಗುರುವಾದ ತಂದೆಯ ಪ್ರೀತ್ಯರ್ಥವಾಗಿ ಈ ಪ್ರತಿಜ್ಞೆಯನ್ನು ಮಾಡಿರುವೆನು. ಅಪುತ್ರನಾದರೂ ನನಗೆ ಗತಿಯುಂಟು. ಪ್ರಳಯವೇ ಆಗಲಿ, ಈ ಜಗತ್ತು ಮುಳುಗಿಹೋಗಲಿ, ಸೂರ್ಯ ಗ್ರಹ ನಕ್ಷತ್ರಾದಿಗಳು ಮುರಿದುಬೀಳಲಿ, ನಾನಂತೂ ಮಾಡಿದ ಪ್ರತಿಜ್ಞೆಯನ್ನು ಬಿಡೆನು."

ದಾಶರಾಜನು ಈ ಭೀಷಣ ಪ್ರತಿಜ್ಞೆಯನ್ನು ಕೇಳಿ ಬೆರಗಾಗಿ, " ನನ್ನ ಮಗಳನ್ನು ಕೊಟ್ಟೆನು " ಎಂದನು.

ಅಲ್ಲಿ ನೆರೆದಿದ್ದವರೆಲ್ಲರೂ ದೇವವ್ರತನ ಲೋಕೋತ್ತರವಾದ ಪಿತೃಭಕ್ತಿ ಯನ್ನೂ ಸ್ವಾರ್ಥತ್ಯಾಗವನ್ನೂ ನೋಡಿ ವಿಸ್ಮಿತರಾಗಿ ಅವನನ್ನು ಕೊಂಡಾಡಿ ದರು. ಈ ಭೀಷಣ ಪ್ರತಿಜ್ಞೆಯ ದೆಸೆಯಿಂದ ದೇವವ್ರತನು ಭೀಷ್ಮನೆಂದು ಖ್ಯಾತನಾದನು.

ದಾಶರಾಜನು ಕನ್ಯಾಪ್ರದಾನಕ್ಕೆ ಸಮ್ಮತಿಸುತ್ತಲೇ ಭೀಷ್ಮನು ಸತ್ಯವತಿಯನ್ನು ಕುರಿತು, "ತಾಯೇ! ರಥವು ಸಿದ್ಧವಾಗಿರುವುದು; ನಮ್ಮ ಮನೆಗೆ ಹೋಗೋಣ, ರಥವನ್ನೇರು" ಎಂದನು.

ಸತ್ಯವತಿಯು ರಥದಲ್ಲಿ ಕುಳಿತಳು. ಭೀಷ್ಮನು ಸತ್ಯವತಿಯೊಡನೆ ತಂದೆಯ ಬಳಿಗೆ ಹೋಗಿ ನಡೆದ ಸಂಗತಿಗಳೆಲ್ಲವನ್ನೂ ವಿನಯಪೂರ್ವಕವಾಗಿ ನಿವೇದನ ಮಾಡಿದನು. ಇತ್ತ, ಅವನೊಡನೆ ಹೋಗಿದ್ದವರೆಲ್ಲರೂ ಹಸ್ತಿನಾಪುರವನ್ನು ಸೇರಿ ದೇವವ್ರತನ ದುಷ್ಕರಪ್ರತಿಜ್ಞೆಯನ್ನು ಹೊಗಳುತ್ತ ಅವನು ಮಾಡಿದ ದುಷ್ಕರಕಾರ್ಯದಿಂದ ಅವನು ಭೀಷ್ಮನೆನಿಸಿಕೊಂಡನೆಂದು ಕಂಡಕಂಡವರಿಗೆಲ್ಲ ಹೇಳತೊಡಗಲು, ಎಲ್ಲರೂ ಅವನನ್ನು ಭೀಷ್ಮನೆಂದು ಕರೆಯಲಾರಂಭಿಸಿದರು. ಮಹಾರಾಜ ಶಂತನುವು ಮಗನ ಅಸಾಧಾರಣ ಸಾಮರ್ಥ್ಯವನ್ನೂ ಧೈರ್ಯ ಸ್ಥೈರ್ಯಗಳನ್ನೂ ದುಷ್ಕರಕಾರ್ಯಗಳನ್ನು ಸಾಧಿಸುವುದರಲ್ಲಿ ಅವನಿಗಿದ್ದ ಅಧ್ಯವಸಾಯವನ್ನೂ ಮೆಚ್ಚಿ ಅವನ ದೆಸೆಯಿಂದ ತನ್ನ ಅಭೀಷ್ಟವು ಪೂರ್ತಿಯಾಯಿತೆಂದು ಸುಪ್ರೀತನಾಗಿ—"ಮಗನೇ! ನಿನಗೆ ಸ್ವೇಚ್ಛಾಮರಣವಾಗಲಿ; ನಿನ್ನಾಜ್ಞೆಯಾದಾಗ ನಿನಗೆ ಮೃತ್ಯುವು ಬರಲಿ; ನೀನು ಕೋರದಿದ್ದರೆ ಮರಣವು ಬಾರದಿರಲಿ" ಎಂದು ವರವನ್ನು ಕೊಟ್ಟನು.

ಎರಡನೆಯ ಅಧ್ಯಾಯ

ಚಿತ್ರಾಂಗದ ವಿಚಿತ್ರವೀರ್ಯರು

ಶಂತನು ಮಹಾರಾಜನು ಚೆಲುವೆಯಾದ ಸತ್ಯವತಿಯನ್ನು ಶಾಸ್ತ್ರೋಕ್ತವಾಗಿ ಪತ್ನಿಯನ್ನಾಗಿ ಕೈಹಿಡಿದು ಸುಖದಿಂದಿರುತ್ತಿದ್ದನು. ಮಹಾಮತಿಯಾದ ಭೀಷ್ಮನು ಅನನ್ಯಮನಸ್ಕನಾಗಿ ಅನುದಿನವೂ ಅವರ ಶುಶ್ರೂಷೆಯನ್ನು ಮಾಡುತ್ತಿದ್ದನು. ಅವನು ತಂದೆಯ ಇಷ್ಟವನ್ನು ನೆರವೇರಿಸುವುದರಲ್ಲಿ ಯತ್ನಶೀಲನೂ ಶ್ರದ್ಧಾಳುವೂ ಆಗಿದ್ದಂತೆಯೇ ತಾಯಿಯ ಇಷ್ಟವನ್ನು ಸಲಿಸುವುದರಲ್ಲಿಯೂ ಏಕಮಾನಸನಾಗಿದ್ದನು. ಸತ್ಯವತಿಯು ಭೀಷ್ಮನ ಪರಿಚರ್ಯೆಯಿಂದಲೂ ಸದಾಚರಣೆಯಿಂದಲೂ ಪರಿತುಷ್ಟೆಯಾಗಿ ಸುಖವಾಗಿರುತ್ತಿದ್ದಳು.

ದಿನಕ್ರಮದಲ್ಲಿ ಸತ್ಯವತಿ ಸುಂದರನಾದ ಒಬ್ಬ ಕುಮಾರನನ್ನು ಪಡೆದಳು. ಪುತ್ರನ ಮುಖದರ್ಶನದಿಂದ ಶಂತನುವಿನ ಆನಂದಕ್ಕೆ ಪಾರವಿಲ್ಲದಂತಾಯಿತು.

ರಾಜ್ಯದಲ್ಲಿ ವಿವಿಧವಾದ ಉತ್ಸವಗಳು ನಡೆದುವು. ಶಂತನುವು ಕೂಸಿಗೆ ಚಿತ್ರಾಂಗದನೆಂದು ನಾಮಕರಣ ಮಾಡಿದನು. ತಕ್ಕ ವಯಸ್ಸಾಗುತ್ತಲೆ ಚಿತ್ರಾಂಗದನು ಪ್ರಾಜ್ಞನಾದ ಭೀಷ್ಮನ ಇಷ್ಟಾನುವರ್ತಿಯಾಗಿ ನಡೆಯುತ್ತ ಸಕಲ ಶಾಸ್ತ್ರಗಳಲ್ಲಿಯೂ ಕೋವಿದನಾದನು; ಮುಖ್ಯವಾಗಿ, ಅಸ್ತ್ರಶಸ್ತ್ರ ವಿದ್ಯೆಗಳನ್ನು ಚೆನ್ನಾಗಿ ಕಲಿತನು. ಈ ವಿದ್ಯೆಗಳಲ್ಲಿ ಮಗನ ಜಾಣ್ಮೆಯನ್ನು ನೋಡಿ ನೋಡಿ ಶಂತನುವು ಆಹ್ಲಾದಪಡುತ್ತಿದ್ದನು.

ಕೆಲವು ವರ್ಷಗಳ ತರುವಾಯ ಸತ್ಯವತಿಯ ಗರ್ಭದಲ್ಲಿ ಮತ್ತೊಬ್ಬ ಮಗನು ಹುಟ್ಟಿದನು. ಈ ಕಿರಿಯನಿಗೆ ವಿಚಿತ್ರವೀರ್ಯನೆಂದು ಹೆಸರಾಯಿತು. ವಿಚಿತ್ರವೀರ್ಯನು ವಯಃಪ್ರಾಪ್ತನಾಗುವುದರೊಳಗಾಗಿಯೇ ಶಂತನು ಮಹಾ ರಾಜನು ಪರಲೋಕಯಾತ್ರೆಯನ್ನು ಮಾಡಿದನು. ಭೀಷ್ಮನು ಪಿತೃವಿಯೋಗ ದಿಂದ ಶೋಕಾಕುಲನಾದನು. ಅವನು ತಂದೆಯಲ್ಲಿ ಪರಿಪೂರ್ಣ ಭಕ್ತಿಯ ನ್ನಿಟ್ಟು ಪಿತೃಸೇವೆ ಮಾಡುವುದರಲ್ಲಿ ಸುಖಪಡುತ್ತಿದ್ದನು; ತಂದೆಗೆ ಪ್ರಿಯ ವಾದ ಕಾರ್ಯವನ್ನು ಮಾಡಿ ತಾನು ಕೃತಾರ್ಥನಾದೆನೆಂದು ಎಣಿಸು ತ್ತಿದ್ದನು; ತಂದೆಯು ಹರ್ಷಚಿತ್ತನಾಗಿರುವುದನ್ನು ಕಂಡು ತಾನು ನರಲೋಕ ವಾಸಿಯಾದರೂ ಸುರಲೋಕವಾಸಿಯೆಂದು ಭಾವಿಸುತ್ತಿದ್ದನು. ಹೀಗೆ ತನ್ನ ಭಕ್ತಿವಿಶ್ವಾಸಕ್ಕೆ ಪಾತ್ರನಾದ ತಂದೆಯು ಕಾಲಧರ್ಮವನ್ನೈದಲು, ಅವನೆದೆಯಲ್ಲಿ ಶೋಕ ಶಲ್ಯವು ನಾಟಿತು. ಅವನು ಮಹಾ ತೇಜಸ್ವಿ, ಅಸಾಧಾರಣ ಕ್ಷಮಾಶಾಲಿ; ಆದರೂ ತರಂಗಮಾಲಾ ಪರಿವೃತ ಜಲಧಿಯಲ್ಲಿ ತರಣಿಯಿಲ್ಲದವನಂತೆ ಪಿತೃವಿಯೋಗದ ದೆಸೆಯಿಂದ ಈ ಸಂಸಾರ ಸಾಗರದಲ್ಲಿ ತಾನು ಸಹಾಯ ಹೀನನೂ ಅವಲಂಬನ ಹೀನನೂ ಆದೆನೆಂದು ಭಾವಿಸುತ್ತ ದಿಙ್ಮೂಢನಾದನು. ಶೋಕದಿಂದ ಮನಸ್ಸು ತಾರಿದರೂ ಅವನು ಕರ್ತವ್ಯವನ್ನು ಬಿಟ್ಟು ಕದಲಲಿಲ್ಲ. ತನ್ನ ದುಸ್ಸಹವಾದ ಶೋಕವನ್ನು ತಾಳಿಕೊಂಡು ಭೀಷ್ಮನು ತಂದೆಯ ಉತ್ತರಕ್ರಿಯೆಗಳನ್ನು ಸಾಂಗವಾಗಿ ನೆರವೇರಿಸಿದನು.

ತರುವಾಯ, ಕಾಲವಿಳಂಬ ಮಾಡದೆ ಭೀಷ್ಮನು ಸತ್ಯವತಿಯ ಬಳಿಗೆ ಹೋಗಿ—"ತಾಯೇ! ಚಿತ್ರಾಂಗದನು ಸರ್ವಾಂಶದಲ್ಲಿಯೂ ರಾಜಪದವಿಗೆ ತಕ್ಕವನಾಗಿರುವನು. ಅವನು ಬುದ್ಧಿವಂತನು, ಪರಾಕ್ರಮಶಾಲಿ; ಈ ವಿಶಾಲ ರಾಜ್ಯವನ್ನಾಳುವುದಕ್ಕೆ, ಮುಖ್ಯವಾಗಿ ಪ್ರಜೆಗಳನ್ನು ಪಾಲಿಸುವುದಕ್ಕೆ, ಸಮರ್ಥನಾಗಿರುವನು. ನಿನ್ನ ಅನುಮತಿಯಾದರೆ ಪುರಜನವನ್ನೂ ರಾಷ್ಟ್ರ ಜನವನ್ನೂ ಕರೆಯಿಸಿ ಅವರ ಸಮ್ಮುಖದಲ್ಲಿ ಚಿತ್ರಾಂಗದನಿಗೆ ಪಟ್ಟಾಭಿಷೇಕ ವನ್ನು ಮಾಡಲಾಗುವುದು" ಎಂದನು.

ಸತ್ಯವತಿಯು ಭೀಷ್ಮನ ಅಭೀಷ್ಟವನ್ನು ಅನುಮೋದಿಸಿದಳು. ಆಕೆಯ ಅನುಮತಿಯನ್ನು ಹೊಂದಿ ಭೀಷ್ಮನು ಚಿತ್ರಾಂಗದನನ್ನು ಕುರಿತು— “ವತ್ಸನೇ! ಪಿತೃದೇವನು ಸ್ವರ್ಗವನ್ನೈದಿದನು. ಈಗ ಈ ಅಖಂಡ ರಾಜ್ಯಕ್ಕೆ ನೀನೇ ಅಧಿಕಾರಿ. ಶಾಸ್ತ್ರಾನುಶೀಲನದಿಂದ ಸಂಯತಚಿತ್ತನಾಗಿಯೂ, ಶಸ್ತ್ರವಿದ್ಯಾಭ್ಯಾಸದಿಂದ ಶೂರನಾಗಿಯೂ ರಣನಿಪುಣನಾಗಿಯೂ ಇದ್ದೀಯೆ. ಅಲ್ಲದೆ, ರಾಜನೀತಿಯಲ್ಲಿ ನೀನು ಪಾರಂಗತನು. ಆದುದರಿಂದ, ಈಗ ನೀನು ರಾಜ್ಯಭಾರವನ್ನು ವಹಿಸಿ ವಿವೇಕದಿಂದ ರಾಜ್ಯವನ್ನಾಳುತ್ತ ಮಕ್ಕಳಂತೆ ಪ್ರಜೆಗಳನ್ನು ಪಾಲಿಸು. ನಾನು ಸಿಂಹಾಸನದ ಮೇಲೆ ಎಂದಿಗೂ ಕುಳಿತುಕೊಳ್ಳೆನು, ರಾಜದಂಡವನ್ನೆಂದಿಗೂ ಹಿಡಿಯೆನು ಎಂದು ಪ್ರತಿಜ್ಞೆ ಮಾಡಿರುವೆನು. ಆದುದರಿಂದ, ನೀನು ಸಿಂಹಾಸನದಲ್ಲಿ ಕುಳಿತು ರಾಜಕಾರ್ಯತತ್ಪರನಾಗು. ರಣದಲ್ಲಿ ಪರಾಕ್ರಮವೂ, ರಾಜ್ಯಶಾಸನದಲ್ಲಿ ಪ್ರಜಾರಂಜನವೂ ನಮ್ಮ ಕುಲಕ್ಕೆ ಬಂದ ಧರ್ಮವಾಗಿರುವುವು; ಈ ಧರ್ಮವನ್ನು ನೀನು ಬಿಡದೆ ಸಲಹು. ಅನ್ನವಿಲ್ಲದವರಿಗೆ ಅನ್ನವನ್ನೂ, ಆಶ್ರಯವಿಲ್ಲದವರಿಗೆ ಆಶ್ರಯವನ್ನೂ, ಅರ್ಥಹೀನರಿಗೆ ಅರ್ಥವನ್ನೂ ಕೊಡು; ದೇವಬ್ರಾಹ್ಮಣರಲ್ಲಿ ಶ್ರದ್ಧಾಭಕ್ತಿಯನ್ನಿಡು; ವೃದ್ಧರಿಗೆ ಯಥೋಚಿತ ಸನ್ಮಾನವನ್ನು ಮಾಡು; ಪ್ರಜೆಗಳನ್ನು ಮಕ್ಕಳೆಂದೆಣಿಸಿ ಅವರ ಹಿತವನ್ನಾಚರಿಸು. ನೀನು ಶೂರನೂ ಆಹುದು; ಕೋಮಲಹೃದಯನೂ ಆಹುದು; ಶೌರ್ಯವನ್ನೂ ಕೋಮಲತೆಯನ್ನೂ ಸಮಯವರಿತು ಆಯಾ ಸಮಯದಲ್ಲಿ ತೋರಿಸು. ಶತ್ರುಗಳು ರಣರಂಗದಲ್ಲಿ ನಿನ್ನ ಪ್ರತಾಪವನ್ನು ಕಂಡು ಅಂಜುವಂತೆಯೇ ಪ್ರಜೆಗಳು ನಿನ್ನ ಉದಾರಭಾವವನ್ನೂ ಶಾಂತಪ್ರಕೃತಿಯನ್ನೂ ಸದಯ ವ್ಯವಹಾರವನ್ನೂ ನೋಡಿ ಪ್ರೀತರಾಗಲಿ. ಜಿಗೀಷುಗಳಾದ ವೈರಿಗಳ ಮುಂದೆ ನಿನ್ನ ಪ್ರತಾಪವನ್ನು ತೋರಿಸು; ಆಶ್ರಿತರ ಮುಂದೆಯೂ ಅನುಗತರ ಮುಂದೆಯೂ ನಿನ್ನ ಸೌಮ್ಯತೆಯನ್ನು ತೋರಿಸು” ಎಂದು ಹಿತೋಪದೇಶವನ್ನು ಮಾಡಿದನು.

ಭೀಷ್ಮನು ಈ ತೆರದಲ್ಲಿ ಚಿತ್ರಾಂಗದನಿಗೆ ರಾಜನೀತಿಯನ್ನು ಬೋಧಿಸಿ ಯಥಾವಿಧಾನದಿಂದ ಪಟ್ಟಾಭಿಷೇಕವನ್ನು ಮಾಡಿದನು. ಚಿತ್ರಾಂಗದನು ಶೌರ್ಯದಲ್ಲಿ ತನ್ನ ಸಮಾನರಾರೂ ಇಲ್ಲವೆಂದು ಯಾರನ್ನೂ ಲಕ್ಷ್ಯಮಾಡದಿದ್ದನು. ಅವನು ರಾಜಪದವಿಯಲ್ಲಿ ಪ್ರತಿಷ್ಠಿತನಾಗುತ್ತಲೆ ಪರಾಕ್ರಮಪ್ರದರ್ಶನವೂ ಶತ್ರುಸಂಹಾರವೂ ತನ್ನ ಮುಖ್ಯ ಕರ್ತವ್ಯಗಳೆಂದೆಣಿಸಿದನು. ಅನೇಕ ರಾಜರು ಅವನಿಂದ ಪರಾಜಿತರಾದರು. ಆದರೆ ಚಿತ್ರಾಂಗದನೆಂಬೊಬ್ಬ ಗಂಧರ್ವರಾಜನ ಮೇಲೆ ಅವನ ಕೈನಡೆಯಲಿಲ್ಲ. ಕುರುಕ್ಷೇತ್ರದಲ್ಲಿ, ಸರಸ್ವತೀ

ತೀರದಲ್ಲಿ, ಅವರಿಬ್ಬರಿಗೂ ಆದ ಯುದ್ಧದಲ್ಲಿ ಕುರುರಾಜ ಚಿತ್ರಾಂಗದನು ಹತನಾದನು.

ಚಿತ್ರಾಂಗದನು ಸತ್ತ ವೃತ್ತಾಂತವನ್ನು ಕೇಳಿ ಭೀಷ್ಮನು ಬಹಳವಾಗಿ ದುಃಖಿಸಿದನು. ಆದರೆ ತಡಮಾಡದೆ ಅವನು ಸತ್ಯವತಿಯ ಇಷ್ಟಾನುಸಾರವಾಗಿ ವಿಚಿತ್ರವೀರ್ಯನಿಗೆ ಪಟ್ಟವನ್ನು ಕಟ್ಟಿದನು. ಆಗ ವಿಚಿತ್ರವೀರ್ಯನಿಗೆ ಬಾಲ್ಯದಶೆ ಯಾಗಿದ್ದಿತು. ಭೀಷ್ಮನು ಅನನ್ಯಮನಸ್ಕನಾಗಿ ಅವನನ್ನು ಪಾಲಿಸುತ್ತಿದ್ದನು. ಅಪ್ರಾಪ್ತವಯಸ್ಕನೂ ಅಪರಿಣತಬುದ್ಧಿಯೂ ಆದ ಆ ರಾಜಕುಮಾರನು ಭೀಷ್ಮನಲ್ಲಿ ರಾಜನೀತಿಯನ್ನು ಕಲಿಯುತ್ತ ಅವನಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ಅವನಿಗೆ ತಕ್ಕ ಸನ್ಮಾನವನ್ನು ತೋರಿಸುತ್ತಿದ್ದನು. ಅವನು ಅಪ್ರಾಪ್ತವಯಸ್ಕ ನಾಗಿಯೂ ರಾಜಕಾರ್ಯಗಳನ್ನರಿಯದವನಾಗಿಯೂ ಇದ್ದಷ್ಟು ಕಾಲವೂ ಭೀಷ್ಮನ ಬುದ್ಧಿವಾದಕ್ಕನುಸಾರವಾಗಿ ನಡೆಯುತ್ತಿದ್ದನು. ಭೀಷ್ಮನೂ ರಾಜ ಕುಮಾರನ ಅಭ್ಯುದಯಕ್ಕನುಗುಣವಾದ ವಿದ್ಯಾಬುದ್ಧಿಯನ್ನು ಕಲಿಸುವುದರಲ್ಲಿ ಯತ್ನಶೀಲನಾಗಿದ್ದನು. ಮಹಾಮತಿ ಭೀಷ್ಮನ ಉಪದೇಶಪ್ರಭಾವದಿಂದ ವಿಚಿತ್ರವೀರ್ಯನು ನಾನಾ ವಿಷಯಗಳಲ್ಲಿ ಸುಶಿಕ್ಷಿತನಾದನು.

ಕಾಲಕ್ರಮದಲ್ಲಿ ವಿಚಿತ್ರವೀರ್ಯನು ಬಾಲ್ಯಾವಸ್ಥೆಯನ್ನು ಕಳೆದು ಯೌವನ ದಶೆಗೆ ಬಂದನು. ಅವನು ತರುಣ ವಯಸ್ಕನಾಗುತ್ತಲೆ ಭೀಷ್ಮನು ಅವನಿಗೆ ಮದುವೆಮಾಡುವ ಆಲೋಚನೆಯನ್ನು ಮಾಡತೊಡಗಿದನು. ಆ ಸಮಯಕ್ಕೆ ಸರಿಯಾಗಿ ಕಾಶೀರಾಜನ ಮೂವರು ಕನ್ಯೆಯರಿಗೆ ಸ್ವಯಂವರವೆಂದು ಭೀಷ್ಮ ನಿಗೆ ಶ್ರುತಿಗೋಚರವಾಯಿತು. ಕನ್ಯೆಯರು ರೂಪವತಿಯರಾಗಿದ್ದಂತೆಯೇ ಕುಲವತಿಯರಾಗಿಯೂ ಇದ್ದರು. ಆದುದರಿಂದ ಭೀಷ್ಮನು ಆ ಕನ್ಯೆಯರನ್ನು ತಂದುಕೊಂಡು ವಿಚಿತ್ರವೀರ್ಯನಿಗೆ ವಿವಾಹಮಾಡಲಿಚ್ಛಿಸಿ ಸತ್ಯವತಿಯ ಅನುಜ್ಞೆ ಯನ್ನು ಪಡೆದು ಸೇನೆಯನ್ನೂ ಸಾಮಂತರನ್ನೂ ಕೂಡಿ ರಥವನ್ನೇರಿ ಕಾಶಿಗೆ ಪಯಣಮಾಡಿದನು. ಕಟ್ಟಿದ್ದ ಮುಹೂರ್ತದಲ್ಲಿ ಸ್ವಯಂವರೋತ್ಸವವು ನಡೆಯಲು ಎಲ್ಲವೂ ಅಣಿಯಾಗಿದ್ದಿತು. ಭೀಷ್ಮನು ಕಾಶಿಯನ್ನು ಸೇರಿ ಸಕಾಲಕ್ಕೆ ಸಭಾಮಂಟಪವನ್ನು ಹೊಕ್ಕನು. ಮಂಟಪದ ನಾಲ್ಕು ಕಡೆ ಯಲ್ಲಿಯೂ ರತ್ನಸಿಂಹಾಸನಗಳು ಕಣ್ಗೊಳಿಸುತ್ತಿದ್ದುವು. ಆ ಸಿಂಹಾಸನ ಗಳನ್ನು ದೇಶದೇಶಗಳಿಂದ ಬಂದ ಸರ್ವಾಲಂಕಾರ ಭೂಷಿತರಾದ ರಾಜರು ಅಲಂಕರಿಸಿದ್ದರು. ಅಗುರುಧೂಪದಿಂದ ನಾಲ್ಕು ದಿಕ್ಕುಗಳೂ ಪರಿಮಳವಾಗಿ ದ್ದುವು. ನಡುವೆ ನಡುವೆ ಮಂಗಳವಾದ್ಯವಾಗುತ್ತಿದ್ದಿತು. ಹೀಗಿರುವಲ್ಲಿ, ಕನ್ಯೆಯರು ಸ್ವಯಂವರೋಚಿತವಾದ ವಸ್ತ್ರಭೂಷಣಗಳನ್ನು ಧರಿಸಿ ಸಭಾ

ಮಂಟಪವನ್ನು ಪ್ರವೇಶಮಾಡಿ ನೆರೆದಿದ್ದ ರಾಜಮಂಡಲಿಯ ಮಧ್ಯದಲ್ಲಿ ಹಸೆಯ ಮೇಲೆ ಕುಳಿತರು.

ಅನಂತರ, ವಂದಿಗಳು, ನೆರೆದಿದ್ದ ರಾಜರ ಕುಲಗಳನ್ನು ವರ್ಣಿಸತೊಡಗಿದರು. ಆಗ ರಾಜಕುಮಾರಿಯರು ಭೀಷ್ಮನನ್ನು ನೋಡಿ ವೃದ್ಧನೆಂದು ಚಿಂತಿಸಿ ಹೊರಗೆ ಹೋಗಲು, ಅರಸರೆಲ್ಲರೂ ಭೀಷ್ಮನ ವಿಷಯವಾಗಿ—"ಇವನು ವೃದ್ಧನು, ಪರಮ ಧರ್ಮಾತ್ಮನು, ಇಲ್ಲೇಕೆ ಬಂದಿದ್ದಾನೆ? ನಾಚಿಕೆ ಇಲ್ಲವೆ? ಅಂತಹ ಪ್ರತಿಜ್ಞೆಯನ್ನೇಕೆ ಮಾಡಿದನು? ಬ್ರಹ್ಮಚಾರಿಯೆಂಬ ಖ್ಯಾತಿಯು ವ್ಯರ್ಥವಾಯಿತಲ್ಲವೆ?" ಎಂದು ಆಡಿಕೊಳ್ಳುತ್ತಿದ್ದರು.

ಭೀಷ್ಮನು ಎದ್ದುನಿಂತು ಗಂಭೀರಸ್ವರದಿಂದ—"ನಾನು ಸ್ತ್ರೀಪರಿಗ್ರಹ ಮಾಡೆನೆಂದು ಪ್ರತಿಜ್ಞೆ ಮಾಡಿರುವೆನು; ಯಾವಜ್ಜೀವವೂ ಬ್ರಹ್ಮಚಾರಿಯಾಗಿಯೇ ಇರುವೆನು; ಈ ಪ್ರತಿಜ್ಞೆಯನ್ನು ಎಂದಿಗೂ ಮೀರುವವನಲ್ಲ; ನಾನು ಈ ಕನ್ಯೆಯರ ಪಾಣಿಗ್ರಹಣಕ್ಕಾಗಿ ಬಂದವನಲ್ಲ; ನನ್ನ ತಮ್ಮನಾದ ವಿಚಿತ್ರವೀರ್ಯನು ಅಖಂಡಿತ ಕುರುರಾಜ್ಯಕ್ಕೊಡೆಯನಾಗಿರುವನು; ಅವನಿಗೆ ಯೌವನದಶೆ ಪ್ರಾಪ್ತವಾಗಿರುವುದು; ಅವನ ರೂಪ ಗುಣಗಳು ವಿಕಾಸವಾಗಿರುವುವು; ಈ ಕನ್ಯಾತ್ರಯವನ್ನು ಕರೆದುಕೊಂಡು ಹೋಗಿ ಆ ರೂಪಗುಣಸಂಪನ್ನನಾದ ಕುರುರಾಜನಿಗೆ ಮದುವೆಮಾಡಲಿಚ್ಛಿಸಿ ಬಂದಿರುವೆನು" ಎಂದನು.

ಒಡನೆಯೇ ಭೀಷ್ಮನು ಕನ್ಯೆಯರನ್ನು ಆದರಪೂರ್ವಕವಾಗಿ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ರಾಜರನ್ನು ಸಂಬೋಧಿಸಿ ಮತ್ತೆ ಇಂತೆಂದನು:—"ಕನ್ಯೆಯರ ಪಾಣಿಗ್ರಹಣಾರ್ಥಿಗಳಾಗಿ ಬಂದಿರುವ ತಾವುಗಳು ಇಷ್ಟವಿದ್ದರೆ ಯುದ್ಧಮಾಡಿ ನನ್ನನ್ನು ಗೆದ್ದು ಕನ್ಯೆಯರನ್ನು ವಶಮಾಡಿಕೊಳ್ಳಬಹುದು; ಯುದ್ಧಕ್ಕೆ ಸಿದ್ಧವಾಗಿರುವೆನು." ಹೀಗೆಂದು ಹೇಳಿ ಭೀಷ್ಮನು ಆ ರಾಜಕುಮಾರಿಯರೊಂದಿಗೆ ರಥದಲ್ಲಿ ಕುಳಿತು ಪ್ರಯಾಣಸನ್ನದ್ಧನಾದನು.

ಭೀಷ್ಮನ ಈ ಅತರ್ಕಿತ ಕಾರ್ಯದಿಂದ, ನೆರೆದಿದ್ದ ರಾಜರೊಳಗೆ ಗದ್ದಲವುಂಟಾಯಿತು. ಅವರು ರೋಷವೇರಿ ಸ್ವಯಂವರೋಚಿತ ವೇಷಭೂಷಣಗಳನ್ನು ಕಳೆದು ರಣದುಡಿಗೆ ತೊಡಿಗೆಗಳನ್ನು ಹಾಕಿಕೊಂಡರು. ಸಭಾಮಂಟಪದ ನಾಲ್ಕು ದೆಸೆಗಳೂ ಅಸ್ತ್ರಶಬ್ದದಿಂದ ಆಕುಲವಾಯಿತು. ಕ್ಷಣಕ್ಕೆ ಮುಂಚೆ ಎಲ್ಲಿ ವಿವಾಹ ಸಮಯೋಚಿತವಾದ ಶಾಂತಿಯು ಇದ್ದಿತೋ, ಎಲ್ಲಿ ಮಂಗಳ ಶಂಖಧ್ವನಿ ಪರಿಪೂರ್ಣವಾಗಿದ್ದಿತೋ, ಅಲ್ಲಿ ಈಗ ರಥಗಳ ಚೀತ್ಕಾರವೂ ಅಶ್ವಗಳ ಹೇಷಾರವವೂ ಯುದ್ಧಯಾತ್ರೆ ಹೊರಟ ರಾಜನ್ಯರ ಭೈರವರವವೂ ಭೀತಿಯನ್ನುಂಟುಮಾಡುತ್ತಿದ್ದುವು. ಸ್ವಯಂವರಕ್ಕಾಗಿ ಬಂದಿದ್ದ

ವೀರಪುರುಷರೆಲ್ಲರೂ ಅಸ್ತ್ರಧಾರಿಗಳಾಗಿ ಕೋಪದಿಂದ ತರ್ಜನೆಮಾಡುತ್ತ, ಕನ್ಯೆಯರನ್ನು ಕರೆದುಕೊಂಡು ಹೋಗುತ್ತಿದ್ದ ಭೀಷ್ಮನನ್ನು ಬೆನ್ನಹತ್ತಿದರು. ಪರಂತು, ಯುದ್ಧದಲ್ಲಿ ಅವರಿಗೆ ಜಯವಾಗಲಿಲ್ಲ. ಅವರೆಲ್ಲರೂ ಭೀಷ್ಮನಿಗೆ ಸೋತು ತಂತಮ್ಮ ರಾಜ್ಯಗಳಿಗೆ ತೆರಳಿದರು. ವಿಜಯಿಯಾದ ಭೀಷ್ಮನು ಕನ್ಯೆಯರೊಡನೆ ಹಸ್ತಿನಾಪುರಕ್ಕೆ ಹೋಗುತ್ತಿರಲು, ಸಾಲ್ವರಾಜನು ಭೀಷ್ಮನನ್ನು ಅಟ್ಟಿಸಿಕೊಂಡು ಬಂದು, "ಎಲೈ, ಸ್ತ್ರೀಕಾಮುಕನೇ ! ನಿಲ್ಲು, ನಿಲ್ಲು" ಎಂದು ಜಗಳಕ್ಕೆ ನಿಂತನು. ಈ ಪರಾಕ್ರಮಿಗಳಿಬ್ಬರಿಗೂ ಘೋರ ಯುದ್ಧವು ನಡೆಯಿತು. ಭೀಷ್ಮನು ಬಂದ ವೈರಿಯನ್ನು ನಿಗ್ರಹಿಸಿ ಮುಂದಕ್ಕೆ ಹೊರಟನು.

ಈ ರೀತಿಯಲ್ಲಿ ಭೀಷ್ಮನು ಉದ್ದಿಷ್ಟಕಾರ್ಯವನ್ನು ಸಾಧಿಸಿ ಹಸ್ತಿನಾಪುರವನ್ನು ಸೇರುತ್ತಲೆ ಸತ್ಯವತಿಯೊಡನೆ ಆಲೋಚನೆಮಾಡಿ ತಮ್ಮನ ಮದುವೆಯ ಪ್ರಯತ್ನವನ್ನು ಮಾಡತೊಡಗಿದನು. ಈ ನಡುವೆ, ಕಾಶೀರಾಜನ ಜ್ಯೇಷ್ಠಪುತ್ರಿಯಾದ ಅಂಬೆಯು ಭೀಷ್ಮನನ್ನು ಕುರಿತು ವಿನಮ್ರತೆಯಿಂದ— "ನಾನು ಇದಕ್ಕೆ ಮುಂಚೆಯೇ ಸಾಲ್ವರಾಜನನ್ನು ಪತಿಯಾಗಿ ಮನಸ್ಸಿನಲ್ಲಿ ವರಿಸಿದ್ದೆನು; ಸಾಲ್ವರಾಜನೂ ನನ್ನನ್ನು ಕೋರಿರುವನು; ಈ ವಿಷಯದಲ್ಲಿ ನಮ್ಮ ತಂದೆಯೂ ಸಂಪೂರ್ಣಾಭಿಮತನಾಗಿರುವನು; ಈಗ ತಮಗೆ ಯಾವುದು ನ್ಯಾಯವಾಗಿಯೂ ಧರ್ಮವಾಗಿಯೂ ಕಾಣುವುದೋ ಅದನ್ನು ಮಾಡಬಹುದು" ಎಂದಳು.

ಭೀಷ್ಮನು ಅಂಬೆಯ ಮಾತನ್ನು ಕೇಳಿ, ವೇದಜ್ಞರಾದ ಬ್ರಾಹ್ಮಣರೊಡನೆ ಆಲೋಚಿಸಿ ಇಂತೆಂದನು:—"ಭದ್ರೇ! ನೀನು ಮನಸ್ಸಿನಲ್ಲಿ ಯಾವನಿಗೆ ಆತ್ಮಸಮರ್ಪಣೆ ಮಾಡಿಕೊಂಡಿರುವೆಯೋ ಅವನೇ ನಿನ್ನ ಪತಿ. ನಾನು ನಿನ್ನಿಚ್ಛೆಗೆ ವಿರೋಧವಾಗಿ ಯಾವ ಕಾರ್ಯವನ್ನೂ ಮಾಡೆನು. ನಿನ್ನನ್ನು ಬಲಾತ್ಕರಿಸಿ ಇಲ್ಲಿಟ್ಟುಕೊಳ್ಳಲು ನನಗಿಷ್ಟವಿಲ್ಲ. ಹಾಗೆ ಮಾಡುವುದು ನಿಂದನೀಯವು, ಅಪಮಾನಕರವು. ಸಾಲ್ವರಾಜನು ಸ್ವಯಂವರಸಭೆಗೆ ಬಂದು ನನ್ನ ಸಂಗಡ ಯುದ್ಧಮಾಡಿದನು; ಅವನನ್ನು ಗೆದ್ದು ನಿನ್ನನ್ನು ಕರೆತಂದೆನು. ಆದರೂ ನೀನು ಅವನನ್ನು ಮನಸ್ಸಿನಲ್ಲಿ ವರಿಸಿದೆಯಾದಕಾರಣ ಅವನ ಸಹಧರ್ಮಿಣಿಯಾಗಿ ಸುಖದಿಂದಿರು. ದಯಾಧರ್ಮವನ್ನು ತೊರೆದು ಶಕ್ತಿಯನ್ನು ತೋರಿಸಲು ನನಗಿಷ್ಟವಿಲ್ಲ; ನಾರಿಯರ ಧರ್ಮವನ್ನು ಕೆಡಿಸುವುದು ಷಂಡೆಯರ ಕೆಲಸವು. ಅಂತಹ ಕೆಲಸವನ್ನು ಮಾಡಿ ನಾನು ಜೀವಿಸುವನಲ್ಲ."

ಇಂತೆಂದು ಹೇಳಿ, ಅಂಬೆಯು ಅವಳ ಇಷ್ಟಾನುಸಾರವಾಗಿ ಹೋಗಬಹುದೆಂದು ಭೀಷ್ಮನು ಆದರಪುರಸ್ಸರವಾಗಿ ಅನುಮತಿಯನ್ನು ಕೊಟ್ಟು ಅನಂತರ

ಕಾಶೀರಾಜನ ಉಳಿದಿಬ್ಬರು ಕುಮಾರಿಯರಾದ ಅಂಬಿಕೆ ಅಂಬಾಲಿಕೆಯರನ್ನು ವಿಚಿತ್ರವೀರ್ಯನಿಗೆ ಅತಿ ಸಂಭ್ರಮದಿಂದ ಮದುವೆಮಾಡಿದನು. ಮಗನಿಗೆ ಅನುರೂಪೆಯರಾದ ಪತ್ನಿಯರು ಘಟಿಸಿದರೆಂದು ಸತ್ಯವತಿಯು ಸಂತೋಷ ಪಟ್ಟಳು. ಪುರವಾಸಿಗಳು ರಾಜಯೋಗ್ಯ ರಮಣಿಯರನ್ನು ನೋಡಿ ಆನಂದ ಪಟ್ಟರು. ಕೆಲವು ದಿನಗಳು ಕುರುರಾಜ್ಯದಲ್ಲೆಲ್ಲ ನಿರಂತರವಾಗಿ ಉತ್ಸವವು ನಡೆಯುತ್ತಿದ್ದಿತು.

ಮೂರನೆಯ ಅಧ್ಯಾಯ

ಅಂಬೆಯ ಚಲ, ಪರಶುರಾಮ ಭೀಷ್ಮರ ಯುದ್ಧ

ಇತ್ತ, ಅಂಬೆ ಕೆಲವರು ವೃದ್ಧಬ್ರಾಹ್ಮಣರೊಡನೆ ತನ್ನ ಧಾತ್ರಿಯ ಕೂಡೆ ಹಸ್ತಿನಾಪುರದಿಂದ ಹೊರಟು ಸಾಲ್ವನ ಪಟ್ಟಣವನ್ನು ಹೊಕ್ಕಳು. ಆ ರಾಜನ ಬಳಿ ಹೋಗಿ ಅವಳು—"ಮಹಾಬಾಹುವೇ! ನಾನು ನಿನ್ನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ನಿನ್ನ ಆಶ್ರಯವನ್ನು ಬೇಡಬಂದಿರುವೆನು" ಎಂದಳು.

ಸಾಲ್ವ.—ಇನ್ನೊಬ್ಬನಿಗೆ ನಿಶ್ಚಿತವಾಗಿದ್ದ ನಿನ್ನನ್ನು ನಾನು ಮದುವೆ ಯಾಗೆನು. ಭೀಷ್ಮನು ನಿನ್ನನ್ನು ಅಪಹರಿಸಿ, ನೆರೆದಿದ್ದ ಅರಸರೆಲ್ಲರನ್ನೂ ಸೋಲಿಸಿ ನಿನ್ನನ್ನು ಸಾಗಿಸಿಕೊಂಡು ಹೋದನು. ಸಕಲ ಶಾಸ್ತ್ರಗಳನ್ನೂ ಬಲ್ಲವನಾಗಿ, ಪ್ರಜೆಗಳಿಗೆ ಧರ್ಮವನ್ನು ವಿಧಿಸತಕ್ಕವನಾಗಿ, ವೀರನಾಗಿ, ಅನ್ಯನು ಗೆದ್ದ ಹೆಣ್ಣನ್ನು ನಾನು ಅಂಗೀಕರಿಸೆನು. ಭದ್ರೆ! ನೀನು ಬೇರೆ ಎಲ್ಲಿಯಾದರೂ ಮನಸ್ಸು ಬಂದ ಕಡೆಗೆ ಹೋಗು.

ಅಂಬೆ.—"ಮಹೀಪಾಲನೆ! ಹಾಗೆನ್ನಬೇಡ; ನಾನು ಇಷ್ಟಪಟ್ಟು ಹೋದವಳಲ್ಲ; ಭೀಷ್ಮನು ನಾನು ಅಳುತ್ತಿದ್ದರೂ ಬಿಡದೆ ನನ್ನನ್ನು ಬಲಾತ್ಕಾರ ದಿಂದ ಒಯ್ದನು. ನಾನು ಬಾಲೆ, ಅಬಲೆ, ನಿರಪರಾಧಿ, ನಿನ್ನ ಅನನ್ಯಭಕ್ತೆ; ನನ್ನನ್ನು ತ್ಯಜಿಸುವುದು ನಿನಗೆ ಧರ್ಮವಲ್ಲ. ಭೀಷ್ಮನ ಅನುಜ್ಞೆಯನ್ನು ಪಡೆದೇ ನಾನು ನಿನ್ನ ಹತ್ತಿರ ಬಂದಿರುವೆನು. ಅವನು ನನ್ನನ್ನು ಒಲ್ಲನು; ನನ್ನ ತಂಗಿಯರನ್ನು ಅವನ ತಮ್ಮನಿಗೆ ತಂದುಕೊಂಡಿದ್ದಾನೆ. ಪುರುಷ ವ್ಯಾಘ್ರನೆ! ನಿನ್ನನ್ನು ಬಿಟ್ಟು ನಾನು ಇನ್ನಾರನ್ನೂ ವರಿಸಿದವಳಲ್ಲ; ಬೇರೆ ಯಾರಿಗೆ ಕೊಡಬೇಕೆಂದೂ ಯಾರೂ ಯೋಚಿಸಿಲ್ಲ; ನಾನಾಗಿ ನಿನ್ನ ಶರಣ ಹೊಕ್ಕಿರುವೆನು" ಎಂದು ಮೊರೆಯಿಡುತ್ತ ಅವನ ಕಾಲಿಗೆ ಬಿದ್ದಳು.

ಸಾಲ್ವನು ಅವಳನ್ನು ಮದುವೆಯಾಗಲೊಡಂಬಡಲಿಲ್ಲ. ಅವಳು ಕೋಪಾ

ವಿಷ್ಟಳಾಗಿ ಕಂಬನಿಗಳಿಂದ ತೊಯ್ದು—"ನೀನು ನನ್ನನ್ನು ಒಲ್ಲೆನೆಂದರೆ, ಲೋಕದಲ್ಲಿ ಇನ್ನು ಧರ್ಮಾತ್ಮರೇ ಇಲ್ಲವೆ? ಅವರು ನನ್ನನ್ನು ಸಲಹರೆ? ಧರ್ಮವು ಎಂದಿಗೂ ಕೆಡದು" ಎಂದಳು.

ಸಾಲ್ವ.—ನೀನು ಭೀಷ್ಮನ ಕೈಸೇರಿದವಳು. ನಾನು ಭೀಷ್ಮನಿಗೆ ಅಂಜಿ ನಡೆಯತಕ್ಕವನು. ನೀನು ನಡೆ; ಇಲ್ಲಿರಬೇಡ.

ಅಲ್ಲಿಂದ ಹೊರಟು ಅಂಬೆಯು, "ಲೋಕದಲ್ಲಿ ನನ್ನ ಹಾಗೆ ಸಂಕಟ ಪಡುವ ನಿರ್ಭಾಗ್ಯೆ ಯಾರೂ ಇಲ್ಲ. ಸಾಲ್ವನು ನನ್ನನ್ನು ಕೈಬಿಟ್ಟನು; ನಾನು ಅವನ ಮಾತಿಗೆ ಮರುಳಾದೆನು. ನನಗೆ ದಿಕ್ಕಿಲ್ಲ. ಮರಳಿ ಹಸ್ತಿನಾಪುರಕ್ಕೆ ಹೋಗುವೆನೆಂದರೆ, ಭೀಷ್ಮನು ನನ್ನನ್ನು ಅಲ್ಲಿಂದ ಹೊರಡಿಸಿಬಿಟ್ಟನು. ಇದು ಯಾರ ದೋಷವೆಂದು ಹೇಳಲಿ? ನನ್ನದೆ? ಅಜೇಯನಾದ ಭೀಷ್ಮನದೆ? ಸ್ವಯಂವರವನ್ನು ಪ್ರಕಟಿಸಿ ವೀರ್ಯ ಶುಲ್ಕೆಯೆಂದು ಹೆಸರಿಟ್ಟು ನನ್ನನ್ನು ಅಂಗಡಿಯಲ್ಲಿಟ್ಟ ನಮ್ಮಪ್ಪನದೆ? ನನ್ನನ್ನು ನಿರ್ಮಿಸಿದ ವಿಧಾತನದೆ?" ಎಂದು ಈ ಬಗೆಯಲ್ಲಿ ತೊಳಲುತ್ತ ಯುದ್ಧದಿಂದಲೋ ತಪಸ್ಸಿನಿಂದಲೋ ಭೀಷ್ಮನಿಗೆ ತಕ್ಕ ಶಾಸ್ತಿ ಮಾಡುವೆನೆಂದು ನಿಶ್ಚಯಿಸಿ, ನಗರದ ಬಹಿರ್ಭಾಗದಲ್ಲಿದ್ದ ಒಂದು ತಪೋವನವನ್ನು ಹೊಕ್ಕಳು. ಅಲ್ಲಿ ಪುಣ್ಯಶೀಲರಾದ ತಾಪಸರ ಸಂಗಡ ತನ್ನ ದುಃಖವನ್ನು ಹೇಳಿಕೊಳ್ಳುತ್ತಿರುವ ಸಮಯಕ್ಕೆ ಮಹೇಂದ್ರಪರ್ವತದಿಂದ ಪರಶುರಾಮನು ಆ ಆಶ್ರಮದಲ್ಲಿ ಬಂದಿಳಿದನು. ಆಶ್ರಮವಾಸಿಗಳು ಆ ಭೃಗು ಕುಲೋತ್ತಮನನ್ನು ಸತ್ಕರಿಸಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುತ್ತಲೆ ಅಂಬೆ ತನ್ನ ವೃತ್ತಾಂತವೆಲ್ಲವನ್ನೂ ತಿಳಿಸಿ, ಕಡೆಗೆ—"ಭೃಗುನಂದನನೇ! ನನ್ನ ಸಂಕಟಕ್ಕೆ ಭೀಷ್ಮನೇ ಮೂಲ. ಅವನು ಲುಬ್ಧನು, ನೀಚನು, ಜಯೋನ್ಮತ್ತನು. ನೀನು ಅವನ ಸೊಕ್ಕು ಮುರಿ. ಅವನನ್ನು ಕೊಲ್ಲಿಸಬೇಕೆಂಬುದೇ ನನ್ನ ಸಂಕಲ್ಪ. ರಾಮ! ಈ ನನ್ನ ಅಭೀಷ್ಟವನ್ನು ತೀರಿಸು" ಎಂದಳು.

ರಾಮ.—ಎಲೌ ಕನ್ಯೆಯೇ! ವೇದಜ್ಞರಾದ ಬ್ರಾಹ್ಮಣರನ್ನು ಸಲಹಲು ಹೊರತು ನಾನು ಆಯುಧವನ್ನು ಹಿಡಿಯೆನು. ಆ ಮಾತನ್ನು ಬಿಟ್ಟು ನನ್ನಿಂದೇನಾಗಬೇಕು ಹೇಳು.

ಅಂಬೆ.—ಮಹಾತ್ಮನೇ! ಹೇಗಾದರೂ ನನ್ನ ದುಃಖವನ್ನು ಪರಿಹರಿಸು; ನನ್ನ ದುಃಖನಂತೂ ಭೀಷ್ಮನಿಂದಾದುದು.

ರಾಮ.—ಎಲೌ ಕಾಶೀ ಕನ್ಯೆಯೇ! ಭೀಷ್ಮನು ನಿನಗೆ ಪೂಜ್ಯನು; ಆದರೂ, ನಾನು ಹೇಳಿದರೆ ನಿನ್ನ ಪಾದಗಳೆರಡನ್ನೂ ತನ್ನ ತಲೆಯಮೇಲಿಟ್ಟು ಕೊಳ್ಳುವನು; ಅವನು ನನ್ನ ಮಾತನ್ನು ಕಳೆಯನು.

ತರುವಾಯ, ಪರಶುರಾಮನು ಕಾಶೀರಾಜನ ಮಗಳನ್ನೊಡಗೊಂಡು ಬ್ರಾಹ್ಮಣರ ಸಮೇತನಾಗಿ ಕುರುಕ್ಷೇತ್ರಕ್ಕೆ ಪಯಣಮಾಡಿದನು. ಅವನ ಬರವನ್ನು ಭೀಷ್ಮನು ಕೇಳಿ ಗೋವನ್ನು ಮುಂದುಮಾಡಿಕೊಂಡು ಬ್ರಾಹ್ಮಣರು, ಋತ್ವಿಜರು, ಪುರೋಹಿತರು ಮೊದಲಾದವರೊಡನೆ ಹೋಗಿ ಪ್ರತಾಪಶಾಲಿಯಾದ ಆ ಜಾಮದಗ್ನ್ಯನನ್ನು ಅರ್ಚನಾಪೂರ್ವಕವಾಗಿ ಸತ್ಕರಿಸಿದನು.

ಸ್ವಾಗತ ಸಂಭಾಷಣಾದಿಗಳು ಆದ ಬಳಿಕ ಪರಶುರಾಮನು—“ಭೀಷ್ಮ! ನೀನು ಕಾಮಕ್ರೋಧಗಳನ್ನು ಬಿಟ್ಟವನಾದರೂ ಸ್ವಯಂವರ ಸಭೆಯನ್ನು ಪ್ರವೇಶಿಸಿ ಕಾಶೀರಾಜನ ಮಗಳನ್ನು ಹಿಡಿದುಕೊಂಡು ಹೋಗಿ, ತರುವಾಯ ಅವಳನ್ನು ಅಟ್ಟಿಬಿಟ್ಟೆ; ಇದು ನ್ಯಾಯವೆ? ನೀನು ಮುಟ್ಟಿದ ಹೆಣ್ಣನ್ನು ಇನ್ನಾರು ತಾನೆ ಪುರಸ್ಕರಿಸುವರು? ನೀನೆಳೆದುಕೊಂಡು ಹೋದೆಯೆಂದೇ ಸಾಲ್ವನು ಈ ಯಶಸ್ವಿನಿಯನ್ನು ತ್ಯಜಿಸಿದನು. ಭಾರತನೇ! ಈ ರಾಜಪುತ್ರಿಯನ್ನು ನೀನೇ ಪ್ರತಿಗ್ರಹಿಸು. ಅವಳನ್ನು ಅಪಮಾನಕ್ಕೂ ಕಷ್ಟಕ್ಕೂ ಈಡುಮಾಡುವುದು ಧರ್ಮವಲ್ಲ” ಎಂದನು.

ಭೀಷ್ಮ.—ಎಲೈ ಬ್ರಾಹ್ಮಣೋತ್ತಮನೇ! ನಾನು ನನ್ನ ತಮ್ಮನಿಗೆ ಈ ಹೆಣ್ಣನ್ನು ತೆಗೆದುಕೊಳ್ಳೆನು. ತಾನು ಸಾಲ್ವನವಳೆಂದು ಹೇಳಿ, ಬೀಳ್ಕೊಡೆಂದು ತಾನೇ ಕೇಳಿಕೊಂಡಮೇಲೆ ಅವಳನ್ನು ಹೋಗೆಂದು ಕಳುಹಿಸಿಬಿಟ್ಟೆನು. ನಾನಾದರೋ ಭಯದಿಂದಾಗಲಿ, ಕನಿಕರದಿಂದಾಗಲಿ, ಅರ್ಥಲೋಭದಿಂದಾಗಲಿ, ವಿಷಯಾಸಕ್ತಿಯಿಂದಾಗಲಿ ಕ್ಷಾತ್ರಧರ್ಮವನ್ನು ತೊರೆಯೆನು, ಬ್ರಹ್ಮಚರ್ಯವನ್ನು ಬಿಡೆನು.

ರಾಮ.—ಎಲೈ ನರಪುಂಗವನೇ! ನೀನು ನನ್ನ ಮಾತನ್ನು ಕೇಳದಿದ್ದರೆ ನಿನ್ನನ್ನೂ ನಿನ್ನ ಅಮಾತ್ಯರನ್ನೂ ಕೊಂದುಬಿಡುವೆನು.

ಭೀಷ್ಮ.—ನಾನು ನಮಸ್ಕಾರಮಾಡಿ ಬೇಡುತ್ತೇನೆ, ಶಾಂತರಾಗಿರಿ. ನನ್ನ ಬಾಲ್ಯದಲ್ಲಿ ತಾವು ನನಗೆ ಅಸ್ತ್ರವಿದ್ಯೆಯನ್ನು ಕಲಿಸಿದಿರಿ. ನಾನು ತಮ್ಮ ಶಿಷ್ಯ. ನನ್ನ ಮೇಲೆ ತಾವು ಯುದ್ಧಕ್ಕೆ ಬರಬಹುದೆ?

ರಾಮ.—ನಾನು ನಿನ್ನ ಗುರುವಾಗಿದ್ದು, ನನ್ನ ಪ್ರಿಯಾರ್ಥವಾಗಿ ಈ ರಾಜಕುಮಾರಿಯನ್ನು ಮದುವೆಯಾಗೆಂದು ಹೇಳುತ್ತಿರುವಲ್ಲಿ, ಒಲ್ಲೆನೆನ್ನುತ್ತೀಯೆ. ಕುರುನಂದನಾ! ನೀನು ನನ್ನನ್ನು ಗುರುವೆಂದೆಣಿಸುವ ಪಕ್ಷಕ್ಕೆ ಈ ಹೆಣ್ಣನ್ನು ತೆಗೆದುಕೊ; ನಿನ್ನ ಕುಲವನ್ನು ರಕ್ಷಿಸಿಕೊ.

ಭೀಷ್ಮ.—ಬ್ರಹ್ಮರ್ಷಿಗಳೇ! ಹಾಗಲ್ಲ. ಯಥಾರ್ಥವಾಗಿಯೂ ಗುರುಗಳೆಂದು ಭಾವಿಸಿಯೇ ತಮ್ಮನ್ನು ಸಂತೈಸಲು ಪ್ರಯಾಸಪಡುತ್ತಿದ್ದೇನೆ. ಅನರ್ಥಹೇತುವಾದ ಸ್ತ್ರೀಯರ ದೋಷವನ್ನು ತಿಳಿದು ತಿಳಿದು, ಅನ್ಯಪುರುಷನ ಮೇಲೆ ಮನಸ್ಸುಳ್ಳ ಹೆಣ್ಣನ್ನು ಯಾರು ತಾನೆ ಮನೆಗೆ ಕೂಡುವರು? ನಾನು ದೇವೇಂದ್ರನಿಗೂ ಹೆದರುವನಲ್ಲ, ಧರ್ಮಭ್ರಷ್ಟನಾಗುವನಲ್ಲ, ಪ್ರಸನ್ನರಾಗಿರಿ. ಗುರುವು ಕುಪಥಗಾಮಿಯೂ ಅಹಂಕಾರಿಯೂ ಆದಲ್ಲಿ ಅಂತಹ ಗುರುವನ್ನು ತ್ಯಜಿಸುವುದು ಶಾಸ್ತ್ರಸಮ್ಮತವು. ನಾನು ಗುರುವನ್ನು, ವಿಶೇಷತಃ ಬ್ರಾಹ್ಮಣನನ್ನು, ಅದರ ಮೇಲೆ ತಪೋವೃದ್ಧನನ್ನು ಸಮರದಲ್ಲಿ ಕೊಲ್ಲೆನು. ಈಗಲೂ ತಮ್ಮನ್ನು ಕ್ಷಮಿಸಲು ಸಿದ್ಧನಾಗಿರುವೆನು. ಆದರೆ ತಾವು ಗುರುವೃತ್ತಿಯನ್ನರಿಯರಿ. ಯಾವ ಬ್ರಾಹ್ಮಣನು ಕ್ಷತ್ರಿಯ ಬಂಧುವಾಗಿ, ಅಸ್ತ್ರವನ್ನೆತ್ತಿ ರಣದಲ್ಲಿ ನಿಂತು ಯುದ್ಧಮಾಡುವನೊ ಅವನನ್ನು ಸಮರದಲ್ಲಿ ಕೊಲ್ಲುವುದು ಬ್ರಹ್ಮಹತ್ಯೆವೆನಿಸದು. ತಪೋಧನರೇ! ನಾನು ಕ್ಷತ್ರಿಯ, ಕ್ಷತ್ರಿಯ ಧರ್ಮದಲ್ಲಿರುತ್ತೇನೆ. ತಾವು ಅನ್ಯಾಯವಾಗಿ ನನ್ನ ಸಂಗಡ ಯುದ್ಧಕ್ಕೆ ಬಂದಿರುತ್ತೀರಿ. ತಮ್ಮ ಸಂಗಡ ಕಾದುವುದರಿಂದ ನಾನು ಯಾವ ಪಾಪವನ್ನೂ ಮಾಡಿದಂತಾಗುವುದಿಲ್ಲ, ಅಶ್ರೇಯಸ್ಸನ್ನು ಹೊಂದುವ ಸಂಭವವೂ ಇಲ್ಲ. ತಪೋಧನರೇ! ತಪಸ್ಸಿನಿಂದ ತಾವು ಸಂಪಾದಿಸಿರುವ ಲೋಕವನ್ನು ತಮಗೆ ನನ್ನ ಅಸ್ತ್ರದಿಂದಲೇ ಪ್ರಾಪ್ತವಾಗುವಂತೆ ಮಾಡುವೆನು; ಕುರುಕ್ಷೇತ್ರಕ್ಕೆ ಬನ್ನಿರಿ; ನನ್ನ ಬಲ ವಿಕ್ರಮವನ್ನು ನೋಡುವಿರಿ. ಪೂರ್ವದಲ್ಲಿ ಕ್ಷತ್ರಿಯರ ರಕ್ತದಿಂದ ನಿಮ್ಮ ಪಿತೃಗಳಿಗೆ ನೀವು ತರ್ಪಣವನ್ನು ಕೊಟ್ಟಂತೆಯೇ ಈಗ ನಾನು ನಿಮ್ಮನ್ನು ಕೊಂದು ನಿಮ್ಮ ರಕ್ತದಿಂದ ಆ ಕ್ಷತ್ರಿಯರಿಗೆ ತರ್ಪಣವನ್ನು ಕೊಡುವೆನು; ಬ್ರಾಹ್ಮಣರು ಹೊಗಳುತ್ತಿರುವ ನಿಮ್ಮ ಪುರಾತನ ದರ್ಪವನ್ನು ಮುರಿಯುವೆನು.

ರಾಮ.—ಕುರುಪುಂಗವನೇ! ನಾನೊಬ್ಬನೇ ನಿಂತು ಎಷ್ಟೋ ಬಾರಿ ಲೋಕವನ್ನು ನಿಃಕ್ಷತ್ರಿಯವನ್ನಾಗಿ ಮಾಡಿದುದನ್ನು ನೀನರಿಯೆಯಾ?

ಭೀಷ್ಮ.—ಅದಕ್ಕೆ ಕಾರಣವನ್ನು ನೀವರಿಯರಾ? ಆಗ ಭೀಷ್ಮನಾಗಲಿ ಭೀಷ್ಮಸಂತಹ ಕ್ಷತ್ರಿಯ ವೀರನಾಗಲಿ ಹುಟ್ಟಿರಲಿಲ್ಲ. ಅಲ್ಲಿಂದೀಚೆಗೆ ತೇಜೋವಂತರಾದ ಕ್ಷತ್ರಿಯರು ಹುಟ್ಟಿದರು. ತಾವು ನಾಶಮಾಡಿದ ಕ್ಷತ್ರಿಯರು ತೃಣಮಾತ್ರದವರು. ತಮ್ಮ ಅಹಂಕಾರವನ್ನು ಮುರಿಯಬಲ್ಲವನು ಈಚೆಗೆ ಹುಟ್ಟಿದನು. ಅವನಾರು ಬಲ್ಲಿರಾ? ಬೇರೆ ಯಾರೂ ಅಲ್ಲ, ನಾನು, ಭೀಷ್ಮ, ಪರಪುರಂಜಯ!

ರಾಮ.—ಹಾಗಾದರೆ ನಡೆ, ರಣರಂಗಕ್ಕೆ ಹೋಗೋಣ.

ಒಡನೆಯೇ ಈ ಪ್ರಚಂಡ ಧನುರ್ಧಾರಿಗಳಿಬ್ಬರೂ ಕುರುಕ್ಷೇತ್ರದಲ್ಲಿ ದ್ವಂದ್ವಯುದ್ಧಕ್ಕೆ ನಿಂತರು.

ಭೀಷ್ಮ.—ಮಹಾಭುಜರೇ! ತಾವು ನೆಲದ ಮೇಲೆ ನಿಂತಿರುವಲ್ಲಿ, ನಾನು ರಥದ ಮೇಲೆ ಕುಳಿತು ತಮ್ಮ ಸಂಗಡ ಯುದ್ಧಮಾಡೆನು; ಕವಚವನ್ನು ತೊಟ್ಟು ತಾವೂ ರಥವನ್ನೇರಿರಿ.

ರಾಮನು ಮಂದಸ್ಮಿತನಾಗಿ, "ಮೇದಿನಿ ನನ್ನ ರಥ, ವೇದಗಳು ನನ್ನ ಅಶ್ವಗಳು, ಮಾತರಿಶ್ವನು ನನ್ನ ಸೂತ, ಗಾಯತ್ರಿ ಸಾವಿತ್ರಿ ಸರಸ್ವತಿಗಳು ನನ್ನ ಕವಚ" ಎಂದು ನುಡಿದು, ಒಡನೆಯೇ ಸರ್ವಾಯುಧಸಂಪನ್ನನಾಗಿ ಕದನವನ್ನಾರಂಭಿಸಿದನು.

ಆಗ ಭೀಷ್ಮನು ರಥವನ್ನಿಳಿದು ಧನುಸ್ಸನ್ನು ಒತ್ತಟ್ಟಿಗಿಟ್ಟು, ಪಾದಚಾರಿಯಾಗಿ ಹೋಗಿ ವಿಧಿವತ್ತಾಗಿ ಆ ಋಷಿಶ್ರೇಷ್ಠನನ್ನು ಅಭಿನಂದಿಸಿ—"ವೀರವರ್ಯರೇ! ನಾನು ತಮಗೆ ಸಮನೋ ಅಧಿಕನೊ, ಹೇಗಾದರೂ ಆಗಲಿ; ಧರ್ಮಶೀಲರೂ ಗುರುಗಳೂ ಆದ ತಮ್ಮ ಸಂಗಡ ಯುದ್ಧಮಾಡಲಿಚ್ಛಿಸುತ್ತೇನೆ; ನನಗೆ ಜಯವಾಗಲೆಂದು ಹರಸಿರಿ" ಎಂದನು.

ರಾಮ.—ಕುರುಶ್ರೇಷ್ಠನೇ! ಅಭ್ಯುದಯವನ್ನು ಬಯಸುವರು ಹೀಗೆಯೇ ನಡೆಯಬೇಕು. ಬಲಾಧಿಕರೂ ಹಿರಿಯರೂ ಆದವರ ಸಂಗಡ ಯುದ್ಧಮಾಡುವವನಿಗೆ ಇದು ಕರ್ತವ್ಯ. ನನ್ನ ಬಳಿಗೆ ನೀನು ಬಾರದೆಹೋಗಿದ್ದರೆ ನಿನ್ನನ್ನು ಶಪಿಸುತ್ತಿದ್ದೆನು. ನಾನು ನಿನ್ನ ನಡತೆಯನ್ನು ಮೆಚ್ಚಿದೆನು. ಕೌರವನೇ! ಹೋಗು, ಧೈರ್ಯವನ್ನವಲಂಬಿಸಿ ಧರ್ಮದಿಂದ ಯುದ್ಧಮಾಡು. ನಾನು ನಿನ್ನನ್ನು ಜಯಿಸಬಂದಿರುವಲ್ಲಿ ನಿನಗೆ ಜಯವಾಗಲೆಂದು ಹರಸುವುದು ಹೇಗೆ?

ಭೀಷ್ಮನು ಗುರುವನ್ನು ಅಭಿವಂದಿಸಿ, ರಥವನ್ನೇರಿ ಶಂಖವನ್ನು ಪೂರಯಿಸಿದನು. ಯುದ್ಧವಾರಂಭವಾಯಿತು. ರಾಮನೇ ಮೊದಲು ಭೀಷ್ಮನ ಮೇಲೆ ಶರವೃಷ್ಟಿಯನ್ನು ಕರೆದನು. ಆದರೂ ಭೀಷ್ಮನು ಸುಮ್ಮನಿದ್ದು ದೇವಬ್ರಾಹ್ಮಣರಿಗೆ ನಮಸ್ಕಾರಮಾಡಿ, ನಸುನಗುತ್ತ ರಾಮನನ್ನು ಕುರಿತು—"ಬ್ರಾಹ್ಮಣೋತ್ತಮರೆ! ನನ್ನನ್ನು ತಾವು ನಿರ್ಲಕ್ಷ್ಯಮಾಡಿದರೂ ನಾನು ತಮ್ಮ ಆಚಾರ್ಯತ್ವವನ್ನು ಗೌರವಿಸಿದೆನು. ಇನ್ನೂ ಕೇಳಿರಿ; ನಾನು ತಮ್ಮ ವೇದಜ್ಞತೆಯನ್ನಾಗಲಿ, ತಮ್ಮ ಬ್ರಾಹ್ಮಣ್ಯದ ಮಹತ್ತನ್ನಾಗಲಿ, ತಮ್ಮ ಉಗ್ರ ತಪೋಬಲವನ್ನಾಗಲಿ ಭಂಗಪಡಿಸೆನು. ತಾವು ಆಶ್ರಯಿಸಿರುವ ಕ್ಷಾತ್ರಧರ್ಮವನ್ನು ಮಾತ್ರ ಬಿಡದೆ ಬಡಿದುಹಾಕುವೆನು. ಬ್ರಾಹ್ಮಣನು ಅಸ್ತ್ರಶಸ್ತ್ರಗಳನ್ನು ಹಿಡಿಯುತ್ತಲೆ ಅವನಿಗೆ ಕ್ಷತ್ರಿಯತ್ವವು ಬರುವುದು. ನನ್ನ ಧನುಸ್ಸಿನ ವೀರ್ಯ

ವನ್ನು ನೋಡಿರಿ" ಎಂದು ಪರಶುರಾಮನ ಮೇಲೆ ನಿಲುವಿಲ್ಲದೆ ಬಾಣಗಳನ್ನು ಬಿಟ್ಟನು. ಪರಶುರಾಮನು ಮೂರ್ಛೆಗೊಳಗಾದನು.

ಅದನ್ನು ಕಂಡು ಭೀಷ್ಮನು ಕೃಪಾವಿಷ್ಟನಾಗಿ, "ಯುದ್ಧವು ಬೆಂದು ಹೋಗಲಿ! ಕ್ಷತ್ರಿಯವೃತ್ತಿಗೆ ಬೆಂಕಿಬೀಳಲಿ! ಕ್ಷತ್ರಿಯಧರ್ಮವನ್ನವಲಂಬಿಸಿ ಎಂತಹ ಪಾಪವನ್ನು ಮಾಡಿದೆನು? ಬ್ರಾಹ್ಮಣನನ್ನು, ಧರ್ಮಾತ್ಮನನ್ನು, ಮೇಲೂ ಗುರುವನ್ನು ಬಾಣದಿಂದ ಹೊಡೆದೆನಲ್ಲಾ!" ಎಂದು ತನ್ನನ್ನು ತಾನೇ ಹಳಿಯುತ್ತ ಪ್ರಲಾಪಿಸಿದನು.

ಆ ವೇಳೆಗೆ ಸೂರ್ಯಾಸ್ತಮಯವಾಯಿತು. ರಾಮನೂ ಮೂರ್ಛೆಯಿಂದೆಚ್ಚತ್ತನು. ಈ ರೀತಿ ಈ ಪ್ರಚಂಡ ಧನುರ್ಧಾರಿಗಳು ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ಪ್ರತಿದಿನವೂ ಒಬ್ಬರನ್ನೊಬ್ಬರು ಬಾಣಗಳಿಂದ ಹೊಡೆಯುತ್ತ ಇಪ್ಪತ್ತು ದಿನಗಳು ಛಲದಿಂದ ಹೋರಾಡಿದರು. ಇಬ್ಬರೂ ಸಮಧೀರರು, ಒಬ್ಬರೂ ಸೋಲುವರಲ್ಲ, ಬಾಣಕ್ಕೆ ಬೆನ್ನ ಕೊಟ್ಟು ರಣದಿಂದ ಹಿಮ್ಮೆಟ್ಟುವರಲ್ಲ. ಅಲ್ಲಿ ನೆರೆದಿದ್ದವರೆಲ್ಲರೂ—"ಭೀಷ್ಮ! ಯುದ್ಧವನ್ನು ಬಿಡು; ಆ ದ್ವಿಜೋತ್ತಮನಿಗೆ ಮಾನವನ್ನು ಕೊಡು" ಎಂದು ಹಲವು ಬಗೆಯಲ್ಲಿ ಹೇಳಿದರು.

ಭೀಷ್ಮನು, "ನಾನೆಂದಿಗೂ ಅಡಿಯ ಹಿಂದಿಡೆನು; ಲೋಭದಿಂದಾಗಲಿ ಧನಾಕಾಂಕ್ಷೆಯಿಂದಾಗಲಿ ಭಯದಿಂದಾಗಲಿ ನನ್ನ ಧರ್ಮವನ್ನು ಬಿಡೆನು" ಎಂದನು.

ಆಗ ಅವರು ರಾಮನನ್ನು ಸಂಬೋಧಿಸಿ—"ಭಾರ್ಗವನೇ! ಬ್ರಾಹ್ಮಣರ ಹೃದಯವು ಬೆಣ್ಣೆಗೆ ಸಮಾನವಾದುದು; ಶಾಂತನಾಗು. ನೀನು ಭೀಷ್ಮನನ್ನು ಕೊಲ್ಲಲಾರೆ. ಭೀಷ್ಮನು ನಿನ್ನನ್ನು ಕೊಲ್ಲಲಾರನು" ಎಂದು ಹೇಳಿ ಲೋಕಹಿತಾರ್ಥವಾಗಿ ಶಸ್ತ್ರಗಳನ್ನು ಕೆಳಗೆ ಇಡಿಸಿದರು.

ಭೀಷ್ಮನು ಕ್ಷತವಿಕ್ಷತನಾಗಿದ್ದರೂ ಒಡನೆಯೇ ಹೋಗಿ ರಾಮನ ಪಾದಕ್ಕೆ ಬಿದ್ದನು.

ಆಗ ಮಹಾ ತಪಸ್ವಿಯಾದ ಭಾರ್ಗವನು ನಸುನಗುತ್ತ ಪ್ರೇಮದಿಂದ—"ಭೀಷ್ಮ! ಇನ್ನು ಹೋಗು; ಲೋಕದಲ್ಲಿ ನಿನ್ನ ಸಮಾನ ಕ್ಷತ್ರಿಯನಿಲ್ಲ; ನಿನ್ನನ್ನು ಮೆಚ್ಚಿದೆನು; ನಿನ್ನ ಪ್ರತಾಪವನ್ನು ನೋಡಿ ಸಂತೋಷಪಟ್ಟೆನು" ಎಂದು ಹರ್ಷದಿಂದುಬ್ಬಿ ಶಿಷ್ಯನ ದುರ್ಧರ ಬಾಹುಬಲವನ್ನು ಕೊಂಡಾಡಿದನು.

ತರುವಾಯ, ರಾಮನು ಅಂಬೆಯನ್ನು ಕರೆದು—"ಎಲೌ ಭಾಮಿನಿ! ಇವರೆಲ್ಲರೂ ಕಂಡಂತೆ ನನ್ನ ಶಕ್ತಿಯೆಲ್ಲವನ್ನೂ ವಿನಿಯೋಗಿಸಿದರೂ ಆ

ಪ್ರಚಂಡನ ಮೇಲೆ ನನ್ನ ಕೈ ಸಾಗಲಿಲ್ಲ; ಇಷ್ಟೇ ನನ್ನ ಪರಮಶಕ್ತಿ; ಇನ್ನು ಭೀಷ್ಮನ ಮರೆಬೀಳು, ಬೇರೆ ಗತಿಯಿಲ್ಲ" ಎಂದು ಹೇಳಿ ಮಹೇಂದ್ರಪರ್ವತಕ್ಕೆ ಹೊರಟುಹೋದನು.

ತರುವಾಯ, ಕ್ರೋಧಪರವಶಳಾದ ಆ ರಾಜಪುತ್ರಿಯು ಭೀಷ್ಮನನ್ನು ಕೊಲ್ಲದೆ ಬಿಡೆನೆಂದು ನಿಶ್ಚಯಿಸಿ, ಮಹೇಶ್ವರನನ್ನು ಕುರಿತು ತಪಸ್ಸುಮಾಡಿ, ತನ್ನ ಇಷ್ಟಸಿದ್ಧಿಗೆ ತಕ್ಕ ವರವನ್ನು ಪಡೆದು ಅಗ್ನಿಪ್ರವೇಶಮಾಡಿ, ತರುವಾಯ ದ್ರುಪದರಾಯನ ಹೊಟ್ಟೆಯಲ್ಲಿ ಹುಟ್ಟಿ ಶಿಖಂಡಿಯೆಂಬ ಹೆಸರಿನಿಂದ ಪಾಂಡವ ಕೌರವರ ಯುದ್ಧದಲ್ಲಿ ಕಾಣಿಸಿಕೊಂಡಳು.

ನಾಲ್ಕನೆಯ ಅಧ್ಯಾಯ

ಅರಾಜಕತೆಯ ಶಂಕೆ

ವಿಚಿತ್ರವೀರ್ಯನು ಇಬ್ಬರು ಹೆಂಡಿರೊಡನೆ ಸುಖದಿಂದ ಕಾಲಯಾಪನೆ ಮಾಡತೊಡಗಿದನು. ರಾಜಮಹಿಷಿಯರಿಬ್ಬರೂ, ದೇವಸೇನಾಪತಿಯಂತಹ ರೂಪವಂತನೂ ದೇವರಾಜನಂತಹ ಪರಾಕ್ರಮಶಾಲಿಯೂ ದೇವಗುರುವಿನಂತಹ ಸರ್ವಗುಣಸಂಪನ್ನನೂ ಆದ ಗಂಡನನ್ನು ಪಡೆದು ಚರಿತಾರ್ಥರಾದೆವೆಂದರು. ಅವರು ತಾವು ಸೌಭಾಗ್ಯವತಿಗಳೆಂದು ಭಾವಿಸಿಕೊಂಡು ಹರ್ಷಚಿತ್ತರಾಗಿ, ಪತಿಸೇವೆಯನ್ನು ಮಾಡುತ್ತಿದ್ದರು. ಆದರೆ ಈ ದಾಂಪತ್ಯಸುಖವು ಚಿರಕಾಲವಿರಲಿಲ್ಲ. ವಿಚಿತ್ರವೀರ್ಯನಿಗೆ ಯೌವನದಶೆಯಲ್ಲಿಯೇ ಪ್ರಬಲರೋಗವು ಪ್ರಾಪ್ತವಾಯಿತು. ಭೀಷ್ಮನು ತಮ್ಮನ ರೋಗನಿವಾರಣೆಗಾಗಿ ತಕ್ಕ ಚಿಕಿತ್ಸೆಗಳನ್ನು ಮಾಡಿಸಿದನು. ವಿಚಕ್ಷಣರಾದ ವೈದ್ಯರು ತಮ್ಮ ಬುದ್ಧಿಯೆಲ್ಲವನ್ನೂ ವೆಚ್ಚಮಾಡಿ ಅನೇಕ ಪ್ರತೀಕಾರಗಳನ್ನು ಮಾಡಿದರು. ಆದರೂ ರೋಗವು ವಾಸಿಯಾಗಲಿಲ್ಲ. ವಿಚಿತ್ರವೀರ್ಯನು ದಿನದಿನಕ್ಕೆ ಸವೆಯುತ್ತ ಹೋದನು.

ವಿಚಿತ್ರವೀರ್ಯನು ವ್ಯಾಧಿಗ್ರಸ್ತನಾಗಿಯೂ, ಭೀಷ್ಮನು ನಿತ್ಯಬ್ರಹ್ಮಚಾರಿಯಾಗಿಯೂ ಇದ್ದುದರಿಂದ ಕುರುವಂಶಕ್ಕೆ ದುರ್ದಶೆಯು ಬಂದೊದಗಿತು. ನಿಪುಣರಾದ ವೈದ್ಯರ ಪ್ರಯತ್ನಗಳೆಲ್ಲವೂ ವಿಫಲವಾದುವು; ವಿಚಿತ್ರವೀರ್ಯನು ತರುಣವಯಸ್ಸಿನಲ್ಲಿಯೇ ಕಾಲಗ್ರಸ್ತನಾದನು. ಸತ್ಯವತಿಯು ಪುತ್ರಶೋಕದಿಂದ ಧೈರ್ಯಗೆಟ್ಟು ಪರಿತಾಪವಿಲಾಪಗಳಲ್ಲಿ ಮಗ್ನಳಾದಳು; ಅಂಬಿಕಾ ಅಂಬಾಲಿಕೆಯರು ಪತಿವಿಯೋಗದಿಂದ ಅನುಕ್ಷಣವೂ ಮರುಗುತ್ತಿದ್ದರು;

ಭೀಷ್ಮನು ಭ್ರಾತೃಶೋಕದಿಂದ ಕಾತರನಾಗಿ ಕಣ್ಣೀರ ಸುರಿಸುತ್ತಿದ್ದನು. ಆಹ್ಲಾದದಿಂದಲೂ ಉತ್ಸವದಿಂದಲೂ ಮೆರೆಯುತ್ತಿದ್ದ ರಾಜಭವನಕ್ಕೆ ಈಗ ಶೋಕಾಂಧಕಾರವು ಕವಿಯಿತು.

ಸತ್ಯವತಿಯು ತನ್ನ ದುಸ್ಸಹ ವ್ಯಸನವನ್ನು ಕೂಡಿದ ವರೆಗೆ ಅಡಗಿಸಿ ಕೊಂಡು ಭೀಷ್ಮನ ಬಳಿಗೆ ಹೋಗಿ—"ವತ್ಸ! ಪಿಂಡೋದಕಗಳನ್ನು ಕೊಟ್ಟು ನಿಮ್ಮ ಪಿತೃದೇವತೆಗಳನ್ನು ತೃಪ್ತಿಗೊಳಿಸತಕ್ಕವರು ಸದ್ಯದಲ್ಲಿ ನಿನ್ನ ಹೊರತು ಯಾರೂ ಇಲ್ಲ. ಸೊಸೆಯರಿಗೆ ಸಂತಾನವಾಗುವ ಸಂಭವವೇನೋ ಇದೆ; ಆದರೆ ಗಂಡಾಗುವುದೋ ಹೆಣ್ಣಾಗುವುದೋ ಹೇಳಲಾಗದು. ಹೀಗಿರುವಲ್ಲಿ, ನೀನು ರಾಜಪದವಿಯನ್ನು ಸ್ವೀಕರಿಸುವುದು ನಿನ್ನ ಕರ್ತವ್ಯವಾಗಿರುವುದು. ನೀನು ಧರ್ಮತತ್ತ್ವದಲ್ಲಿ ಅಭಿಜ್ಞನು, ವೇದವೇದಾಂಗಗಳಲ್ಲಿ ಪಾರದರ್ಶಿ, ರಾಜನೀತಿಯಲ್ಲಿ ಕುಶಲನು, ನಿನಗೆ ಧರ್ಮದಲ್ಲಿ ನಿಷ್ಠೆಯು ಬಲವತ್ತಾಗಿರು ವಂತೆಯೇ ಕುಲಾಚಾರದಲ್ಲಿ ಅಭಿಜ್ಞತೆಯೂ ದುಷ್ಕರ ಕಾರ್ಯಸಾಧನೆಯಲ್ಲಿ ಸಹಿಷ್ಣುತೆಯೂ ಇರುವುವು. ನೀನು ಮದುವೆ ಮಾಡಿಕೊಂಡು ಪಟ್ಟಾಭಿಷಿಕ್ತ ನಾಗು; ಇದು ನನ್ನ ಅಭೀಷ್ಟವು" ಎಂದಳು.

ಸತ್ಯವತಿಯ ಮಾತನ್ನು ಕೇಳಿ ಭೀಷ್ಮನು ಇಂತೆಂದನು:—"ತಾಯೇ! ನಾನು ರಾಜದಂಡವನ್ನು ಹಿಡಿಯೆನು, ಹೆಣ್ಣನ್ನು ಪರಿಗ್ರಹಿಸೆನು ಎಂದು ಮಾಡಿರುವ ಪ್ರತಿಜ್ಞೆಯನ್ನು ನೀನು ಕಾಣೆಯಾ? ನನ್ನ ಪೂರ್ವೋತ್ತರವನ್ನು ನೀನು ಬಲ್ಲೆ; ನಾನು ಮಾಡಿದ ಪ್ರತಿಜ್ಞೆಯನ್ನು ಬಿಡದೆ ಮನೋವಾಕ್ಕಾಯ ದಿಂದ ಪಾಲಿಸುವೆನು. ಪಿತೃದೇವನು ಸ್ವರ್ಗಾರೋಹಣ ಮಾಡುತ್ತಲೆ ನಿನ್ನ ಅನುಮತಿಯನ್ನು ಪಡೆದು ಚಿತ್ರಾಂಗದನಿಗೆ ಪಟ್ಟವನ್ನು ಕಟ್ಟಿದೆನು. ಚಿತ್ರಾಂಗ ದನು ಗಂಧರ್ವಯುದ್ಧದಲ್ಲಿ ಹತನಾಗಲು, ಅಪ್ರಾಪ್ತವಯಸ್ಕನಾದ ವಿಚಿತ್ರ ವೀರ್ಯನಿಗೆ ರಾಜಪದವಿಯನ್ನು ಕೊಟ್ಟೆನು. ನಾನು ಆ ಪದವಿಗೆ ಆಸೆಪಡಲಿಲ್ಲ. ವಿಚಿತ್ರವೀರ್ಯನು ಯೌವನದಶೆಗೆ ಬರುತ್ತಲೆ ಕಾಶಿಗೆ ಹೋಗಿ ಸ್ವಯಂವರ ಕ್ಕಾಗಿ ಬಂದಿದ್ದ ರಾಜರನ್ನು ಗೆದ್ದು ಕಾಶೀರಾಜನ ಮೂವರು ಕುಮಾರಿ ಯರನ್ನೂ ಕರೆತಂದೆನು; ಜ್ಯೇಷ್ಠಕುಮಾರಿಯನ್ನು ಅವಳ ಇಷ್ಟಾನುಸಾರ ವಾಗಿ ಹೋಗೆಂದು ಬಿಟ್ಟು ಉಳಿದಿಬ್ಬರನ್ನು ವಿಚಿತ್ರವೀರ್ಯನಿಗೆ ಮದುವೆ ಮಾಡಿದೆನು. ನಾನು ಮದುವೆಗೆ ಆಸೆಪಡಲಿಲ್ಲ, ನುಡಿದ ಪ್ರತಿಜ್ಞೆಯನ್ನು ಬಿಡಲಿಲ್ಲ. ಪ್ರತಿಜ್ಞಾಭಂಗಮಾಡಿದರೆ ಇಹದಲ್ಲಿ ಧರ್ಮಭ್ರಷ್ಟನಾಗಿ ಪರದಲ್ಲಿ ನರಕಭಾಗಿಯಾಗುವೆನು. ನಾನು ವಿಲಾಸಿಯಲ್ಲ; ಅಕಿಂಚಿತ್ಕರವಾದ ವಿಷಯ ಭೋಗದ ನಿಮಿತ್ತವಾಗಿ ಧರ್ಮಬಾಹಿರನಾಗಿ ಬಾಳುವುದು ನನ್ನ ಸ್ವಭಾವ

ವಲ್ಲ. ನಾನೆಂದಿಗೂ ಅದಕ್ಕೊಡಂಬಡೆನು. ತಂದೆಯ ಪ್ರೀತ್ಯರ್ಥವಾಗಿ ಭೀಷಣಪ್ರತಿಜ್ಞೆಯನ್ನು ಮಾಡಿ ಲೋಕದಲ್ಲಿ ದೇವವ್ರತನೆಂಬ ಹೆಸರಿಗೆ ಪ್ರತಿಯಾಗಿ ಭೀಷ್ಮನೆಂಬ ಹೆಸರಿನಿಂದ ಖ್ಯಾತನಾಗಿರುವೆನು. ಈಗ ಅಂತಹ ಪ್ರತಿಜ್ಞೆಯನ್ನುಲ್ಲಂಘಿಸಿದಲ್ಲಿ ನನ್ನ ಹೆಸರಿಗೆ ಕಳಂಕವು ಸ್ಪರ್ಶವಾಗುವುದು; ನನ್ನ ಸ್ಥೈರ್ಯಕ್ಕೆ ಅಪಮಾನಬರುವುದು; ನನ್ನ ಪಿತೃಭಕ್ತಿಯು ಕೆಟ್ಟು ಅಪಯಶಸ್ಸಿಗೆ ಎಡೆಯಾಗುವುದು. ತಾಯೇ! ನಾನು ಇನ್ನೇನ ಹೇಳಲಿ, ತ್ರೈಲೋಕ್ಯಾಧಿಪತ್ಯವನ್ನಾದರೂ ತ್ಯಜಿಸಬಲ್ಲೆನು; ಇದಕ್ಕೂ ಅತಿಶಯವಾದ ಅಭೀಷ್ಟವಾವುದಾದರೂ ನನಗೆ ಇದ್ದಿದ್ದಲ್ಲಿ ಅದನ್ನು ಕೂಡ ತ್ಯಜಿಸಲು ಹಿಂಜರಿಯುತ್ತಿರಲಿಲ್ಲ. ಆದರೆ ಸತ್ಯವನ್ನು ಮಾತ್ರ ಎಂದಿಗೂ ಬಿಡಲಾರೆನು. ಧರ್ಮರಾಜನೊಂದುವೇಳೆ ಧರ್ಮವನ್ನು ಬಿಡಬಹುದು; ದೇವರಾಜನೊಂದು ವೇಳೆ ಪರಾಕ್ರಮವನ್ನು ಬಿಡಬಹುದು; ಸೂರ್ಯನೊಂದುವೇಳೆ ತನ್ನ ಪ್ರತಾಪವನ್ನು ಬಿಡಬಹುದು; ಚಂದ್ರನೊಂದುವೇಳೆ ತನ್ನ ಶೈತ್ಯವನ್ನು ಬಿಡಬಹುದು; ಭೀಷ್ಮನು ಮಾತ್ರ ತನ್ನ ಸತ್ಯವನ್ನೆಂದಿಗೂ ಬಿಡನು.”

ಸತ್ಯಪಾಲನೆಯಲ್ಲಿ ಭೀಷ್ಮನ ದೃಢತೆಯನ್ನೂ ಭೋಗಸುಖದಲ್ಲಿ ಅವನ ನಿಸ್ಪೃಹತೆಯನ್ನೂ ರಾಜ್ಯಕಾರ್ಯಗಳಲ್ಲಿ ಅವನ ಪರಾರ್ಥಪರತೆಯನ್ನೂ ನೋಡಿ ಸತ್ಯವತಿಯು ಮೃದುಮಧುರವಚನದಿಂದ ಇಂತೆಂದಳು:—“ವತ್ಸ! ನಿನ್ನ ಮಾತನ್ನು ಕೇಳುತ್ತಲೆ ಶರೀರವು ಆಪ್ಯಾಯಿತವಾಗುವುದು, ಹೃದಯವು ಧರ್ಮಭಾವದಿಂದ ತುಂಬುವುದು, ಇಂದ್ರಿಯಗಳು ಪವಿತ್ರವಾಗಿ ಆನಂದ ರಸದಲ್ಲಿ ಮಗ್ನವಾಗುವುವು, ಅಂತಃಕರಣವು ವಿಷಯವಾಸನೆಯನ್ನೂ ಸ್ವಾರ್ಥಪರತೆಯನ್ನೂ ತೊರೆದು ಭೋಗಾಭಿಲಾಷಶೂನ್ಯವಾಗಿ ಪರಹಿತಸಾಧನೆಯಲ್ಲಿ ಲೀನವಾಗುವುದು. ನಿನ್ನ ಪಿತೃಭಕ್ತಿಯೂ, ಪ್ರತಿಜ್ಞಾಪಾಲನೆಯಲ್ಲಿನ ದೃಢತೆಯೂ ಅಮರಲೋಕದಲ್ಲಿಯೂ ಸ್ತುತಿಸತಕ್ಕವಾಗಿರುವುವು. ನಾನು ನಿನ್ನ ಸ್ವಭಾವವನ್ನು ಬಲ್ಲೆನು. ನೀನು ಸತ್ಯಸಂಕಲ್ಪನು, ನುಡಿಯುವಂತೆ ನಡೆಯುವವನು ಎಂಬುದು ನನಗೆ ತಿಳಿಯದೆ ಇಲ್ಲ. ಆದರೆ ನಾನು ರಾಜಸಿಂಹಾಸನವು ಶೂನ್ಯವಾಗಿರುವುದನ್ನು ನೋಡಿ ಕುರುವಂಶ ನಷ್ಟವಾಗುವ ಹಾಗೆ ಆಯಿತಲ್ಲಾ ಎಂದು ಮರುಗುತ್ತಲೂ ಪ್ರಾಣಾಧಿಕನಾದ ವಿಚಿತ್ರವೀರ್ಯನ ವಿಯೋಗದಿಂದ ಎದೆಗುಂದಿಯೂ ಪೂರ್ವಾಪರವನ್ನು ವಿವೇಚನೆ ಮಾಡಲರಿಯದೆ ಹಾಗೆ ಮಾತನಾಡಿದೆನು. ಚಿತ್ರಾಂಗದನು ಹೋದ ಮೇಲೆ ನಾನು ವಿಚಿತ್ರವೀರ್ಯನ ಮುಖವನ್ನು ನೋಡಿಕೊಂಡು ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುತ್ತ ಇದ್ದೆನು. ವಿಚಿತ್ರವೀರ್ಯನು ದೀರ್ಘಕಾಲ ರಾಜ್ಯ

ವನ್ನಾಳಿ, ಯೋಗ್ಯನಾದ ಮಗನನ್ನು ಪಡೆದು, ಅವನಿಗೆ ಯುವರಾಜ ಪಟ್ಟವನ್ನು ಕಟ್ಟುವೆನೆಂದು ಹಾರೈಸುತ್ತಿದ್ದೆನು. ನಾನು ಪುತ್ರಪೌತ್ರರ ಕಣ್ಣ ಮುಂದೆ ಹೋಗಬೇಕೆಂದು ಆಸೆಪಟ್ಟಿದ್ದೆನು. ವಿಧಾತನು ನನ್ನ ಹಣೆಯಲ್ಲಿ ಆ ಸುಖವನ್ನು ಬರೆಯಲಿಲ್ಲ. ದುಸ್ಸಹವಾದ ಪತಿವಿಯೋಗ ದುಃಖವನ್ನು ಬಹುಕಾಲ ಅನುಭವಿಸಿದೆನು; ಈಗ ಪುತ್ರಶೋಕವನ್ನೂ ಅನಾಯಾಸವಾಗಿ ಅನುಭವಿಸುತ್ತಿದ್ದೇನೆ. ನನ್ನ ಹೃದಯವು ಪಾಷಾಣನಿರ್ಮಿತವಾದುದು. ಸಂದೇಹವಿಲ್ಲ. ಅಯ್ಯೋ! ನಾನು ಹೇಗೆ ಪ್ರಾಣವನ್ನಿಟ್ಟುಕೊಂಡಿರಲಿ! ಸೊಸೆಯರ ವೈಧವ್ಯದುಃಖವನ್ನು ಹೇಗೆ ತಾನೆ ನೋಡಿ ಸಹಿಸಲಿ! ಪತಿವಿಹೀನರಾಗಿ ಬ್ರಹ್ಮಚರ್ಯದ ಉಡುಗೆಯನ್ನುಟ್ಟಿರುವ ಸೊಸೆಯರನ್ನಿಟ್ಟುಕೊಂಡು ಈ ಶೂನ್ಯ ರಾಜಭವನದಲ್ಲಿ ನಾನು ಹೇಗೆ ಬಾಳಲಿ! ಇದಕ್ಕಿಂತ ಮೃತ್ಯುವು ಸಾವಿರಪಾಲು ಮೇಲಲ್ಲವೆ! ಈಗ ನಾನು ಕೇವಲ ದುಃಖ ಭಾರವನ್ನು ಹೊತ್ತಿರುವ ಸಲುವಾಗಿಯೇ ಬದುಕಿರಬೇಕಾಯಿತಲ್ಲವೆ! ಇಂತಹ ದುಃಖವು ಪೀಡಿಸಿದರೂ ನನ್ನ ಎದೆ ಒಡೆಯದಲ್ಲ! ಅದು ಎಂತಹ ಕಲ್ಲೆದೆ?" ಈ ಪ್ರಕಾರವಾಗಿ ಸತ್ಯವತಿಯು ಗೋಳಾಡಿದಳು.

ಭೀಷ್ಮನು ಸತ್ಯವತಿಯ ಪರಿತಾಪವನ್ನು ನೋಡಿ—"ತಾಯೇ? ಸಂಸಾರದಲ್ಲಿ ಯಾವುದೂ ಸ್ಥಿರವಲ್ಲ. ಜನ್ಮದ ಹಾಗೆಯೇ ಮೃತ್ಯುವೂ ಕಾದಿರುವುದು. ಉತ್ಪತ್ತಿಯ ಹಿಂದೆಯೇ ವಿನಾಶವೂ, ಸಂಯೋಗದ ಹಿಂದೆಯೇ ವಿಯೋಗವೂ ಕಾದಿರುವುವು. ವಿಧಿಯ ನಿರ್ಬಂಧವನ್ನು ಖಂಡಿಸುವುದು ಯಾರಿಗೂ ಆಳವಲ್ಲ. ಯಾವುದು ಅನಿವಾರ್ಯವೊ ಅದನ್ನು ಕುರಿತು ದುಃಖಪಡುವುದು ಉಚಿತವಲ್ಲ. ನಾನು ನಿನ್ನ ಮಗನಲ್ಲವೆ? ಈ ನಿನ್ನ ಮಗನು ನಿನ್ನ ಸೇವೆಗಾಗಿಯೇ ಇರುವನು. ಈ ನಿನ್ನ ಆಜ್ಞಾಧಾರಕನು ಇರುವ ವರೆಗೂ ನಿನಗೆ ಯಾವ ವಿಧವಾದ ತೊಂದರೆಯೂ ಬಾರಲೀಯನು. ನಿನ್ನೀ ಪುತ್ರನ ಮುಖವನ್ನು ನೋಡಿ ಧೈರ್ಯವನ್ನು ತಂದುಕೊ. ರಾಜಸಿಂಹಾಸನವು ಆಪಾತತಃ ಶೂನ್ಯವಾಗಿದೆಯೇ ಹೊರತು ವಾಸ್ತವವಾಗಿ ಶೂನ್ಯವಾಗಿಲ್ಲವೆಂದು ತಿಳಿ. ನಾನಿರುವ ವರೆಗೂ ಈ ಸಿಂಹಾಸನಕ್ಕೆ ಅವಮಾನಮಾಡುವಂತಹ ಸಾಹಸಿಗಳಾರೂ ಇರರು; ಹಾಗೆಯೇ, ರಾಜ್ಯವು ಆಪಾತತಃ ಅರಾಜಕವಾಗಿದೆ ಎಂದು ತಿಳಿ; ನನ್ನ ಬಾಹುಬಲವೂ ಮಂತ್ರಣಾಕೌಶಲವೂ ಇರುವ ವರೆಗೆ ಯಾವ ವಿಧದಲ್ಲಿಯೂ ರಾಜ್ಯವು ವಿಶೃಂಖಲವಾಗಲಾರದು. ಜಗತ್ಪ್ರಸಿದ್ಧವಾದ ನಮ್ಮ ವಂಶವು ನಷ್ಟವಾಗುವುದೆಂಬ ಶಂಕೆಯೂ ಈ ವರೆಗೂ ನನ್ನ ಮನಸ್ಸಿನಲ್ಲಿ ಹುಟ್ಟಲಿಲ್ಲ. ಯಾವ ಪುರುಷರು ಆರ್ತರಕ್ಷಣೆಯಲ್ಲಿ ಉದ್ಯುಕ್ತರಾಗಿರುವರೋ,

ಧರಿತ್ರಿಯ ಪಾಲನೆಯಲ್ಲಿ ನಿಯತ ಶ್ರಮಶೀಲರಾಗಿರುವರೋ, ನಿರಂತರದಲ್ಲಿಯೂ ಭೂಮಂಡಲದಲ್ಲಿ ಉತ್ಪಾತಗಳನ್ನು ನಿವಾರಿಸಿ ಶಾಂತಿಯನ್ನು ನೆಲೆಗೊಳಿಸು ತ್ತಿರುವರೋ ಆ ಪುರುಷರನ್ನು ವಿಧಾತನ ವಿಶ್ವಪಾಲನ ಶಕ್ತಿಯು ರಕ್ಷಿಸು ವುದು; ಅವರಿಗೆ ಬರುವ ಸರ್ವ ವಿಧ ವಿಪತ್ತುಗಳನ್ನೂ ತೊಲಗಿಸುವುದು. ವಿಚಿತ್ರವೀರ್ಯನ ಇಬ್ಬರು ಪತ್ನಿಯರಿಗೂ ಸಂತಾನವಾಗುವ ಸಂಭವವಿರುವಲ್ಲಿ, ನೀನು ಸ್ಥಿರಚಿತ್ತೆಯಾಗಿ ಶುಭೋದರ್ಕವನ್ನು ನಿರೀಕ್ಷಿಸುತ್ತಿರು; ಸೊಸೆಯರಿಗೆ ವಂಶಾನುರೂಪರಾದ ಪುತ್ರರಾಗುವಂತೆ ಮಂಗಳವಿಧಾತನಾದ ಈಶ್ವರನಲ್ಲಿ ಪ್ರಾರ್ಥಿಸು" ಎಂದು ನುಡಿದನು.

ಈ ರೀತಿಯಲ್ಲಿ ಭೀಷ್ಮನು ಪ್ರಬೋಧನ ವಾಕ್ಯದಿಂದ ಸತ್ಯವತಿಯ ಶೋಕವನ್ನು ಶಮನವಾಡಿ, ಗರ್ಭವತಿಯರಾದ ವಿಚಿತ್ರವೀರ್ಯನ ಪತ್ನಿಯರ ಪ್ರಸವಕಾಲವನ್ನು ಇದಿರುನೋಡುತ್ತಿದ್ದನು.

ಐದನೆಯ ಅಧ್ಯಾಯ

ಧೃತರಾಷ್ಟ್ರ, ಪಾಂಡು

ಯಥಾಕಾಲಕ್ಕೆ ವಿಚಿತ್ರವೀರ್ಯನ ಪತ್ನಿಯರು ಒಬ್ಬೊಬ್ಬರು ಒಂದೊಂದು ಗಂಡುಕೂಸನ್ನು ಹೆತ್ತರು. ಭೀಷ್ಮನು ಆ ಮಕ್ಕಳಿಗೆ ಶಾಸ್ತ್ರೋಕ್ತವಾಗಿ ಜಾತಕರ್ಮಾದಿಗಳನ್ನು ನಡೆಯಿಸಿದನು; ಅಂಬಿಕೆಯ ಮಗುವಿಗೆ ಧೃತರಾಷ್ಟ್ರ ನೆಂದೂ ಅಂಬಾಲಿಕೆಯ ಮಗುವಿಗೆ ಪಾಂಡುವೆಂದೂ ನಾಮಕರಣವಾಯಿತು. ದೈವವಶದಿಂದ ಧೃತರಾಷ್ಟ್ರನು ಜನ್ಮಾಂಧನಾಗಿದ್ದನು. ಭೀಷ್ಮನಂತೂ ಕುಮಾರರಿಬ್ಬರನ್ನೂ ನಿರ್ವಂಚನೆಯಾಗಿ ತನ್ನ ಮಕ್ಕಳಂತೆಯೇ ಸಾಕುತ್ತಿದ್ದನು. ಅವನು ವಿಚಿತ್ರವೀರ್ಯನಲ್ಲಿ ಯಾವ ಪ್ರೀತಿಯನ್ನಿಟ್ಟಿದ್ದನೋ ಈಗ ಅದೇ ಪ್ರೀತಿಯನ್ನು ಅವನ ಮಕ್ಕಳಿಬ್ಬರಲ್ಲಿಯೂ ಇಟ್ಟನು. ಧೃತರಾಷ್ಟ್ರನು ಜನ್ಮಾಂಧನಾದರೂ ಭೀಷ್ಮನು ಅವನಿಗೆ ರಾಜಕುಲೋಚಿತವಾದ ವಿದ್ಯಾ ಬುದ್ಧಿಯನ್ನು ಕಲಿಸುವುದರಲ್ಲಿ ಕಡಿಮೆ ಮಾಡಲಿಲ್ಲ. ಕುಮಾರರಿಬ್ಬರಿಗೂ ಸಕಾಲಕ್ಕೆ ಉಪನಯನವಾಯಿತು. ಭೀಷ್ಮನು ನೇಮಿಸಿದ ಅಧ್ಯಾಪಕರಲ್ಲಿ ಅವರಿಗೆ ಸಾಂಗವಾಗಿ ವೇದಾಧ್ಯಯನವೂ ನಡೆಯಿತು. ಅವರು ವೇದಶಾಸ್ತ್ರ ದಲ್ಲಿ ಪಾರದರ್ಶಿಗಳಾಗುತ್ತಲೆ ಅಸ್ತ್ರವಿದ್ಯೆಯನ್ನು ಕಲಿಯಲಾರಂಭಿಸಿದರು. ಭೀಷ್ಮನ ಅವಧಾನದಿಂದ ಅವರ ಅಸ್ತ್ರವಿದ್ಯಾಭ್ಯಾಸದಲ್ಲಿಯೂ ಯಾವ

ಕೊರತೆಯೂ ಉಂಟಾಗಲಿಲ್ಲ. ಅವರು ಸ್ವಲ್ಪ ಕಾಲದಲ್ಲಿಯೇ ಧನುರ್ವೇದ, ಗದಾಯುದ್ಧಕ್ರಮ, ಕತ್ತಿಯ ಸಾಧನೆ ಮೊದಲಾದ ವಿದ್ಯೆಗಳಲ್ಲಿ ನಿಪುಣರಾದರು. ಇಬ್ಬರೊಳಗೆ ಪಾಂಡುವು ಬಿಲ್ಲವಿದ್ಯೆಯಲ್ಲಿ ಅದ್ವಿತೀಯನಾದನು; ಧೃತರಾಷ್ಟ್ರನು ಬಾಹುಬಲದಲ್ಲಿ ನಿಸ್ಸೀಮನೆನಿಸಿಕೊಂಡನು.

ಕುಮಾರರಿಬ್ಬರೂ ನಾನಾ ವಿಷಯಗಳಲ್ಲಿ ಪಾರಂಗತರಾಗಲು, ಭೀಷ್ಮನ ಸಂತೋಷಕ್ಕೆ ಪಾರವಿಲ್ಲದಂತಾಯಿತು. ಧೃತರಾಷ್ಟ್ರನು ಕಣ್ಣಿಲ್ಲದವನಾದರೂ, ಪಾಂಡುವು ಇದ್ದುದರಿಂದ ಕುರುರಾಜ್ಯವು ದೀರ್ಘಕಾಲ ಅರಾಜಕವಾಗಿರಲಿಲ್ಲ; ಹಸ್ತಿನಾಪುರದ ಸಿಂಹಾಸನವೂ ದೀರ್ಘಕಾಲ ಶೂನ್ಯವಾಗಿರಲಿಲ್ಲ. ಭೀಷ್ಮನು ಸರ್ವ ಶಾಸ್ತ್ರಕೋವಿದನೂ ಧನುರ್ಧರಶ್ರೇಷ್ಠನೂ ಆದ ಪಾಂಡುವೇ ರಾಜ್ಯಭಾರವನ್ನು ವಹಿಸುವುದಕ್ಕೆ ಉಪಯುಕ್ತನಾದ ಪಾತ್ರನೆಂದು ಭಾವಿಸಿದನು. ಸತ್ಯವತಿಯೂ ಅವಳ ಸೊಸೆಯರಿಬ್ಬರೂ ಪಾಂಡುವಿನ ಯೋಗ್ಯತೆಯನ್ನು ನೋಡಿ ಹರ್ಷಚಿತ್ತರಾಗಿದ್ದರು. ಇನ್ನೊಮ್ಮೆ ರಾಜ್ಯವು ಆನಂದದಲ್ಲಿ ಮಗ್ನವಾಯಿತು; ಪುರವಾಸಿಗಳು ಇನ್ನೊಮ್ಮೆ ಉತ್ಸವದಲ್ಲಿ ಮತ್ತರಾದರು; ಹಸ್ತಿನಾಪುರವು ಇನ್ನೊಮ್ಮೆ ಅಭಿನವೋತ್ಸಾಹದಿಂದಲೂ ಅಭಿನವಶಕ್ತಿಯಿಂದಲೂ ಸಂಜೀವಿತವಾಯಿತು.

ಒಂದು ದಿನ ಮಹಾಮತಿಯಾದ ಭೀಷ್ಮನು ಪಾಂಡುವನ್ನು ತನ್ನ ಹತ್ತಿರ ಕರೆದು—"ವತ್ಸ! ದೈವವಶದಿಂದ ನಿಮ್ಮಣ್ಣನು ಜನ್ಮಾಂಧನಾಗಿರುವನು. ಆದುದರಿಂದ ನಮ್ಮ ಕುಲದಲ್ಲಿ ನೀನು ರಾಜಸಿಂಹಾಸನಕ್ಕೆ ಅಧಿಕಾರಿಯಾಗಿರುತ್ತೀಯೆ. ಈಗ ನೀನು ಕುರುರಾಜಸಿಂಹಾಸನವನ್ನು ಏರಬೇಕಾಗುವುದು. ಅಂತಃಕರಣಶುದ್ಧಿಯಿಂದ ಪ್ರಜಾಪಾಲನೆ ಮಾಡುವುದು ನಮ್ಮ ಪವಿತ್ರ ಕುಲಧರ್ಮವು. ನ್ಯಾಯಪರತೆಯಿಂದಲೂ ವಿವೇಕಶಕ್ತಿಯಿಂದಲೂ ರಾಜ್ಯದಲ್ಲಿರುವ ಸಮಸ್ತ ಪ್ರಜೆಗಳ ಸುಖವನ್ನು ವೃದ್ಧಿಗೊಳಿಸುವ ನಿಮಿತ್ತವಾಗಿಯೇ ರಾಜನು ರಾಜದಂಡವನ್ನು ಹಿಡಿಯುವನು. ಪ್ರಜೆಗಳನ್ನು ಪೀಡಿಸಿ ದುರ್ದಶೆಗೆ ತಂದು ತನ್ನ ಭೋಗಾಭಿಲಾಷೆಯನ್ನು ತೃಪ್ತಿಗೊಳಿಸುವುದು ರಾಜನಿಗೆ ಯೋಗ್ಯವಲ್ಲ. ಅದರಿಂದ ರಾಜಶಕ್ತಿಗೆ ಅವಮಾನವನ್ನು ತಂದಂತಾಗುವುದು. ಐಶ್ವರ್ಯಾಭಿವೃದ್ಧಿಯಾದ ಮಾತ್ರಕ್ಕೇ ರಾಜನು ಶ್ರೇಷ್ಠನೆನಿಸಿಕೊಳ್ಳನು; ನಿಶ್ಚಲವಾದ ನ್ಯಾಯಪರತೆ, ಅವಿಚ್ಛಿನ್ನವಾದ ಅವಧಾನ, ಊರ್ಜಿತವಾದ ಕೀರ್ತಿ—ಇವುಗಳಿಂದ ರಾಜನು ಶ್ರೇಷ್ಠನೆನಿಸಿಕೊಳ್ಳುವನು. ಅನವರತವೂ ಅವನಿಗೆ ಆತ್ಮಸಂಯಮವೂ ಶಾಂತಭಾವವೂ ಇರುವುದು ಅತ್ಯಾವಶ್ಯಕ. ಅವನು ತನ್ನ ಬಾಹುಬಲದಿಂದ ದೇಶಾಂತರದಲ್ಲಿ ಆಧಿಪತ್ಯವನ್ನು ಸ್ಥಾಪಿಸುತ್ತ,

ಶತ್ರುಗಳ ಕಾಟವನ್ನು ತೊಲಗಿಸಿ ತನ್ನ ರಾಜ್ಯವನ್ನು ರಕ್ಷಿಸುತ್ತಿರುವುದು ಹೇಗೆ ಅವನ ಧರ್ಮವೋ, ಹಾಗೆಯೇ ತನ್ನ ಉದಾರಭಾವದಿಂದ ಪ್ರಜೆಗಳ ಚರ್ಯವನ್ನು ತಿದ್ದುತ್ತ ನಿರಂತರವಾಗಿ ಅವರ ಸುಖವನ್ನು ವೃದ್ಧಿಗೊಳಿಸುವ ಪ್ರಯತ್ನವನ್ನು ಮಾಡುತ್ತಿರುವುದೂ ಅವನ ಧರ್ಮವಾಗಿರುವುದು. ಪ್ರಜಾ ರಂಜನವೇ ಅವನು ರಾಜಪದವಿಯನ್ನು ಕೈಕೊಳ್ಳುವುದರ ಉದ್ದೇಶವು. ಅವನು ಪ್ರಜಾರಂಜನದಲ್ಲಿ ಯತ್ನಶೀಲನಾಗಿರಬೇಕು; ಪ್ರಜಾರಂಜನ ನಿಮಿತ್ತವಾಗಿ ಆತ್ಮಸುಖವನ್ನೂ ಉಪೇಕ್ಷಿಸಬೇಕು. ಪ್ರಕೃತಿವರ್ಗವನ್ನು ಸುಖವಾಗಿಯೂ ಸಮೃದ್ಧಿಯಾಗಿಯೂ ಇಡುವ ನಿಮಿತ್ತವಾಗಿಯೇ ವಿಧಾತನು ಅವನನ್ನು ಅಂತಹ ಉಚ್ಚಪದವಿಯಲ್ಲಿಟ್ಟಿರುವನು. ಅವನು ಪ್ರಕೃತಿವರ್ಗದ ಹಿತಾರ್ಥ ವಾಗಿ ಎಷ್ಟೆಷ್ಟು ಶ್ರಮಪಡುವನೋ ಅಷ್ಟಷ್ಟು ಅವನು ಸಿಂಹಾಸನಕ್ಕೆ ಯೋಗ್ಯನೆನಿಸಿಕೊಳ್ಳುವನು. ನೀನು ರಾಜ್ಯಭಾರವನ್ನು ವಹಿಸಿ ಧರ್ಮದಿಂದ ರಾಜ್ಯವನ್ನಾಳು. ಆತ್ಮಸುಖದ ಮೇಲೆ ದೃಷ್ಟಿಯಿಡದೆ ಪ್ರಜೆಗಳ ಸುಖವನ್ನು ವೃದ್ಧಿಗೊಳಿಸುವುದರಲ್ಲಿ ತತ್ಪರನಾಗು. ನಿನ್ನ ಕಾರ್ಯಗಳೆಲ್ಲವನ್ನೂ ಉತ್ಸಾಹ, ಅಧ್ಯವಸಾಯ, ಧೀಶಕ್ತಿ—ಇವುಗಳಿಂದ ನಿರ್ವಿಘ್ನವಾಗಿ ನೆರವೇರಿಸು. ನೀನು ಪ್ರಜೆಗಳ ಹಿತವನ್ನು ಸಾಧಿಸುವ ನಿಮಿತ್ತವಾಗಿ ಕರಗ್ರಹಣವನ್ನೂ, ಅವರ ಕ್ಷೇಮಾರ್ಥವಾಗಿ ದಂಡವಿಧಾನವನ್ನೂ ಮಾಡು. ಶರಣಾಗತರಲ್ಲಿಯೂ ದುರ್ಬಲರಲ್ಲಿಯೂ ನಿನ್ನ ಪ್ರತಾಪವನ್ನು ತೋರಿಸಬೇಡ; ಕ್ಷತ್ರಿಯಧರ್ಮ ಕ್ಕನುಸಾರವಾಗಿ ರಣದಲ್ಲಿ ಪರಾಕ್ರಮವನ್ನು ತೋರಿಸು. ಶತ್ರುಸಂಹಾರದಲ್ಲಿ ಪರಾಕ್ರಮವನ್ನು ತೋರಿಸಬೇಕಾದರೂ ಮನಸ್ಸಿನಲ್ಲಿ ಆತ್ಮಸ್ತುತಿಗೆ ಎಡೆಗೊಡ ದಿರು. ಅನರ್ಥಕಾರಿಯಾದ ಅರಿಷಡ್ವರ್ಗವನ್ನು ಗೆದ್ದು ವಿಷಯಭೋಗಕ್ಕೆ ಪ್ರವರ್ತಿಸು. ನಿನ್ನ ರಾಜ್ಯದಲ್ಲಿ ಸ್ತ್ರೀಯರಿಗೆ ಸನ್ಮಾನವೂ, ವೃದ್ಧರಿಗೂ ಗುರುಜನಕ್ಕೂ ಆದರವೂ, ಪ್ರಾಜ್ಞರಿಗೆ ಮರ್ಯಾದೆಯೂ ಸಲ್ಲಲಿ. ನೀನು ಅಸಾಧಾರಣ ಶಕ್ತಿಸಂಪನ್ನನಾದರೂ ಕ್ಷಮೆಯನ್ನು ತೋರಿಸದಿರಬೇಡ. ನಿನ್ನ ಪ್ರಜೆಗಳು ಉಚ್ಛೃಂಖಲರಾಗಿ ಮೇರೆದಪ್ಪಿ ಕೆಟ್ಟಮಾರ್ಗಕ್ಕೆ ಬೀಳದಂತೆ ನೋಡಿಕೊ. ದೇವರಲ್ಲಿ ನಿಶ್ಚಲಭಕ್ತಿಯೂ ಋಷಿಗಳಲ್ಲಿ ದೃಢವಿಶ್ವಾಸವೂ ಇದ್ದರೆ ಮನುಷ್ಯನು ಯಾವಾಗಲೂ ಸನ್ಮಾರ್ಗದಲ್ಲಿ ನಡೆಯುತ್ತ ಮಂಗಳವನ್ನೈದು ವನು. ನೀನು ದೈವಭಕ್ತಿಯುಳ್ಳವನಾಗಿಯೂ ಋಷಿಗಳ ವಿಷಯದಲ್ಲಿ ಶ್ರದ್ಧಾ ವಂತನಾಗಿಯೂ ಇರು."

ಭೀಷ್ಮನು ಈ ವಿಧವಾಗಿ ಪಾಂಡುವಿಗೆ ಹಿತೋಪದೇಶವನ್ನು ಮಾಡಿ ಪಟ್ಟಾಭಿಷೇಕಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಲಾರಂಭಿಸಿದನು.

ಅನಂತರ, ಶುಭದಿನ ಶುಭಮುಹೂರ್ತದಲ್ಲಿ, ತತ್ತ್ವದರ್ಶಿಗಳಾದ ಋಷಿಗಳನ್ನೂ ಪುರವಾಸಿಗಳನ್ನೂ ಜನಪದವರ್ಗವನ್ನೂ ಕರೆಯಿಸಿ, ಅವರ ಸಮಕ್ಷದಲ್ಲಿ ಪಾಂಡುವಿಗೆ ಪಟ್ಟವನ್ನು ಕಟ್ಟಿದನು. ಪಾಂಡುವು ರಾಜಪದವಿಯಲ್ಲಿ ಪ್ರತಿಷ್ಠಿತನಾಗಿ ಭೀಷ್ಮನ ಉಪದೇಶಾನುಸಾರವಾಗಿ ಪ್ರಜಾಪಾಲನೆ ಮಾಡತೊಡಗಿದನು. ಅವನ ಪ್ರಭುತ್ವದ ಪ್ರಭಾವದಿಂದ ಹಸ್ತಿನಾಪುರವು ಶ್ರೀಸಂಪನ್ನವಾಯಿತು; ಜನಪದವೆಲ್ಲವೂ ಧನಧಾನ್ಯಸಮೃದ್ಧಿಯನ್ನು ಪಡೆಯಿತು; ಪ್ರಜೆಗಳು ಸೌರಾಜ್ಯಸುಖದಿಂದ ತೃಪ್ತರಾಗಿದ್ದರು. ಭೀಷ್ಮನು ರಾಜ್ಯದಲ್ಲಿ ಸರ್ವತ್ರ ಶಾಂತಿಯು ನೆಲೆಯಾದುದನ್ನು ನೋಡಿ ಸಂತೋಷಪಟ್ಟನು. ಅವನು ಯಾವ ಉದ್ದೇಶದಿಂದ ಪಾಂಡುವನ್ನು ಸುಶಿಕ್ಷಿತನನ್ನಾಗಿ ಮಾಡಿದನೋ, ಯಾವ ಉದ್ದೇಶದಿಂದ ಅವನಿಗೆ ರಾಜನೀತಿಯನ್ನು ಬೋಧಿಸಿದನೋ, ಆ ಉದ್ದೇಶವು ಸರ್ವಾಂಶದಲ್ಲಿಯೂ ಸಫಲವಾಯಿತೆಂದು ಸುಪ್ರೀತನಾದನು.

ಒಮ್ಮೆ, ಭೀಷ್ಮನು ಅಂಬಿಕೆಯ ದಾಸಿಯ ಮಗನಾದ ವಿದುರನನ್ನು ಸಂಬೋಧಿಸಿ—"ವತ್ಸ! ಪೂರ್ವದಲ್ಲಿ ಧರ್ಮಾತ್ಮರಾದ ರಾಜರು ರಕ್ಷಿಸಿದ ಈ ನಮ್ಮ ಕುಲವು ನಷ್ಟಪ್ರಾಯವಾಗುತ್ತಿದ್ದಿತು. ದೈವಾನುಗ್ರಹದಿಂದ ಕುಲತಂತುವು ಮತ್ತೆ ನೆಲೆಗೊಂಡಿತು. ಪಾಂಡುವು ಈಗ ಕಟ್ಟಲೆಯ ಪ್ರಕಾರವಾಗಿ ರಾಜ್ಯವನ್ನಾಳುತ್ತಿದ್ದಾನೆ. ಅವನ ಬಲವೀರ್ಯಗಳಿಂದ ಈ ರಾಜ್ಯವು ಸುರಕ್ಷಿತವಾಗಿರುವುದು. ಭೂಮಂಡಲದಲ್ಲಿ ಸಮಸ್ತ ರಾಜಕುಲಗಳೊಳಗೆ ಧನ ಮಾನ ಪ್ರತಿಪತ್ತಿಗಳಲ್ಲಿ ನಮ್ಮ ಕುಲವು ಶ್ರೇಷ್ಠವಾಗಿರುವುದು. ಈಗ, ಕುಲಾನುರೂಪರಾದ ಕನ್ಯೆಯರನ್ನು ತಂದು ಧೃತರಾಷ್ಟ್ರನಿಗೂ ಪಾಂಡುವಿಗೂ ವಿವಾಹವನ್ನು ಮಾಡುವುದು ನನ್ನ ಕರ್ತವ್ಯವಾಗಿದೆ. ಗಾಂಧಾರ ರಾಜನಿಗೊಬ್ಬಳು ಸುಂದರಿಯಾದ ಮಗಳೂ, ಮದ್ರೇಶ್ವರನಿಗೊಬ್ಬಳು ರೂಪವತಿಯಾದ ತಂಗಿಯೂ ಇರುವರೆಂದು ಕೇಳಿರುವೆನು. ಆ ಕುಮಾರಿಯರು ನಮ್ಮ ವಂಶಕ್ಕನುರೂಪರಾದವರು. ರಾಜಕುಮಾರರಿಗೂ ಆ ಚೆಲ್ವೆಯರಿಗೂ ವಿವಾಹಸಂಬಂಧವನ್ನು ನಿಶ್ಚಯಿಸಬೇಕೆಂದಿದ್ದೇನೆ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು? ಹೇಳು" ಎಂದನು.

ದಾಸೀಪುತ್ರನಾದರೂ ವಿದುರನು ಲೋಭ ಕ್ರೋಧ ವರ್ಜಿತನು, ಶಾಂತನು, ಧರ್ಮಾತ್ಮನು, ದೀರ್ಘದರ್ಶಿ; ಅದುದರಿಂದ, ಎಲ್ಲರೂ ಅವನನ್ನು ಅಂತರಂಗಾಲೋಚನೆಗೆ ಅಪೇಕ್ಷಿಸುತ್ತಿದ್ದರು; ಎಲ್ಲರೂ ಅವನಲ್ಲಿ ಶ್ರದ್ಧೆಯನ್ನಿಟ್ಟು ಅವನ ಬುದ್ಧಿವಾದವನ್ನು ಮನ್ನಿಸುತ್ತಿದ್ದರು. ಭೀಷ್ಮನಾಗಲಿ ಪಾಂಡುವಾಗಲಿ ವಿದುರನು ದಾಸೀಪುತ್ರನೆಂದು ಅವನನ್ನು ಉಪೇಕ್ಷೆಮಾಡು

ತ್ತಿರಲಿಲ್ಲ. ಅವರು ಅವನ ಬುದ್ಧಿಕೌಶಲವನ್ನೂ ನೀತಿಜ್ಞಾನವನ್ನೂ ಉದಾರಭಾವವನ್ನೂ ನೋಡಿ, ಅವನು ಕುರುವಂಶಕ್ಕೆ ಆಪ್ತಬಂಧು, ಹಿತೈಷಿ, ಸುಮಂತ್ರಿ ಎಂದು ಅವನಲ್ಲಿ ವಿಶ್ವಾಸವನ್ನಿಟ್ಟಿದ್ದರು. ಹೀಗೆ ಧರ್ಮಾನುರಕ್ತನಾದ ಈ ದಾಸೀಪುತ್ರನು ಕುರುವಂಶದಲ್ಲಿ ಎಲ್ಲರಿಗೂ ಶ್ರದ್ಧಾಸ್ಪದನಾಗಿದ್ದುದರಿಂದ ಆ ವಂಶದ ರಾಜನ್ಯರು ಅವನಲ್ಲಿ ಇಂತಹ ಪ್ರೀತಿಯನ್ನಿಟ್ಟಿದ್ದರು.

ವಿದುರನು ಭೀಷ್ಮನ ಮಾತನ್ನು ಕೇಳಿ ವಿನಯದಿಂದಿಂತೆಂದನು:—
"ಆರ್ಯರೇ! ನಿಮ್ಮಾಜ್ಞೆಯನ್ನು ನಾನು ಶಿರಸಾವಹಿಸುವೆನು. ತಾಯಿಯೋಪಾದಿಯಲ್ಲಿ ತಾವು ನನ್ನನ್ನು ಸಾಕಿದಿರಿ, ತಂದೆಯೋಪಾದಿಯಲ್ಲಿ ನನಗೆ ಶಿಕ್ಷಣವನ್ನು ಕೊಟ್ಟಿರಿ, ಗುರುವಿನೋಪಾದಿಯಲ್ಲಿ ಸದುಪದೇಶವನ್ನು ಮಾಡಿ ಸನ್ಮಾರ್ಗವನ್ನು ತೋರಿಸುತ್ತಿರುವಿರಿ. ತಮ್ಮ ಪ್ರಭಾವದಿಂದ ಕುರುಕುಲದ ಗೌರವವು ಕುಂದದಿರುವುದು. ತಾವು ವಿಷಯಭೋಗದಲ್ಲಿ ಆಸಕ್ತರಲ್ಲವಾದರೂ ವಂಶಗೌರವವನ್ನು ರಕ್ಷಿಸುವ ಸಲುವಾಗಿ ಲೌಕಿಕವ್ಯವಹಾರದಲ್ಲಿ ತೊಡಗಿರುವಿರಿ; ದಾರಪರಿಗ್ರಹಕ್ಕೆ ವಿಮುಖರಾದರೂ ತಮ್ಮನ ಮದುವೆಗಾಗಿ ಪ್ರಯಾಸಪಟ್ಟಿರಿ; ರಾಜದಂಡವನ್ನು ತ್ಯಜಿಸಿದರೂ ರಾಜ್ಯದ ಮಂಗಳ ಸಾಧನಾರ್ಥವಾಗಿ ತಮ್ಮನಿಗೂ ತಮ್ಮನ ಮಕ್ಕಳಿಗೂ ನಾನಾವಿಧವಾದ ಸದುಪದೇಶವನ್ನು ಮಾಡಿ, ತಮ್ಮನ ಮಗನಿಗೆ ಪಟ್ಟವನ್ನು ಕಟ್ಟಿದಿರಿ. ಈಗ ರಾಜಕುಮಾರರಿಬ್ಬರಿಗೂ ಮದುವೆಮಾಡುವ ಪ್ರಯತ್ನದಲ್ಲಿದ್ದೀರಿ. ತಾವು ನಮಗೆ ತಂದೆ, ತಾಯಿ, ಪರಮಗುರು, ಇಷ್ಟದೇವತೆ. ಹೀಗಿರುವಲ್ಲಿ, ತಮಗೆ ನಾನು ಹೇಳತಕ್ಕುದೇನಿದೆ? ತಮ್ಮ ವಿವೇಚನೆಗೆ ಯಾವುದು ಶ್ರೇಯಸ್ಕರವೆಂದು ತೋರುವುದೋ ಅದನ್ನು ಮಾಡಬಹುದು."

ಹೀಗೆಂದು ಹೇಳಿ ವಿದುರನು ಸುಮ್ಮನಾದನು. ಬಳಿಕ ಭೀಷ್ಮನು ಸತ್ಯವತಿಯ ಅನುಮತಿಯನ್ನು ಪಡೆದು ಗಾಂಧಾರರಾಜನ ಬಳಿಗೆ ದೂತನನ್ನು ಕಳುಹಿಸಿದನು. ಗಾಂಧಾರರಾಜನಾದ ಸುಶೀಲನು ಧೃತರಾಷ್ಟ್ರನು ಕುರುಡನೆಂದು ಕನ್ಯಾದಾನದ ವಿಷಯದಲ್ಲಿ ಮೊದಲು ದೋಲಾಯಮಾನನಾಗಿದ್ದನು; ತರುವಾಯ, ಕೌರವರ ಕುಲಖ್ಯಾತಿ ಸದಾಚಾರಗಳನ್ನು ಪರ್ಯಾಲೋಚಿಸಿ ಕನ್ಯಾರತ್ನವನ್ನು ಅವನಿಗೆ ಸಮರ್ಪಿಸಲೊಪ್ಪಿದನು. ಅವನು, ಬಂದ ದೂತನನ್ನು ಯಥೋಚಿತ ಸನ್ಮಾನಪೂರ್ವಕವಾಗಿ ಬೀಳ್ಕೊಟ್ಟು ಮಗಳ ಮದುವೆಗೆ ತಕ್ಕ ಪ್ರಯತ್ನಗಳನ್ನು ಮಾಡತೊಡಗಿದನು. ಕೂಡಲೆ ಮದುವೆಗೆಲ್ಲವೂ ಸಿದ್ಧವಾಯಿತು. ಗಾಂಧಾರರಾಜಕುಮಾರನಾದ ಶಕುನಿಯು ತಂದೆಯ ಆಜ್ಞೆಯ ಮೇರೆಗೆ ತಂಗಿಯನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಹೋದನು.

ಅಲ್ಲಿ ಆ ರಾಜಕುಮಾರನು ಶಾಸ್ತ್ರೋಕ್ತವಾಗಿ ಗಾಂಧಾರಿಯನ್ನು ಧೃತರಾಷ್ಟ್ರನಿಗೆ ಕೊಟ್ಟು ಭೀಷ್ಮನಿಂದ ಸತ್ಕಾರವನ್ನು ಕೈಕೊಂಡು ಮತ್ತೆ ತನ್ನ ರಾಜ್ಯಕ್ಕೆ ಪಯಣಮಾಡಿದನು. ಗಾಂಧಾರಿಯೂ ಲಾವಣ್ಯವತಿಯಾಗಿದ್ದಂತೆಯೇ ಪತಿಪ್ರಾಣೆಯಾಗಿಯೂ ಇದ್ದಳು. ನಿಶ್ಚಿತಾರ್ಥವಾದ ತರುವಾಯ ಧೃತರಾಷ್ಟ್ರನು ಅಂಧನೆಂದು ಅವಳಿಗೆ ತಿಳಿಯಬಂದಿತು. ಆಗ ಅವಳು ತನ್ನ ಭಾವಿ ಪತಿಯು ಅಂಧನಾದರೂ ತಾನು ಅವನನ್ನು ಎಂದಿಗೂ ತಿರಸ್ಕಾರಮಾಡೆನೆಂದು ಪ್ರತಿಜ್ಞೆಮಾಡಿ, ಪಾಣಿಗ್ರಹಣವಾದಮೇಲೆ ತನ್ನ ಪ್ರತಿಜ್ಞೆಯಂತೆಯೇ ನಡೆದಳು. ಅವಳು ಶ್ರದ್ಧಾಭಕ್ತಿಪೂರ್ವಕವಾಗಿ ಅಂಧ ಪತಿಯ ಶುಶ್ರೂಷೆಯನ್ನು ಮಾಡತೊಡಗಿದಳು; ತನ್ನ ಸದಾಚಾರದಿಂದ ಹಿರಿಯರನ್ನು ಸಂತೋಷಪಡಿಸುತ್ತ ವಿನಯದಿಂದಲೂ ಶೀಲದಿಂದಲೂ ಸಕಲರ ಪ್ರೀತಿಗೂ ಪಾತ್ರಳಾದಳು. ಸ್ವಲ್ಪ ಕಾಲದಲ್ಲಿಯೇ, ಕುರುಕುಲದಲ್ಲಿ ಪತಿಪ್ರಾಣೆಯಾದ ಗಾಂಧಾರಿಯ ಕೀರ್ತಿಯು ಎಲ್ಲೆಲ್ಲಿಯೂ ಹರಡಿತು.

ಭೀಷ್ಮನ ಒಂದುದ್ದೇಶವು ನೆರವೇರಿತು. ಸತ್ಯವತಿಯು ಗುಣವತಿಯಾದ ಸೊಸೆ ಮನೆಗೆ ಬಂದಳೆಂದು ಸಂತೋಷಪಟ್ಟಳು. ಧೃತರಾಷ್ಟ್ರನು ಪತಿಪ್ರಾಣೆಯಾದ ಹೆಂಡತಿಯ ಕೈಹಿಡಿದೆನೆಂದು ಪ್ರೀತನಾದನು. ಕೌರವರು ಕುಲಕ್ಕೆ ಅನುರೂಪಳಾದ ಹೆಣ್ಣನ್ನು ತಂದನೆಂದು ಭೀಷ್ಮನನ್ನು ಕೊಂಡಾಡಿದರು. ಈ ತೆರದಿಂದ ಒಂದು ವಿಷಯದಲ್ಲಿ ಪೂರ್ಣ ಮನೋರಥನಾಗಿ ಭೀಷ್ಮನು ಮತ್ತೊಂದು ವಿಷಯವನ್ನಾಲೋಚಿಸತೊಡಗಿದನು. ಪಾಂಡುವಿನ ವಿವಾಹವು ಅವನ ಚಿಂತೆಗೆ ವಿಷಯವಾಯಿತು. ಆ ವೇಳೆಗೆ ಕುಂತಿಭೋಜನ ಮಗಳಾದ ಕುಂತಿಯ ಸ್ವಯಂವರಕ್ಕೆ ಸನ್ನಾಹಗಳು ನಡೆಯುತ್ತಿದ್ದುವು. ಯದುವಂಶೀಯನಾದ ಶೂರನೆಂಬ ರಾಜನಿಗೆ ಪೃಥೆಯೆಂಬ ಮಗಳಿದ್ದಳು. ಮಹಾಮತಿಯಾದ ಶೂರನು, ಮೊದಲು ವಾಗ್ದಾನಮಾಡಿದ್ದ ಮೇರೆಗೆ, ತನ್ನ ಮಗಳನ್ನು ಕುಂತಿಭೋಜನ ರಕ್ಷಣೆಯಲ್ಲಿಟ್ಟಿದ್ದನು. ಈ ರಾಜನು ಪೃಥೆಯನ್ನು ಸಾಕಿ ಸಲಹಿದನಾದ ಕಾರಣ ಆ ಹುಡುಗಿಗೆ ಕುಂತಿಯೆಂದು ಹೆಸರಾಯಿತು. ವಯೋವೃದ್ಧಿಯಾದ ಹಾಗೆಲ್ಲ ಕುಂತಿಯ ರೂಪಲಾವಣ್ಯವೂ ವೃದ್ಧಿಯಾಗುತ್ತ ಬಂದಿತು. ಸಾಕುಮಗಳು ಮದುವೆಗೆ ಈಡಾಗುತ್ತಲೆ ಕುಂತಿಭೋಜನು ಅವಳ ಸ್ವಯಂವರಕ್ಕೆ ಆಗಬೇಕಾದ ಕಾರ್ಯಗಳನ್ನು ಮಾಡತೊಡಗಿದನು: ದೇಶದೇಶದ ರಾಜರಿಗೆಲ್ಲ ಆಹ್ವಾನಪತ್ರಿಕೆಗಳನ್ನು ಕಳುಹಿಸಿದನು; ಸಕಾಲಕ್ಕೆ ಅನೇಕ ನರಪತಿಗಳು ರಾಜಧಾನಿಯಲ್ಲಿ ಬಂದಿಳಿದರು. ಇತ್ತ, ಭೀಷ್ಮನು ಪರಿಜನವನ್ನಿಟ್ಟು ಪಾಂಡುವನ್ನು ಸ್ವಯಂವರೋತ್ಸವಕ್ಕೆ ಕಳುಹಿಸಿಕೊಟ್ಟನು.

ಆತನು ವಸ್ತ್ರಾಭರಣಗಳನ್ನು ಧರಿಸಿ ಸಭಾಮಂಟಪದಲ್ಲಿ ಸುಸಜ್ಜಿತರಾಗಿ ಕುಳಿತಿದ್ದ ರಾಜರ ನಡುವೆ ಆಸನವನ್ನು ಪರಿಗ್ರಹಿಸಿದನು. ಸಭೆಯಲ್ಲಿದ್ದವರೆಲ್ಲರೂ ಪಾಂಡುವಿನ ಯೌವನ ಕಾಂತಿಯನ್ನು ನೋಡಿ ಮೋಹಗೊಂಡು, ಅವನ ಮೇಲೆ ಕಣ್ಣುಗಳನ್ನು ನಟ್ಟು ಚಿತ್ರಾರ್ಪಿತರಂತಿದ್ದರು. ನೆರೆದಿದ್ದ ರಾಜರು ಪಾಂಡುವಿನ ಸುಂದರಾಕೃತಿಯನ್ನು ನೋಡಿ ರೂಪಲಾವಣ್ಯವತಿಯಾದ ಕುಂತಿಯು ತಮಗೆ ಲಭಿಸುವಳೆಂಬ ಆಸೆಯನ್ನು ಬಿಡುತ್ತ ಬಂದರು.

ಸಭೆಯು ನೆರೆದಿರಲು, ಕುಂತಿಯು ಸಮಯೋಚಿತವಾದ ವಸ್ತ್ರಾಭರಣಗಳನ್ನು ಧರಿಸಿ ಕೈಯಲ್ಲಿ ವರಣಮಾಲೆಯನ್ನು ಹಿಡಿದು ಪ್ರತೀಹಾರಿಗಳ ಸಮೇತಳಾಗಿ ಸಭಾಮಂಟಪವನ್ನು ಹೊಕ್ಕಳು. ಆ ಕ್ಷಣವೇ ಲೋಕಾರಣ್ಯಮಯವಾಗಿದ್ದ ಸಭೆಯು ನಿಸ್ತಬ್ಧವಾಯಿತು; ಭೂಪತಿಗಳ ಕಣ್ಣುಗಳು ಅರಳಿದುವು, ಮುಖವು ಗಾಂಭೀರ್ಯವನ್ನು ತಾಳಿತು. ವಂದಿಗಳು ಉಚ್ಚೈಸ್ವರರಾಗಿ ತಂತಮ್ಮ ರಾಜರ ವಂಶವರ್ಣನೆ ಮಾಡಲು ತೊಡಗಿದರು. ಕುಂತಿಯು, ಕುಳಿತಿದ್ದ ರಾಜಮಂಡಲಿಯ ಕಡೆಯೇ ಕಣ್ಣಿಟ್ಟು ನೋಡುತ್ತ ಪಾಂಡುವಿನ ಸಮೀಪಕ್ಕೆ ಬಂದು ನಿಂತಳು; ನವಯೌವನ ಸಂಪನ್ನನಾದ ಕುರುರಾಜ ಕುಮಾರನ ವಿಕಸಿತ ಮುಖಕಮಲವನ್ನೂ, ವಿಶಾಲ ವಕ್ಷಸ್ಸ್ಥಲವನ್ನೂ, ಆಕರ್ಣವಿಸ್ತೃತ ನೇತ್ರಗಳನ್ನೂ, ಲೋಕಾತೀತವಾದ ಆ ಸುಂದರ ಮೂರ್ತಿಯನ್ನೂ ನೋಡಿ ಆಹ್ಲಾದಪಟ್ಟಳು; ಮಹಾರಾಜ ಪಾಂಡುವಿಗೇ ವರಣಮಾಲೆಯನ್ನರ್ಪಿಸುವೆನೆಂದು ಮನಸ್ಸಿನಲ್ಲೆಣಿಸಿಕೊಂಡಳು. ಬೇರೆ ಯಾವ ನರಪತಿಯ ಕಡೆಯೂ ಕಣ್ಣುಹಾಕದೆ ಕುರುರಾಜನ ಹತ್ತಿರಕ್ಕೆ ಬಂದು ಲಜ್ಜೆಯಿಂದ ತಲೆಬಾಗಿ, ತನ್ನ ಕಮನೀಯ ಕರಪಲ್ಲವದಲ್ಲಿದ್ದ ಮಾಲ್ಯವನ್ನು ಅವನ ಕೊರಳಿಗೆ ಸಮರ್ಪಿಸಿದಳು. ಆ ಮಂಗಳ ಪುಷ್ಪಮಾಲೆಯು ಕುರುರಾಜನ ವಿಶಾಲ ವಕ್ಷಸ್ಥಲವನ್ನು ಅಲಂಕರಿಸಿ, ಅವನ ದೇಹಕಾಂತಿಯನ್ನು ಇಮ್ಮಡಿಸಿತು. ಇತ್ತ, ಅವನ ಸಹಚರರು ತಮ್ಮ ಆಹ್ಲಾದವನ್ನು ಪ್ರಕಾಶಗೊಳಿಸಿದರು. ವಾದ್ಯದವರು ಉತ್ಸಾಹದಿಂದ ಮಂಗಳವಾದ್ಯವನ್ನು ಮಾಡಲಾರಂಭಿಸಿದರು. ಕುಂತಿಭೋಜನು ತನ್ನ ಮಗಳಿಗೆ ಅನುರೂಪನಾದ ವರನು ಲಭಿಸಿದನೆಂದು ಸಂತುಷ್ಟನಾದನು. ಪುರವಾಸಿಗಳು ಬಗೆ ಬಗೆಯಾಗಿ ತಮ್ಮ ಸಂತೋಷವನ್ನು ತೋರಿಸಿದರು. ಉಳಿದ ರಾಜರು, ಹತಾಶರೂ ವಿಷಣ್ಣ ಹೃದಯರೂ ಆಗಿ, ತಂತಮ್ಮ ರಾಜ್ಯಕ್ಕೆ ಹಿಂದಿರುಗಿದರು.

ಕುಂತಿಭೋಜನು ಆನಂದ ಭರಿತನಾಗಿ ವಧೂವರರನ್ನು ಸಭಾಮಂಟಪದಿಂದ ಮನೆಯೊಳಗೆ ಕರೆದುಕೊಂಡು ಹೋದನು. ಅಲ್ಲಿ ವೇದೋಕ್ತವಾಗಿ ವಿವಾಹವು

ನಡೆಯಿತು. ತರುವಾಯ, ಬಹು ಮೂಲ್ಯವುಳ್ಳ ಬಳುವಳಿಯನ್ನು ಕೊಟ್ಟು ಮಗಳನ್ನೂ ಅಳಿಯನನ್ನೂ ಆತನು ಹಸ್ತಿನಾಪುರಕ್ಕೆ ಕಳುಹಿಸಿಕೊಟ್ಟನು.

ಪಾಂಡುವು ಸ್ವಯಂವರ ಸಭೆಗೆ ಬಂದಿದ್ದ ರಾಜರೆಲ್ಲರಲ್ಲಿಯೂ ಪ್ರಧಾನನೆನಿಸಿ ಭಾಗ್ಯಲಕ್ಷ್ಮೀ ಸ್ವರೂಪಿಯಾದ ಪತ್ನಿಯನ್ನು ಕರೆದುಕೊಂಡು ರಾಜಧಾನಿಗೆ ಹೊರಟನು. ಆ ಸುದ್ದಿಯನ್ನು ಕೇಳಿ ಭೀಷ್ಮನು ಅತ್ಯಂತ ಸಂತೋಷಪಟ್ಟು ನವದಂಪತಿಗಳು ಬರುತ್ತಲೆ ಯಥೋಚಿತವಾದ ಆದರದೊಡನೆ ಅವರನ್ನು ಅರಮನೆಗೆ ಕರೆದುಕೊಂಡು ಹೋದನು. ಧೃತರಾಷ್ಟ್ರನು ಅನುವಾದ ಹೆಂಡತಿಯನ್ನು ಪಡೆದಂತೆಯೇ ಪಾಂಡುವೂ ತನಗನುರೂಪಳಾದ ಹೆಂಡತಿಯನ್ನು ಪಡೆದನೆಂದು ಸತ್ಯವತಿಯೂ ಅಂಬಿಕೆಯೂ ಪರಿತುಷ್ಟರಾದರು. ಸರ್ವಗುಣಸಂಪನ್ನೆಯಾದ ಸೊಸೆಯು ಮನೆಗೆ ಬಂದಳೆಂದು ಅಂಬಾಲಿಕೆಯು ತನ್ನ ಆಹ್ಲಾದವನ್ನು ಪ್ರಕಾಶಗೊಳಿಸಿದಳು. ಪುರವಾಸಿಗಳು ಅಭಿನವ ವಧುವನ್ನು ಕೊಂಡಾಡುತ್ತ ಅಂಬಾಲಿಕೆಯ ಆಹ್ಲಾದವನ್ನು ವೃದ್ಧಿಗೊಳಿಸಿದರು. ರಾಜಭವನವು ಉತ್ಸವೋಚಿತ ಶೃಂಗಾರದಿಂದ ಮೆರೆಯಿತು. ನಗರವಾಸಿಗಳು ನಗರವನ್ನು ಶೃಂಗರಿಸಿದರು. ಅವರವರ ಮನೆಗಳ ಮುಂದೆ ಕಟ್ಟಿದ್ದ ಮಾವಿನ ತೋರಣಗಳಿಂದಲೂ, ನಟ್ಟಿದ್ದ ಬಾಳೆಯ ಕಂಬಗಳಿಂದಲೂ ಪತಾಕೆಗಳಿಂದಲೂ, ಅಲ್ಲಲ್ಲಿಟ್ಟಿದ್ದ ಪೂರ್ಣ ಕಲಶಗಳಿಂದಲೂ ಹಸ್ತಿನಾಪುರವು ಶೋಭಾಯಮಾನವಾಯಿತು. ಊರೂರುಗಳಲ್ಲಿಯೂ ಈ ವಿಧವಾದ ಆಮೋದವು ಕಣ್ಗೊಳಿಸಿತು; ಪಾಂಡುವಿನ ವಿವಾಹೋತ್ಸವದಲ್ಲಿ ಪುರವಾಸಿಗಳೂ ಜನಪದವಾಸಿಗಳೂ ಸನುವಾಗಿ ಆನಂದಪಟ್ಟರು.

ಕೆಲ ದಿನಗಳಾಗುತ್ತಲೆ ಭೀಷ್ಮನು ಪಾಂಡುವಿಗೆ ಇನ್ನೊಂದು ವಿವಾಹವನ್ನು ಮಾಡಲಿಚ್ಛಿಸಿದನು. ಮದ್ರದೇಶದ ರಾಜನ ತಂಗಿ ಬಲು ಚೆಲ್ವೆಯಾಗಿದ್ದಳು. ಭೀಷ್ಮನು ಪಾಂಡುವಿಗೆ ಆ ಚೆಲ್ವೆಯನ್ನು ತಂದು ಮದುವೆಮಾಡಲು ಮೊದಲೇ ಸಂಕಲ್ಪಮಾಡಿದ್ದನು. ಈಗ ಆ ಸಂಕಲ್ಪಸಿದ್ಧಿಗಾಗಿ ಅವನು ಮಂತ್ರಿಗಳು ಮುನಿಗಳು ಬ್ರಾಹ್ಮಣರು—ಇವರೊಡನೆ ಮದ್ರದೇಶಕ್ಕೆ ಹೊರಟನು. ಮದ್ರರಾಜನಾದ ಶಲ್ಯನು ಭೀಷ್ಮನ ಆಗಮನವಾರ್ತೆಯನ್ನು ಕೇಳುತ್ತಲೆ ತ್ವರೆಯಾಗಿ ಹೋಗಿ ಅವನನ್ನು ಇದಿರ್ಗೊಂಡು ಆದರಪೂರ್ವಕವಾಗಿ ಮನೆಗೆ ಕರೆದುಕೊಂಡು ಹೋದನು. ಶಿಷ್ಟಾಚಾರವನ್ನನುಸರಿಸಿ ಶಲ್ಯರಾಜನು ಭೀಷ್ಮನಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಕುಳ್ಳಿರಿಸಿ, ಭೀಷ್ಮನು ಬಂದ ಕಾರ್ಯವನ್ನು ವಿನಯಪೂರ್ವಕವಾಗಿ ವಿಚಾರಮಾಡಿದನು.

ಶಲ್ಯನ ಸತ್ಕಾರವನ್ನು ಸ್ವೀಕರಿಸಿ ಸರ್ವರೂ ತಂತಮ್ಮ ಆಸನಗಳನ್ನು

ಪರಿಗ್ರಹಿಸುತ್ತಲೆ, ಭೀಷ್ಮನು ಇಂತೆಂದನು :—"ರಾಜರೇ ! ನಾನು ಕನ್ಯಾರ್ಥಿಯಾಗಿ ಬಂದಿರುವೆನು. ನಿಮ್ಮ ತಂಗಿಯಾದ ಮಾದ್ರಿದೇವಿಯು ಮದುವೆಗೆ ಸಿದ್ಧಳಾಗಿರುವಳೆಂದು ನಾನು ಕೇಳಿಬಲ್ಲೆನು. ನನ್ನ ತಮ್ಮನ ಮಗ ಪಾಂಡುವಿಗೆ ಆ ಕುಮಾರಿಯನ್ನು ಕೊಡಬೇಕೆಂಬುದೇ ನನ್ನ ಪ್ರಾರ್ಥನೆ. ವಿವಾಹ ಸಂಬಂಧವನ್ನು ಬೆಳೆಯಿಸಲು ನೀವು ನಮಗೆ ತಕ್ಕವರು. ನಿಮ್ಮ ವಂಶವೂ ನಮ್ಮ ವಂಶವೂ ಸಮನಾಗಿ ಪವಿತ್ರವಾದುವು ; ಗುಣದಲ್ಲಿಯೂ ಪರಸ್ಪರವಾಗಿ ಅನುರೂಪವಾದುವು. ನಮ್ಮ ಪಾಂಡುವಿಗೆ ನಿಮ್ಮ ತಂಗಿಯನ್ನು ದಾನಮಾಡಿ ನಮ್ಮ ಸಂಬಂಧಮಾಡುವಿರಾದರೆ ನಾನು ಪರಮ ಸುಖಿಯೆಂದೆಣಿಸುವೆನು."

ಶಲ್ಯನು ಸಂತೋಷದಿಂದ ಭೀಷ್ಮನ ಪ್ರಸ್ತಾವಕ್ಕೊಡಂಬಟ್ಟು ತಂಗಿಯನ್ನು ಅವನ ಕೈಗೊಪ್ಪಿಸಿದನು. ಭೀಷ್ಮನೂ ಶಲ್ಯನಿಗೆ ಉಪಹಾರರೂಪವಾಗಿ ಆನೆ ಕುದುರೆಗಳನ್ನೂ ಮುತ್ತು ರತ್ನಗಳನ್ನೂ ಕೊಟ್ಟು ಮಾದ್ರಿದೇವಿಯನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಹಿಂದಿರುಗಿದನು.

ಅನಂತರದಲ್ಲಿ ಭೀಷ್ಮನು ದೈವಜ್ಞ ಬ್ರಾಹ್ಮಣರ ಮತ್ತು ಸತ್ಯವತಿ ಪ್ರಭೃತಿಗಳ ಮತಾನುಸಾರವಾಗಿ ಶುಭದಿನವನ್ನು ಗೊತ್ತುಮಾಡಿ ಆ ಶುಭದಿನದಲ್ಲಿ ಪಾಂಡುವಿನ ಪರಿಣಯೋತ್ಸವವನ್ನು ಸಾಂಗವಾಗಿ ನೆರವೇರಿಸಿದನು ; ಪಾಣಿಗ್ರಹಣವಾದ ತರುವಾಯ ಮಾದ್ರಿದೇವಿಯ ವಾಸಕ್ಕೆ ಸುರಮ್ಯವಾದ ಅಂತಃಪುರವನ್ನು ಗೊತ್ತುಮಾಡಿದನು. ಕುಂತಿಭೋಜನ ಮಗಳಿಗೆ ವಿವಾಹವಾದ ಸಮಯದಲ್ಲಿ ನಡೆದಂತೆಯೇ ಈ ವಿವಾಹದಲ್ಲಿಯೂ ಉತ್ಸವವು ಸಂಭ್ರಮವಾಗಿ ನಡೆಯಿತು. ಕುಂತಿಯೂ ಮಾದ್ರಿಯೂ ಸವತಿಯರಾದರೂ ಅತ್ಯಲ್ಪಕಾಲದಲ್ಲಿಯೇ ಇಬ್ಬರಿಗೂ ಅಕೃತ್ರಿಮ ಪ್ರೀತಿಯು ಹುಟ್ಟಿತು. ಇಬ್ಬರೂ ಸಾಪತ್ನ್ಯದೋಷಗಳನ್ನು ಕಳೆದು ಕಾಯಮನೋವಾಕ್ಕುಗಳಿಂದ ಪತಿಸೇವೆಯನ್ನು ಮಾಡುತ್ತಿದ್ದರು. ಮಹಾರಾಜ ಪಾಂಡುವು ಪರಸ್ಪರ ಸ್ನೇಹಬದ್ಧರಾದ ಪತ್ನಿಯರು ಮಾಡುತ್ತಿದ್ದ ಶುಶ್ರೂಷೆಯಿಂದ ಪ್ರೀತನಾಗಿ ರಾಜ್ಯಕಾರ್ಯಗಳನ್ನು ತಾನೇ ಮಾಡಲಾರಂಭಿಸಿದನು.

ಈ ತೆರದಲ್ಲಿ ಧೃತರಾಷ್ಟ್ರ ಪಾಂಡುರಾಯರಿಬ್ಬರಿಗೂ ವಿವಾಹವು ನಡೆಯಿತು. ಸಮದರ್ಶಿ ಭೀಷ್ಮನ ದೆಸೆಯಿಂದ ಯಾರ ಮನಸ್ಸಿಗೂ ಯಾವ ವಿಧವಾದ ಕೊರತೆಯೂ ಉಂಟಾಗಲಿಲ್ಲ. ಧೃತರಾಷ್ಟ್ರನು ಪತಿಪ್ರಾಣೆಯಾದ ಗಾಂಧಾರಿಯ ಶುಶ್ರೂಷೆಯಿಂದ ಸಂತೋಷಪಡುತ್ತಿದ್ದಂತೆಯೇ ಪಾಂಡುವು ಕುಲಾನುರೂಪರಾದ ಸತಿಯರೊಡಗೂಡಿ ಸುಖದಿಂದಿದ್ದನು. ಧೃತರಾಷ್ಟ್ರನು ಅಂಧನಾದರೂ, ಭೀಷ್ಮನು ಅವನನ್ನು ಚಕ್ಷುಷ್ಮಂತನೂ ರೂಪವಂತನೂ

ಆಗಿದ್ದಂತೆಯೇ ಲಕ್ಷ್ಯವಿಟ್ಟು ಕಾಣುತ್ತಿದ್ದನು. ಅವನು ಉಭಯ ಭ್ರಾತೃಗಳನ್ನೂ ಸಮನಾಗಿ ಕಾಣುತ್ತ, ಇಬ್ಬರನ್ನೂ ಸಮನಾಗಿ ಪ್ರೀತಿಸುತ್ತ ಇಬ್ಬರ ಹಿತವನ್ನೂ ಸಮನಾಗಿ ಪ್ರಯಾಸಪಟ್ಟು ಸಾಧಿಸುತ್ತಿದ್ದನು. ಕುಲಗೌರವದಲ್ಲಿಯೇ ಆಗಲಿ, ಆಚಾರದಲ್ಲಿಯೇ ಆಗಲಿ, ರೂಪಿನಲ್ಲಿಯೇ ಆಗಲಿ, ಧೃತರಾಷ್ಟ್ರ ಪಾಂಡುರಾಯರ ಪತ್ನಿಯರಿಗೆ ವೈಷಮ್ಯವಿರಲಿಲ್ಲ. ಅಂತು, ಭೀಷ್ಮನ ಸದ್ವ್ಯವಹಾರದಿಂದ ಧೃತರಾಷ್ಟ್ರನೂ ಪಾಂಡುವೂ ಅನ್ಯೋನ್ಯ ಭ್ರಾತೃಭಾವದಿಂದ ಸುಖವಾಗಿರುತ್ತಿದ್ದರು.

ಧೃತರಾಷ್ಟ್ರಪಾಂಡುರಾಯರ ವಿವಾಹವಾದ ಕೂಡಲೆ ಭೀಷ್ಮನು ವಿದುರನ ಪರಿಣಯವನ್ನು ಮಾಡಲುದ್ಯುಕ್ತನಾದನು. ಈ ಕಾರ್ಯದಲ್ಲಿಯೂ ಭೀಷ್ಮನು ತನ್ನ ಉದಾರ ಗುಣವನ್ನೂ ಪ್ರೀತಿಯನ್ನೂ ತೋರಿಸದೆ ಹೋಗಲಿಲ್ಲ. ವಿದುರನು ದಾಸಿಯ ಮಗನಾದರೂ ಭೀಷ್ಮನು ಅವನನ್ನು ದಾಸನಂತೆ ಹೀನವಾಗಿ ಕಾಣುತ್ತಿರಲಿಲ್ಲ; ಧೃತರಾಷ್ಟ್ರ ಪಾಂಡುರಾಯರನ್ನು ಕಾಣುತ್ತಿದ್ದಂತೆಯೇ ಅವನನ್ನೂ ಕಾಣುತ್ತಿದ್ದನು. ವಿದುರನು ಹೇಗೆ ಧರ್ಮಿಷ್ಠನಾಗಿ, ಪ್ರಶಾಂತಚಿತ್ತನಾಗಿ, ಆದುದರಿಂದಲೇ ಸೌಮ್ಯಮೂರ್ತಿಯಾಗಿ, ಸರ್ವಜನ ಪ್ರಿಯನಾಗಿದ್ದನೋ, ಹಾಗೆಯೇ, ಧರ್ಮದಲ್ಲಿ ಅನುರಾಗವುಳ್ಳವಳಾಗಿ, ಲಕ್ಷಣವಂತೆಯಾಗಿ, ಸುಂದರಿಯಾಗಿ ಅವನಿಗೆ ಅನುರೂಪಳಾಗಿರುವ ಹೆಣ್ಣನ್ನು ಭೀಷ್ಮನು ತಂದು ಅವನಿಗೆ ಮದುವೆಮಾಡಿದನು.

ಋತು ಪರ್ಯಾಯಕ್ರಮದಲ್ಲಿ ಶರತ್ಕಾಲವು ಹುಟ್ಟಿತು. ಮುಗಿಲುಗಳು ತೇಲಿಹೋದುವು, ದಿಕ್ಕುಗಳು ನಿರ್ಮಲವಾದುವು, ಸೂರ್ಯರಶ್ಮಿಯು ಪ್ರಖರವಾಯಿತು, ಚಂದ್ರನ ಶುಭ್ರಕಿರಣಜಾಲವು ಬೆಳಗಿತು, ಅರಳಿದ ಕಮಲದಳಗಳಿಂದ ಸರೋವರಗಳು ಶೋಭಾಯಮಾನವಾದುವು. ಸರೋವರಗಳಲ್ಲಿ ಮಂದಮಾರುತದಿಂದ ಸಂಚಾಲಿತವಾದ ತರಂಗಾವಳಿಗಳ ಕೂಡೆ ಹಂಸಪಕ್ಷಿಗಳು ಸುಮ್ಮಾನದಿಂದ ಕುಣಿದಾಡಲಾರಂಭಿಸಿದುವು. ದಾರಿಗಳಲ್ಲಿ ಕೆಸರಿಲ್ಲವಾಯಿತು, ನದಿಗಳ ರಭಸನಡಗಿತು, ಮಾರ್ಗಗಳು ಸುಗಮವಾದುವು, ಭೂಮಿಯು ಪೈರುಗಳಿಂದ ಸೊಂಪೇರಿತು, ಕೃಷಿಕರ ಹೃದಯದಲ್ಲಿ ಆಸೆಯೂ ಉತ್ಸಾಹವೂ ಹುಟ್ಟಿದುವು, ಗಾಳಿಯ ಸ್ಪರ್ಶವು ಆಪ್ಯಾಯಮಾನವಾಯಿತು, ರಾತ್ರಿ ನೀಲಗಗನದಲ್ಲಿ ನಕ್ಷತ್ರಗಳು ಹೊಳೆಯಲಾರಂಭಿಸಿದುವು.

ಶರತ್ಕಾಲವು ಅಡಿಯಿಡುತ್ತಲೆ ಪಾಂಡುವು ದಿಗ್ವಿಜಯಕ್ಕೆ ಹೊರಡಲುದ್ಯುಕ್ತನಾಗಿ, ಭೀಷ್ಮನಿಗೆ ತನ್ನ ಅಭಿಪ್ರಾಯವನ್ನು ತಿಳಿಸಲು, ಅವನು ಸಂತೋಷಪಟ್ಟು ಅದನ್ನು ಅನುಮೋದಿಸಿದನು. ಕೂಡಲೆ ಮಾಂಡಲಿಕರೂ

ಸಾಮಂತರೂ ತಂತಮ್ಮ ಬಲಸಮೇತರಾಗಿ ರಾಜಧಾನಿಗೆ ಬಂದಿಳಿದರು. ಚತುರಂಗಬಲವು ಚಿತ್ರವಿಚಿತ್ರವಾಗಿ ಸಜ್ಜಿತವಾಯಿತು. ಪಾಂಡುವು ತನ್ನ ಅಧಿಕಾರವನ್ನು ಸ್ಥಿರಪಡಿಸಿಕೊಂಡು ಸೈನಿಕರಿಗೆ ಮುಂಪಾಗಿಯೇ ಸಂಬಳವನ್ನು ಕೊಟ್ಟು ಅವರನ್ನು ತನ್ನ ವಶವರ್ತಿಗಳನ್ನಾಗಿ ಮಾಡಿಕೊಂಡಿದ್ದನು. ಈಗ, ಅವನು ಭೀಷ್ಮ ಧೃತರಾಷ್ಟ್ರರಿಗೂ, ಸತ್ಯವತಿ ಪ್ರಭೃತಿ ಮಾತೃದೇವಿಯರಿಗೂ ನಮಸ್ಕಾರವನ್ನು ಮಾಡಿ ಅವರ ಹರಕೆಯನ್ನು ಕೈಕೊಂಡು, ಶುಭಮುಹೂರ್ತದಲ್ಲಿ ಚತುರಂಗಬಲ ಸಹಿತನಾಗಿ ನಗರದಿಂದ ಹೊರಟನು.

ಹೀಗೆ ದಂಡಯಾತ್ರೆ ಹೊರಟ ಪಾಂಡುವು ಮಾರ್ಮಲೆತ ಮಾಂಡಲಿಕರನ್ನೂ ಸಾಮಂತರನ್ನೂ ಭುಜಬಲದಿಂದ ದಂಡಿಸಿ ಶರಣುಹೊಕ್ಕವರನ್ನು ಆರ್ದ್ರಹೃದಯದಿಂದ ರಕ್ಷಿಸಿದನು. ಅಂತು, ಎಲ್ಲಿಯೂ ಅವನ ಪ್ರತಾಪಕ್ಕೆ ಕುಂದುಬರಲಿಲ್ಲ, ಉದಾರಭಾವಕ್ಕೆ ಕಳಂಕವುಂಟಾಗಲಿಲ್ಲ. ಕಾಲಿಟ್ಟಲ್ಲಿ ಅವನು ವಿಜಯಿಯಾದನು; ನಿರುಪಮವೀರನೆಂದು ಹೆಸರುಗೊಂಡನು. ಎಲ್ಲೆಲ್ಲಿ ನದಿಗಳು ಅವನ ಪಯಣಕ್ಕೆ ಅಡ್ಡಬಂದುವೋ ಅಲ್ಲಲ್ಲಿ ಸೇತುಗಳನ್ನು ಕಟ್ಟಿಸಿದನು; ಎಲ್ಲೆಲ್ಲಿ ನಿಬಿಡಾರಣ್ಯವು ಅವನ ಪಯಣಕ್ಕೆ ವಿಘ್ನಮಾಡಿತೋ ಅಲ್ಲಲ್ಲಿ ಗಿಡಮರಗಳನ್ನು ಕಡಿಸಿ ಪ್ರಶಸ್ತವಾದ ಮಾರ್ಗಗಳನ್ನು ಮಾಡಿಸಿದನು; ಎಲ್ಲೆಲ್ಲಿ ಕುಡಿಯುವ ನೀರು ದುರ್ಲಭವಾಗಿದ್ದಿತೋ ಅಲ್ಲಲ್ಲಿ ಕೆರೆಗಳನ್ನು ಕಟ್ಟಿಸಿದನು. ಈ ತೆರದಲ್ಲಿ ತಾನು ಹೊಕ್ಕ ನಾಡುಗಳಲ್ಲೆಲ್ಲ ತನ್ನ ಬಾಹುಬಲಕ್ಕೂ ಧರ್ಮಾಚರಣಕ್ಕೂ ಕುರುಹುಗಳಿರುವಂತೆ, ಲೋಕಹಿತ ಕಾರ್ಯಗಳನ್ನು ಮಾಡಿ, ಕುರುರಾಯನು ತನ್ನ ವೀರತ್ವದಿಂದ ವೀರಭೋಗ್ಯೆಯಾದ ಧರಣಿಯನ್ನು ವಶಮಾಡಿಕೊಂಡು ಸಂಪದ್ಯುಕ್ತನಾಗಿ ಹಸ್ತಿನಾಪುರಕ್ಕೆ ಹಿಂದಿರುಗಿದನು.

ಪಾಂಡುವು ಹಸ್ತಿನಾಪುರದ ಸಮೀಪಕ್ಕೆ ಬಂದ ಸುದ್ದಿಯನ್ನು ಕೇಳಿ ಭೀಷ್ಮನು ಸಂತೋಷಪಟ್ಟು ಅವನನ್ನು ಇದಿರ್ಗೊಳ್ಳುವುದಕ್ಕೆ ಅಮಾತ್ಯರೊಡಗೊಂಡು ಪುರದಿಂದ ಹೊರಟನು. ಗೆದ್ದುಬಂದ ಕೌರವಸೇನೆಯನ್ನೂ ಕೌರವಕುಲದೀಪನಾದ ಪಾಂಡುವನ್ನೂ ನೋಡುತ್ತಲೆ ಭೀಷ್ಮನು ಆನಂದಪರವಶನಾಗಿ, ಪಾಂಡುವನ್ನು ಕುಶಲಪ್ರಶ್ನೆಮಾಡುತ್ತ ಕಣ್ಗಳಿಂದ ಆನಂದಬಿಂದುಗಳನ್ನು ಕರೆದನು. ಪಾಂಡುವು ವಿಜಯಗೌರವದಿಂದ ಮಹಿಮೋನ್ನತನಾಗಿದ್ದರೂ ನಮ್ರಭಾವವನ್ನು ತಾಳಿ ಭೀಷ್ಮನ ಪಾದಕ್ಕೆರಗಿ ಭೀಷ್ಮನ ಜತೆಯಲ್ಲಿ ಬಂದಿದ್ದ ಅಮಾತ್ಯ ಪ್ರಭೃತಿಗಳಿಗೆ ಯಥೋಚಿತ ಸನ್ಮಾನವನ್ನು ಮಾಡಿದನು. ನಾಲ್ಕು ದಿಕ್ಕುಗಳಲ್ಲಿಯೂ ತೂರ್ಯ ಶಂಖ ದುಂದುಭಿ ಮೊದಲಾದ ಮಂಗಳವಾದ್ಯಗಳಾದುವು. ಬ್ರಾಹ್ಮಣರು ಜಯಶಾಲಿಯಾದ ಕುರುರಾಜನನ್ನು

ಕೈಯೆತ್ತಿ ಆಶೀರ್ವಚನಗಳಿಂದ ಹರಸಿದರು. ಪುರಾಂಗನೆಯರು ಸಮಯೋಚಿತ ಮಂಗಳಕಾರ್ಯಗಳನ್ನು ಮಾಡುತ್ತ ಕುರುರಾಜನಲ್ಲಿ ತಮಗಿದ್ದ ಪ್ರೀತಿಯನ್ನು ತೋರಿದರು. ಪುರವಾಸಿಗಳೂ ಜನಪದವಾಸಿಗಳೂ ಏಕವಾಕ್ಯದಿಂದ—"ಹಿಂದೆ ಕುರುಕುಲದ ಸಂಪತ್ತೆಲ್ಲವನ್ನೂ ಅಪಹರಿಸಿ ಗರ್ವಪಡುತ್ತಿದ್ದ ರಾಜರೆಲ್ಲರೂ ಈಗ ಪಾಂಡುವಿನ ಶರಣುಹೊಕ್ಕರು. ಮಹಾತ್ಮ ಭೀಷ್ಮನು ಪಟ್ಟ ಪ್ರಯಾಸದಿಂದ ಪಾಂಡುವು ಧನುರ್ವೇದದಲ್ಲಿ ಸುಶಿಕ್ಷಿತನಾಗಿ ರಾಜಪದವಿಯಲ್ಲಿ ಸುಪ್ರತಿಷ್ಠನಾಗದಿದ್ದ ಪಕ್ಷಕ್ಕೆ ಈ ಬಗೆಯ ಆನಂದೋತ್ಸವವನ್ನು ನಾವೆಲ್ಲಿ ಕಾಣುತ್ತಿದ್ದೆವು? ಭೀಷ್ಮನು ಕುರುಕುಲಕ್ಕೆ ಮಂಗಳವಿಧಾತನು. ಅವನು ಏಕಮಾನಸನಾಗಿ ಮಾಡುತ್ತಿರುವ ಕಾರ್ಯಗಳಿಂದ ಅನುದಿನವೂ ಭರತವಂಶಕ್ಕೆ ಶುಭವಾಗುತ್ತಿರುವುದು. ಇಂತಹ ಪರಾರ್ಥಪರನೂ ವಿಷಯವಿರಕ್ತನೂ ಆದ ಮಹಾತ್ಮನ ಪ್ರಸಾದದಿಂದ ದಿಗ್ವಿಜಯಿ ಪಾಂಡುವಿನ ಕೀರ್ತಿಯು ಮುಗಿಲು ಮುಟ್ಟುವಂತಾಯಿತು" ಎಂದು ಮಾತನಾಡಿಕೊಳ್ಳುತ್ತಿದ್ದರು. ಇಂತಹ ಆಮೋದಪ್ರಮೋದಗಳ ನಡುವೆ, ಭೀಷ್ಮನು ಪಾಂಡುವನ್ನು ಕರೆದುಕೊಂಡು ನಗರವನ್ನು ಹೊಕ್ಕನು.

ಆನಂದ ಕೋಲಾಹಲಪೂರಿತವಾದ ಅರಮನೆಯನ್ನು ಹೊಕ್ಕು ಪಾಂಡುವು ಸತ್ಯವತಿ ಅಂಬಿಕೆ ಅಂಬಾಲಿಕೆ ಧೃತರಾಷ್ಟ್ರ—ಇವರ ಚರಣಗಳಿಗೆ ಯಥಾಕ್ರಮವಾಗಿ ಪ್ರಣಾಮವನ್ನು ಮಾಡಿದನು. ಸತ್ಯವತಿಯು ತನ್ನ ಪ್ರಿಯತಮನಾದ ಮೊಮ್ಮಗನ ವಿಜಯವೈಭವದಿಂದ ಆನಂದಮಗ್ನೆಯಾದಳು. ಅಂಬಿಕೆಯು ಹರ್ಷಚಿತ್ತೆಯಾಗಿ ಮಗನಿಗೆ ಕುಶಲವಾಗಲೆಂದು ದೇವತಾಪ್ರಾರ್ಥನೆ ಮಾಡಿದಳು. ಅಂಬಾಲಿಕೆಯ ವಕ್ಷಸ್ಸ್ಥಲದ ಮೇಲೆ ಆನಂದಾಶ್ರುವು ಧಳಧಳಿಸಿ ಸುರಿಯತೊಡಗಿತು. ಅವಳು ಪರಮಪ್ರೇಮದಿಂದ ಮಗನನ್ನು ತಕ್ಕೈಸಿ, "ವತ್ಸ! ಕುಶಲವೆ?" ಎಂದಳು. ಧೃತರಾಷ್ಟ್ರನು ಅನುಜನ ಸಾಹಸಕಾರ್ಯಗಳನ್ನು ಕೇಳಿ ಪರಿತುಷ್ಟನಾದನು. ಕುಂತಿ ಮಾದ್ರಿಯರ ಆಹ್ಲಾದಕ್ಕೆ ಕೊನೆಯಿಲ್ಲವಾಯಿತು. ಅವರು ಸಿಂಹಪರಾಕ್ರಮನನ್ನು ಕೈಹಿಡಿದು ಅವನ ಶೌರ್ಯಗೌರವಗಳಿಂದ ತಾವು ಅಗಣ್ಯಪುಣ್ಯವತಿಯರಾದೆವೆಂದು ಹಿಗ್ಗಿದರು. ಈ ತೆರದಲ್ಲಿ ಪಾಂಡುವಿನ ಪ್ರತ್ಯಾಗಮನದಿಂದ ಸರ್ವರ ಹೃದಯವೂ ಪ್ರಫುಲ್ಲವಾಯಿತು. ಅನುಕ್ಷಣವೂ ಸರ್ವರೂ ವಂಶವರೇಣ್ಯನಾದ ಪಾಂಡುವಿನ ಪರಾಕ್ರಮವನ್ನು ಉದ್ಘೋಷಿಸುತ್ತಲೂ ಕುರುಕುಲಕ್ಕೆ ಇಷ್ಟದೈವದಂತಿದ್ದ ಭೀಷ್ಮನ ಲೋಕೋತ್ತರವಾದ ಚರಿತೆಯನ್ನು ಕೀರ್ತನಮಾಡುತ್ತಲೂ ಇದ್ದರು.

ಆರನೆಯ ಅಧ್ಯಾಯ

ಕೌರವ ಪಾಂಡವರ ಜನನ ಮತ್ತು ವಿದ್ಯಾಭ್ಯಾಸ

ದಿನಕ್ರಮವಾಗಿ ಕುರುವಂಶದಲ್ಲಿ ಅನೇಕ ಶಾಖೆಗಳು ಒಡೆದುವು. ಪಟ್ಟದರಸಿಯಾದ ಕುಂತಿಯು ಮೂವರು ಮಕ್ಕಳನ್ನೂ ಮಾದ್ರಿಯು ಇಬ್ಬರು ಅವಳಿಮಕ್ಕಳನ್ನೂ ಹೆತ್ತರು. ಇತ್ತ, ಧೃತರಾಷ್ಟ್ರನ ಹೆಂಡತಿ ಗಾಂಧಾರಿಗೆ ನೂರ್ವರು ಮಕ್ಕಳಾದರು. ಪಾಂಡುವು ಐವರು ಪುತ್ರರನ್ನೂ ಧೃತರಾಷ್ಟ್ರನು ಬಹುಪುತ್ರರನ್ನೂ ಪಡೆದು ಸಂತುಷ್ಟರಾದರು. ಯಥಾವಿಧಾನವಾಗಿ ಕುಮಾರರೆಲ್ಲರಿಗೂ ಜಾತಕರ್ಮಾದಿಗಳು ನಡೆದುವು. ಕುಂತಿಯ ಮಕ್ಕಳು ಯುಧಿಷ್ಠಿರ, ಭೀಮಸೇನ, ಅರ್ಜುನ ಎಂದು ಹೆಸರುಗೊಂಡರು. ಮಾದ್ರಿಯ ಮಕ್ಕಳೊಳಗೆ ಜ್ಯೇಷ್ಠನ ಹೆಸರು ನಕುಲ, ಕನಿಷ್ಠನ ಹೆಸರು ಸಹದೇವ. ಧೃತರಾಷ್ಟ್ರನ ಮಕ್ಕಳು ದುರ್ಯೋಧನ, ದುಶ್ಶಾಸನ—ಇತ್ಯಾದಿಯಾದ ಹೆಸರುಗಳಿಂದ ಖ್ಯಾತರಾದರು.

ಕುಮಾರರು ಸುಶಿಕ್ಷಿತರಾಗಿ ಯೌವನದಶೆಗೆ ಬರುವಷ್ಟರಲ್ಲಿಯೇ ಪಾಂಡುವು ಸ್ವರ್ಗಸ್ಥನಾದನು. ಅವನ ಮರಣದ ದೆಸೆಯಿಂದ ಸಮಸ್ತ ಕುರುರಾಜ್ಯವೂ ಶೋಕಾಕುಲವಾಯಿತು; ಸತ್ಯವತಿ ಭೀಷ್ಮರಾದಿಯಾಗಿ ಸರ್ವರೂ ವ್ಯಸನಾಕ್ರಾಂತರಾದರು; ಕುಂತಿಮಾದ್ರಿಯರು ಮೂರ್ಛೆಹೋದರು. ಚೇತರಿಸಿಕೊಳ್ಳುತ್ತಲೆ, ಕುಂತಿಯು ಮಾದ್ರಿಯನ್ನು ಕರೆದು—"ಎಲೌ, ನಾನು ಆರ್ಯಪುತ್ರನ ಜ್ಯೇಷ್ಠ ಧರ್ಮಪತ್ನಿ; ಸಕಲ ಕಾರ್ಯಗಳನ್ನೂ ಮುಂಗೊಂಡು ಮಾಡುವುದು ನನ್ನ ಧರ್ಮವು; ಈಗ ನಾನೂ ಆರ್ಯಪುತ್ರನ ದಾರಿಯನ್ನೇ ಹಿಡಿಯುವೆನು; ನನ್ನ ಮಕ್ಕಳನ್ನು ನಿನ್ನ ಕೈಯಲ್ಲಿಡುವೆನು; ನೀನು ಶೋಕವನ್ನು ಬಿಟ್ಟು ಅವರನ್ನು ಸಾಕುವ ಭಾರವನ್ನು ವಹಿಸು; ಪರದಲ್ಲಿ ಆರ್ಯಪುತ್ರನಿಗೆ ಸದ್ಗತಿಯಾಗುವಂತೆ ಧರ್ಮವನ್ನು ಆಚರಿಸು; ನಾನು ಆರ್ಯಪುತ್ರನ ಕೂಡೆ ಸಹಗಮನ ಮಾಡುವೆನು; ನೀನು ನನಗಡ್ಡಬರಬೇಡ" ಎಂದಳು.

ಶೋಕಾಕುಲೆಯಾದ ಕುಂತಿಯ ಮಾತನ್ನು ಕೇಳಿ ಮಾದ್ರಿಯು ಇಂತೆಂದಳು:—"ಆರ್ಯೆ! ನಾನು ಸಂಸಾರ ವಿಷಯದಲ್ಲಿ ಏನನ್ನೂ ಅರಿಯೆನು; ಅಲ್ಪವಯಸ್ಸಿನವಳಾದುದರಿಂದ ನನ್ನ ವಿವೇಚನಾಶಕ್ತಿಯು ಪರಿಣತವಾಗಿಲ್ಲ; ಮಕ್ಕಳ ಲಾಲನೆಪಾಲನೆಯು ಕಷ್ಟಸಾಧ್ಯವು; ಅದಕ್ಕೆ ನನಗೆ

ಸಾಮರ್ಥ್ಯ ಸಾಲದು; ನನ್ನ ಮಕ್ಕಳಲ್ಲಿ ಪ್ರೀತಿಯನ್ನು ತೋರಿಸುವಂತೆಯೇ. ಬುದ್ಧಿದೋಷದಿಂದ ನಿನ್ನ ಮಕ್ಕಳಲ್ಲಿ ತೋರಿಸದೆ ಹೋದರೆ ನಾನು ಪಾತಕಿಯಾಗುವೆನು, ಸಂದೇಹವಿಲ್ಲ. ನಮ್ಮ ಮಕ್ಕಳಿಗೆ ಇನ್ನೂ ಶೈಶವವೇ ಕಳೆಯಲಿಲ್ಲ; ನೀನಿಲ್ಲದಿದ್ದರೆ ಅವರ ಗತಿಯೇನು? ಅವರಿಗೆ ದಿಕ್ಕಾರು? ಪ್ರೀತಿಯಿಂದ ಅವರನ್ನು ಸಾಕುವರಾರು? ಅವರು ಯಾರ ಮುಖವನ್ನು ನೋಡಿಕೊಂಡಿರುವರು? ಅದೃಷ್ಟವು ಹೇಗಿರುವುದೊ? ಅವರೇನಾದರೂ ಆದರೆ ನಾನು ಇನ್ನಷ್ಟು ದುಃಖಿಸಬೇಕಾಗುವುದು. ಅಷ್ಟೇ ಅಲ್ಲ; ಆರ್ಯಪುತ್ರನಿಗೆ ಜಲತರ್ಪಣವನ್ನು ಕೊಡುವರು ಕೂಡ ಇಲ್ಲದೆ ಹೋಗುವರು. ಆದುದರಿಂದ, ಪರದಲ್ಲಿ ಆರ್ಯಪುತ್ರನ ತೃಪ್ತ್ಯರ್ಥವಾಗಿಯೂ, ಇಹದಲ್ಲಿ ಮಕ್ಕಳ ಜೀವನ ರಕ್ಷಣಾರ್ಥವಾಗಿಯೂ ಬದುಕಿರುವುದೇ ನಿನ್ನ ಕರ್ತವ್ಯವು. ನೀನು ಸಹಗಮನದ ಯೋಚನೆಯನ್ನು ಬಿಡು; ನಾನು ಸಹಗಮನವನ್ನು ಮಾಡುವೆನು; ಅದರಿಂದ ನಮ್ಮಿಬ್ಬರ ಮಕ್ಕಳಿಗೆ ಹಾನಿಯೇನೂ ಆಗದು. ಯುಧಿಷ್ಠಿರಾದಿಗಳನ್ನು ಸಾಕುವಂತೆಯೇ ನನ್ನ ಮಕ್ಕಳನ್ನೂ ನೀನು ಸಾಕಬಲ್ಲೆ; ಅವರಲ್ಲಿ ನಿನಗೆಂದಿಗೂ ಪ್ರೀತಿ ತಪ್ಪದಿರುವುದು.''

ಇಂತೆಂದು ನುಡಿದು ಪತಿಪ್ರಾಣೆಯಾದ ಮಾದ್ರಿಯು ತನ್ನ ಮಕ್ಕಳ ಆರಯ್ಕೆಯನ್ನು ಸವತಿಗೊಪ್ಪಿಸಿ ಸಹಗಮನವನ್ನು ಮಾಡಿದಳು. ಕುಂತಿಗೆ ಸಹಗಮನವನ್ನು ಮಾಡುವ ಸಂಕಲ್ಪವನ್ನು ಬಿಡಲಿಚ್ಛೆಯಿಲ್ಲದಿದ್ದರೂ ಮಕ್ಕಳ ಯೋಗಕ್ಷೇಮಾರ್ಥವಾಗಿ ಬಿಡಲೊಡಂಬಟ್ಟಳು.

ಪಾಂಡುವು ದಿವಂಗತನಾದ ತರುವಾಯ ಭೀಷ್ಮನು ಸ್ವಭಾವಸಿದ್ಧವಾದ ಉದಾರಭಾವದಿಂದಲೂ ಸಮದೃಷ್ಟಿಯಿಂದಲೂ ಯುಧಿಷ್ಠಿರಾದಿ ಕುಮಾರರ ರಕ್ಷಣಾವೇಕ್ಷಣ ಭಾರವನ್ನು ಹೊತ್ತನು. ಅವನು ಹಿಂದೆ ಪ್ರೀತಿಪೂರ್ವಕವಾಗಿ ವಿಚಿತ್ರವೀರ್ಯನ ಹಿತವನ್ನು ಸಾಧಿಸುವುದರಲ್ಲಿ ಹೇಗೆ ನಿರತನಾಗಿದ್ದನೋ, ಹೇಗೆ ಧೃತರಾಷ್ಟ್ರ ಪಾಂಡುರಾಯರ ಪುರೋವೃದ್ಧಿಯಲ್ಲಿ ತತ್ಪರನಾಗಿದ್ದನೋ ಹಾಗೆಯೇ ಈಗ ಯುಧಿಷ್ಠಿರಾದಿಗಳನ್ನು ಸಾಕಿ ಸಲಹುವುದರಲ್ಲಿಯೂ ಅಕ್ಕರೆಯುಳ್ಳವನಾಗಿದ್ದನು. ಅಡಿಗಡಿಗೆ ವಿಘ್ನವಿಪತ್ತುಗಳು ಬಂದರೂ ಅವನ ಧರ್ಮಬುದ್ಧಿಯು ಪಲ್ಲಟವಾಗಲಿಲ್ಲ. ಅವನು ಮೇರುವಿನಂತೆ ನಿಶ್ಚಲನಾಗಿ ನಿಂತು ಕರ್ತವ್ಯಬುದ್ಧಿಯಿಂದ ಕುರುರಾಜ ಕುಮಾರರನ್ನು ಪಾಲಿಸುತ್ತಿದ್ದನು; ಚಿತ್ರಾಂಗದನು ಹತನಾದ ಬಳಿಕ ಹೇಗೆ ಕುರುರಾಜ್ಯದ ಕ್ಷೇಮಚಿಂತನೆಯನ್ನು ಮಾಡುತ್ತಿದ್ದನೋ, ವಿಚಿತ್ರವೀರ್ಯನ ಮರಣಾನಂತರ ವಂಶಗೌರವವನ್ನು ರಕ್ಷಿಸುವ ನಿಮಿತ್ತವಾಗಿ ಹೇಗೆ ಶ್ರಮಪಟ್ಟನೋ,

ಹಾಗೆಯೇ ಈಗ ಪಾಂಡುವು ಕಾಲಧರ್ಮವನ್ನೈದುತ್ತಲೆ ಕುರುಕುಲದ ಕೀರ್ತಿಸಂಪದಗಳನ್ನು ಬೆಳೆಯಿಸುವುದರಲ್ಲಿಯೂ ಪಾಡುಪಟ್ಟನು. ಅವನ ಶ್ರಮಶೀಲತೆಯನ್ನು ನೋಡಿ ಎಲ್ಲರೂ ವಿಸ್ಮಯಪಟ್ಟರು. ಅವನು ರಾಜದಂಡ ವನ್ನು ಪರಿಗ್ರಹಿಸಲಿಲ್ಲ, ಪತ್ನಿಯನ್ನು ಕೈಕೊಳ್ಳಲಿಲ್ಲ. ಪರಾರ್ಥದಲ್ಲಿ ಅರ್ಪಿತ ಪ್ರಾಣನಾಗಿ ಪ್ರಜೆಗಳಲ್ಲಿ ಎಲ್ಲರಂತೆ ತಾನೂ ಒಬ್ಬನೆಂದು ಅವನು ತೋರಿದ ರಾಜಭಕ್ತಿಯನ್ನೂ ಕರ್ತವ್ಯನಿಷ್ಠೆಯನ್ನೂ ನೋಡಿ ನೋಡಿ ಪ್ರಜೆಗಳೆಲ್ಲರೂ ವಿಸ್ಮಯದಿಂದ ಸ್ತಬ್ಧರಾಗುತ್ತಿದ್ದರು; ಅವನ ಅಸ್ವಾದೃಶಚರಿತೆಗೆ ಭಕ್ತಿರಸ ದಿಂದ ಮನಕರಗಿ ತಲೆಬಾಗಿ ಅವನನ್ನು ವಂದಿಸುತ್ತಿದ್ದರು. ಇಷ್ಟಾದರೂ, ಭೀಷ್ಮನು ಯಾವ ಕಾರ್ಯದಲ್ಲಿಯೂ ತಾನು ಕರ್ತೃತ್ವವನ್ನು ಇಟ್ಟುಕೊಳ್ಳ ಲಿಲ್ಲ; ರಾಜಕಾರ್ಯಗಳೆಲ್ಲವನ್ನೂ ಧೃತರಾಷ್ಟ್ರನ ಆಜ್ಞಾನುರೂಪವಾಗಿ ನಡೆಯಿಸುತ್ತಿದ್ದನು.

ಪಾಂಡುವಿನ ವಿಯೋಗದಿಂದ ಸತ್ಯವತಿಗೆ ವಿಷಯವೈರಾಗ್ಯವು ಹುಟ್ಟಿತು; ಅವಳು ಸಕಲ ಕಾರ್ಯಗಳಲ್ಲಿಯೂ ಉದಾಸೀನಳಾದಳು. ಹೀಗಿರಲು, ಒಂದು ದಿನ ಅವಳು ಭೀಷ್ಮನನ್ನು ಕರೆದು—"ವತ್ಸ! ಪಾಂಡುವಿನ ಸಾವಿನಿಂದ ನನ್ನ ದೇಹವು ಉಡುಗಿಹೋಯಿತು. ನನ್ನ ಮನಸ್ಸಿಗಾದರೋ, ಯಾವುದೂ ಬೇಕಾಗಿಲ್ಲ. ನನ್ನ ಮನಸ್ಸಿಗೆ ಅರಮನೆಯು ಬರಿದಾಯಿತು; ಸಂಸಾರವು ಕಿಚ್ಚುಬಿದ್ದ ಕಾಡಿನಂತಾಯಿತು. ಇಷ್ಟು ದಿನಗಳೂ ನಾನು ಪಾಂಡುವಿನ ಮುಖವನ್ನು ನೋಡಿಕೊಂಡು ಪ್ರಾಣಾಧಿಕನಾದ ವಿಚಿತ್ರವೀರ್ಯನು ಹೋದ ಶೋಕವನ್ನು ತಾಳಿಕೊಂಡಿದ್ದೆನು; ಪಾಂಡುವಿನಿಂದ ನಮ್ಮ ವಂಶದ ಕೀರ್ತಿ ಲತೆಯು ವಿಸ್ತಾರವಾಗಿ ಹಬ್ಬುವುದೆಂದು ಆಸೆಪಡುತ್ತಿದ್ದೆನು. ಆ ಆಸೆ ನಿರಾಸೆಯಾಯಿತು. ಧೃತರಾಷ್ಟ್ರನ ಮಕ್ಕಳ ಸ್ವಭಾವವು ಅವರ ಈ ಅಲ್ಪ ವಯಸ್ಸಿನಲ್ಲಿಯೇ ನನಗೆ ಶಂಕೆಯನ್ನುಂಟುಮಾಡುತ್ತಿರುವುದು; ಕುಲಕ್ಷಯಕರ ವಾದ ಜ್ಞಾತಿವೈರವು ಹುಟ್ಟುವ ಲಕ್ಷಣಗಳು ಕಾಣುತ್ತಿರುವುವು. ನನಗೆ ಪ್ರಿಯವಾದುದೆಲ್ಲವೂ ಕಳೆದುಹೋಯಿತು, ಅಪ್ರಿಯವಾದುದೇ ತಲೆದೋರು ತ್ತಿದೆ; ಧೈರ್ಯವು ಕುಂದುತ್ತಿದೆ. ನಾನು ಇನ್ನು ಬದುಕಿರುವುದರಿಂದ ಪ್ರಯೋಜನವಿಲ್ಲ. ಹಿಂದೆ ಅನುಭವಿಸಿದ ದುಃಖಗಳೆಲ್ಲವೂ ಐಮಡಿಸಿ ಹೊಸ ಹೊಸದಾಗಿ ಅನುಕ್ಷಣವೂ ನೆನಪಿಗೆ ಬರುತ್ತಿವೆ; ಸರ್ವದಾ ಯಮನ ಛಾಯೆಯೇ ಕಣ್ಣಿಗೆ ಬೀಳುತ್ತಿದೆ. ಇನ್ನು ಭೂಮಿಯ ಮೇಲಿರಲು ನನಗಿಚ್ಛೆ ಯಿಲ್ಲ; ಲೌಕಿಕ ಕಾರ್ಯಗಳಲ್ಲಿ ತೊಡಗಲು ನನಗೆ ಉತ್ಸಾಹವಿಲ್ಲ; ರಾಜ ಭವನದಲ್ಲಿರುವ ರಾಜಭೋಗ್ಯವಸ್ತುಗಳನ್ನು ತಿರುಗಿನೋಡಲು ಕೂಡ ನನಗೆ

ಅಭಿಲಾಷೆಯಿಲ್ಲ. ಸೊಸೆಯರಿಬ್ಬರನ್ನೂ ಕೂಡಿ ನಾನು ವನವಾಸಹೋಗು ವೆನು. ಅರಣ್ಯದಲ್ಲಿ ಮೂವರೂ ತಪಸ್ಸುಮಾಡಿ ಸದ್ಗತಿಯನ್ನು ಕಾಣಲು ಯತ್ನಿಸುವೆವು" ಎಂದಳು.

ಭೀಷ್ಮನು ಸತ್ಯವತಿಯಾಡಿದ ಈ ವೈರಾಗ್ಯಭಾವಪೂರ್ಣವಾದ ಮಾತನ್ನು ಕೇಳಿ—"ತಾಯೇ! ನಿನ್ನ ಸಂಕಲ್ಪವು ವಿಹಿತವಾದುದೇ ಸರಿ; ನೀನು ಹಿಡಿಯ ಬೇಕೆಂದಿರುವ ಮಾರ್ಗವು ಯುಕ್ತವಾದುದೇ. ಈ ಕಾಲದಲ್ಲಿ ಸರ್ವರೂ ಧರ್ಮಾನುಶಾಸನವನ್ನು ಉಪೇಕ್ಷಿಸುತ್ತಿರುವರು; ಪಾಪಪ್ರವಾಹವು ಪ್ರಸರಿ ಸುತ್ತಿರುವುದು; ಸರ್ವರೂ ಕಳಂಕಪಂಕದಲ್ಲಿ ಹೇಸದೆ ಮಗ್ನರಾಗುತ್ತಿರುವರು. ಈ ಅವಸ್ಥೆಯಲ್ಲಿ ತಪೋವನವನ್ನು ಆಶ್ರಯಿಸುವುದು ಶ್ರೇಯಸ್ಕರವೇ ಸರಿ. ನಾನಾದರೋ, ದಾರುಣ ಪ್ರತಿಜ್ಞಾಪಾಶದಿಂದ ಬದ್ಧನಾಗಿರುವೆನು, ವನ ವಾಸವು ನನಗೆ ಸಾಧ್ಯವಲ್ಲ. ನಾನು ಪಾಣಿಗ್ರಹಣಕ್ಕೆ ಮಾತ್ರವೇ ಅಲ್ಲದೆ, ಸಿಂಹಾಸನ ಸ್ವೀಕಾರಕ್ಕೂ ಇಷ್ಟಪಡೆನು. ಈ ವಿಶಾಲ ಕುರುರಾಜ್ಯದಲ್ಲಿ, ಮಿಕ್ಕವರಂತೆ ನಾನೂ ಪ್ರಜಾವರ್ಗದಲ್ಲೊಬ್ಬನು. ರಾಜ್ಯಸಂಪದಕ್ಕೆ ನಾನು ಅರ್ಹನಲ್ಲ. ರಾಜಾಜ್ಞೆಯನ್ನು ಮೀರಿ ನಡೆಯಲು ನಾನು ಶಕ್ತನಲ್ಲ. ನಾನು ಕುರುರಾಜನ ಅನ್ನದಿಂದ ಪೋಷಿತನಾದವನು. ಭಕ್ತಿಪೂರ್ವಕವಾಗಿ ಪ್ರಜಾ ಧರ್ಮವನ್ನು ಪಾಲಿಸುವುದೆಷ್ಟೋ ಅಷ್ಟೇ ನನ್ನ ಕೆಲಸವು. ಅನ್ನದಾತನಾದ ಕುರುರಾಜನ ಮಂಗಳವನ್ನು ಸಾಧಿಸುತ್ತಿರುವುದೇ ನನ್ನ ಕರ್ತವ್ಯವು. ನಾನು ಕುರುವಂಶದ ಹಿತವನ್ನು ಬಯಸಿ ಯುಧಿಷ್ಠಿರಾದಿ ಕುಮಾರರನ್ನು ಸಲಹು ತ್ತಿರುವೆನು. ಈ ಕಾರ್ಯವು ನನಗೆ ಕೈಗಟ್ಟಿರುವುದರಿಂದ ನಾನು ತಪಸ್ಸಿಗೆ ಮನಗೊಡದಿದ್ದರೂ ನನಗೆ ಪಾಪಸ್ಪರ್ಶವಾಗದೆಂದು ನಂಬುವೆನು. ನಾನು ತಂದೆಯ ಪ್ರೀತ್ಯರ್ಥವಾಗಿ ಯಾವ ಮಾತಿಗೆ ಕಟ್ಟುಬಿದ್ದಿರುವೆನೋ ಆ ಮಾತನ್ನು ಮೀರದಂತೆ ಕಾರ್ಯಗಳನ್ನು ಮಾಡುತ್ತಿರುವೆನು. ಕಾಯ ಮನೋವಾಕ್ಕುಗಳಿಂದ ಸತ್ಯವನ್ನು ಪಾಲಿಸಿದಲ್ಲಿ ನನಗೆ ಪರಮ ಧರ್ಮ ಲಾಭವುಂಟಾಗುವುದು. ಆ ಧರ್ಮಬಲದಿಂದಲೇ ನಾನು ಸ್ವರ್ಗಕ್ಕೆ ಹೋಗಿ ಅಕ್ಷಯಸಿದ್ಧಿದಾತನಾದ ಪಿತೃದೇವನ ಪಾದವನ್ನು ಸೇರುವೆನು" ಎಂದನು.

ಅನಂತರದಲ್ಲಿ ಸತ್ಯವತಿಯು ತಪೋವನಕ್ಕೆ ಹೋಗಲು ಕೃತನಿಶ್ಚಯೆಯಾಗಿ ಸೊಸೆಯರಿಬ್ಬರಿಗೂ ತನ್ನ ಮನೋಗತವನ್ನು ತಿಳಿಸಿದಳು. ಅಂಬಿಕೆ ಅಂಬಾಲಿಕೆ ಯರಿಬ್ಬರೂ ಅತ್ತೆಯ ಮಾತಿಗೊಡಂಬಟ್ಟರು. ತರುವಾಯ ಸತ್ಯವತಿಯು ಎಲ್ಲರ ಅನುಜ್ಞೆಯನ್ನೂ ಪಡೆದು ಸೊಸೆಯರನ್ನೊಡಗೊಂಡು ಪವಿತ್ರ ಭಾಗೀರಥಿಯ ತೀರದಲ್ಲಿರುವ ತಪೋವನಕ್ಕೆ ಹೊರಟಳು. ಅಲ್ಲಿ ಅವರಿಗೆ

ಪರ್ಣಕುಟೀರವು ರಾಜಭವನವಾಯಿತು; ತೃಣವು ಶಯ್ಯೆಯಾಯಿತು; ವನಜಾತ ಫಲಮೂಲಗಳು ಆಹಾರವಾದುವು. ಈ ಪರಮ ಪವಿತ್ರವಾದ ಪದಾರ್ಥಗಳ ದೆಸೆಯಿಂದ ಸಂತುಷ್ಟರಾಗಿ ಆ ರಾಜಮಹಿಷಿಯರು ಹಸ್ತಿನಾವತಿಯಲ್ಲಿದ್ದ ಆ ಮನೋಹರ ಪ್ರಾಸಾದವನ್ನೂ ದಿವ್ಯ ವಸ್ತುಜಾತಗಳನ್ನೂ ಮರೆತರು. ಅರಣ್ಯಚಾರಿಗಳಾದ ಜಿಂಕೆಗಳೊಡನೆಯೂ ತಪೋವನವಾಸಿಗಳಾದ ಋಷಿಪತ್ನಿಯರೊಡನೆಯೂ ಅವರಿಗೆ ಸ್ನೇಹಭಾವವು ಹುಟ್ಟಿತು. ಆ ರಾಜಮಹಿಷಿಯರು ಪರಮಪಾವನವಾದ ಭಾಗೀರಥಿಯ ತಟದೇಶದಲ್ಲಿ, ಆ ಶಾಂತಿರಸಪೂರ್ಣವಾದ ನಿಕೇತನದಲ್ಲಿ, ಯೋಗಿನಿಗಳಾಗಿ ಪರಮಾತ್ಮನ ಧ್ಯಾನತತ್ಪರರಾಗಿದ್ದು ಕಾಲಕ್ರಮದಲ್ಲಿ ಈ ಪ್ರಾಕೃತ ದೇಹವನ್ನು ಬಿಟ್ಟರು.

ಇತ್ತ, ಹಸ್ತಿನಾಪುರದಲ್ಲಿ ಯುಧಿಷ್ಠಿರಾದಿ ಪಾಂಡವರು ದಿನದಿನಕ್ಕೆ ಬೆಳೆಯುತ್ತಿದ್ದರು. ಆ ಕೂಸುಗಳು ಆಡುತ್ತಿರುವುದನ್ನು ನೋಡುತ್ತ, ಅಸ್ಫುಟವಾದ ಮಧುರಸ್ವರದಲ್ಲಿ, "ಅಮ್ಮಾ! ಅಮ್ಮಾ!" ಎಂದು ತನ್ನನ್ನು ಕರೆಯುವುದನ್ನು ಕೇಳುತ್ತ, ಕುಂತಿಯು ತನ್ನ ದುಃಖವೆಲ್ಲವನ್ನೂ ಮರೆಯುವಳು; ಪ್ರಫುಲ್ಲಹೃದಯೆಯಾಗಿ ಆ ಮಕ್ಕಳನ್ನು ಮುದ್ದಿಟ್ಟುಕೊಳ್ಳುವಳು. ಯುಧಿಷ್ಠಿರ ಭೀಮಾರ್ಜುನರನ್ನು ಹೇಗೆ ಪುತ್ರಸ್ನೇಹದಿಂದ ಕಾಣುತ್ತಿದ್ದಳೋ, ಹಾಗೆ ನಕುಲಸಹದೇವರನ್ನೂ ಸವತಿಯ ಮಕ್ಕಳೆನ್ನದೆ ವಾತ್ಸಲ್ಯದಿಂದ ಕಾಣುತ್ತಿದ್ದಳು. ಅವರೆಲ್ಲರ ತೊದಲ್ನುಡಿಗಳು ಅವಳ ಕಿವಿಯಲ್ಲಿ ಅಮೃತಧಾರೆಯನ್ನು ಕರೆಯುತ್ತಿದ್ದುವು; ಎಲ್ಲರ ಮುಖಾರವಿಂದವೂ ಅವಳ ಹೃದಯದಲ್ಲಿ ವರ್ಣಿಸಲಾಗದ ಸಂತೋಷರಸವು ಉಕ್ಕಿಬರುವಂತೆ ಮಾಡಿತು. ಅಂತು, ಅವರ ಬಾಲಲೀಲೆಯೂ ನಡೆನುಡಿಗಳೂ ಅವಳ ಸಮಸ್ತ ಕಾಯಕ್ಲೇಶ ಮನಃಕ್ಲೇಶಗಳನ್ನೂ ಪರಿಹರಿಸುತ್ತಿದ್ದುವು.

ಭೀಷ್ಮನು ಆ ಅರಸುಮಕ್ಕಳಿಗೆ ಐದು ವರ್ಷ ತುಂಬುತ್ತಲೆ ಯಥಾವಿಧಾನವಾಗಿ ಚೂಡಾಕರ್ಮವನ್ನು ಮಾಡಿಸಿ ಅವರ ಶಿಕ್ಷಣಕ್ಕೆ ತಕ್ಕ ಉಪಾಧ್ಯಾಯರನ್ನು ನಿಯಮಿಸಿದನು. ಹನ್ನೊಂದನೆಯ ವರ್ಷದಲ್ಲಿ ಉಪನಯನ ಸಂಸ್ಕಾರವಾಗಲು, ಅವರು ವೇದಾಧ್ಯಯನವನ್ನು ಮಾಡತೊಡಗಿದರು.

ಆ ರಾಜಕುಮಾರರೊಳಗೆ ಹಿರಿಯಾತನಾದ ಯುಧಿಷ್ಠಿರನು ಉದಾರನು, ಸರಳನು, ಧರ್ಮಜ್ಞನು, ಧರ್ಮಪರಾಯಣನು. ಅವನ ಸರಳಸ್ವಭಾವ, ಶಾಂತಭಾವ, ಸಚ್ಚರಿತ್ರೆ, ಸತ್ಯಸಂಧತೆ, ಇತ್ಯಾದಿ ಸದ್ಗುಣಗಳಿಂದ ಅವನು ಧರ್ಮವೇ ಮಾನುಷರೂಪವನ್ನು ತಾಳಿ ಅವತರಿಸಿದಂತಿದ್ದನು. ಇತ್ತ, ಧೃತರಾಷ್ಟ್ರನ ಸರ್ವಜ್ಯೇಷ್ಠಪುತ್ರ ದುರ್ಯೋಧನನು ಐಶ್ವರ್ಯಲುಬ್ಧನೂ ಅತ್ಯಂತ ಕ್ರೂರನೂ

ಪಾಪಾತ್ಮನೂ ಪಾಪಶೀಲನೂ ಆಗಿದ್ದನು. ಯುಧಿಷ್ಠಿರಾದಿ ಪಾಂಡವರು ನಿಶ್ಚಲವಾದ ಮನಸ್ಸಿನಿಂದ ವೇದಾದಿ ಶಾಸ್ತ್ರಾನುಶೀಲನ ಮಾಡುತ್ತಿದ್ದರು. ಶಾಸ್ತ್ರಜ್ಞಾನದಿಂದ ಅವರಿಗೆ ಧರ್ಮಾಚರಣೆಯಲ್ಲಿ ಅನುರಾಗವು ಹೆಚ್ಚಿತು. ದುರ್ಯೋಧನನಿಗಾದರೋ ಶಾಸ್ತ್ರಾಭ್ಯಾಸದಲ್ಲಿ ಅವರಿಗಿದ್ದಷ್ಟು ಅಕ್ಕರೆ ಇರಲಿಲ್ಲ; ಶಾಸ್ತ್ರತತ್ತ್ವಗಳು ಅವನ ಹೃದಯದಲ್ಲಿ ಎಡೆಗೊಳ್ಳಲಿಲ್ಲ. ಅವನು ಐಶ್ವರ್ಯಮದದಿಂದ ಲೇಶವಾದರೂ ಸಂಕೋಚಪಡದೆ ಗುರುಜನರನ್ನು ತಿರಸ್ಕರಿಸುತ್ತಿದ್ದನು; ಯುಧಿಷ್ಠಿರಾದಿಗಳನ್ನು ದ್ವೇಷಿಸುತ್ತ ಯಾವ ಬಗೆಯಲ್ಲಾದರೂ ಅವರನ್ನು ಕೊಲ್ಲಿಸಬೇಕೆಂಬ ಚಿಂತೆಯಲ್ಲಿಯೇ ಆನಂದಪಡುತ್ತಿದ್ದನು. ಅದರಿಂದ ಕುಂತಿಯು ಕಳವಳಗೊಂಡು ವಿದುರನ ಬಳಿ ತನ್ನ ಸಂಕಟವನ್ನು ಹೇಳಿಕೊಂಡು ಬಹು ದುಃಖಪಡುತ್ತಿದ್ದಳು. ಮಹಾಮತಿಯಾದ ವಿದುರನು ಕುಂತಿಯನ್ನು ಸಂತೈಸಿ ಮಕ್ಕಳನ್ನು ಜೋಕೆಯಿಂದ ಸಾಕುವಂತೆ ಅವಳಿಗೆ ಹೇಳಿದನು; ಅಲ್ಲದೆ, ದುರಾತ್ಮನಾದ ದುರ್ಯೋಧನನು, ಕುಂತಿಯು ತನ್ನನ್ನು ನಿಂದಿಸುತ್ತಿರುವುದನ್ನು ಕಂಡು ಕೋಪಗೊಂಡು, ಕುಂತಿಯ ಕುಮಾರರನ್ನು ಇನ್ನೂ ಅಧಿಕವಾಗಿ ಕಾಡಬಹುದೆಂದು ಹೆದರಿ, ದುರ್ಯೋಧನನನ್ನು ಬಹಿರಂಗವಾಗಿ ದೂರಬೇಡವೆಂದು ಕೂಡ ಅವಳಿಗೆ ಬುದ್ಧಿ ಹೇಳಿದನು. ಇತ್ತ, ಯುಧಿಷ್ಠಿರಾದಿ ಪಾಂಡವರೂ ದುರ್ಯೋಧನನಿಗೆ ವಿರೋಧವಾಗಿ ಯಾವ ಮಾತನ್ನೂ ಆಡದೆ ಆತ್ಮರಕ್ಷಣೆಯ ವಿಷಯದಲ್ಲಿ ಮಾತ್ರ ಜೋಕೆಯಿಂದಿದ್ದರು. ದುರ್ಯೋಧನನ ದುಷ್ಟಬುದ್ಧಿಗೂ ದುರಾಚಾರಕ್ಕೂ ಭೀಷ್ಮನು ಅತ್ಯಂತ ದುಃಖಪಡುತ್ತಿದ್ದನು. ಅವನು ಪಾಂಡವ ಕೌರವರಿಬ್ಬರನ್ನೂ ಸಮದೃಷ್ಟಿಯಿಂದ ನೋಡುತ್ತ ಅವರೆಲ್ಲರಿಗೂ ಸಮನಾಗಿ ಧರ್ಮಶಾಸ್ತ್ರ, ರಾಜನೀತಿ, ಲೋಕವ್ಯವಹಾರ ಮೊದಲಾದ ವಿಷಯಗಳಲ್ಲಿ ಜ್ಞಾನೋತ್ಪತ್ತಿಯಾಗುವಂತೆ ಉಪದೇಶಮಾಡಿದನು. ಅವನ ಉಪದೇಶ ಪ್ರಭಾವದಿಂದ ಯುಧಿಷ್ಠಿರಾದಿಗಳ ಪ್ರಕೃತಿಯು ನಿರ್ಮಲವಾಯಿತು. ಅವರು ಶಾಂತರೂ ತೇಜೋವಂತರೂ ಸುಪಥಗಾಮಿಗಳೂ ಆದರು. ದುರ್ಯೋಧನಾದಿಗಳ ಪ್ರಕೃತಿ ಮಾತ್ರ ನಿರ್ಮಲವಾಗಲಿಲ್ಲ; ಅವರ ದುರಾಶೆ, ಈರ್ಷ್ಯೆ, ದ್ವೇಷ—ಇವೇ ಮೊದಲಾದ ದುಷ್ಪ್ರವೃತ್ತಿಗಳೊಂದೂ ತೊಲಗಲಿಲ್ಲ; ಅವರು ಕುತರ್ಕವನ್ನೂ ಕುಟಿಲಪಥವನ್ನೂ ಬಿಡದೆ ಯಾವಾಗಲೂ ಅಮಂಗಳಾಚರಣೆಯಲ್ಲಿಯೇ ಇರುತ್ತಿದ್ದರು. ಹೀಗೆ, ಗುರೂಪದೇಶವು ಒಂದಾದರೂ, ಪಾತ್ರಭೇದದಿಂದ ಫಲಭೇದವುಂಟಾಯಿತು. ಅಂತು ಕೌರವರ ಉತ್ಕರ್ಷಸಾಧನಕ್ಕಾಗಿ ಭೀಷ್ಮನು ಪಟ್ಟ ಪ್ರಯಾಸವೆಲ್ಲವೂ ಮರುಭೂಮಿಗೆ ಮಾಡಿದ ಕೃಷಿಯಂತಾಯಿತು.

ಒಂದು ದಿನ ರಾಜಕುಮಾರರೆಲ್ಲರೂ ಊರ ಹೊರಗೆ ಹೋಗಿ ಚೆಂಡಾಡುತ್ತಿದ್ದರು. ಚೆಂಡು ಹೋಗಿ ಅಲ್ಲೊಂದು ನೀರಿಲ್ಲದ ಬಾವಿಯಲ್ಲಿ ಬಿದ್ದಿತು. ಹುಡುಗರು ಚೆಂಡನ್ನು ಮೇಲಕ್ಕೆ ತೆಗೆಯಲು ನೋಡಿದರು; ಅವರ ಕೈಯಲ್ಲಾಗಲಿಲ್ಲ. ಆ ವೇಳೆಗೆ ಒಬ್ಬ ವೃದ್ಧಬ್ರಾಹ್ಮಣನು ಆ ಮಾರ್ಗವಾಗಿ ಹೋಗುತ್ತಿದ್ದನು. ಅವನು ಕೃಶಕಾಯನೂ ಕೃಷ್ಣವರ್ಣನೂ ಆಗಿದ್ದನು. ವಯಸ್ಸಾಗಿದ್ದುದರಿಂದ ಅವನ ಕೂದಲು ನರೆತಿದ್ದಿತು. ಅವನು ನೋಡುವುದಕ್ಕೆ ಬಡವನಾಗಿಯೂ ಇದ್ದನು. ಅವನನ್ನು ಕಂಡು ರಾಜಕುಮಾರರೆಲ್ಲರೂ ಹೋಗಿ ಅವನ ಸುತ್ತ ನಿಂತರು. ಆ ಬಡಬ್ರಾಹ್ಮಣನು ಆ ಹುಡುಗರನ್ನು ನೋಡಿ ನಸುನಗುತ್ತ—"ಬಾಲಕರೇ! ನೀವು ಮಹಾ ಪ್ರತಾಪಶಾಲಿಗಳು, ಭರತವಂಶದಲ್ಲಿ ಹುಟ್ಟಿದವರು; ಆದರೂ, ನೀರಿಲ್ಲದ ಬಾವಿಯಲ್ಲಿ ಬಿದ್ದ ಚೆಂಡನ್ನು ತೆಗೆಯಲಾರಿರಲ್ಲ! ನಿಮಗೆ ಸ್ವಲ್ಪವಾದರೂ ಅಸ್ತ್ರಶಿಕ್ಷೆಯಾಗಲಿಲ್ಲವೋ? ನಾನು ಆ ಚೆಂಡನ್ನು ಎತ್ತುವೆನು, ನೋಡಿ" ಎಂದು ತನ್ನ ಬೆರಳಿನಲ್ಲಿದ್ದ ಉಂಗುರವನ್ನು ಕಳಚಿ ಬಾವಿಯೊಳಗೆ ಎಸೆದನು. ಮೊದಲು, ಆ ಮುದುಕನು ಅಪೂರ್ವಕೌಶಲದಿಂದ ದರ್ಭೆಯ ಕೂರ್ಚೆಯನ್ನು ಪ್ರಯೋಗಿಸಿ ಆ ಕ್ರೀಡಾಕಂದುಕವನ್ನು ಮೇಲಕ್ಕೆತ್ತಿದನು. ಆಮೇಲೆ ಬಿಲ್ಲಿಗೆ ಬಾಣಗಳನ್ನು ತೊಡಿಸಿ ಬಾವಿಯೊಳಗೆ ಬಿಟ್ಟನು. ಬಾಣಗಳಿಂದ ಆ ಬ್ರಾಹ್ಮಣನು ಉಂಗುರವನ್ನು ಮೇಲಕ್ಕೆತ್ತಿ ತೆಗೆದುಹಾಕಿದನು. ಆಗ ರಾಜಕುಮಾರರು, ಮಾಸಿದ ಬಟ್ಟೆಯನ್ನುಟ್ಟು ನಿಂತಿದ್ದ ಆ ಕೃಶನಾದ ಬಡಮುದುಕನ ಅಮೋಘ ಶರಸಂಧಾನವನ್ನು ನೋಡಿ ಅವನ ಅಪೂರ್ವ ನಿಪುಣತೆಗೆ ಬೆರಗಾಗಿ ಒಬ್ಬರ ಮೊಗವನ್ನೊಬ್ಬರು ನೋಡತೊಡಗಿದರು. ಅವರೊಳಗೆ ಸರ್ವಜ್ಯೇಷ್ಠನಾದ ಯುಧಿಷ್ಠಿರನು ಕೈಮುಗಿದು ನಿಂತು—"ಆರ್ಯರೇ! ತಮ್ಮ ಸಾಮರ್ಥ್ಯವನ್ನು ನೋಡಿದೆನು. ಈ ಕಾರ್ಯವು ಇನ್ನಾರಿಗೂ ಸಾಧ್ಯವಲ್ಲ. ತಮ್ಮ ಜಾಣ್ಮೆಯಿಂದ ನನಗೆ ವಿಸ್ಮಯವಾಗುತ್ತಿದೆ. ನಾನು ತಮ್ಮ ಪರಿಚಯವನ್ನು ಬಯಸುತ್ತಿದ್ದೇನೆ. ಯಾವ ಆಕ್ಷೇಪಣೆಯೂ ಇಲ್ಲವಾದರೆ ತಾವಾರೋ ಅಪ್ಪಣೆಕೊಡಿಸಿದಲ್ಲಿ ನಾನು ಕೃತಾರ್ಥನಾಗುವೆನು" ಎಂದನು.

ಆ ವೃದ್ಧನು, ಎತ್ತಿಕೊಳ್ಳುತ್ತಲೆ ತನ್ನ ಪರಿಚಯವನ್ನು ಮಾಡಿಕೊಡದೆ, ಚಾತುರ್ಯದಿಂದ—"ವತ್ಸ! ನೀನು ಭೀಷ್ಮನ ಹತ್ತಿರ ಹೋಗಿ ನನ್ನ ಆಕಾರಪ್ರಕಾರವನ್ನು ಅವನಿಗೆ ತಿಳಿಸಿ, ನಾನು ಇಲ್ಲಿರುವೆನೆಂದು ಹೇಳು" ಎಂದನು.

ಆ ಬ್ರಾಹ್ಮಣನು ಹೇಳಿದ ಹಾಗೆಯೇ ಯುಧಿಷ್ಠಿರನು ತಮ್ಮಂದಿರೊಡಗೂಡಿ ಮನೆಗೆ ಹೋಗಿ ಭೀಷ್ಮನ ಸಂಗಡ ಇಂತೆಂದು ಹೇಳಿದನು:—"ಆರ್ಯನೇ!

ನಾವು ಊರಹೊರಗೆ ಚೆಂಡಾಡುತ್ತಿದ್ದೆವು. ಚೆಂಡು ಒಂದು ಹಾಳುಬಾವಿಗೆ ಹೋಗಿ ಬಿದ್ದಿತು. ಏನ ಮಾಡಿದರೂ ಚೆಂಡನ್ನು ಮೇಲಕ್ಕೆತ್ತುವುದಕ್ಕೆ ನಮ್ಮಿಂದಾಗಲಿಲ್ಲ. ಆ ಮಾರ್ಗವಾಗಿ ಹೋಗುತ್ತಿದ್ದ ಒಬ್ಬ ಬಡಬ್ರಾಹ್ಮಣ ನನ್ನು ಕೂಗಿ ಕೇಳಿಕೊಂಡೆವು. ಅವನು ಆ ಚೆಂಡನ್ನು ಒಂದು ಹಿಡಿ ದರ್ಭೆ ಯಿಂದ ಮೆಲಕ್ಕೆತ್ತಿಕೊಟ್ಟನು. ಅಲ್ಲದೆ, ತನ್ನ ಉಂಗುರವನ್ನು ಬಾವಿಯೊಳಗೆ ಹಾಕಿ, ಬಾಣಗಳನ್ನು ಬಿಟ್ಟು ಅದನ್ನು ಮೇಲಕ್ಕೆತ್ತಿ ತೋರಿಸಿದನು. ಆತನ ಕೌಶಲಕ್ಕೆ ನಾವು ಬೆರಗಾಗಿ ಆತನ ಪೂರ್ವೋತ್ತರವನ್ನು ವಿಚಾರಮಾಡಲು, ಅದೊಂದನ್ನೂ ಹೇಳದೆ, ತನ್ನ ರೂಪಗುಣಾದಿಗಳನ್ನು ನಿನಗೆ ವಿವರಿಸುವಂತೆ ಹೇಳಿ ನಮ್ಮನ್ನು ಕಳುಹಿಸಿಬಿಟ್ಟನು. ಆ ಬ್ರಾಹ್ಮಣನು ಕಪ್ಪಗಿದ್ದಾನೆ, ಕೂದಲು ನರೆತಿದೆ, ಅವನ ಮಾಸಿದ ಬಟ್ಟೆಗಳನ್ನು ನೋಡುವಲ್ಲಿ ಬಡವನಾಗಿ ತೋರು ವನು. ಅವನ ರೂಪವನ್ನಾಗಲಿ ವೇಷವನ್ನಾಗಲಿ ನೋಡಿದ ಮಾತ್ರಕ್ಕೆ ಅವನ ಸಾಮರ್ಥ್ಯವು ತಿಳಿಯಬರುವುದಿಲ್ಲ. ಆ ಚತುರ ಬ್ರಾಹ್ಮಣನು ಊರಿನಾಚೆ ಇರುವನು."

ಯುಧಿಷ್ಠಿರನ ಮಾತನ್ನು ಕೇಳುತ್ತಲೆ ಭೀಷ್ಮನು ಆ ಬ್ರಾಹ್ಮಣನು ಧನು ರ್ವೇದ ವಿಶಾರದನಾದ ದ್ರೋಣಾಚಾರ್ಯನೆಂದು ತಿಳಿದುಕೊಂಡನು. ಕುರು ಪಿತಾಮಹನು ರಾಜಪುತ್ರರ ಶಿಕ್ಷಣಾರ್ಥವಾಗಿ ತಕ್ಕ ಗುರುವನ್ನಿಡಬೇಕೆಂದು ಯೋಚಿಸುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ದ್ರೋಣಾಚಾರ್ಯನು ಬಂದು ದನ್ನು ತಿಳಿದು ಸಂತೋಷಿಸಿ ಅವನಿದ್ದೆಡೆಗೆ ಹೋಗಿ, ಅವನನ್ನು ಕಂಡು ಯಥೋ ಚಿತ ಮರ್ಯಾದೆಯಿಂದ ರಾಜಮಂದಿರಕ್ಕೆ ಕರೆದುಕೊಂಡು ಬಂದು ಸತ್ಕರಿಸಿ ಇಂತೆಂದನು:—"ಪೂಜ್ಯರೇ? ನಾನು ರಾಜಕುಮಾರರನ್ನು ಧನುರ್ವೇದ ಕುಶಲ ರಾದ ಶಿಕ್ಷಕರ ಬಳಿಗೆ ಕಳುಹಿಸಬೇಕೆಂದು ಯೋಚಿಸುತ್ತಿದ್ದೆನು. ಭಾಗ್ಯವಶದಿಂದ ಈ ಸಮಯಕ್ಕೆ ಸರಿಯಾಗಿ ನನಗೆ ತಮ್ಮ ದರ್ಶನವು ಲಭಿಸಿತು. ತಾವು ಅಕಸ್ಮಾತ್ತಾಗಿ ದಯಮಾಡಿ ನನ್ನನ್ನು ಕೃತಾರ್ಥನನ್ನು ಮಾಡಿದಿರಿ. ಈಗ ತಾವು ಅನುಗ್ರಹಪೂರ್ವಕವಾಗಿ ಈ ರಾಜಕುಮಾರರ ಅಸ್ತ್ರಶಿಕ್ಷಣ ಭಾರವನ್ನು ವಹಿಸಿ ಭರತವಂಶದ ಮಂಗಳಸಾಧನವನ್ನು ಮಾಡಬೇಕೆಂದು ಬೇಡುತ್ತೇನೆ. ಕುಮಾರರು ನಿರಂತರದಲ್ಲೂ ತಮ್ಮ ಆಜ್ಞೆಯಂತೆ ನಡೆದುಕೊಳ್ಳುವರು; ಕೌರವ ರೆಲ್ಲರೂ ತಮಗೆ ಸಂತೋಷವಾಗುವಂತೆ ವರ್ತಿಸುವರು. ರಾಜಸೇವಕರು ತಮಗೆ ಅಭೀಷ್ಟಪದಾರ್ಥಗಳನ್ನು ತಂದೊದಗಿಸುವುದಕ್ಕೆ ಸಿದ್ಧರಾಗಿರುವರು. ತಮಗೆ ಯಾವಾಗ ಏನು ಬೇಕೋ ಆ ಕ್ಷಣವೇ ಅದನ್ನು ತರಿಸಿಕೊಂಡು ಸುಖವಾಗಿರ ಬಹುದು."

ಭೀಷ್ಮನ ಶಿಷ್ಟಾಚಾರದಿಂದಲೂ ಸೌಜನ್ಯದಿಂದಲೂ ದ್ರೋಣಾಚಾರ್ಯನು ಪರಿತುಷ್ಟನಾಗಿ ರಾಜಪುತ್ರರ ಶಿಕ್ಷಣಭಾರವನ್ನು ವಹಿಸಲು ಸಮ್ಮತಿಸಿದನು. ಭೀಷ್ಮನು ಶುಭದಿನ ಶುಭಮುಹೂರ್ತದಲ್ಲಿ ಕುಮಾರರನ್ನು ಅಸ್ತ್ರವಿದ್ಯಾಭ್ಯಾಸಕ್ಕಾಗಿ ದ್ರೋಣಾಚಾರ್ಯನ ವಶಮಾಡಿದನು. ದ್ರೋಣಾಚಾರ್ಯನೂ ಅವರನ್ನು ಅಂತೇವಾಸಿಗಳನ್ನಾಗಿ ಸ್ವೀಕರಿಸಿ, ಅವರಿಗೆ ಯಥಾವಿಧಾನವಾಗಿ ಧನುರ್ವಿದ್ಯೆಯನ್ನು ಕಲಿಸತೊಡಗಿದನು.

ದ್ರೋಣಾಚಾರ್ಯನು ಹಸ್ತಿನಾಪುರದಲ್ಲಿದ್ದುಕೊಂಡು ಕುರುವಂಶದ ರಾಜಕುಮಾರರಿಗೆ ಅಸ್ತ್ರವಿದ್ಯೆಯನ್ನು ಕಲಿಸುತ್ತಿರುವ ವಿಧಾನವನ್ನು ಕೇಳಿ ಸೂತನ ಮಗ ಕರ್ಣನೂ ಮತ್ತೆ ಕೆಲವರು ರಾಜಕುಮಾರರೂ ಆ ವಿದ್ಯೆಯನ್ನು ಕಲಿಯಲಿಕ್ಕೆ ಆಚಾರ್ಯನಲ್ಲಿಗೆ ಹೋದರು. ಆತನ ಶಿಷ್ಯಸಂಖ್ಯೆಯು ಹೆಚ್ಚಿತು. ಆತನ ಶಿಕ್ಷಣಕ್ರಮದ ಖ್ಯಾತಿಯನ್ನು ಲೋಗರು ಹೊಗಳಲಾರಂಭಿಸಿದರು. ಕೀರ್ತಿಯ ಹಿಂದೆಯೇ ಸನ್ಮಾನವೂ ಸಂಪತ್ತೂ ಬರಲಾರಂಭಿಸಿದುವು. ಕೆಲವು ದಿನಗಳ ಹಿಂದೆ ದ್ರೋಣಾಚಾರ್ಯನು ಅರ್ಥಾಭಾವದಿಂದ ಅನ್ನಕ್ಕೆ ಕಷ್ಟಪಡುತ್ತಿದ್ದನು; ಈಗ ಅವನು ಧರ್ಮಾತ್ಮ ಭೀಷ್ಮನ ಅನುಗ್ರಹದಿಂದ ರಾಜಭೋಗ್ಯ ವಸ್ತುಗಳನ್ನು ಉಪಭೋಗಿಸುವಂತಾಯಿತು. ದೀಪ್ತಿಮಯ ಮಣಿಯು ರಾಜಾಧಿರಾಜನ ಕಿರೀಟವನ್ನಲಂಕರಿಸಿದರೂ ಅದು ರತ್ನಪರೀಕ್ಷೆ ಬಲ್ಲವನ ಕೈಸೇರದ ಪಕ್ಷದಲ್ಲಿ ಅದರ ಮಹತ್ತು ಗೋಚರವಾಗದು; ಪೃಥ್ವೀಪತಿಯ ಲಲಾಟದೇಶದಲ್ಲಿ ಅದಕ್ಕೆ ಸ್ಥಾನವೂ ದೊರೆಯದು; ಗುಣಗ್ರಾಹಿಗಳ ಅಭಾವದಿಂದ ಆದರಿಸುವರಿಲ್ಲದೆ ಅದು ತಿಮಿರಮಯವಾದ ಗಣಿಯ ಗರ್ಭದಲ್ಲಿಯೇ ಬಿದ್ದಿರುವುದು. ಹಾಗೆಯೇ, ಭೀಷ್ಮನು ಗುಣಗ್ರಾಹಿಯಲ್ಲದಿದ್ದಲ್ಲಿ, ಅವನು ಗುಣವನ್ನು ಕಂಡು ಗೌರವಿಸದಿದ್ದ ಪಕ್ಷದಲ್ಲಿ, ದ್ರೋಣಾಚಾರ್ಯನು ಅಜ್ಞಾತನಾಗಿರುತ್ತಿದ್ದನು; ಅಸ್ತ್ರವಿದ್ಯೆಯಲ್ಲಿ ಅವನಿಗಿದ್ದ ನಿಪುಣತೆಯು ಅವನ ಸಂಗಡಲೇ ಹೋಗುತ್ತಿದ್ದಿತು. ಜನರು ಅವನ ಅಪೂರ್ವ ತೇಜಸ್ಸನ್ನು ಕಂಡು ಆಹ್ಲಾದಪಡುವುದಕ್ಕಾಗಲಿ, ಅವನ ಅಸ್ತ್ರಚಾಲನ ಶಕ್ತಿಯನ್ನು ನೋಡಿ ವಿಸ್ಮಯಪಡುವುದಕ್ಕಾಗಲಿ, ಅವನ ಶಿಕ್ಷಾಪದ್ಧತಿಯನ್ನು ಗ್ರಹಿಸಿ ಪ್ರಶಂಸಿಸುವುದಕ್ಕಾಗಲಿ ಅವಕಾಶವಿರುತ್ತಿರಲಿಲ್ಲ. ಭೀಷ್ಮನ ಉದಾರ ಸ್ವಭಾವದಿಂದಲೂ ಗುಣಗ್ರಹಣ ಶಕ್ತಿಯಿಂದಲೂ ಆಚಾರ್ಯನ ಬಡತನವು ಹರಿಯಿತು. ಅವನ ಕೀರ್ತಿಯು ದಿಕ್ತಟಕ್ಕೆ ಹಬ್ಬಿತು. ಅವನು ತನ್ನ ಅವಸ್ಥೆಯ ಪರಿವರ್ತನದಿಂದ ಸಂತುಷ್ಟನಾಗಿ ಶಿಷ್ಯರಿಗೆ ಅಸ್ತ್ರವಿದ್ಯೆಯನ್ನು ಪ್ರೀತಿಪೂರ್ವಕವಾಗಿ ಹೇಳಿಕೊಡುತ್ತಿದ್ದನು.

ಧನುರ್ವಿದ್ಯೆಯಲ್ಲಿ ಅರ್ಜುನನು ಉತ್ತರೋತ್ತರಾಭಿವೃದ್ಧಿಯನ್ನು ಹೊಂದುತ್ತ ಶಿಷ್ಯರೊಳಗೆಲ್ಲ ಅಧಿಕನೆನಿಸಿಕೊಂಡನು. ಸೂತತನಯನಾದ ಕರ್ಣನು ದುರ್ಯೋಧನಾದಿಗಳ ಆಶ್ರಯದಲ್ಲಿದ್ದು, ಅವರ ಸಹವಾಸದಿಂದ ಅವರ ಪಕ್ಷವನ್ನು ವಹಿಸಿ, ಪಾಂಡವರನ್ನು ದ್ವೇಷಿಸುತ್ತಲೂ ಅವಮಾನಪಡಿಸುತ್ತಲೂ ಇದ್ದನು. ಧನುರ್ವಿದ್ಯೆಯಲ್ಲಿ ಅರ್ಜುನನ ಕೌಶಲವನ್ನು ನೋಡಿ ಅವನು ಸೈರಿಸದಿದ್ದನೇ ಹೊರತು ಅವನನ್ನು ಮೀರಿಸಲಾರದೆ ಹೋದನು. ದ್ರೋಣಾಚಾರ್ಯನು ಅರ್ಜುನನ ಶರಸಂಧಾನ ಕೌಶಲವನ್ನೂ ಹಸ್ತಲಾಘವವನ್ನೂ ನೋಡಿ ಸುಪ್ರೀತನಾಗುತ್ತಿದ್ದನು. ಆಚಾರ್ಯನ ಉಪದೇಶವು ಸತ್ಪಾತ್ರದಲ್ಲಿ ವಿನಿಯೋಗವಾದುದರಿಂದ ಸರ್ವಾಂಶದಲ್ಲಿಯೂ ಸಫಲವಾಯಿತು. ಅರ್ಜುನನು ಶರ ಸಂಧಾನ ಪ್ರಯೋಗ ಸಂಹಾರಗಳಲ್ಲಿ ಗುರುವಿಗೆ ಸಮನೆನಿಸಿದನು. ಅವನು ಅಸದೃಶ ಚಾತುರ್ಯದಿಂದ ಬಿಲ್ಲಿಗೆ ಬಾಣವನ್ನು ತೊಡಿಸುವನು; ಅಸಾಧಾರಣ ಕ್ಷಿಪ್ರಕಾರಿತೆಯಿಂದ ಬಾಣವನ್ನು ಪ್ರಯೋಗಮಾಡುವನು; ಅವ್ಯರ್ಥಸಂಧಾನ ದಿಂದ ಗುರಿಯಿಟ್ಟು ಕೃತಕಾರ್ಯನಾಗುವನು; ಬಂದ ಬಾಣಗಳನ್ನು ನಿಮಿಷ ಮಾತ್ರದಲ್ಲಿ ಸಂಹಾರಮಾಡುವನು. ಇದೆಲ್ಲವನ್ನೂ ಕಂಡು ಅವನ ಸತೀರ್ಥರು ಆಶ್ಚರ್ಯಪಡುವರು; ಆಚಾರ್ಯನು ತಾನು ಕೃತಾರ್ಥನಾದೆನೆನ್ನುವನು.

ಒಂದು ದಿನ ದ್ರೋಣಾಚಾರ್ಯನು ಶಿಷ್ಯರ ಲಕ್ಷ್ಯಭೇದ ಕೌಶಲವನ್ನು ಪರೀಕ್ಷಿಸಬೇಕೆಂದು ಒಂದು ಮರದ ಕೊಂಬೆಯ ಮೇಲೆ ಕೃತ್ರಿಮ ನೀಲ ಪಕ್ಷಿಯನ್ನು ಇಡಿಸಿ ಶಿಷ್ಯರೆಲ್ಲರನ್ನೂ ಕರೆದು—"ನೀವು ಬಿಲ್ಲಿಗೆ ಅಂಬನ್ನು ತೊಡಿಸಿ ಸಿದ್ಧರಾಗಿರಿ; ನಾನು ಒಬ್ಬೊಬ್ಬರನ್ನಾಗಿ ಕರೆದು ಆಜ್ಞೆಯನ್ನು ಕೊಡುವೆನು; ಆಜ್ಞೆಯನ್ನು ಕೊಡುತ್ತಲೆ ಮರದ ಮೇಲಿರುವ ಪಕ್ಷಿಯ ತಲೆಯನ್ನು ಹೊಡೆದು ಕೆಡವಿರಿ" ಎಂದನು. ಆಚಾರ್ಯನ ಅಪ್ಪಣೆಯ ಪ್ರಕಾರವಾಗಿ ಮೊದಲು ಯುಧಿಷ್ಠಿರನು ಬಿಲ್ಲಿಗೆ ಬಾಣವನ್ನೇರಿಸಿ ಪಕ್ಷಿಗೆ ಗುರಿಯಿಟ್ಟು ನಿಂತನು. ಆಚಾರ್ಯನು ಯುಧಿಷ್ಠಿರನನ್ನು ಸಂಬೋಧಿಸಿ—"ಎಲೈ, ವತ್ಸ! ಮರದ ಮೇಲಿರುವ ಪಕ್ಷಿಯನ್ನು ನೋಡುತ್ತೀಯೋ?" ಎಂದನು. ಯುಧಿಷ್ಠಿರನು ನೋಡುತ್ತೇನೆಂದನು. ದ್ರೋಣಾಚಾರ್ಯನು—"ಈ ಮರವನ್ನೂ ನನ್ನನ್ನೂ ನಿನ್ನ ತಮ್ಮಂದಿರನ್ನೂ ನೋಡುತ್ತೀಯೋ?" ಎಂದು ಮತ್ತೆ ಯುಧಿಷ್ಠಿರನನ್ನು ಕೇಳಿದನು. ಅದಕ್ಕವನು "ಈ ಮರವನ್ನೂ ತಮ್ಮನ್ನೂ ತಮ್ಮಂದಿರನ್ನೂ ವೃಕ್ಷದ ಮೇಲಿರುವ ಪಕ್ಷಿಯನ್ನೂ ನೋಡುತ್ತೇನೆ" ಎಂದನು. ಆಚಾರ್ಯನು ಅದನ್ನು ಕೇಳಿ ವಿಷಣ್ಣಮುಖನಾಗಿ—"ವತ್ಸ! ನೀನು ಗುರಿಯಿಡಲಾರೆ, ಇತ್ತ ಬಾ". ಎಂದನು.

ತರುವಾಯ, ದುರ್ಯೋಧನಾದಿಗಳು ಪರೀಕ್ಷಾರ್ಥವಾಗಿ ಒಬ್ಬೊಬ್ಬರಾಗಿ ಹೋಗಿ ನಿಂತರು. ಅವರೊಳಗಾರೂ ಆಚಾರ್ಯನು ಕೋರಿದ ಉತ್ತರವನ್ನು ಕೊಡಲರಿಯದೆ ಹೋದರು. ಕಟ್ಟಕಡೆಗೆ ಆಚಾರ್ಯನು ಮುಗುಳುನಗೆಯಿಂದ ಅರ್ಜುನನನ್ನು ಕರೆದು—"ಎಲೈ ವತ್ಸನೇ! ಈ ಸಾರಿ ನೀನು ಲಕ್ಷ್ಯಭೇದವನ್ನು ಮಾಡು; ಬಿಲ್ಲಿಗೆ ಬಾಣವನ್ನು ತೊಡಿಸಿ ಇಲ್ಲಿ ಬಂದು ನಿಲ್ಲು" ಎಂದನು. ಅರ್ಜುನನು ಗುರುವಿನ ಆಜ್ಞಾನುಸಾರವಾಗಿ ಧನುಸ್ಸಿಗೆ ಬಾಣವನ್ನೇರಿಸಿ ಪಕ್ಷಿಯ ತಲೆಗೆ ಗುರಿಯಿಟ್ಟು ನಿಂತನು. ಆಗ ದ್ರೋಣಾಚಾರ್ಯನು ಮೊದಲಿನಂತೆಯೇ, "ವತ್ಸನೇ! ವೃಕ್ಷವನ್ನೂ ವೃಕ್ಷದ ಮೇಲಿರುವ ಪಕ್ಷಿಯನ್ನೂ ನನ್ನನ್ನೂ ನಿನ್ನ ಅಣ್ಣತಮ್ಮಂದಿರನ್ನೂ ನೋಡುತ್ತೀಯೋ?" ಎಂದು ಕೇಳಿದನು. ಅದಕ್ಕೆ ಅರ್ಜುನನು—"ಸ್ವಾಮೀ! ನಾನು ವೃಕ್ಷವನ್ನು ಕಾಣೆನು; ತಾವು ನನ್ನ ದೃಷ್ಟಿಗೆ ಬೀಳುವದಿಲ್ಲ; ಅಣ್ಣತಮ್ಮಂದಿರೂ ಕಣ್ಣಿಗೆ ಕಾಣಿಸರು; ಪಕ್ಷಿಯೊಂದೇ ಕಾಣಿಸುತ್ತಿರುವದು" ಎಂದು ಉತ್ತರವನ್ನು ಕೊಟ್ಟನು. ಆಚಾರ್ಯನು ಆ ಉತ್ತರವನ್ನು ಕೇಳಿ ಆಹ್ಲಾದಭರಿತನಾಗಿ—"ಪಕ್ಷಿಯ ಅವಯವಗಳೆಲ್ಲವೂ ಕಾಣಿಸುತ್ತಿವೆಯೋ?" ಎಂದು ಕೇಳಿದುದಕ್ಕೆ, ನಿಮಿಷಮಾತ್ರದಲ್ಲಿ ಅರ್ಜುನನು—"ಇಲ್ಲ, ಅದರ ತಲೆಯೊಂದೇ ನನ್ನ ಕಣ್ಣಿಗೆ ಕಾಣುತ್ತಿದೆ" ಎಂದನು. ಆಚಾರ್ಯನು ಪರಮಸಂತೋಷವನ್ನು ಹೊಂದಿ ಬಾಣಪ್ರಯೋಗ ಮಾಡೆಂದನು. ಅರ್ಜುನನು ಗುರುವಿನ ಬಾಯಿಂದ ಮಾತು ಹೊರಟಿತೋ ಇಲ್ಲವೋ ಲಕ್ಷ್ಯಕ್ಕೆ ಬಾಣವನ್ನು ಬಿಟ್ಟನು. ಪಕ್ಷಿಯ ತಲೆಯು ಕಳಚಿಬಿದ್ದಿತು. ಸತೀರ್ಥ್ಯರು ಅರ್ಜುನನ ಜಾಣತನಕ್ಕೆ ಬೆರಗಾದರು. ಅಸ್ತ್ರಪರೀಕ್ಷೆಯಲ್ಲಿ ಅರ್ಜುನನು ಗೆದ್ದುದನ್ನು ಕಂಡು ಆಚಾರ್ಯ ದ್ರೋಣನು ಅವನೇ ಸರ್ವೋತ್ಕೃಷ್ಟ ಧನುರ್ಧರನೆಂದೆಣಿಸಿದನು. ದ್ರೋಣಾಚಾರ್ಯನ ಶಿಷ್ಯಮಂಡಲಿಯಲ್ಲಿ ಅರ್ಜುನನು ಧನುರ್ಧರನೆನಿಸಿಕೊಂಡಂತೆಯೇ ಖಡ್ಗಪ್ರಯೋಗದಲ್ಲಿಯೂ ರಥಯುದ್ಧದಲ್ಲಿಯೂ ಕೂಡ ಪಾರದರ್ಶಿಯೆನಿಸಿಕೊಂಡನು. ಯುಧಿಷ್ಠಿರನು ಉತ್ಕೃಷ್ಟರಥಿಯಾದನು. ಪ್ರಚಂಡ ಬಲಶಾಲಿಯಾದ ಭೀಮಸೇನನು ಗದಾಯುದ್ಧಕ್ರಮವನ್ನು ಕಲಿತು ಅದರಲ್ಲಿ ಸಮಧಿಕ ಪ್ರಸಿದ್ಧಿಯನ್ನು ಸಂಪಾದಿಸಿದನು. ನಕುಲ ಸಹದೇವರು ಖಡ್ಗಪ್ರಯೋಗದಲ್ಲಿ ಚತುರರಾದರು. ದುರ್ಯೋಧನನು ಗದಾಪ್ರಯೋಗದಲ್ಲಿ ನಿಪುಣನಾದನು. ಬುದ್ಧಿ, ಉತ್ಸಾಹ, ತೇಜಸ್ವಿತೆಗಳಲ್ಲಿ ಅರ್ಜುನನೇ ಶ್ರೇಷ್ಠಪದವನ್ನು ಪಡೆದನು; ಅಸ್ತ್ರವಿದ್ಯೆಯಲ್ಲಿ ಯಾರೂ ಅವನಿಗೆ ಸಾಟಿಯಿರಲಿಲ್ಲ. ಆಚಾರ್ಯನು ಅರ್ಜುನನ ಅನುಪಮ ಗುರುಭಕ್ತಿಯನ್ನೂ ಅಸ್ತ್ರವಿದ್ಯೆಯಲ್ಲಿ

ಅವನ ಅಸಾಮಾನ್ಯ ಪಾರದರ್ಶಿತೆಯನ್ನೂ ಮೆಚ್ಚಿ—"ವತ್ಸ! ಈ ಲೋಕದಲ್ಲಿ ಯಾವ ಧನುರ್ಧರರೂ ನಿನಗೆ ಸಮಾನರಲ್ಲ" ಎಂದು ಅವನನ್ನು ಹೊಗಳಿದನು.

ಕುಮಾರರು ವಿಧಿವತ್ತಾಗಿ ಶಿಕ್ಷೆಯನ್ನು ಪಡೆದು ಅಸ್ತ್ರಪ್ರಯೋಗದಲ್ಲಿ ನಿಪುಣರಾಗಿರುವ ಸಂಗತಿಯನ್ನು ಭೀಷ್ಮನು ದ್ರೋಣಾಚಾರ್ಯನ ಮುಖ ದಿಂದ ಕೇಳಿ ನಿರತಿಶಯವಾಗಿ ಆನಂದಪಟ್ಟು ಆಚಾರ್ಯನನ್ನು ಕುರಿತು ವಿನಯ ಪೂರ್ವಕವಾಗಿಂತೆಂದನು—"ಸ್ವಾಮಿ! ತಮ್ಮ ಅನುಗ್ರಹದಿಂದ ನಾನು ಕೃತಾರ್ಥನಾದೆನು. ತಾವು ರಾಜಕುಮಾರರಿಗೆ ವಿದ್ಯಾದಾನಮಾಡಿ ನಮ್ಮ ಕುಲಕ್ಕೆ ಪರಮೋಪಕಾರವನ್ನು ಮಾಡಿದಿರಿ. ತಮ್ಮ ಶಿಕ್ಷಾದಾನ ಕೌಶಲ ದಿಂದಲೂ ಧನುರ್ವೇದ ಪಾರದರ್ಶಿತೆಯಿಂದಲೂ ಕುಮಾರರಿಗೆ ಸಮೀಚೀನ ವಾಗಿ ಶಿಕ್ಷೆಯಾಗಿದೆಯೆಂಬುದಕ್ಕೆ ಸಂದೇಹವಿಲ್ಲ. ತಾವು ಧೃತರಾಷ್ಟ್ರನಿಗೆ ಈ ವಿಷಯವನ್ನು ತಿಳಿಸಿ ಕುಮಾರರ ಅಸ್ತ್ರಕ್ರೀಡಾಪ್ರದರ್ಶನವಾಗುವುದಕ್ಕೆ ಮಹಾರಾಜನ ಅನುಮತಿಯನ್ನು ಪ್ರಾರ್ಥಿಸಿರಿ. ರಾಜನ ಅಪ್ಪಣೆಯಿಲ್ಲದೆ ಆ ಕಾರ್ಯವನ್ನು ನಡೆಯಿಸಲಾಗದು."

ಭೀಷ್ಮನು ಹೇಳಿದಂತೆ ದ್ರೋಣಾಚಾರ್ಯನು ಧೃತರಾಷ್ಟ್ರನ ಬಳಿಗೆ ಹೋಗಿ, ಭೀಷ್ಮ ವಿದುರಾದಿಗಳ ಸಮಕ್ಷದಲ್ಲಿ ಧೃತರಾಷ್ಟ್ರನನ್ನು ಸಂಬೋ ಧಿಸಿ—"ಮಹಾರಾಜ! ಕುಮಾರರು ಧನುರ್ವೇದದಲ್ಲಿ ಕೃತವಿದ್ಯರಾಗಿರುವರು. ಅಪ್ಪಣೆಯಾದರೆ, ಅವರವರ ಕೌಶಲವನ್ನು ತೋರಿಸುವರು" ಎಂದನು.

ಅದಕ್ಕೆ ಧೃತರಾಷ್ಟ್ರನು—"ಸ್ವಾಮಿ! ತಾವು ನಮಗೊಂದು ಮಹ ತ್ಕಾರ್ಯವನ್ನು ಸಾಧಿಸಿಕೊಟ್ಟಿರಿ. ಕುಮಾರರು ತಮ್ಮ ಅನುಗ್ರಹದಿಂದ ನಮ್ಮ ಮಂಡಲಿಯಲ್ಲಿ ಪ್ರಾಜ್ಞರಾದರು. ಬಾಲಕರ ಅಸ್ತ್ರಕೌಶಲಪ್ರದರ್ಶನಕ್ಕೆ ಯಾವ ಸ್ಥಲದಲ್ಲಿ ಯಾವ ಮಾದರಿಯ ರಂಗಭೂಮಿಯನ್ನು ಕಟ್ಟಬೇಕೋ ಅಪ್ಪಣೆಯಾದರೆ ತಮ್ಮ ಆಜ್ಞೆಯಂತೆ ನಡೆಯಿಸುವೆನು. ನನಗೆ ಕಣ್ಣಿಲ್ಲದೆ ಹೋಯಿತಲ್ಲಾ ಎಂದು ಈ ದಿನ ನಾನು ಪರಿತಾಪಪಡಬೇಕಾಗಿದೆ. ಮಾಡುವು ದೇನು? ನನಗೆ ಕುಮಾರರ ಕೌಶಲವನ್ನು ಕಣ್ಣಿಂದ ನೋಡುವ ಪ್ರಾಪ್ತಿಯಿಲ್ಲ; ನೋಡುವವರಿಂದ ವೃತ್ತಾಂತವನ್ನು ಕೇಳಿ ಸಂತೋಷಪಡುವೆನು" ಎಂದು ಆಚಾರ್ಯನ ಆಜ್ಞಾನುಸಾರವಾಗಿ ರಂಗಭೂಮಿಯನ್ನು ಕಟ್ಟಿಸುವಂತೆ ಧರ್ಮ ವತ್ಸಲ ವಿದುರನಿಗೆ ಹೇಳಿದನು.

ವಿದುರನು ರಾಜಾಜ್ಞೆಯು ಶಿರೋಧಾರ್ಯವೆಂದು, ಆಚಾರ್ಯನು ಸಂಕಲ್ಪಿ ಸಿದ್ದ ಮೇರೆಗೆ ಅವನು ತೋರಿಸಿದ ಎಡೆಯಲ್ಲಿ ವಿಸ್ತಾರವಾದ ರಂಗಭೂಮಿ ಯನ್ನು ಕಟ್ಟಿಸಿದನು. ಅಲ್ಲಿ, ಪ್ರೇಕ್ಷಾಗಾರವು ಚಿತ್ರವಿಚಿತ್ರವಾದ ಶಿಲ್ಪ

ಕಾರ್ಯದಿಂದಲೂ ನಾನಾ ವರ್ಣದ ಮಣಿಗಳಿಂದಲೂ ಶೋಭಿಸುತ್ತಿದ್ದಿತು. ಆಯಾ ಶ್ರೇಣಿಯ ಪ್ರೇಕ್ಷಕರಿಗೆ ತಕ್ಕಹಾಗೆ ಬೇರೆ ಬೇರೆಯ ಸ್ಥಲವು ಏರ್ಪಟ್ಟಿತು. ದ್ರೋಣಾಚಾರ್ಯನು ಒಂದು ಶುಭದಿನ ಶುಭಮುಹೂರ್ತವನ್ನು ನಿಶ್ಚಯಿಸಿ ಸಮಸ್ತ ಪೌರಜನಕ್ಕೂ ಜನಪದಕ್ಕೂ ವೀರಸಮಾಜಕ್ಕೂ ಕ್ರೀಡಾಕೌಶಲಪ್ರದರ್ಶನವನ್ನು ಪ್ರಕಟನೆ ಮಾಡಿದನು.

ಸಕಾಲದಲ್ಲಿ ಧೃತರಾಷ್ಟ್ರನು ಭೀಷ್ಮನನ್ನು ಮುಂದಿಟ್ಟುಕೊಂಡು ಅಮಾತ್ಯರಾದಿಯಾಗಿ ರಂಗಭೂಮಿಯನ್ನು ಹೊಕ್ಕನು. ಗಾಂಧಾರಿಯೂ ಕುಂತಿಯೂ ತಂತಮ್ಮ ದಾಸಿಗಳೊಡನೆ ಹೋಗಿ ಯಥಾಸ್ಥಾನದಲ್ಲಿ ಕುಳಿತರು. ಆ ವಿಶಾಲವಾದ ರಂಗಸ್ಥಲವು ಅಸ್ತ್ರಕ್ರೀಡಾದರ್ಶನಾರ್ಥಿಗಳಾಗಿ ಬಂದಿದ್ದ ಪುರಜನರಿಂದಲೂ ಜನಪದವಾಸಿಗಳಿಂದಲೂ ಕ್ಷಣಮಾತ್ರದಲ್ಲಿ ಭರಿತವಾಯಿತು. ವಾದಕರು ಮೃದುಮಧುರ ವಾದ್ಯಗಳಿಂದ ಪ್ರೇಕ್ಷಕರಿಗೆ ಕೌತುಕವನ್ನುಂಟುಮಾಡುತ್ತಿದ್ದರು. ಪತಾಕೆಗಳು ಗಾಳಿಗೆ ಆಡುತ್ತ ರಂಗಮಂಟಪವನ್ನು ಶೋಭಾಯಮಾನವಾಗಿ ಮಾಡಿದುವು. ರಂಗಭೂಮಿಯೆಲ್ಲವೂ ನೆರೆದಿದ್ದ ಜನಸಮೂಹದ ಕೋಲಾಹಲದಿಂದ ಉಲ್ಲೋಲ ಕಲ್ಲೋಲವಾದ ಮಹಾರ್ಣವದಂತೆ ಕಣ್ಗೊಳಿಸಿತು.

ಆಗ ಶುಕ್ಲಾಂಬರಧರನೂ ಶುಕ್ಲಕೇಶನೂ ಸೌಮ್ಯಮೂರ್ತಿಯೂ ಆದ ದ್ರೋಣಾಚಾರ್ಯನು ತನ್ನ ಪುತ್ರನಾದ ಅಶ್ವತ್ಥಾಮನನ್ನೊಡಗೊಂಡು ರಂಗಭೂಮಿಯನ್ನು ಪ್ರವೇಶಮಾಡಿದನು. ಕೋಲಾಹಲವು ಶಾಂತವಾಯಿತು. ಪ್ರೇಕ್ಷಕರು ಆಚಾರ್ಯನ ವಿಶಾಲವಾದ ಲಲಾಟವನ್ನೂ, ದೀಪ್ತಿಮಯ ನೇತ್ರಗಳನ್ನೂ, ಅನುಪಮಕಾಂತಿಯುಳ್ಳ ದೇಹವನ್ನೂ ಚಿತ್ರಾರ್ಪಿತರಂತೆ ನಿಸ್ತಬ್ಧರಾಗಿ ನೋಡತೊಡಗಿದರು. ಆಚಾರ್ಯನು ರಂಗಮಂಟಪವನ್ನು ಪ್ರವೇಶಮಾಡುತ್ತಲೆ ಸುಮಂತ್ರಜ್ಞ ಬ್ರಾಹ್ಮಣರಿಂದ ಯಥಾವಿಧಾನದಲ್ಲಿ ಮಂಗಳಕ್ರಿಯೆಯನ್ನು ಮಾಡಿಸಿ ತನ್ನ ಸ್ಥಾನದಲ್ಲಿ ಕುಳಿತನು. ಈ ಮಂಗಳ ಕಾರ್ಯವು ಸಮಾಪ್ತವಾಗುತ್ತಲೆ, ಅನುಚರರು ಅಸ್ತ್ರಶಸ್ತ್ರಗಳನ್ನು ತೆಗೆದುಕೊಂಡು ರಂಗಸ್ಥಲವನ್ನು ಹೊಕ್ಕರು.

ಅನಂತರದಲ್ಲಿ ಕುಮಾರರು ಬದ್ಧಪರಿಕರರಾಗಿ ಜ್ಯೇಷ್ಠ ಕನಿಷ್ಠಕ್ರಮದಿಂದ ರಂಗಸ್ಥಲವನ್ನು ಹೊಕ್ಕರು. ಅವರು ಬೆರಳಿಗೆ ಉಂಗುರವನ್ನಿಟ್ಟು ಕೈಯಲ್ಲಿ ಬಿಲ್ಲನ್ನು ಹಿಡಿದು ಬೆನ್ನಿಗೆ ಬತ್ತಳಿಕೆಯನ್ನು ಕಟ್ಟಿಕೊಂಡು ಭೀಷ್ಮಾದಿ ಗುರುಜನರ ಪಾದಕ್ಕೆರಗಿ ಕ್ರೀಡಾ ಭೂಮಿಯಲ್ಲಿ ಹೋಗಿ ನಿಂತರು. ಒಡನೆಯೇ ಕೋಲಾಹಲವಾಯಿತು. ಪ್ರೇಕ್ಷಕರೊಳಗೆ ಕೆಲವರು ಬೆರಳಿಂದ ಮೂಗ್ಗುಲಲ್ಲಿರು

ವವರಿಗೆ ಯುಧಿಷ್ಠಿರನ ಸೌಮ್ಯಮೂರ್ತಿಯನ್ನು ತೋರುವರು; ಕೆಲವರು ಭೀಮಸೇನನ ಸ್ಥೂಲೋನ್ನತ ದೇಹವನ್ನು ತೋರುವರು; ಕೆಲವರು ಅವನ ಆಜಾನುಬಾಹುಗಳನ್ನು ತೋರುವರು; ಮತ್ತೆ ಕೆಲವರು ಪ್ರಭಾತ ಕಮಲ ದಂತಿರುವ ಅರ್ಜುನನ ಮುಖಮಂಡಲವನ್ನೂ, ಇನ್ನು ಕೆಲವರು ತಳಿರಂತೆ ಹೊಳೆಯುವ ಅವನ ದೇಹಕಾಂತಿಯನ್ನೂ ತೋರಿ ಕೊಂಡಾಡುವರು. ಕುಮಾರರು ಒಂದು ಸಾರಿ ಕುದುರೆಯನ್ನೂ, ಇನ್ನೊಂದು ಸಾರಿ ಆನೆಯನ್ನೂ, ಮತ್ತೊಂದು ಸಾರಿ ರಥವನ್ನೂ ಹತ್ತಿ ರಂಗಭೂಮಿಯಲ್ಲಿ ಅತಿ ವೇಗದಿಂದ ಸುತ್ತಾಡುತ್ತ ತಂತಮ್ಮ ನಾಮಾಂಕಿತ ಬಾಣಗಳಿಂದ ಲಕ್ಷ್ಯಭೇದವನ್ನು ಮಾಡಿ ತೋರಿದರು. ತರುವಾಯ, ಅವರು ಕತ್ತಿ ಗುರಾಣಿಗಳನ್ನು ಹಿಡಿದು ಪರಸ್ಪರ ಯುದ್ಧವಾಡತೊಡಗಿದರು. ಯುದ್ಧವಾಡುತ್ತಿರುವಾಗ ಒಂದು ಸಾರಿ ಯಾದರೂ ಕತ್ತಿಯು ಅವರ ಕೈಯಿಂದ ಕಳಚಿ ಬೀಳಲಿಲ್ಲ. ಅವರು ಖಡ್ಗ ಪ್ರಯೋಗದಲ್ಲಿ ತಮ್ಮ ನಿಪುಣತೆಯನ್ನು ಮಾತ್ರವೇ ಅಲ್ಲದೆ ಸಿರ್ಥೀಕತೆಯನ್ನೂ ತೋರಿದರು. ರಂಗಮಂಟಪದಲ್ಲಿದ್ದವರೆಲ್ಲರೂ ರಾಜಕುಮಾರರ ಲಕ್ಷ್ಯಭೇದ ಕೌಶಲಕ್ಕೆ ವಿಸ್ಮಯಪಟ್ಟು ಮುಕ್ತಕಂಠದಿಂದ ಅವರನ್ನು ಪ್ರಶಂಸೆಮಾಡಿದರು. ದುರ್ಯೋಧನ ಭೀಮಸೇನರು ಗದೆಯನ್ನು ಹಿಡಿದು ರೋಷವೇರಿ ಒಬ್ಬರ ನ್ನೊಬ್ಬರು ಕೆಂಗಣ್ಣಿನಿಂದ ನೋಡುತ್ತಿರುವುದನ್ನು ಕಂಡು ದ್ರೋಣಾ ಚಾರ್ಯನು ತನ್ನ ಪ್ರಿಯಪುತ್ರನಾದ ಅಶ್ವತ್ಥಾಮನನ್ನು ಕಳುಹಿಸಿ ಅವರಿಬ್ಬರ ಕ್ರೋಧವನ್ನು ಶಮನಮಾಡಿಸಬೇಕಾಯಿತು.

ಅನಂತರದಲ್ಲಿ ಅರ್ಜುನನ ಪಾಂಡಿತ್ಯ ಪ್ರದರ್ಶನವಾಯಿತು. ದ್ರೋಣಾ ಚಾರ್ಯನು ಸಭಾಮಂಟಪದಲ್ಲಿ ನಿಂತು ವಾದ್ಯಧ್ವನಿಯನ್ನು ನಿಲ್ಲಿಸಿ ಗಂಭೀರ ಸ್ವರದಿಂದ ಇಂತೆಂದನು :—"ಈ ರಂಗಭೂಮಿಯನ್ನು ನಾನಾ ದೇಶದ ವೀರೇಂದ್ರರು ಅಲಂಕರಿಸಿರುವರು. ಹಸ್ತಿನಾಪುರವಾಸಿಗಳೂ ಜನಪದ ವಾಸಿಗಳೂ ಇಲ್ಲಿ ನೆರೆದಿರುವರು. ಸರ್ವರೂ ಲಾಲಿಸಬೇಕು. ನನ್ನ ಶಿಷ್ಯನಾದ ಅರ್ಜುನನು ನನ್ನ ಮಗನಿಗಿಂತ ನನಗೆ ಪ್ರಿಯನು. ಇವನು ಧನುರ್ವೇದದಲ್ಲಿ ಪ್ರವೀಣನಾಗಿರುವನು. ಅಸ್ತ್ರವಿದ್ಯೆಯಲ್ಲಿ ಭೂಮಂಡಲದೊಳಗೆ ಇವನಿಗೆ ಸಮಾನರು ಯಾರೂ ಇರಲಾರರು. ಇವನು ಉತ್ಸಾಹದಲ್ಲಿಯೂ ಬುದ್ಧಿ ಕೌಶಲದಲ್ಲಿಯೂ ನನ್ನ ಶಿಷ್ಯರೊಳಗೆ ಸರ್ವಶ್ರೇಷ್ಠನು. ಇವನ ಹಸ್ತಲಾಘವ, ಶರಸಂಧಾನ ನಿಪುಣತೆ, ಸಂಹಾರ ಕುಶಲತೆ, ಇತ್ಯಾದಿಗಳನ್ನು ವರ್ಣಿಸಲು ಸಾಧ್ಯವಲ್ಲ. ಇವನು ಯಾವ ಕ್ಷಣದಲ್ಲಿ ಶರಸಂಧಾನ ಮಾಡುವನೋ, ಯಾವಾಗ ಶರವನ್ನು ಬಿಡುವನೋ, ಯಾವಾಗ ಸಂಹರಿಸುವನೋ ಅರಿಯ

ಲವಳಲ್ಲ. ಈ ಧನುರ್ಧರನ ಸಾಹಸವನ್ನೂ ಅಸ್ತ್ರಪ್ರಯೋಗ ವಿಧಾನವನ್ನೂ ಸರ್ವರೂ ಸಾವಧಾನವಾಗಿ ನೋಡಬೇಕು.” ಹೀಗೆಂದು ಹೇಳಿ, ಅರ್ಜುನನನ್ನು ಮುಂದಕ್ಕೆ ಬಿಟ್ಟು ದ್ರೋಣಾಚಾರ್ಯನು ಆಸನವನ್ನು ಪರಿಗ್ರಹಿಸಿದನು.

ಅರ್ಜುನನು ಕೋದಂಡಪಾಣಿಯಾಗಿ ವ್ಯಾಯಾಮರಂಗದಲ್ಲಿ ನಿಲ್ಲುತ್ತಲೆ ಜನದ ಕಲರವವು ಹುಟ್ಟಿತು. ನಂಗಡಲೇ ಶಂಖ ಮೊದಲಾದ ವಾದ್ಯಧ್ವನಿಯು ಮೊಳಗಿತು. ಪ್ರೇಕ್ಷಕರು ರಾಜಕುಮಾರನ ಕೋಮಲ ದೇಹಕಾಂತಿಯ ಮಾಧುರ್ಯ, ಕಠಿನ ಕವಚ, ಭೀಷಣ ಶರಾಸನ, ಶಾಣಿತಖಡ್ಗ, ತೀಕ್ಷ್ಣವಾದ ಬಾಣಗಳು—ಇತ್ಯಾದಿಗಳ ಸಮ್ಮೇಳನವನ್ನು ಕಂಡು ಏಕಕಾಲದಲ್ಲಿ ವಿಸ್ಮಯ ವನ್ನೂ ಆಹ್ಲಾದವನ್ನೂ ಪಟ್ಟು, ಉಚ್ಚಸ್ವರದಿಂದ—“ ಇವನೇ ಕುಂತೀ ಸುತನು ; ಇವನೇ ಪಾಂಡವರಲ್ಲಿ ನಡುಕಲವನು, ಶೀಲವಂತನು, ಧರ್ಮಾತ್ಮನು, ಇವನೇ ಕೌರವ ರಕ್ಷಕನು, ಇವನೇ ಅಸ್ತ್ರವಿದ್ಯೆಯಲ್ಲಿ ಸರ್ವಶ್ರೇಷ್ಠನು” ಮೊದಲಾದ ಪ್ರಶಂಸಾವಚನಗಳನ್ನು ಬಾರಿಬಾರಿಗೂ ನುಡಿಯುತ್ತಿದ್ದರು.

ಪುತ್ರವತ್ಸಲೆ ಕುಂತಿಯು ಮಗನ ಪ್ರಶಂಸೆಯನ್ನು ಕೇಳಿ ತಾನು ಧನ್ಯೆ ಯೆಂದು ಭಾವಿಸಿದಳು. ಮಹಾಮತಿ ಭೀಷ್ಮನು ಜನಗೋಷ್ಠಿಯಲ್ಲಿ ಪಾಂಡವನ ಸುಖ್ಯಾತಿಯನ್ನು ಕೇಳಿ ಇನ್ನಿಲ್ಲದಷ್ಟು ಹರ್ಷಪಟ್ಟನು; ಧೃತರಾಷ್ಟ್ರನು ತೃತೀಯ ಪಾಂಡವನ ವಿಷಯದಲ್ಲಿ ಇಂತಹ ಪ್ರಶಂಸಾಧ್ವನಿಯು ಎದ್ದಿರುವು ದನ್ನು ವಿದುರನ ಬಾಯಿಂದ ಕೇಳಿ, “ಧನ್ಯನಾದೆನು, ಅನುಗೃಹೀತನಾದೆನು, ರಕ್ಷಿತನಾದೆನು” ಎಂದೀ ಪ್ರಕಾರವಾಗಿ ತನ್ನ ಸಂತೋಷವನ್ನು ತೋರಿದನು.

ಈ ಗದ್ದಲ ನಿಲ್ಲುತ್ತಲೆ ಅರ್ಜುನನು ದ್ರೋಣಾಚಾರ್ಯನ ಆಜ್ಞಾನುಸಾರ ವಾಗಿ ಅಸ್ತ್ರಪ್ರಯೋಗದಲ್ಲಿ ತನ್ನ ವಿವಿಧ ಕೌಶಲವನ್ನು ತೋರಿಸಲು ಮೊದ ಲ್ಮಾಡಿದನು. ಅವನು ಅಪೂರ್ವ ಶಿಕ್ಷಾಬಲದಿಂದ ಒಂದುಸಲ ಆಗ್ನೇಯಾಸ್ತ್ರ ವನ್ನೂ ಒಂದುಸಲ ವಾರುಣಾಸ್ತ್ರವನ್ನೂ ಒಂದುಸಲ ವಾಯುವ್ಯಾಸ್ತ್ರವನ್ನೂ ಪ್ರಯೋಗಿಸಿ, ಅಗ್ನಿಯನ್ನೂ ವಾರಿಯನ್ನೂ ವಾಯುವನ್ನೂ ನಿರ್ಮಾಣ ಮಾಡಿದನು. ನಿಮಿಷಮಾತ್ರದಲ್ಲಿ ರಥವನ್ನು ಹತ್ತುವನು ; ನಿಮಿಷಮಾತ್ರದಲ್ಲಿ ರಥದಿಂದಿಳಿಯುವನು ; ಲೀಲಾಜಾಲವಾಗಿ, ಸಣ್ಣವಾಗಲಿ ದೊಡ್ಡವಾಗಲಿ, ಲಕ್ಷ್ಯಗಳನ್ನು ಭೇದಿಸುವನು. ಅನಂತರ, ಬಿಲ್ಲಿಗೆ ಐದು ಬಾಣಗಳನ್ನು ತೊಡಿಸಿ ಕಬ್ಬಿಣದ ಹಂದಿಯ ಬಾಯಿಗೆ ಅವೆಲ್ಲವನ್ನೂ ಒಂದೇ ಬಾಣದೋಪಾದಿಯಲ್ಲಿ ಬಿಡುವನು. ಈ ತೆರದಲ್ಲಿಯೇ, ಅವನು ಖಡ್ಗಪ್ರಯೋಗ ಮೊದಲಾದುವುಗಳ ಲ್ಲಿಯೂ ವಿಶೇಷ ನಿಪುಣತೆಯನ್ನು ತೋರಿಸಿದನು. ಪ್ರೇಕ್ಷಕರು ಮುಸುಕದೆ ಅವನ ಅಸ್ತ್ರಪ್ರಯೋಗ ಚಾತುರ್ಯವನ್ನೂ ಅವನ ವಜ್ರಮುಷ್ಟಿಯ ಅಪೂರ್ವ

ದೃಢತ್ವವನ್ನೂ ಎವೆಯಿಕ್ಕದೆ ನೋಡುತ್ತ ಪಟದಲ್ಲಿ ಬರೆದ ಚಿತ್ರದಂತೆ ನಿಶ್ಚಲರಾಗಿದ್ದರು.

ಈ ರೀತಿ ಅವನ ಕೈಚಳಕವೆಲ್ಲವನ್ನೂ ಕಣ್ದಣಿಯಾಗಿ ನೋಡಿ ಪ್ರೇಕ್ಷಕರು ಉಚ್ಚಸ್ವರದಿಂದ—"ಜಯ! ಹೇ ಅರ್ಜುನ! ಜಯ! ಹೇ ಧನಂಜಯ!" ಎಂದು ಉಗ್ಗಡಿಸಿದರು.

ಅರ್ಜುನನ ಅಸ್ತ್ರಪ್ರಯೋಗವನ್ನು ನೋಡಿ ಭೀಷ್ಮನು ಅಪರಿಮಿತ ಸಂತೋಷಪಟ್ಟು ದ್ರೋಣಾಚಾರ್ಯನಿಗೆ ತನ್ನ ಕೃತಜ್ಞತೆಯನ್ನು ತಿಳಿಯಪಡಿಸಿದನು. ಅಲ್ಲಿಗೆ ಅವನು ಪೂರ್ಣ ಮನೋರಥನಾಗಲಿಲ್ಲ.

ಯುಧಿಷ್ಠಿರನು ಸರ್ವಜ್ಯೇಷ್ಠನು, ಸರ್ವಗುಣ ಸಂಪನ್ನನು. ಈಗ ಅವನು ಯಥಾವಿಧಾನವಾಗಿ ರಾಜಪದವಿಯಲ್ಲಿ ಪ್ರತಿಷ್ಠಿತನಾಗಿ ರಾಜ್ಯಭಾರವನ್ನು ವಹಿಸುವದಕ್ಕೆ ಸಕಾಲವೆಂದು ಭಾವಿಸಿ, ಭೀಷ್ಮನು ಆ ವಿಷಯವನ್ನು ಕುರಿತು ಆಲೋಚಿಸತೊಡಗಿದನು.

ಇತ್ತ, ಪುರವಾಸಿಗಳು, ಜನಪದವಾಸಿಗಳು ಸಭಾಮಂಟಪದಲ್ಲಿಯೂ, ಬೀದಿಯ ಚೌಕಗಳಲ್ಲಿಯೂ, ಅಂಗಡಿ ಮುಂಗಡಿಗಳಲ್ಲಿಯೂ, ಎಲ್ಲೆಲ್ಲಿಯೂ— "ಯುಧಿಷ್ಠಿರನು ರಾಜನಾಗುವದಕ್ಕೆ ತಕ್ಕವನು. ಭೀಷ್ಮನು ರಾಜನಾಗೆನೆಂದು ಪ್ರತಿಜ್ಞೆಮಾಡಿರುವನು; ಸೂರ್ಯಚಂದ್ರರ ಉದಯಾಸ್ತಗಳಲ್ಲಿ ವಿಪರ್ಯಾಸವುಂಟಾಗಬಹುದು, ಭೀಷ್ಮನ ಪ್ರತಿಜ್ಞೆಯಲ್ಲೆಂದಿಗೂ ವ್ಯತ್ಯಾಸವುಂಟಾಗದು. ಧೃತರಾಷ್ಟ್ರನು ಜನ್ಮಾಂಧನಾದುದರಿಂದ ಅವನಿಗೆ ರಾಜ್ಯವಾಗಲಿಲ್ಲ; ಈಗ ಅವನು ಹೇಗೆ ತಾನೆ ರಾಜಪದವಿಯನ್ನು ಕೈಕೊಳ್ಳಲಾಗುವದು? ಯುಧಿಷ್ಠಿರನು ಧರ್ಮವತ್ಸಲನು, ಸತ್ಯವ್ರತನು, ದಯಾಳು. ಅವನು ಭೀಷ್ಮ ಧೃತರಾಷ್ಟ್ರರನ್ನು ಸಮ್ಮಾನದಿಂದ ಕಾಣುತ್ತ ವಿವಿಧ ಭೋಗ್ಯವಸ್ತುಗಳನ್ನು ಕೊಟ್ಟು ಅವರನ್ನು ಸಂತೋಷಪಡಿಸುವನು; ಅದಕ್ಕೆ ಸಂದೇಹವಿಲ್ಲ. ಯುಧಿಷ್ಠಿರನಿಗೆ ಪಟ್ಟವಾದರೆ ನಮಗೆಷ್ಟೋ ಸಂತೋಷವಾಗುವದು" ಎಂದು ತಮ್ಮೊಳಗೆ ತಾವೇ ಹೇಳಿಕೊಳ್ಳುತ್ತಿದ್ದರು.

ಪುರವಾಸಿಗಳ ಬಾಯಿಂದ ಈ ಮಾತು ಬರುತ್ತಿರುವದನ್ನು ಕೇಳಿ ಭೀಷ್ಮನು ನಿರತಿಶಯವಾದ ಆಹ್ಲಾದವನ್ನು ಪಟ್ಟನು. ಅವನು ಪುರವಾಸಿಗಳನ್ನು ಕರೆಯಿಸಿ, ಆನಂದಾಶ್ರುವನ್ನು ಸುರಿಸುತ್ತ ಅವರನ್ನು ಕುರಿತು ಇಂತೆಂದನು:— "ಸರ್ವಪ್ರಯತ್ನದಿಂದಲೂ ಈ ರಾಜಕುಮಾರರನ್ನು ಸುಶಿಕ್ಷಿತರನ್ನಾಗಿ ಮಾಡಲಿಚ್ಛಿಸಿದೆನು; ಆ ನನ್ನ ಇಚ್ಛೆಯು ಈಡೇರಿತು. ಸರ್ವ ಜ್ಯೇಷ್ಠ ಯುಧಿಷ್ಠಿರನು ಸರ್ವಗುಣ ಸಂಪನ್ನನು; ಅವನು ರಾಜ್ಯಶಾಸನದಲ್ಲಿಯೂ

ಪ್ರಜಾಪಾಲನೆಯಲ್ಲಿಯೂ ಯಶೋವಂತನಾಗುವನು. ಪಾಂಡುವು ಸ್ವರ್ಗಸ್ಥನಾದನು; ಮಾತಾ ಸತ್ಯವತಿಯೂ ಭಾಗ್ಯವತಿಯರಾದ ಅಂಬೆ ಅಂಬಾಲಿಕೆಯರೂ ತಪೋವನಕ್ಕೆ ಹೋಗಿ ಅಲ್ಲಿ ಪರಮಪದವನ್ನು ಪಡೆದರು. ನಾನು ರಾಜಪದವನ್ನು ಪರಿತ್ಯಾಗಮಾಡಿ ಪ್ರಜಾಧರ್ಮವನ್ನು ಪಾಲಿಸುವ ನಿಮಿತ್ತವಾಗಿಯೇ, ತಪೋಮಾರ್ಗವನ್ನು ಆಶ್ರಯಿಸಲಿಲ್ಲ; ಶಾಂತಿಮಯವಾದ ತಪೋವನದಲ್ಲಿದ್ದು ತಾಪಸವೃತ್ತಿಯನ್ನು ಅನುಸರಿಸಲಿಲ್ಲ; ನನಗೆ ಯೌವನದ ವಿಷಯವಾಸನೆಯು ಕಳೆದುಹೋಯಿತು; ಪವಿತ್ರ ಬ್ರಹ್ಮಚರ್ಯವೊಂದೇ ನನ್ನ ವ್ರತವಾಗಿರುವುದು. ಈಗ ನನಗೆ ವಾರ್ಧಕ್ಯವು ಪ್ರಾಪ್ತವಾಗಿದೆ, ಕೂದಲು ಬೆಳ್ಳಗಾಯಿತು, ದೇಹವು ಗಳಿತವಾಗುತ್ತ ಬಂದಿದೆ. ಕುರುರಾಜನ ಆಜ್ಞಾನುವರ್ತಿಯಾಗಿ ಆತನಿಗೆ ಹಿತಕರವಾದ ಕಾರ್ಯಗಳನ್ನು ಮಾಡುವ ನಿಮಿತ್ತವಾಗಿಯೇ ನಾನು ಪ್ರಾಣವನ್ನಿಟ್ಟುಕೊಂಡಿದ್ದೇನೆ. ಯುಧಿಷ್ಠಿರನಿಗೆ ರಾಜ್ಯಾಭಿಷೇಕವಾಗಲಿ, ನಾನಾ ರಾಜ್ಯಗಳ ಭೂಪತಿಗಳು ಅವನಿಗೆ ತಲೆಬಾಗಿ ನಡೆಯಲಿ, ಪ್ರಜೆಗಳು ಅವನನ್ನು ದೇವರಿಗೆ ಸಮಾನನೆಂದು ಪೂಜಿಸಲಿ, ಇದೆಲ್ಲವನ್ನೂ ಕಣ್ಣಾರೆ ನೋಡಿ ನಾನು ಚರಿತಾರ್ಥನಾಗುವೆನು. ನಾನು ಹಿಂದೆ ಅವನನ್ನು ತಂಕುಳಲ್ಲಿ ಎತ್ತಿಕೊಂಡು ಪ್ರೀತಿಸುತ್ತಿದ್ದೆನು; ಅವನ ತೊದಲು ನುಡಿಗಳನ್ನು ಕೇಳಿ ಮೋಹಿತನಾಗಿ ಮುಖವನ್ನು ಮುದ್ದಿಟ್ಟುಕೊಳ್ಳುತ್ತಿದ್ದೆನು; ಸರ್ವಪ್ರಯತ್ನದಿಂದಲೂ ಅವನಿಗೆ ವಿದ್ಯಾಬುದ್ಧಿಯನ್ನು ಕಲಿಸಿದೆನು; ಯಾವಾಗಲೂ ನನ್ನ ಸಂಗಡಲೇ ಇಟ್ಟುಕೊಂಡು ಸನ್ಮಾರ್ಗವನ್ನು ತೋರಿಸುತ್ತಿದ್ದೆನು. ಈಗ ನಾನು ಅವನ ಆಜ್ಞಾಧಾರಕನಾಗಿ ಅವನ ಹಿತವನ್ನು ಆಚರಿಸುತ್ತಿರುವೆನು. ಇದೇ ನನ್ನ ಪರಮಧರ್ಮ, ನನ್ನ ಪರಮ ಕರ್ಮ, ನನ್ನ ಪರಮತಪಸ್ಸು!"

ಪುರವಾಸಿಗಳು ಭೀಷ್ಮನ ಧರ್ಮಸಮ್ಮತವಾದ ಈ ಉದಾರವಾಕ್ಯಕ್ಕೆ ಸಂತೋಷಪಟ್ಟರು. ಆದರೆ, ದುರಾಕಾಂಕ್ಷೆಯುಳ್ಳ ದುರ್ಯೋಧನನು ಅದನ್ನು ಕೇಳಿ ಅಸೂಯಾಪರತಂತ್ರನಾದನು. ಯುಧಿಷ್ಠಿರನನ್ನು ಕುರಿತು ಭೀಷ್ಮನು ಆಡಿದ ಪ್ರಶಂಸಾವಾದವು ಅವನ ಕಿವಿಗೆ ಶೂಲವಾಯಿತು. ಪೌರಜನದ ಪ್ರಸ್ತಾವನೆಯು ಹೃದಯಶಲ್ಯವಾಯಿತು. ಭೀಷ್ಮನು ಅದನ್ನು ಅನುಮೋದಿಸಿದುದರಿಂದ ಆ ಶಲ್ಯವು ತೀಕ್ಷ್ಣವಾಯಿತು. ಇಂತು, ಅವನ ಹೃದಯವು ದ್ವೇಷದಿಂದ ಕಲುಷಿತವಾಯಿತು; ಬುದ್ಧಿ ಪಲ್ಲಟವಾಯಿತು. ಕಡೆಗೆ, ಅವನು ಪ್ರಾಣವಿರುವ ವರೆಗೂ ಯುಧಿಷ್ಠಿರನಿಗಾಗಲಿ ಅವನ ತಮ್ಮಂದಿರಿಗಾಗಲಿ ರಾಜ್ಯವಾಗಗೊಡೆನೆಂದು ದುರಾಗ್ರಹದಿಂದ ಪ್ರತಿಜ್ಞೆಮಾಡಿದನು.

ಇತ್ತ, ಸರ್ವವಿಷಯದಲ್ಲಿಯೂ ಪಾಂಡವರ ಉತ್ಕರ್ಷವನ್ನೂ ತನ್ನ ಮಕ್ಕಳ ಅಪಕರ್ಷವನ್ನೂ ಕಂಡು ಧೃತರಾಷ್ಟ್ರನೂ ದುಃಖಿಪಟ್ಟನು; ದಾಯಾದಿಗಳ ಸಂಪತ್ತನ್ನು ನೋಡಿ ಸೈರಿಸಲಾರದೆ ಹೋದನು. ಅವನ ಮನಸ್ಸಿಗೆ ಶಾಂತಿಯಿಲ್ಲವಾಯಿತು; ವೈರದಿಂದ ಅವನ ಮನೋಗತ ಸಾಧುಭಾವವು ಕೆಟ್ಟಿತು. ದುರ್ಮತಿ ದುರ್ಯೋಧನನು ಅಡಿಗಡಿಗೆ ತನ್ನ ದುರ್ಗತಿಯನ್ನು ಜ್ಞಾಪಿಸಿ ಆಡುತ್ತಿದ್ದ ಮಾತುಗಳಿಂದ ತಂದೆಯ ಹೃದ್ಗತವಾದ ಪ್ರೀತಿಯೂ ಸ್ನೇಹವೂ ಶಾಂತವೂ ವಿಲುಪ್ತವಾದುವು. ಯಾವನು ಪಾಂಡುವಿಗೆ ರಾಜ್ಯವಾಯಿತೆಂದು ಆನಂದಸಾಗರದಲ್ಲಿ ಮಗ್ನನಾಗಿದ್ದನೋ, ಯಾವನು ಅರ್ಜುನನ ಅಸ್ತ್ರಕೌಶಲವನ್ನು ನೋಡಿ ಧನ್ಯನಾದೆನೆಂದನೋ, ಅವನೇ ಈಗ ಪಾಂಡವರ ಸೌಭಾಗ್ಯವನ್ನು ಕಂಡು ಯುಕ್ತಾಯುಕ್ತ ಜ್ಞಾನಹೀನನಾಗಿ ದಯಾಧರ್ಮವನ್ನು ತೊರೆದನು. ಅವನ ಪುತ್ರವಾತ್ಸಲ್ಯವು ಮಿತಿಮೀರಿತು, ಸಾಧುಭಾವವು ಹಿಂಗಿತು, ಮೆಲ್ಲಮೆಲ್ಲಗೆ ಅವನು ಅಧರ್ಮದಲ್ಲಿ ರುಚಿಕಂಡನು.

ಏಳನೆಯ ಅಧ್ಯಾಯ

ಲಾಕ್ಷಾಭವನ, ದ್ರೌಪದಿಯ ಸ್ವಯಂವರ, ರಾಜ್ಯವಿಭಾಗ

ಯುಧಿಷ್ಠಿರನ ಪಟ್ಟಾಭಿಷೇಕದ ಪ್ರಸ್ತಾವವನ್ನು ಕೇಳಿ ಮರುಗುತ್ತ ದುರ್ಯೋಧನನು ತಂದೆಯ ಬಳಿಗೆ ಹೋದನು. ತಂದೆಯು ಏಕಾಂತವಾಗಿ ಕುಳಿತಿದ್ದುದನ್ನು ಕಂಡು ಮೋರೆಯನ್ನು ಬಾಡಿಸಿಕೊಂಡು ಕಾಲಿಗೆ ಬಿದ್ದು— "ಅಯ್ಯಾ! ಪುರಜನರು ನಿಮ್ಮನ್ನು ಪರಿತ್ಯಾಗಮಾಡಿ ಯುಧಿಷ್ಠಿರನನ್ನು ಅರಸನನ್ನಾಗಿ ಮಾಡಲಿಚ್ಛಿಸುತ್ತಿದ್ದಾರೆ. ಪಿತಾಮಹ ಭೀಷ್ಮನು ರಾಜಭೋಗವನ್ನೊಲ್ಲದೆ ರಾಜಪದವಿಯನ್ನು ಕೈಕೊಳ್ಳಲು ಸರ್ವಾತ್ಮನಾ ಸಮ್ಮತಿಸದಿರುವನು. ಪುರಜನದ ಬಾಯಿಂದ ನಿಮ್ಮ ವಿಷಯವಾಗಿ ಈ ಅಶ್ರದ್ಧೆಯ ಮಾತನ್ನು ಕೇಳಿದಂದಿನಿಂದ ನನಗೆ ಅತಿ ದುಃಖವುಂಟಾಗಿರುವುದು. ನೀವು ಜ್ಯೇಷ್ಠರಾದರೂ, ಅಂಧರಾದುದರಿಂದ ನಿಮಗೆ ರಾಜ್ಯ ಪ್ರಾಪ್ತಿಯಿಲ್ಲವಾಯಿತು. ಆರ್ಯನಾದ ಪಾಂಡುವು ಕಿರಿಯಾತನಾದರೂ ರಾಜಪದವಿಗೆ ಬಂದನು. ಈಗ ಯುಧಿಷ್ಠಿರನಿಗೆ ರಾಜ್ಯವಾದರೆ ಅವನ ತರುವಾಯ ಅವನ ಮಗನು, ತರುವಾಯ ಅವನ ಮೊಮ್ಮಗನು, ಈ ಪ್ರಕಾರವಾಗಿ ಪಾಂಡುವಿನ ಪೀಳಿಗೆಯೇ ಈ ಸಮೃದ್ಧ ರಾಜ್ಯವನ್ನು ಸುಖವಾಗಿ ಭೋಗಿಸುವುದು.

ನಾವು ರಾಜವಂಶೀಯರಾದರೂ ಪ್ರಜೆಗಳ ಇದಿರಿಗೆ ಕೀಳೆನಿಸಿಕೊಂಡು ಬಾಳಬೇಕಾಗುವುದು. ಈ ರೀತಿ ನಾವು ಪರ ಪಿಂಡೋಪಜೀವಿಗಳಾದಲ್ಲಿ ನಮ್ಮ ದುರ್ದಶೆಗೆ ಪಾರವಿಲ್ಲದೆ ಹೋಗುವುದು. ಪರರ ಕೂಳಿಗೆ ಬಿದ್ದಿರುವವರು ಇಹದಲ್ಲಿ ಹೆರರಿಂದ ತಿರಸ್ಕಾರವನ್ನೂ ಅವಮಾನವನ್ನೂ ಹೊಂದುವಂತೆಯೇ, ಲೋಕಾಂತರದಲ್ಲಿ ನರಕಭಾಗಿಗಳಾಗುವರು. ನಮಗೆ ನರಕಯಾತನೆಯು ತಪ್ಪುವ ಯೋಚನೆಯನ್ನು ಮಾಡಿರಿ" ಎಂದನು.

ದುರ್ಯೋಧನನ ಮಾತನ್ನು ಕೇಳಿ ಧೃತರಾಷ್ಟ್ರನು ನಿಟ್ಟುಸಿರುಬಿಡುತ್ತ ತಲೆಬಾಗಿ ಕುಳಿತನು. ಯುಧಿಷ್ಠಿರನು ರಾಜನಾಗುವನು, ತಾನೂ ತನ್ನ ಮಕ್ಕಳೂ ಅವನ ಪ್ರಸಾದವನ್ನು ಬೇಡಿ ಜೀವಿಸಬೇಕಾಗುವುದು ಎಂದು ಭಾವಿಸಿ ಅವನು ಮೃತಪ್ರಾಯನಾದನು. ಅವನ ವಿಷಣ್ಣಮುಖವು ಅವನ ಅಗಾಧ ದುಶ್ಚಿಂತೆಯನ್ನು ಪ್ರಕಾಶಗೊಳಿಸಿತು. ಈ ಸಂದರ್ಭದಲ್ಲಿ ಏನ ಮಾಡಬೇಕೋ ಅರಿಯದೆ ಅವನು ದೋಲಾಯಮಾನನಾದನು. ದುರ್ಯೋಧನನು ದುಃಶಾಸನಾದಿ ದುರ್ಮತಿಗಳಾದ ತಮ್ಮಂದಿರೊಡನೆಯೂ, ಶಕುನಿ ಮೊದಲಾದ ಕುಮಂತ್ರಿಗಳೊಡನೆಯೂ ಆಲೋಚನೆ ಮಾಡಿದನು ; ಕೊನೆಗೆ, ಪಾಂಡವರನ್ನು ವಾರಣಾವತಕ್ಕೆ ತೊಲಗಿಸಿ ಅವರನ್ನು ಬೆಂಕಿಯಿಂದ ಸಾಯಿಸುವ ಯೋಜನೆಯನ್ನು ಮಾಡಿದನು. ತಂದೆಯ ವಿಷಾದವನ್ನು ನೋಡಿ, ಅವನು ತನ್ನ ಮಾತಿಗೆ ಕಿವಿಗೊಟ್ಟನೆಂದು ಹರ್ಷಚಿತ್ತನಾಗಿ—"ಅಯ್ಯಾ ! ನೀವು ಉಪಾಯದಿಂದ ಪಾಂಡವರನ್ನು ವಾರಣಾವತಕ್ಕೆ ಕಳುಹಿಸಬಲ್ಲವರಾದರೆ ಯಾವ ಭಯವೂ ಇಲ್ಲ" ಎಂದನು.

ಧೃತರಾಷ್ಟ್ರನು ಮಗನ ಮಾತ ಕೇಳಿ ಹಾಗೆಯೇ ಯೋಚಿಸಿ—"ವತ್ಸ ! ನೀನು ಹೇಳುವುದು ನನಗೆ ಸಮ್ಮತವೇನೋ ಅಹುದು. ಆದರೆ ಪಾಂಡುವು ಧರ್ಮಪರಾಯಣನಾಗಿದ್ದನು. ಅವನು ಜ್ಞಾತಿಗಳ ವಿಷಯದಲ್ಲಿ, ವಿಶೇಷವಾಗಿ ನನ್ನ ವಿಷಯದಲ್ಲಿ, ನ್ಯಾಯವಾಗಿ ನಡೆದುಕೊಳ್ಳುತ್ತಿದ್ದನು. ಅಷ್ಟೇ ಅಲ್ಲ, ತಾನು ವೈರಾಗ್ಯವನ್ನು ತಾಳಿದ್ದರೂ ವಿವಿಧ ಭೋಗ್ಯವಸ್ತುಗಳಿಂದ ನನ್ನನ್ನು ತೃಪ್ತಿಗೊಳಿಸುತ್ತಿದ್ದನು. ಅವನು ಸರಳನೂ ಆಗಿದ್ದನು. ಆದುದರಿಂದ, ಅವನು ರಾಜಕೀಯ ಕಾರ್ಯಗಳನ್ನು ನನಗೆ ಬಿನ್ನಯಿಸದೆ ಯಾವ ಕಾರ್ಯಕ್ಕೂ ಕೈ ಹಾಕುತ್ತಿರಲಿಲ್ಲ. ಅವನಂತೆಯೇ ಅವನ ಮಗ ಯುಧಿಷ್ಠಿರನು ಧರ್ಮಪರಾಯಣನು, ಗುಣಾಢ್ಯನು ; ಮತ್ತು ಪೌರಜನಕ್ಕೂ ಜನಪದಕ್ಕೂ ಪ್ರಿಯನಾಗಿದ್ದಾನೆ. ಅಷ್ಟೇ ಅಲ್ಲ, ಅವನು ನಿಮ್ಮೆಲ್ಲರಿಗೂ ಹಿರಿಯನು ; ಈ ರಾಜ್ಯವು ಅವನ ಪಿತ್ರಾರ್ಜಿತವು. ಈಗ ಅವನನ್ನು ಹೇಗೆ ತಾನೆ ಇಲ್ಲಿಂದ

ಹೊರಡಿಸಲಿ? ಹಾಗೆ ಮಾಡಿದಲ್ಲಿ, ಅಮಾತ್ಯವರ್ಗವೂ ಸೇನೆಯೂ ಸಾಮಂತರೂ ಪಾಂಡುವು ಮಾಡಿದ ಉಪಕಾರವನ್ನು ಸ್ಮರಣೆಗೆ ತಂದುಕೊಂಡು ನಮ್ಮ ವಿನಾಶಕ್ಕೆ ಮೂಲವಾಗುವರು. ಆರ್ಯ ಭೀಷ್ಮನೂ ಆಚಾರ್ಯ ದ್ರೋಣನೂ ಧರ್ಮವತ್ಸಲ ವಿದುರನೂ ಈ ಕೆಲಸಕ್ಕೆಂದಿಗೂ ಒಡಂಬಡರು. ಕೌರವರು ಪಾಂಡುವನ್ನೂ ನನ್ನನ್ನೂ ಸಮದೃಷ್ಟಿಯಿಂದ ನೋಡುತ್ತಿದ್ದರು. ಅವರು ನಿಮ್ಮನ್ನೂ ಯುಧಿಷ್ಠಿರಾದಿಗಳನ್ನೂ ಸಮಾನವಾಗಿ ಕಾಣುವರು. ಪಾಂಡವರಿಗೆ ಅನ್ಯಾಯವನ್ನು ಮಾಡಿದಲ್ಲಿ ಅವರೊಳಗಾರೂ ನೋಡಿ ಸೈರಿಸಲಾರರು. ಅವರೆಲ್ಲರೂ ನಮಗೆ ಹಗೆಗಳಾಗುವರು. ನಾವು ಕೌರವರ ಮತ್ತು ಅಮಾತ್ಯರ ಪ್ರೀತಿಯನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ಅವರ ಕೋಪಕ್ಕೂ ಪಾತ್ರರಾಗಿ ಅಪಾರವಾದ ಕಷ್ಟಕ್ಕೆ ಗುರಿಯಾಗುವೆವು" ಎಂದನು.

ತಂದೆಯ ಮಾತನ್ನು ಕೇಳಿ ದುರ್ಯೋಧನನು ಸುಮ್ಮನಾಗಲಿಲ್ಲ, ಅವನ ಅಸೂಯೆ ಹಿಂಗಲಿಲ್ಲ, ದ್ವೇಷವು ದೂರವಾಗಲಿಲ್ಲ. ಪಾಂಡವರನ್ನು ನಾಶ ಮಾಡಿಯೇ ತೀರುವೆನೆಂದು ನಿಶ್ಚಯಿಸಿ ಅವನು ಮತ್ತಿಂತೆಂದು ಹೇಳಿದನು:—

"ಅಯ್ಯಾ! ನೀವು ಅಪ್ಪಣೆಕೊಡಿಸುವುದು ಯಥಾರ್ಥವೇ ಸರಿ. ಆದರೂ, ಕೌರವ ಸೇನೆಯು ಅರ್ಥಲಾಭದಿಂದ ಸಂತುಷ್ಟರಾದರೆ, ನಮಗೊಳಗಾಗುವುದು. ಸದ್ಯಕ್ಕೆ ರಾಜ್ಯದ ಸಮಸ್ತ ಸಂಪತ್ತೂ ನಿಮ್ಮ ಕೈಯಲ್ಲಿದೆ; ಅಮಾತ್ಯರು ನಿಮ್ಮ ಅಧೀನರಾಗಿರುವರು; ಪಿತಾಮಹ ಭೀಷ್ಮನು ಉಭಯ ಪಕ್ಷಕ್ಕೂ ಸಾಮಾನ್ಯನು; ಅಶ್ವತ್ಥಾಮನು ಸಂಪೂರ್ಣವಾಗಿ ನಮ್ಮ ಪಕ್ಷವನ್ನು ಹಿಡಿಯುವನು; ದ್ರೋಣಾಚಾರ್ಯನು ಮಗನಿಗೆ ವಿಪಕ್ಷನಾಗನು, ವಿದುರನು ಪಾಂಡವರ ಪಕ್ಷವನ್ನು ಸೇರಿದ್ದರೂ ಒಬ್ಬನಾಗಿ ನಮಗೆ ಯಾವ ಅನಿಷ್ಟವನ್ನೂ ಮಾಡ ಸಮರ್ಥನಲ್ಲ. ಆದುದರಿಂದ, ಅಯ್ಯಾ! ನೀವು ಸ್ವಲ್ಪವೂ ಶಂಕಿಸದೆ ಪಾಂಡವರನ್ನು ವಾರಣಾವತಕ್ಕೆ ಕಳುಹಿಸಿರಿ. ರಾಜ್ಯವೆಲ್ಲವೂ ನಮ್ಮ ಕೈಗೆ ಬಂದರೆ, ಅವರು ಮತ್ತೆ ಇಲ್ಲಿಗೆ ಬರಲು ಯಾವ ಅಡ್ಡಿಯೂ ಇರದು."

ಧೃತರಾಷ್ಟ್ರನು ಮಗನ ಮಾತಿಗೆ ಮರುಳಾಗಿ ನ್ಯಾಯಾನ್ಯಾಯವನ್ನು ವಿಚಾರಿಸದೆ ಪಾಂಡವರನ್ನು ವಾರಣಾವತಕ್ಕೆ ಅಟ್ಟಲೊಪ್ಪಿದನು. ಇತ್ತ, ದುರ್ಯೋಧನನು ಲಂಚವನ್ನು ಕೊಟ್ಟು ಅಮಾತ್ಯರನ್ನೂ ಸೈನಿಕರನ್ನೂ ವಶಮಾಡಿಕೊಂಡನು. ಕೂಟನೀತಿಪರಾಯಣರಾದ ಅಮಾತ್ಯರು ಕಾಂಚನಕ್ಕೆ ಕೈಯೊಡ್ಡಿ ಧೃತರಾಷ್ಟ್ರನ ಆಡಿಯಾಳುಗಳಾಗಿ ಪಾಂಡವರ ಮುಂದೆ— "ವಾರಣಾವತವು ಪರಮ ರಮಣೀಯ ಕ್ಷೇತ್ರವು; ಭೂಮಂಡಲದಲ್ಲಿ ಅಂತಹ ಮನೋಹರವಾದ ನಗರವು ಇನ್ನೊಂದಿಲ್ಲ. ಅಲ್ಲಿ ಭೂತಭಾವನನಾದ ಉಮಾ

ಮಹೇಶ್ವರನ ಉತ್ಸವವು ನಡೆಯುತ್ತಿರುವುದು. ಈ ಉತ್ಸವಕಾಲದಲ್ಲಿ ವಾರಣಾವತವು ವಿವಿಧ ರತ್ನಗಳಿಂದ ಸಮಾಕೀರ್ಣವಾಗಿ ದೇಶದೇಶಗಳಿಂದ ಬಾದಿನುವ ಜನ ಸಮಾಗಮದಿಂದಲೂ ವೈಭವದಿಂದಲೂ ಮೆರೆಯುತ್ತಿರುವುದು. ಅಲ್ಲಿಯ ಆಮೋದ ಪ್ರಮೋದಗಳಿಗೆ ಪಾರವಿಲ್ಲ; ಆಹ್ಲಾದಕ್ಕೆ ಅಂತವಿಲ್ಲ" ಎಂದು ವಾರಣಾವತವನ್ನು ಬಣ್ಣಿಸಿದರು. ದೈವನಿರ್ಬಂಧವು ಅಖಂಡನೀಯವು! ಅಮಾತ್ಯರ ಬಾಯಿಂದ ವಾರಣಾವತದ ಇಂತಹ ಪ್ರಶಂಸೆಯನ್ನು ಕೇಳಿ ಪಾಂಡವರು ಅಲ್ಲಿಗೆ ಹೋಗಲಿಷ್ಟಪಟ್ಟರು. ಧೃತರಾಷ್ಟ್ರನು ಪಾಂಡವರು ವಾರಣಾವತಕ್ಕೆ ಹೋಗಲು ಕುತೂಹಲವುಳ್ಳವರಾಗಿರುವರೆಂದು ಕೇಳುತ್ತಲೆ, ಅವರನ್ನು ಕರೆಯಿಸಿ—"ಭೂಮಂಡಲದಲ್ಲಿ ವಾರಣಾವತವು ಅತಿ ರಮಣೀಯವಾಗಿದೆಯೆಂದು ಎಲ್ಲರಿಂದಲೂ ನಾನು ನಿತ್ಯವೂ ಕೇಳುತ್ತೇನೆ. ಅಲ್ಲಿಗೆ ಹೋಗಿ ನೋಡಿ ಬರಬೇಕೆಂಬ ಅಭಿಲಾಷೆ ನಿಮಗಿದ್ದರೆ ಪರಿವಾರಸಹಿತರಾಗಿ ಹೋಗಿ ಅಲ್ಲಿ ಕೆಲವು ದಿನ ಸುಖವಾಗಿದ್ದು ಮತ್ತೆ ಹಸ್ತಿನಾಪುರಕ್ಕೆ ಬನ್ನಿರಿ" ಎಂದನು.

ಯುಧಿಷ್ಠಿರನು ಧೃತರಾಷ್ಟ್ರನ ಅಭಿಪ್ರಾಯವನ್ನು ತಿಳಿದುಕೊಳ್ಳದೆ ಹೋಗಲಿಲ್ಲ. ಆದರೆ ಮಾಡುವುದೇನು? ಅವನು ತನಗೆ ಯಾರ ಒತ್ತಾಸೆಯೂ ಇಲ್ಲವೆಂದೆಣಿಸಿ ಅಪ್ಪಣೆಯೆಂದು ಹೋಗಲೊಡಂಬಟ್ಟನು. ಅನಂತರ ಭೀಷ್ಮಾದಿ ಗುರುಜನರ ಬಳಿಗೆ ಹೋಗಿ ಅವನು—"ನಮ್ಮ ಪೂಜ್ಯರಾದ ದೊಡ್ಡಪ್ಪಂದಿರ ಅಪ್ಪಣೆಯ ಪ್ರಕಾರವಾಗಿ ನಾವು ವಾರಣಾವತಕ್ಕೆ ಹೋಗುವೆವು. ತಾವು ನಮಗೆ ಯಾವ ಅಮಂಗಳವೂ ಆಗದಹಾಗೂ, ಯಾವ ಪಾಪವೂ ಸೋಕದ ಹಾಗೂ ಪ್ರಸನ್ನಚಿತ್ತರಾಗಿ ಆಶೀರ್ವಾದವನ್ನು ಮಾಡಿರಿ" ಎಂದನು.

ತರುವಾಯ, ಅವನು ಭೀಷ್ಮ ದ್ರೋಣ ವಿದುರ ಗಾಂಧಾರಿಯರನ್ನು ಬೀಳ್ಕೊಂಡನು. ಅವರೆಲ್ಲರೂ ಪ್ರೀತಿಪೂರ್ವಕವಾಗಿ ಅವನನ್ನು ಹರಸಿದರು. ಈ ರೀತಿಯಲ್ಲಿ ಹಿರಿಯರ ಪಾದಕ್ಕೆ ಬಿದ್ದು ಯುಧಿಷ್ಠಿರನು ತಾಯನ್ನೂ ನಾಲ್ವರು ತಮ್ಮಂದಿರನ್ನೂ ಒಡಗೊಂಡು ವಾರಣಾವತಕ್ಕೆ ಪಯಣ ಮಾಡಿದನು. ಹೊರಡುವ ಸಮಯದಲ್ಲಿ ವಿದುರನು ಗೋಪ್ಯವಾಗಿ, ಇತರರಿಗೆ ಬೋಧೆಯಾಗದ ಭಾಷೆಯಲ್ಲಿ, ಯುಧಿಷ್ಠಿರನಿಗೆ ದುರ್ಯೋಧನನ ದುರಾಶಯವನ್ನು ಸೂಚಿಸಿದನು. ಯುಧಿಷ್ಠಿರನು, "ತಿಳಿಯಿತು" ಎಂದು ಹೇಳಿ, ವಾರಣಾವತದಲ್ಲಿ ಎಚ್ಚರದಿಂದಿರಬೇಕೆಂದುಕೊಂಡನು.

ಇದ್ದುದಿದ್ದಹಾಗೆಯೇ ಪಾಂಡವರಿಗೆ ನಿವಾರಿಸಲಾಗದ ಕಷ್ಟವು ಕೈಗಟ್ಟಿತೆಂದು ಭೀಷ್ಮನು ವ್ಯಥೆಪಟ್ಟನು. ದುರ್ಯೋಧನನ ದುಷ್ಟಚರ್ಯವನ್ನೂ

ಧೃತರಾಷ್ಟ್ರನ ದುಷ್ಟಬುದ್ಧಿಯನ್ನೂ ಕಂಡು ಅವನು ಚಿಂತಾಕುಲನಾದನು. ಹಿಂದೆ ನಡೆದ ಘಟನೆಗಳೆಲ್ಲವೂ ಒಂದೊಂದಾಗಿ ಅವನ ನೆನಪಿಗೆ ಬರಲಾರಂಭಿಸಿದುವು. ಅವನು ಪ್ರಯಾಸಪಟ್ಟು ವಿಚಿತ್ರವೀರ್ಯನನ್ನು ಸಾಕಿ ಸಲಹಿದುದನ್ನೂ, ಧೃತರಾಷ್ಟ್ರ ಪಾಂಡವರನ್ನು ಪ್ರೀತಿಪೂರ್ವಕವಾಗಿ ಸುಶಿಕ್ಷಿತರನ್ನು ಮಾಡಲು ಶ್ರಮಪಟ್ಟುದನ್ನೂ, ವಾತ್ಸಲ್ಯದಿಂದಲೂ ಅಧ್ಯವಸಾಯ ಪುರಸ್ಸರವಾಗಿಯೂ ಯುಧಿಷ್ಠಿರಾದಿ ಕುಮಾರರನ್ನು ಲಾಲಿಸಿ ಪಾಲಿಸಿದುದನ್ನೂ ನೆನೆನೆನೆದು ಅವನು ಕಣ್ಣೀರತುಂಬಿದನು. ಪಾಂಡುವು ತನ್ನ ಸುಖಕ್ಕೆಳಸದೆ ಧೃತರಾಷ್ಟ್ರನನ್ನು ಸುಖಪಡಿಸುವುದಕ್ಕೆ ಸರ್ವಪ್ರಯತ್ನವನ್ನೂ ಮಾಡುತ್ತಿದ್ದನು; ರಾಜಸಿಂಹಾಸನಾರೂಢನಾಗಿದ್ದರೂ ರಾಜಕಾರ್ಯಗಳಲ್ಲಿ ಯಾವಾಗಲೂ ಧೃತರಾಷ್ಟ್ರನನ್ನು ಆಲೋಚನೆ ಕೇಳುತ್ತಿದ್ದನು; ಅಂತಹವನ ಮಕ್ಕಳಿಗೆ ಎರಡು ಬಗೆದು ಧೃತರಾಷ್ಟ್ರನು ಅನಿಷ್ಟವನ್ನು ಮಾಡಲುದ್ಯುಕ್ತನಾಗಿರುವನಲ್ಲಾ! ದುರ್ಯೋಧನನ ದುರ್ಮಂತ್ರದಿಂದ ಅವರ ಪ್ರಾಣಕ್ಕೆ ಹಾನಿಬರುವಂತಿದೆಯಲ್ಲಾ! ಎಂಬೀ ವಿಧವಾದ ಚಿಂತೆಗಳು ತರಂಗದೋಪಾದಿಯಲ್ಲಿ ಮೇಲೆ ಮೇಲೆ ಅವನ ಮನಸ್ಸಿಗೆ ಬರುತ್ತಿದ್ದುವು. ತನ್ನಿಂದ ಶಿಕ್ಷಿತನಾದ ದುರ್ಯೋಧನನ ದುಷ್ಟವ್ಯಾಪಾರವನ್ನು ನೋಡಿ ಅವನು ಹಗಲಿರುಳೂ ಮರುಗಿದನು. ತಾನು ನಟ್ಟಮರದ ಫಲವು ವಿಷಪ್ರಾಯವಾಯಿತು. ದುಸ್ಸಹವಾದ ಮನೋವ್ಯಥೆಯಿಂದ ಅವನು ಬಳಲಿ ಬಡವಾದನು. ತಾನು ಪಾಂಡವಾದಿಗಳನ್ನು ಪಾಲಿಸುವ ಭಾರವನ್ನು ವಹಿಸಿದೆನೇಕೆ? ಹಸ್ತಿನಾಪುರವನ್ನು ತೊರೆದು ಸತ್ಯವತಿಯಂತೆಯೇ ವನವಾಸಕ್ಕೇಕೆ ಹೋಗಲಿಲ್ಲ? ಕುರುಕುಲದವರಿಂದ ಮರುಳಾಗಿ ತಾನು ಅವರ ಹಂಗಿಗೆ ಸಿಕ್ಕಿದುದೇಕೆ? ಕುರುರಾಜ್ಯದ ಹಿತಸಾಧನೆಗಾಗಿ ತಾನು ನಿಂತುದೇಕೆ? ಈಗೇನ ಮಾಡುವುದು? ಹೃದಯವಿದಾರಕವಾದ ಈ ಜ್ಞಾತಿವೈರವನ್ನು ನೋಡಿ ತಾನು ಹೇಗೆ ತಾನೆ ಸೈರಿಸಬಹುದು? ತನ್ನ ಬಾಳು ಬಾಳಲ್ಲ. ಹಗಲು ಮನಸ್ಸಿಗೆ ಶಾಂತಿಯಿಲ್ಲ; ಇರುಳು ನಿದ್ರೆಯಿಲ್ಲ. ತಾನು ರಾಜಪದವಿಯನ್ನು ಬಿಟ್ಟೆನು; ರಾಜಕಾರ್ಯಗಳಲ್ಲಿ ಕೈಹಾಕುವ ಅಧಿಕಾರವನ್ನು ತಾನಿಟ್ಟುಕೊಳ್ಳಲಿಲ್ಲ; ಅಂತಃಕಲಹದಿಂದ ಕುಲ ಕ್ಷಯವಾಗುವುದನ್ನು ತಾನು ಕಣ್ಣಾರೆ ನೋಡುವ ನಿಮಿತ್ತವಾಗಿಯೇ ವಿಧಾತನು ತನ್ನನ್ನು ಜೀವಸಹಿತ ಇಟ್ಟಿರುವನೇನೊ!—ಎಂದು ಈ ಬಗೆಯಾಗಿ ಹಂಬಲಿಸುತ್ತಿದ್ದನು.

ಇತ್ತ, ಯುಧಿಷ್ಠಿರಾದಿಗಳು ವಾರಣಾವತವನ್ನು ಸೇರಿದರು. ನಗರವಾಸಿಗಳು ಅವರನ್ನು ಆದರಪೂರ್ವಕವಾಗಿ ಬರಮಾಡಿಕೊಂಡರು. ಸಮದರ್ಶಿ ಯುಧಿಷ್ಠಿರನು ಅಹಂಕಾರಿಯಲ್ಲ; ಅವನು ಯಥಾಕ್ರಮವಾಗಿ ಬ್ರಾಹ್ಮಣ

ಕ್ಷತ್ರಿಯ ವೈಶ್ಯ ಶೂದ್ರರ ಮನೆಗೆ ಹೋಗಿ ಪ್ರೀತಿಪೂರ್ವಕವಾದ ಸುಭಾಷಣದಿಂದ ಎಲ್ಲರನ್ನೂ ಆಪ್ಯಾಯಿತರನ್ನಾಗಿ ಮಾಡಿದನು. ಪುರಜನರು ಈ ವಿಧವಾದ ಅವನ ಸದಾಚರಣೆಯಿಂದ ಪ್ರೀತರಾದರು. ವಾರಣಾವತದಲ್ಲಿ ಅರಗಿನ ಮನೆಯನ್ನು ಕಟ್ಟುವುದಕ್ಕೆ ದುರ್ಯೋಧನನು ತನ್ನ ಸೇವಕನಾದ ಪುರೋಚನನ್ನು ಮೊದಲೇ ಕಳುಹಿಸಿದ್ದನು. ಅವನು ಕ್ರೂರಪ್ರಕೃತಿಯುಳ್ಳವನು; ದುರ್ಯೋಧನನ ಅಪ್ಪಣೆಗೆ ಅನುರೂಪವಾದ ಕಪಟಸೌಜನ್ಯವನ್ನು ತೋರಿಸುತ್ತ ಪಾಂಡವರನ್ನು ರಮಣೀಯವಾದ ಒಂದು ಪ್ರಾಸಾದಕ್ಕೆ ಕರೆದುಕೊಂಡು ಹೋದನು. ಆ ಬಿಡದಿಯ ಮನೆಯಲ್ಲಿ ಅವರಿಗೆ ದಿವ್ಯ ಭಕ್ಷ್ಯಭೋಜ್ಯಗಳನ್ನೂ ಪಾನೀಯಗಳನ್ನೂ ಕೊಟ್ಟು ಸತ್ಕರಿಸಿ ಸಂತೋಷಪಡಿಸಲು ಯತ್ನಿಸಿದನು. ಯುಧಿಷ್ಠಿರನು ದುರ್ಯೋಧನನ ದುರಭಿಸಂಧಿಯನ್ನು ತಿಳಿದಿದ್ದರೂ ಯಾವ ಮಾತನ್ನೂ ಆಡದೆ, ತಾಯಿ ತಮ್ಮಂದಿರ ಸಮೇತನಾಗಿ ಆ ಮನೆಯಲ್ಲಿ ಇಳಿದು ಜೋಕೆಯಿಂದಿದ್ದನು. ಹತ್ತು ದಿವಸಗಳಾಯಿತು; ಪುರೋಚನನು ತಾನು ನಿರ್ಮಾಣಮಾಡಿದ ಹೊಸ ಮನೆಗೆ ಅವರನ್ನು ಕರೆದುಕೊಂಡು ಹೋಗಿ ಅಲ್ಲಿ ಅವರನ್ನು ಇಳಿಸಿದನು. ಯುಧಿಷ್ಠಿರನು ತಾಯಿ ತಮ್ಮಂದಿರೊಡನೆ ಆ ಮನೆಯನ್ನು ಹೊಕ್ಕನು. ಅರಗು, ಸಜ್ಜರಸ, ಎಣ್ಣೆ, ತುಪ್ಪ ಮೊದಲಾದ ಪದಾರ್ಥಗಳ ವಾಸನೆಯನ್ನು ಹಿಡಿದು, ಆ ಮನೆಯಲ್ಲಿರುವುದು ಅಪಾಯಕರವೆಂದು ತಿಳಿದರೂ ಪಾಂಡವರು ಆ ಸಂಗತಿಯನ್ನು ಕುರಿತು ಪುರೋಚನನ ಸಂಗಡ ಒಂದು ಮಾತನ್ನೂ ಆಡದೆ ಸುಮ್ಮನಿದ್ದರು. ಅವರು ಅವನಲ್ಲಿ ವಿಶ್ವಾಸವಿಲ್ಲದವರಾದರೂ ವಿಶ್ವಾಸವುಳ್ಳವರಂತೆ ತೋರ್ಪಡಿಸಿಕೊಂಡರು; ಅಸಂತುಷ್ಟರಾದರೂ ಸಂತುಷ್ಟರಾಗಿರುವಂತೆ ಕಾಣಿಸಿಕೊಂಡರು; ವಿಸ್ಮಯಪಡುತ್ತಿದ್ದರೂ ವಿಸ್ಮಯಪಡದವರಂತಿದ್ದರು; ಅಲ್ಲದೆ, ಮೈಮರೆತಿರದೆ ರಹಸ್ಯವಾಗಿ ಆತ್ಮರಕ್ಷಣೆಗೆ ತಕ್ಕ ಉಪಾಯಗಳನ್ನು ಆಲೋಚಿಸುತ್ತಿದ್ದರು. ತಾವು ಅಪಾಯವನ್ನು ಶಂಕಿಸುತ್ತಿರುವ ವಿಷಯವು ಪುರೋಚನನಿಗೆ ತಿಳಿಯದಿರುವಂತೆ ಅವರು ಪ್ರತಿ ದಿವಸವೂ ಬೇಟೆಯ ನೆವ ಮಾಡಿಕೊಂಡು ಹಗಲು ಅಡವಿಯಲ್ಲಿ ತಿರುಗಾಡುತ್ತಿದ್ದು ಹೊತ್ತುಹೋಗುತ್ತಲೆ ಮನೆಗೆ ಬರುತ್ತಿದ್ದರು. ಹೀಗೆ ಅವರು ಅರಗಿನ ಮನೆಯಲ್ಲಿ ವಾಸಮಾಡುತ್ತಿರಲು ಒಂದು ದಿನ, ವಿದುರನಿಗೆ ಆಪ್ತನಾದ ಒಬ್ಬ ಕೆಲಸಗಾರನು ಬಂದು ಪಾಂಡವರನ್ನು ಕಂಡು ವಿದುರನು ಹೇಳಿ ಕಳುಹಿಸಿದ ಅಂತರಂಗವನ್ನು ಏಕಾಂತವಾಗಿ ತಿಳಿಸಿ ಅರಗಿನ ಮನೆಯಿಂದ ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ಸುರಂಗವನ್ನು ಕೊರೆದು ದಾರಿಯನ್ನು ಮಾಡಿದನು. ಇತ್ತ, ಪುರೋಚನನು ಪಾಂಡವರು ನಿಶ್ಚಿಂತರಾಗಿರುವಂತೆ

ಹೊರಗೆ ತೋರ್ಪಡಿಸಿಕೊಂಡು ಓಡಾಡುತ್ತಿರುವುದನ್ನು ಕಂಡು ಆಹ್ಲಾದ ಪಡುತ್ತ ಅರಗಿನ ಮನೆಗೆ ಬೆಂಕಿಯನ್ನಿಡುವ ಸಮಯವನ್ನೇ ಕಾಯುತ್ತಿದ್ದನು.

ಒಂದು ದಿನ ಅರ್ಧರಾತ್ರಿಯಲ್ಲಿ ವಾರಣಾವತದ ಜನರೆಲ್ಲರೂ ಗಾಢನಿದ್ರೆ ಹೋಗುತ್ತಿದ್ದರು. ಸಮೀರಣನು ವೃಕ್ಷಶಾಖೆಗಳನ್ನು ಕೊಂಚ ಅಲ್ಲಾಡಿಸುತ್ತ, ಶಾಖೆಗಳಲ್ಲಿ ನಿದ್ದೆಹೋಗುತ್ತಿದ್ದ ಪಕ್ಷಿಗಳ ಶಾಂತಿಸುಖವನ್ನು ಕೊಂಚ ಕೆಡಿಸುತ್ತ, ಜನ ಕೋಲಾಹಲಶೂನ್ಯವಾದ ನಿಸ್ತಬ್ಧತೆಯನ್ನು ಕೊಂಚ ಭಂಗಪಡಿಸುತ್ತ ಸುಳಿದಾಡುತ್ತಿದ್ದನು. ಪುರೋಚನನು ಸುಖವಾಗಿ ನಿದ್ದೆಹೋಗುತ್ತಿದ್ದನು. ಆ ಸಮಯದಲ್ಲಿ ಭೀಮಸೇನನು ಪುರೋಚನನು ಮಲಗಿದ್ದ ಚಿಕ್ಕ ಮನೆಗೂ ಅರಗಿನ ಮನೆಯ ಬಾಗಿಲಿಗೂ ಬೆಂಕಿಯಿಟ್ಟನು. ಬಿರುಗಾಳಿಯೂ ಎದ್ದಿತು. ಮುಹೂರ್ತಮಾತ್ರದಲ್ಲಿ ಅರಗಿನ ಮನೆಯ ನಾಲ್ಕು ದಿಕ್ಕಿನಲ್ಲಿಯೂ ಉರಿಯೆದ್ದಿತು. ಒಡನೆಯೇ, ಪಾಂಡವರು ತಾಯಿಯೊಡನೆ ಸುರಂಗದ ಮಾರ್ಗವಾಗಿ ಅರಗಿನ ಮನೆಯನ್ನು ಬಿಟ್ಟು ಹೊರಟರು. ಬರುತ ಬರುತ ಅಗ್ನಿಜ್ವಾಲೆಯು ಮೇಲಕ್ಕೇರಿತು; ಕಿಡಿಗಳು ಗಗನಕ್ಕೆ ನೆಗೆದುವು. ಆ ಕಾಳರಾತ್ರಿಯಲ್ಲಿ ಆ ಅಗ್ನಿಜ್ವಾಲೆಯು ಪ್ರಜ್ವಲಿಸಿ ನಗರವನ್ನು ಬೆಳಗಿತು. ಪುರವಾಸಿಗಳು ಬೆರಗಾಗಿ ಹೆದರಿ ಹಾಸಿಗೆಯಿಂದೆದ್ದು ನೋಡಿದರು. ಅರಗಿನ ಮನೆಯು ಭಯಂಕರವಾಗಿ ಉರಿಯುತ್ತಿದ್ದಿತು. ಗಾಳಿಯು ಬಿರುಸಾದಹಾಗೆಲ್ಲ ಉರಿಯು ಹಬ್ಬುತ್ತ ಹೋಯಿತು. ಮನೆಯ ಮೇಲೆ ಮನೆ ಭಸ್ಮವಾಗುತ್ತ ಬಂದಿತು. ಪಾಂಡವರು ತಾಯಿಯೊಡನೆ ಸುರಕ್ಷಿತವಾಗಿ ಅರಗಿನ ಮನೆಯನ್ನು ಬಿಟ್ಟು ಹೋದ ಸಂಗತಿಯನ್ನು ಯಾರೂ ಅರಿಯದಿದ್ದರು. ಅವರು ಕುಂತಿಯ ಸಮೇತರಾಗಿ ಕಿಚ್ಚಿನಲ್ಲಿ ಮಡಿದರೆಂದೇ ಪುರವಾಸಿಗಳೆಲ್ಲರೂ ಭಾವಿಸಿದರು. ಅವರು ಹೋದರಲ್ಲಾ ಎಂದು ಎಲ್ಲರೂ ಗೋಳಿಡಲಾರಂಭಿಸಿದರು. ಬೆಳಗಾಗುತ್ತಲೆ ಎಲ್ಲರೂ ಕುಂತೀಪಾಂಡವರ ಅಸ್ತಿಗಳನ್ನು ಹುಡುಕುವ ಸಲುವಾಗಿ ಭಸ್ಮರಾಶಿಯನ್ನು ಬಗೆದರು. ಸುಟ್ಟು ಕರಿಯಾಗಿದ್ದ ಆರ್ವರ ಕಂಕಾಳಗಳು ಕಣ್ಣಿಗೆ ಬಿದ್ದುವು. ಒಬ್ಬ ಬೇಡಿತಿಯೂ ಅವಳ ಐವರು ಮಕ್ಕಳೂ ಆ ರಾತ್ರಿ ಅರಗಿನ ಮನೆಯಲ್ಲಿ ಮಲಗಿದ್ದರು. ಅವರನ್ನೇ ಎಲ್ಲರೂ ಕುಂತೀ ಪಾಂಡವರೆಂದೆಣಿಸಿ ಪಾಂಡವರು ತಾಯಿಯೊಡನೆ ಬೆಂದುಹೋದರೆಂದುಕೊಂಡು ಪರಿತಪಿಸಿ ಗೋಳಾಡಿದರು. ಈ ಸಂದಣಿಯಲ್ಲಿ ಆ ಕೆಲಸಗಾರನು ಸುರಂಗದ ಬಿಲವನ್ನು ಬೂದಿಯಿಂದ ಮುಚ್ಚಿ, ಯಾರೂ ಕಾಣದಂತೆ ಹೊರಟುಹೋದನು. ಪುರೋಚನನ ದಗ್ಧಾವಶಿಷ್ಟ ಕಂಕಾಳವು ಆ ಭಸ್ಮರಾಶಿಯಲ್ಲಿ ಕಂಡುಬಂದಿತು. ತರುವಾಯ, ಪಾಂಡವರೂ ಕುಂತಿಯೂ ಬೆಂದುಹೋದರೆಂಬುದರಲ್ಲಿ ಅಣು

ಮಾತ್ರವೂ ಸಂಶಯಪಡದೆ ಪುರಜನರು, "ಲಾಕ್ಷಾಭವನವು ಬೆಂದು ಹೋಯಿತು, ಪಾಂಡವರೂ ಕುಂತಿಯೂ ಸುಟ್ಟುಹೋದರು, ಪುರೋಚನನೂ ಸತ್ತನು" ಎಂದು ಧೃತರಾಷ್ಟ್ರನಿಗೆ ವರ್ತಮಾನವನ್ನು ಕೊಟ್ಟರು. ಆ ಸುದ್ದಿಯನ್ನು ಕೇಳಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಪ್ರಲಾಪಿಸುತ್ತ ಅತ್ತರು.

ಧೃತರಾಷ್ಟ್ರನು—"ಈ ದಿವಸ ನನ್ನ ತಮ್ಮ ಯಶೋವಂತನಾದ ಪಾಂಡುರಾಯನು ಸತ್ತನು. ವಂಶವಿವರ್ಧನರಾದ ಪಾಂಡವರೂ ಕುಂತಿಯ ಸಮೇತರಾಗಿ ಹೋದರು; ಇನ್ನು, ಧನದ ಮೂಲಕವಾಗಿ ಅವರಿಗೆ ಯಾವ ಯಾವ ಹಿತವನ್ನು ಮಾಡಲು ಶಕ್ಯವೋ ಅದೆಲ್ಲವನ್ನು ಮಾಡುವೆನು" ಎಂದು ಕಪಟಶೋಕವನ್ನು ತೋರಿಸಿ ಪಾಂಡವಾದಿಗಳಿಗೆ ಉದಕಕ್ರಿಯೆಗಳನ್ನು ಮಾಡುವ ಸಲುವಾಗಿ ಬಂಧುಬಳಗದೊಡನೆ ಗಂಗಾತೀರಕ್ಕೆ ಹೋದನು. ಉದಕಕ್ರಿಯೆಗಳು ನಡೆಯುತ್ತಿರುವಲ್ಲಿ, ವಿದುರನು ಧೃತರಾಷ್ಟ್ರನ ಮನೋಗತವನ್ನು ಬಲ್ಲವನಾದುದರಿಂದ, ಕುಟಿಲನೂ ಕಪಟಿಯೂ ಆದ ಆ ಧೃತರಾಷ್ಟ್ರನು ಏಕೆ ಹುಟ್ಟಿದನೋ ಎಂದು ಮನಸ್ಸಿನಲ್ಲಿ ಚಿಂತಿಸುತ್ತ, ಪಾಂಡವರು ಸುರಕ್ಷಿತರಾಗಿರುವರೆಂದು ತಿಳಿದಿದ್ದರೂ, ಅಳುತ್ತಿರುವ ಬಂಧುಮಿತ್ರರ ಸಂಗಡ ತಾನೂ ದುಃಖಪಡುತ್ತಿರುವವನಂತೆ ಕಾಣಿಸಿಕೊಂಡನು; ಮನಸ್ಸಿನಲ್ಲಿ ಮಾತ್ರ ಪಾಂಡವರು ಅರಗಿನ ಮನೆಯಿಂದ ತಪ್ಪಿಸಿಕೊಂಡು ಎಷ್ಟು ದೂರ, ಎಲ್ಲಿಗೆ ಹೋಗಿರಬಹುದೆಂದು ಚಿಂತಿಸುತ್ತಿದ್ದನು.

ಭೀಷ್ಮನಾದರೋ—"ಹಾ ಯುಧಿಷ್ಠಿರ! ಹಾ ಭೀಮ! ಹಾ ಧನಂಜಯ! ಹಾ ನಕುಲ! ಹಾ ಸಹದೇವ! ಹಾ ಪೃಥೆ! ನೀವೆಲ್ಲರೂ ಒಂದೇ ರಾತ್ರಿಯಲ್ಲಿ ಸ್ವರ್ಗಸ್ಥರಾದಿರಲ್ಲಾ! ಭೀಮಸೇನ ಧನಂಜಯರು ಬೆಂದುಹೋದರೆಂದು ನಾನು ಹೇಗೆ ನಂಬಲಿ? ಯುಧಿಷ್ಠಿರನು ಬ್ರಾಹ್ಮಣರಿಂದ ಧರ್ಮರಾಯನೆನಿಸಿಕೊಂಡನು, ಅವನು ಸತ್ಯವ್ರತನು, ಸತ್ಯವಾಕ್ಯನು, ಶುಭಲಕ್ಷಣ ಸಂಪನ್ನನು; ಅಂತಹವನು ಹೇಗೆ ಕಾಲವಶನಾದನು? ಅವನು ಯುವರಾಜನಾದ ತರುವಾಯ ಸತ್ಯಧರ್ಮಪ್ರವೃತ್ತಿಗಳಿಂದ ತಂದೆಗೂ ನನಗೂ ಕೀರ್ತಿಬರುವಂತೆ ನಡೆಯುತ್ತಿದ್ದನು. ಬಹು ಕಾಲ ಬೆಳೆಯಿಸಿದ ಮರವು ಫಲಕಾಲಕ್ಕೆ ಮುರಿದು ಬಿದ್ದಂತಾಯಿತಲ್ಲಾ! ಕುಂತಿಯು ಮಕ್ಕಳ ಮೇಲಣ ಪ್ರೀತಿಯಿಂದ ಸಹಗಮನ ಮಾಡುವ ಸಂಕಲ್ಪವನ್ನು ಬಿಟ್ಟಳು; ಈಗ ಅಪೂರ್ಣ ಮನೋರಥೆಯಾಗಿ ಮಕ್ಕಳೊಂದಿಗೆ ಬೆಂದುಹೋದಳು. ಭೀಮನು ಮಡಿದನೇ? ಅದು ಹೇಗೆ? ಅವನು ಮಹಾಬಾಹು, ಪರಾಕ್ರಮಶಾಲಿ. ಅವನು ಉರಿದುಹೋದ ವ್ಯಥೆ

ಯನ್ನು ನಾನು ಹೇಗೆ ಸಹಿಸಲಿ? ಅರ್ಜುನನೋ? ಅವನು ಮಹಾವೀರನು, ಧನುರ್ಧರ ಶ್ರೇಷ್ಠನು, ದೃಢಾಯುಧನು; ಅಷ್ಟೇ ಅಲ್ಲ, ಅತಿ ತ್ಯಾಗಿ. ಆ ಶೂರನು ಹೇಗೆ ಕಾಲವಶನಾದನು? ಸಿಂಹವಿಕ್ರಾಂತರಾದ ನಕುಲ ಸಹ ದೇವರು ಮಡಿದರೆಂದು ನಂಬಬಹುದೆ? ಮಕ್ಕಳಿರಾ! ವೃದ್ಧನೂ ದುರ್ಬಲನೂ ಆದ ನನ್ನನ್ನು ಬಿಟ್ಟು ಎಲ್ಲಿ ಹೋದಿರಿ? ಎಲೌ ಕುಂತೀ! ನೀನೆಲ್ಲಿ ಹೋದೆ? ವಾರಣಾವತಕ್ಕೆ ಹೋಗುತ್ತಿರುವಾಗ ದಾರಿಯಲ್ಲೇನು ಅಪಶಕುನಗಳಾ ದುವು? ಸಿಂಹಶಾರ್ದೂಲಗಳಿರಾ! ನನ್ನ ನಾಥರೇ! ನೀವು ಹೋಗಲಾಗಿ ನನಗೆ ಲೋಕವು ಕತ್ತಲೆ ಕವಿದಂತಿರುವುದು. ತರುಣಾದಿತ್ಯನಂತೆ ವರ್ಚಸ್ವಿಗಳಾದ ನಿಮ್ಮನ್ನು ನಾನು ಕಾಣುವುದೆಂದಿಗೆ? ನನಗೇನು ಗತಿ? ನಾನೆತ್ತ ಹೋಗಲಿ? ನನ್ನ ಮಕ್ಕಳನ್ನು ಎಲ್ಲಿ ನೋಡಲಿ? ಮಕ್ಕಳಿರಾ! ಹೋಗಬೇಡಿರಿ, ಬನ್ನಿರಿ, ನನ್ನಲ್ಲಿ ಕೋಪವನ್ನು ಬಿಡಿರಿ" ಎಂದು ಪ್ರಲಾಪಿಸಿದನು.

ಭೀಷ್ಮನು ಈ ತೆರವಾಗಿ ರೋದನ ಮಾಡುತ್ತಿರುವುದನ್ನು ನೋಡಿ, ವಿದುರನು—"ನರವ್ಯಾಘ್ರನೇ! ಧೈರ್ಯವನ್ನು ತಂದುಕೊ, ಶೋಕವನ್ನು ಬಿಡು" ಎಂದು ಹೇಳಿ ಅಂತರಂಗವಾಗಿ, ಪಾಂಡವರು ಸುರಕ್ಷಿತವಾಗಿದ್ದಾರೆಂದು ಸೂಚಿಸಿ, ಅವರಿಗೆ ಬಂದ ಗಂಡವು ತೊಲಗುವಂತೆ ತಾನು ಮಾಡಿದ ಸಂಚನ್ನು ವಿವರಿಸಿದನು. ಅದೆಲ್ಲವನ್ನು ಕೇಳಿ ಭೀಷ್ಮನು ಶೋಕವನ್ನು ಬಿಟ್ಟು, ವಿದುರನು ಮಾಡಿದ ಉಪಕಾರಕ್ಕೆ ಅವನನ್ನು ಬಹುವಾಗಿ ಶ್ಲಾಘಿಸಿದನು.

ಇತ್ತ, ಯುಧಿಷ್ಠಿರನು ತಾಯಿಯನ್ನೂ ತಮ್ಮಂದಿರನ್ನೂ ಕರೆದುಕೊಂಡು ಲಾಕ್ಷಾಭವನದಿಂದ ಹೊರಟು, ಯಾರೂ ಕಾಣದಂತೆ ಭಾಗೀರಥಿಯ ದಕ್ಷಿಣ ತೀರವನ್ನು ಸೇರಿ, ವಿದುರನು ಕಳುಹಿಸಿಕೊಟ್ಟ ಒಂದು ಓಡೆಯು ಸಿದ್ಧವಾಗಿರಲು, ಅದನ್ನು ಹತ್ತಿ ಭಾಗೀರಥಿಯನ್ನು ದಾಟಿ, ತಟವರ್ತಿಯಾದೊಂದು ವನವನ್ನು ಹೊಕ್ಕರು. ದುಷ್ಟ ದುರ್ಯೋಧನನ ದೆಸೆಯಿಂದ ಅವರ ಶಂಕೆಗೆ ಅವಧಿಯಿಲ್ಲವಾಯಿತು; ಚಿಂತೆಗೆ ಅಂತ್ಯವಿಲ್ಲವಾಯಿತು, ಕಷ್ಟಕ್ಕೆ ಪಾರವಿಲ್ಲ ವಾಯಿತು. ಭೀಮಬಲನಾದ ವೃಕೋದರನು ತಾಯಿಯನ್ನೂ ಅಣ್ಣ ತಮ್ಮಂದಿರನ್ನೂ ಕರೆದುಕೊಂಡು ಕ್ರೂರ ಮೃಗಪಕ್ಷಿಗಳಿಂದ ಸಮೃದ್ಧವಾದ ವನಗಳಲ್ಲಿ ನಡೆಯುತ್ತ ದಾರಿಯಲ್ಲಿ ಮೇಲೆ ಬಿದ್ದ ಹಿಡಿಂಬನೊಡನೆ ಹೆಣಗಿ ಅವನನ್ನು ಕೊಂದು, ಒಲಿದುಬಂದ ಅವನ ತಂಗಿ ಹಿಡಿಂಬೆಯನ್ನು ಮದುವೆಯಾದನು. ಅಲ್ಲಿಂದ ಐವರು ಸೋದರರೂ ಬ್ರಾಹ್ಮಣವೇಷವನ್ನು ತಾಳಿ ಜಟಾವಲ್ಕಲ ಕೃಷ್ಣಾಜಿನಗಳಿಂದ ತಮ್ಮ ಕ್ಷಾತ್ರತೇಜಸ್ಸನ್ನು ಮರೆಮಾಜಿ ಏಕಚಕ್ರನಗರವನ್ನು ಸೇರಿದರು. ಅಲ್ಲಿ ಪ್ರತಿದಿನವೂ ಉಷಃಕಾಲಕ್ಕೆದ್ದು

ಸ್ನಾನಾದಿ ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು ಭಿಕ್ಷಾನ್ನವನ್ನೆತ್ತಿ ಹೊಟ್ಟೆ ಹೊರೆಯುತ್ತ, ಭೋಜನಾನಂತರದಲ್ಲಿ ಕೊಂಚ ಹೊತ್ತು ಒಬ್ಬ ಬ್ರಾಹ್ಮಣನ ಮುಖದಿಂದ ತೀರ್ಥಕ್ಷೇತ್ರಗಳ ಮಾಹಾತ್ಮ್ಯವನ್ನೂ ಪುಣ್ಯಶ್ಲೋಕರ ಕಥೆಗಳನ್ನೂ ಕೇಳುತ್ತ, ಕೊಂಚಹೊತ್ತು ಸುತ್ತುಮುತ್ತಲಿದ್ದ ಪವಿತ್ರತಪೋವನಗಳನ್ನು ನೋಡಿ ತಮ್ಮ ಕಷ್ಟನಷ್ಟಗಳನ್ನು ಮರೆಯುತ್ತ ಇದ್ದು ಹಲವು ಕಾಲ ತಳ್ಳಿದರು.

ಈ ರೀತಿಯಲ್ಲಿ, ಕುಂತಿಭೋಜನ ಮಗಳೆನಿಸಿಕೊಂಡು, ಸರ್ವಲಕ್ಷಣ ಸಂಪನ್ನೆಯಾಗಿ, ಮಹಾರಾಜ ಪಾಂಡುವಿನ ಪಟ್ಟದರಸಿಯಾಗಿ, ಪಾಂಡವರ ವೀರಮಾತೆಯಾಗಿಯೂ ಕೂಡ ಕುಂತಿಯೂ, ತ್ರಿಲೋಕಾಧಿಪತ್ಯಕ್ಕೆ ಅರ್ಹನೆಂದು ಹೆಸರುಗೊಂಡೂ ಕೂಡ ಧರ್ಮರಾಯನೂ, ಅತುಲ ಭುಜಬಲನೆಂದು ಪ್ರಸಿದ್ಧನಾಗಿದ್ದೂ ಕೂಡ ಭೀಮನೂ, ಅನುಪಮ ಧನುಷ್ಮಂತನೆಂದು ಪ್ರಶಂಸೆಯನ್ನು ಪಡೆದೂ ಕೂಡ ಅರ್ಜುನನೂ, ಅಶ್ವಿನಿ ಕುಮಾರರಂತೆ ರೂಪಸಂಪನ್ನರಾಗಿದ್ದೂ ಕೂಡ ನಕುಲ ಸಹದೇವರೂ ಏಕಚಕ್ರ ನಗರದಲ್ಲಿ ಭಿಕ್ಷಾನ್ನದಿಂದ ಜೀವಿಸುತ್ತಿದ್ದರು. ಹೀಗಿರುವಲ್ಲಿ, ಪಾಂಚಾಲ ದೇಶದ ಮಹಾರಾಜ ದ್ರುಪದರಾಯನು ಕೃಷ್ಣೆಯೆಂಬ ತನ್ನ ಮಗಳಿಗೆ ತಕ್ಕ ವರನನ್ನು ಹವಣಿಸುವ ಪ್ರಯತ್ನದಲ್ಲಿದ್ದನು. ಈ ಶುಭವರ್ತಮಾನವನ್ನು ಭಿಕ್ಷೋಪಜೀವಿಗಳಾಗಿದ್ದ ಆ ರಾಜಪುತ್ರರೂ ರಾಜಮಹಿಷಿಯೂ ಕೇಳಿದರು.

ಆ ಕಾಲದ ರಮಣಿಯರಲ್ಲಿ ಕೃಷ್ಣೆಗೆಣೆಯಾದ ಲಾವಣ್ಯವತಿಯರಾರೂ ಇರಲಿಲ್ಲ. ಆ ನಿರುಪಮ ಸುಂದರಿಯನ್ನು ದ್ರುಪದನು ಧನುರ್ವಿದ್ಯಾವಿಶಾರದನಾದ ವರನಿಗೆ ಕೊಟ್ಟು ಮದುವೆ ಮಾಡಬೇಕೆಂದಿದ್ದನು. ತನ್ನಿಮಿತ್ತವಾಗಿ ಆ ರಾಜನು, "ಕುಲರೂಪಸಮನ್ವಿತನಾದ ಯಾವ ಕ್ಷತ್ರಿಯನು ಐದು ಬಾಣಗಳಿಂದ ನಾನಿಟ್ಟಿರುವ ಲಕ್ಷ್ಯವನ್ನು ಭೇಧಿಸಬಲ್ಲನೋ ಆ ಕ್ಷತ್ರಿಯನು ಪಾಂಚಾಲಿಯ ಪಾಣಿಗ್ರಹಣಕ್ಕೆ ಉಚಿತ ಪಾತ್ರನೆನಿಸಿಕೊಳ್ಳುವನು" ಎಂದು ರಾಜಮಂಡಲಿಯಲ್ಲಿ ಡಂಗುರ ಹೊಯ್ಸಿದನು. ಆ ಸುದ್ದಿಯನ್ನು ಕೇಳಿ, ಕನ್ಯಾರ್ಥಿಗಳಾದ ಅನೇಕ ರಾಜರು ಪಾಂಚಾಲ ನಗರಕ್ಕೆ ಹೊರಟರು. ಏಕಚಕ್ರ ನಗರದಲ್ಲಿ ಬ್ರಾಹ್ಮಣವೇಷಧಾರಿಗಳಾಗಿ ಭಿಕ್ಷಾಟನದಿಂದ ಜೀವಿಸುತ್ತಿದ್ದ ಪಾಂಡವರೂ, ಸ್ವಯಂವರವನ್ನು ನೋಡುವುದಕ್ಕೆ ಹೋಗುತ್ತಿದ್ದ ಬ್ರಾಹ್ಮಣರ ಜತೆಯಲ್ಲಿ, ಪಾಂಚಾಲ ನಗರಕ್ಕೆ ಹೋಗಿ, ಅಲ್ಲಿ ಒಬ್ಬ ಕುಂಬಾರನ ಮನೆಯಲ್ಲಿಳಿದುಕೊಂಡು, ಭಾಂಡದಲ್ಲಿ ಭಿಕ್ಷಾನ್ನವೆತ್ತಿ ಉದರಭರಣ ಮಾಡುತ್ತಿದ್ದರು.

ದ್ರುಪದರಾಯನು ನಗರದ ಈಶಾನ್ಯಭಾಗದಲ್ಲಿ ಸ್ವಯಂವರಮಂಟಪ

ವನ್ನು ಕಟ್ಟಿಸಿದನು. ಆ ಮಂಟಪದ ನಾಲ್ಕು ದಿಕ್ಕುಗಳಲ್ಲಿಯೂ ದೇಶದೇಶಗಳಿಂದ ಬಂದ ರಾಜರು ಇಳಿಯುವುದಕ್ಕೆ ಕಟ್ಟಿದ ಪ್ರಾಸಾದಗಳು ಶುಭ್ರವಾಗಿಯೂ ಉನ್ನತವಾಗಿಯೂ ಕಣ್ಗೊಳಿಸುತ್ತಿದ್ದುವು. ಸಭಾಮಂಟಪವು ಚಂದ್ರಾತಪದಿಂದಲೂ ಸುಗಂಧ ಪುಷ್ಪಮಾಲೆಗಳಿಂದಲೂ ಅಲಂಕೃತವಾಗಿದ್ದಿತು; ದ್ವಾರಗಳು ತೋರಣಗಳಿಂದ ವಿರಾಜಿಸುತ್ತಿದ್ದುವು; ರಂಗಭೂಮಿಯೆಲ್ಲವೂ ಅಗುರುಧೂಪದಿಂದಲೂ ಗಂಧಮಾಲ್ಯಗಳಿಂದಲೂ ಘಮಘಮಿಸುತ್ತಿದ್ದಿತು; ಮಂಗಳವಾದ್ಯವೂ ಮೊಳಗುತ್ತಿದ್ದಿತು.

ಇಟ್ಟಿದ್ದ ಮುಹೂರ್ತಕ್ಕೆ ಸರಿಯಾಗಿ ಸ್ವರಾಷ್ಟ್ರ ರಕ್ಷಕರೂ ಶುಭ ಕರ್ಮನಿಷ್ಠರೂ ಆದ ರಾಜರು ವಿಚಿತ್ರ ವೇಷಭೂಷಣಗಳಿಂದಲಂಕೃತರಾಗಿ ಸ್ವಯಂವರಮಂಟಪವನ್ನು ಹೊಕ್ಕು ಮಣಿಮಯ ಮಂಚಗಳ ಮೇಲೆ ಕುಳಿತುಕೊಂಡರು. ಯಥಾಸ್ಥಾನದಲ್ಲಿ ಪುರಜನರೂ ಜನಪದವಾಸಿಗಳೂ ಬಂದು ಕುಳಿತು ಮಂಟಪದ ವೈಚಿತ್ರ್ಯ ವೈಭವಗಳನ್ನು ನೋಡಿ ವಿಸ್ಮಯಪಡುತ್ತಿದ್ದರು. ಋಷಿಗಳೂ ಬ್ರಾಹ್ಮಣರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತು ಸ್ವಸ್ತಿವಾಚನ ಮಾಡುತ್ತಿದ್ದರು. ಪಾಂಡುತನಯರು ಒಡಬ್ರಾಹ್ಮಣರಂತೆ ಉಟ್ಟು ತೊಟ್ಟು ಬ್ರಾಹ್ಮಣಗೋಷ್ಠಿಯಲ್ಲಿ ಸೇರಿದ್ದರು. ದುರ್ಯೋಧನಾದಿ ಕೌರವರಾಯರು ಸುಸಜ್ಜಿತ ಭೂಪಾಲಕರ ನಡುವೆ ಅಟ್ಟಹಾಸದಿಂದ ಉನ್ನತ ಮಂಚಗಳ ಮೇಲೆ ಸುಖಾಸೀನರಾಗಿದ್ದರು.

ಅನಂತರ, ಮಂತ್ರವೇತ್ತರಾದ ಪುರೋಹಿತರು ವಿಧ್ಯುಕ್ತವಾಗಿ ಮಂಗಳಾಚರಣವನ್ನು ಮಾಡಲು, ಕೃಷ್ಣೆಯು ಸರ್ವಾಭರಣ ಭೂಷಿತೆಯಾಗಿ ಸುವರ್ಣ ವರಣಮಾಲೆಯನ್ನು ಕೈಯಲ್ಲಿ ಹಿಡಿದು ಒಡಹುಟ್ಟಿದ ಧೃಷ್ಟದ್ಯುಮ್ನನನ್ನೊಡಗೂಂಡು ಸಭಾಮಂಟಪವನ್ನು ಪ್ರವೇಶಮಾಡಿದಳು. ಅಲ್ಲಿ ಕುಳಿತಿದ್ದ ರಾಜಕುಮಾರರೊಳಗೆ ಯಾರ ಪುಣ್ಯವು ಚೆನ್ನಾಗಿರುವುದೋ ಎಂದು ನೋಡಲು ಸಭಾಸದರು ಕುತೂಹಲರಾದರು. ಪಾಂಚಾಲ ರಾಜಕುಮಾರನು ತಂಗಿಯೊಂದಿಗೆ ಸಭೆಯಮುಂದೆ ನಿಂತು ಮೇಘಗಂಭೀರಸ್ವರದಿಂದ ಆ ರಾಜರನ್ನು ಸಂಬೋಧಿಸಿ—"ರಾಜವರ್ಯರೇ! ಲಾಲಿಸಿರಿ; ಇಲ್ಲಿ ಈ ಬಿಲ್ಲೂ ಶರಪಂಚಕವೂ ಇರುವುವು. ಅಂತರಿಕ್ಷದಲ್ಲಿ ಕಟ್ಟಿರುವ ಆ ಕೃತಕ ಮತ್ಸ್ಯವೇ ಲಕ್ಷ್ಯವು. ಅದರ ಕೆಳಗಿರುವ ಯಂತ್ರದ ಮಧ್ಯದಲ್ಲಿ ಒಂದು ಕಂಡಿಯು ಕಾಣುತ್ತಿರುವುದು. ಇಲ್ಲಿ ನೀರಿನೊಳಗೆ ಕಾಣಿಸುವ ಆ ಮೀನಿನ ನೆರಳನ್ನು ನೋಡಿ ಯಂತ್ರದ ಮೇಲಿರುವ ಮೀನನ್ನು ಈ ಪಂಚಶರದಿಂದ ಗುರಿಯಿಟ್ಟು ಯಾವ ಭೂಪನು ಹೊಡೆಯುವನೋ, ಆ ಭೂಪನ ಕೊರಳಿಗೆ ನನ್ನ ತಂಗಿ ಕೃಷ್ಣೆಯು ವರಣ

ಮಾಲೆಯನ್ನು ಸಮರ್ಪಿಸುವಳು" ಎಂದು ನುಡಿದು, ಅಲ್ಲಿ ನೆರೆದಿದ್ದ ಭೂಪತಿಗಳ ನಾಮ ಕುಲ ಗೋತ್ರಗಳನ್ನು ಹೇಳಿ ತಂಗಿಯ ಕಡೆಗೆ ತಿರುಗಿ—"ಭದ್ರೆ! ಖ್ಯಾತರಾದ ಕ್ಷತ್ರಿಯರು ನಿನ್ನನ್ನು ಬಯಸಿ ಬಂದಿರುವರು. ಶುಭೆ! ಯಾರು ಲಕ್ಷ್ಯಭೇದವನ್ನು ಮಾಡುವರೋ ಅವರನ್ನು ವರಿಸು" ಎಂದನು.

ಧೃಷ್ಟದ್ಯುಮ್ನನು ಘಂಟಾಘೋಷವಾಗಿ ಆ ಮಾತನ್ನು ಹೇಳಿ ಹಿಂದಕ್ಕೆ ಹೋಗುತ್ತಲೆ ಸಭಾಮಂಟಪದಲ್ಲಿ ಕಲಕಲ ಶಬ್ದವು ಹುಟ್ಟಿತು. ಎಲ್ಲರೂ ಲಕ್ಷ್ಯವನ್ನು ನೋಡುವ ನಲುವಾಗಿ ಕಣ್ಣೆತ್ತಿದರು. ಶಬ್ದವು ಶಾಂತವಾಗುತ್ತಲೆ ರಾಜರು ಒಬ್ಬೊಬ್ಬರಾಗಿ ಲಕ್ಷ್ಯಭೇದವನ್ನು ಮಾಡಲು ಯತ್ನಿಸಿದರು. ಆದರೆ, ಯಾರೂ ಬಿಲ್ಲನ್ನು ಬಗ್ಗಿಸಿ ಹೆದೆಯನ್ನೇರಿಸಲಾರದೆ ನಾಚಿ ತಂತಮ್ಮ ಸ್ಥಾನಕ್ಕೆ ಹೋಗಿ ಕುಳಿತರು. ಅಲ್ಲಿದ್ದ ದುರ್ಯೋಧನ ಪ್ರಭೃತಿಗಳೂ ಶರ ಸಂಧಾನದಲ್ಲಿ ಭಗ್ನಮನೋರಥರಾದರು. ಛದ್ಮವೇಷಧಾರಿಯಾದ ಅರ್ಜುನನ ಗುರುತನ್ನು ಯಾರೂ ಹಿಡಿಯಲಾರದಿದ್ದರು; ದುರ್ಯೋಧನಾದಿಗಳಿಗೂ ಅದು ಸಾಧ್ಯವಾಗಲಿಲ್ಲ. ಬಲದೃಪ್ತರಾದ ಕ್ಷತ್ರಿಯರು ಒಬ್ಬೊಬ್ಬರಾಗಿ ಹತೋದ್ಯಮರೂ ಹತಾಶರೂ ಆದ ಬಳಿಕ, ಬ್ರಾಹ್ಮಣವೇಷಧಾರಿಯಾದ ಅರ್ಜುನನು ಪಂಜೆಯನ್ನು ಕೊಡವಿಕೊಂಡು ಧನುಸ್ಸಿನ ಬಳಿಗೆ ಹೋಗುತ್ತಿರುವುದನ್ನು ನೋಡಿ ಎಲ್ಲರೂ ಗುಲ್ಲೆಬ್ಬಿಸಿದರು. ಅಲ್ಲಿದ್ದ ಕೆಲ ಬ್ರಾಹ್ಮಣರು—"ಅಸ್ತ್ರ ವಿದ್ಯಾವಿಶಾರದರಾದ ಮಹಾರಥರು ಆ ಧನುಸ್ಸನ್ನು ಬಗ್ಗಿಸಲಾರದೆ ಹೋದರು; ಈ ಬಡಬ್ರಾಹ್ಮಣನು ಆ ವಿದ್ಯೆಯ ಗಂಧವನ್ನೇ ಕಾಣನು; ಅದರ ಮೇಲೆ ದುರ್ಬಲನು; ಇನ್ನು, ಧನುಸ್ಸನ್ನು ಬಗ್ಗಿಸಲಾಪನೆ? ಈ ವಟುವಿಗೆ ಇದೆಲ್ಲಿಯ ಚಾಪಲ್ಯ? ಇವನೇಕೆ ಈ ಸಾಹಸಕ್ಕೆ ಹೋಗುವನು? ಈ ಭೂಪತಿಗಳ ನಡುವೆ ನಾವೆಲ್ಲರೂ ಹಾಸ್ಯಾಸ್ಪದರಾಗುವೆವು; ಅದಕ್ಕೆ ಸಂದೇಹವಿಲ್ಲ" ಎಂದು ಮಾತನಾಡಿಕೊಂಡರು. ಇನ್ನು ಕೆಲವರು, ಬ್ರಾಹ್ಮಣರಿಗೆ ಯಾವುದು ಅಸಾಧ್ಯ? ಜಲಪಾನದಿಂದಲೋ ವಾಯುಭಕ್ಷಣದಿಂದಲೋ ಫಲಾಹಾರ ದಿಂದಲೋ ಪ್ರಾಣಧಾರಣೆಮಾಡಿ ನವೆದಿದ್ದರೂ ಅವರು ದೃಢವ್ರತರಾಗಿ ತಪೋನಿಷ್ಠೆಯಿಂದ ಬಲಿಷ್ಠರಾಗಿರುವರು. ಜಾಮದಗ್ನ್ಯನು ಯುದ್ಧದಲ್ಲಿ ಕ್ಷತ್ರಿಯರನ್ನು ಸಂಹಾರಮಾಡಲಿಲ್ಲವೆ? ಅಗಸ್ತ್ಯನು ಬ್ರಹ್ಮತೇಜಸ್ಸಿನಿಂದ ಅಗಾಧ ಸಮುದ್ರವನ್ನು ಪಾನಮಾಡಿಬಿಡಲಿಲ್ಲವೆ?" ಎಂದುಕೊಂಡರು. ಮತ್ತೆ ಕೆಲವರು—"ಈ ಬ್ರಾಹ್ಮಣ ವಟುವು ವರ್ಚಸ್ವಿ, ದೃಢಕಾಯನು, ಉತ್ಸಾಹಶಾಲಿ; ಇವನ ಸಾಹಸವನ್ನು ನೋಡಿದರೆ ಇವನು ಗೆದ್ದರೂ ಗೆಲ್ಲಬಹುದು" ಎಂದು ಹೇಳಿಕೊಳ್ಳುತ್ತಿದ್ದರು.

ಹೀಗೆ ಹಲವರು ಹಲವು ಬಗೆಯಲ್ಲಿ ಬಾಯಿಗೆ ಬಂದಂತೆ ಮಾತನಾಡಿಕೊಳ್ಳು ತ್ತಿದ್ದ ಹಾಗೆಯೇ ಧನುಸ್ಸಿನ ಹತ್ತಿರ ನಿಂತಿದ್ದ ಅರ್ಜುನನು—"ಬ್ರಾಹ್ಮಣನು ಈ ಧನುಸ್ಸನ್ನು ಏರಿಸಬಹುದೋ ?" ಎಂದು ಧೃಷ್ಟದ್ಯುಮ್ನನನ್ನು ಕೇಳಿದನು.

ಅದಕ್ಕವನು, ಆಗಬಹುದೆನ್ನುತ್ತಲೆ ಅರ್ಜುನನು ಶ್ರೀ ಕೃಷ್ಣನ ಸ್ಮರಣೆ ಮಾಡಿ, ಆಟವಾಡುವನಂತೆ ಬಿಲ್ಲಿಗೆ ಹೆದೆಯನ್ನೇರಿಸಿ ಪಂಚಬಾಣಗಳನ್ನು ತೊಡಿಸಿ ಧೃಷ್ಟದ್ಯುಮ್ನನು ಹೇಳಿದಂತೆಯೇ ಲಕ್ಷ್ಯವನ್ನು ಭೇದಿಸಿ ನೆಲಕ್ಕೆ ಕೆಡವಿದನು. ಒಡನೆಯೇ, ಸಭೆಯಲ್ಲಿ ಮಹಾ ಕೋಲಾಹಲವುಂಟಾಯಿತು. ಬ್ರಾಹ್ಮಣರು ತಂತಮ್ಮ ಉತ್ತರೀಯವನ್ನಾಡಿಸುತ್ತ ತಮ್ಮ ಉಲ್ಲಾಸವನ್ನು ತೋರಿದರು. ವಾದಕರು ಉತ್ಸಾಹದಿಂದ ತೂರ್ಯಧ್ವನಿಯನ್ನು ಮಾಡಿದರು. ಸ್ತುತಿಪಾಠಕರು ಮಧುರಸ್ವರದಿಂದ ಪಾಡಿದರು ; ಮಣಿಮಯ ಮಂಚದಮೇಲೆ ಅಟ್ಟಹಾಸದಿಂದ ಕುಳಿತಿದ್ದ ರಾಜರು ಲಜ್ಜೆಯಿಂದ ಅಧೋವದನರಾಗಿ ತಮ್ಮನ್ನು ತಾವೇ ಹೀಯಾಳಿಸಿಕೊಂಡರು. ಕೃಷ್ಣೆಯು ಲಕ್ಷ್ಯಭೇದದಲ್ಲಿ ಅದ್ವಿತೀಯ ನೆನಿಸಿಕೊಂಡು ರಣದುರ್ಜಯನಾಗಿದ್ದ ಪಾರ್ಥನ ಸಮೀಪಕ್ಕೆ ಹೋಗಿ ಆ ರಾಜಕುಮಾರನ ಕೊರಳಿಗೆ ಕೈಯಲ್ಲಿದ್ದ ಪುಷ್ಪಮಾಲೆಯನ್ನು ಸಮರ್ಪಿಸಿದಳು.

ಅದನ್ನು ನೋಡಿ, ಅಲ್ಲಿ ಸೇರಿದ್ದ ಕ್ಷತ್ರಿಯ ವೀರರು, ದ್ರುಪದರಾಯನು ತಮ್ಮೆಲ್ಲರನ್ನೂ ತಿರಸ್ಕರಿಸಿ ಒಬ್ಬ ಬಡಬ್ರಾಹ್ಮಣನಿಗೆ ತನ್ನ ಮಗಳನ್ನು ಕೊಟ್ಟನೆಂದು ಕೋಪಗೊಂಡು ಅವನನ್ನು ದಂಡಿಸಬೇಕೆಂದು ಹೊರಟರು. ದ್ರುಪದನು ರಕ್ಷಿಸಿಕೊಳ್ಳಲು ಶಕ್ತನಾಗಿದ್ದರೂ, ಪಾಂಡುಪುತ್ರರು ಅವರ ಮೇಲೆ ಕಾಳಗಕ್ಕೆ ನಿಂತರು. ಬ್ರಾಹ್ಮಣವೇಷಧಾರಿಯಾದ ಅರ್ಜುನನು ಕರ್ಣನನ್ನು ಓಡಿಸಿದನು; ಭೀಮನು ಶಲ್ಯನ ಸಂಗಡ ಕಾದಿ ಅವನನ್ನು ನೆಲಕ್ಕೆ ಕೆಡಪಿದನು ; ಧರ್ಮರಾಯನು ದುರ್ಯೋಧನನನ್ನು ಗೆದ್ದನು ; ನಕುಲ ಸಹದೇವರು ದುಃಶಾಸನಾದಿಗಳನ್ನು ಸೋಲಿಸಿದರು. ತರುವಾಯ, ರಣವೀರರಾದ ಪಾಂಡವರು ದ್ರೌಪದಿಯನ್ನು ಕರೆದುಕೊಂಡು ತಾವು ಇಳಿದಿದ್ದ ಕುಂಬಾರನ ಮನೆಗೆ ಹೋದರು.

ದ್ರೌಪದಿಯು ಬ್ರಾಹ್ಮಣವೇಷವನ್ನು ಧರಿಸಿದ್ದ ಅರ್ಜುನನ ಕಂಠಕ್ಕೆ ಹಾರವನ್ನು ಹಾಕಿದುದನ್ನು ನೋಡಿ, ದ್ರುಪದರಾಯನು ತನ್ನ ಮಗಳು ಒಬ್ಬ ಬಡಬ್ರಾಹ್ಮಣನನ್ನು ಕೈಹಿಡಿದಳೆಂದು ಕೊರಗಿದನು. ಕಾಲಕ್ರಮ ದಲ್ಲಿ ಅವನು ಕ್ಷತ್ರಿಯಕುಲಪ್ರದೀಪನಾದ ಪಾರ್ಥನೆಂದು ತಿಳಿಯುತ್ತಲೆ ಸಂತೋಷಭರಿತನಾಗಿ ದ್ರೌಪದಿಯನ್ನು ಅತಿವೈಭವದಿಂದ ಪಾಂಡವರೈವರಿಗೂ ಧಾರೆಯೆರೆದುಕೊಟ್ಟನು.

ರೂಪಲಕ್ಷಣಸಮನ್ವಿತೆಯೂ ಸದಾಚಾರಸಂಪನ್ನೆಯೂ ಆದ ದ್ರೌಪದಿಯು ಅತ್ತೆಗೆ ನಮಸ್ಕಾರ ಮಾಡಿ ಕೈಜೋಡಿಸಿಕೊಂಡು ನಿಂತುಕೊಳ್ಳಲು, ಕುಂತಿಯು—"ರೋಹಿಣಿಯು ಚಂದ್ರನಿಗೂ, ದಮಯಂತಿಯು ನಳನಿಗೂ, ಲಕ್ಷ್ಮಿಯು ನಾರಾಯಣನಿಗೂ ಇರುವಂತೆ ನೀನು ನಿನ್ನ ಗಂಡಂದಿರಿಗೆ ಪತ್ನಿಯಾಗಿರು; ಸುಪುತ್ರರನ್ನು ಪಡೆ; ಭೋಗೈಶ್ವರ್ಯಸಂಪನ್ನೆಯಾಗಿ ಪತಿವ್ರತೆಯಾಗಿ ಅತಿಥಿಗಳನ್ನೂ ಸಾಧುಗಳನ್ನೂ ವೃದ್ಧರನ್ನೂ ಗುರುಜನರನ್ನೂ ಯಥಾನ್ಯಾಯವಾಗಿ ಪೂಜಿಸುತ್ತ ಶತಾಯುಷ್ಮಂತೆಯಾಗಿರು" ಎಂದು ಸೊಸೆಯನ್ನು ಹರಸಿದಳು. ವಿವಾಹವಾದನಂತರ ಪಾಂಡವರು ತಾಯಿಯ ಸಮೇತರಾಗಿ ಕೆಲವು ಕಾಲ ದ್ರುಪದರಾಯನ ಮನೆಯಲ್ಲಿ ಸುಖದಿಂದ ವಾಸಮಾಡುತ್ತಿದ್ದರು.

ಇತ್ತ, ಕುಂತಿಯೂ ಕುಂತೀಪುತ್ರರೂ ಅರಗಿನ ಮನೆಯಿಂದ ತಪ್ಪಿಸಿಕೊಂಡು ಹೋಗಿ ಜೀವಸಹಿತವಿರುವ ಸಂಗತಿಯೂ ಪಾಂಚಾಲನಗರದಲ್ಲಿ ಅರ್ಜುನನು ಕೃತಕಮತ್ಸ್ಯವನ್ನು ಭೇದಿಸಿ ತನ್ನ ಭ್ರಾತೃಗಳನ್ನು ಕೂಡಿ ದ್ರೌಪದಿಯನ್ನು ಮದುವೆಯಾದ ಸುದ್ದಿಯೂ ಹೊರಬಿದ್ದು, ಸ್ವಯಂವರಕ್ಕೆ ಬಂದಿದ್ದ ವೀರರೆಲ್ಲರಿಗೂ ಬೇಹುಕಾರರಿಂದ ತಿಳಿಯಬಂದಿತು. ಈ ಶುಭವಾರ್ತೆಯು ಊರೂರಿಗೂ ಕೇರಿಕೇರಿಗೂ ಹರಡಿತು.

ಆ ಶುಭವಾರ್ತೆಯು ಉಭಯಕುಲ ಪಿತಾಮಹನಾದ ವೃದ್ಧ ಭೀಷ್ಮನ ಕಿವಿಗೂ ಬಿದ್ದಿತು. ಆ ವೃದ್ಧನ ಆಹ್ಲಾದಕ್ಕೆ ಮೇರೆಯಿಲ್ಲದಂತಾಯಿತು. ಅಂದಿನ ವರೆಗೆ, ಅವನ ವ್ಯಥೆಗೆ ಪಾರವಿಲ್ಲದೆ ಇದ್ದಿತು; ಅವನ ಮುಖಮಂಡಲದಲ್ಲಿ ಗೆಲವಿರಲಿಲ್ಲ; ಹೃದಯದಲ್ಲಿ ಶಾಂತಿಯಿರಲಿಲ್ಲ; ಧೃತರಾಷ್ಟ್ರ ದುರ್ಯೋಧನಾದಿಗಳ ದುರಾಲೋಚನೆಗಳನ್ನೂ ದುಷ್ಕೃತ್ಯಗಳನ್ನೂ ಕಂಡು ಕಂಡು ಮರುಗುತ್ತಿದ್ದನು; ಅವರ ದುರ್ವರ್ತನದಿಂದ ಕುರುಕುಲಕ್ಕೆ ಬಂದ ದುರ್ಗತಿಯನ್ನು ನೆನೆನೆನೆದು ಮೃತಪ್ರಾಯನಾಗಿದ್ದನು; ಮೂರ್ಖರಾದ ಅವರ ರಾಜಕೀಯಕಾರ್ಯಗಳು ನಿಂದನೀಯವಾದುವೆಂದು ತಿಳಿದಿದ್ದರೂ ತನ್ನ ಯತ್ನವು ನಡೆಯದೆಂದು ಉದಾಸೀನನಾಗಿ ಕಂಡೂ ಕಾಣದವನಂತಿದ್ದು ಸಮಯಬಂದಾಗ ಸ್ಪಷ್ಟೋಕ್ತಿಯನ್ನಾಡದೆ ಬಿಡುತ್ತಿರಲಿಲ್ಲ. ದುರ್ಯೋಧನನು ಅವನ ಬುದ್ಧಿವಾದವನ್ನು ಕೇಳುತ್ತಿರಲಿಲ್ಲ. ಆದರೂ ಬೇಸರದೆ, ಭೀಷ್ಮನು ಅವನ ಚಿತ್ತವನ್ನು ಶುದ್ಧಿಮಾಡುವುದರಲ್ಲಿದ್ದನೇ ಹೊರತು ಅವನನ್ನು ಪದಭ್ರಷ್ಟನನ್ನು ಮಾಡಿ ಕೆಡಿಸುವ ಆಲೋಚನೆ ಮಾಡಲಿಲ್ಲ. ಅವನು ತನಗೆ ಅನ್ನದಾತನು, ತನ್ನನ್ನು ಪಾಲಿಸುತ್ತಿರುವ ಪ್ರಭು, ಅವನಿಗೆ ವಿರೋಧವಾಗಿ ನಡೆಯುವುದು ತನಗೆ ಧರ್ಮವಲ್ಲ ಎಂದೆಣಿಸುತ್ತಿದ್ದನು; ಪಾಂಡವರ ವಿಷಯದಲ್ಲಿ ಅವನು

ಮಾಡಿದ ಅನ್ಯಾಯಗಳನ್ನೂ, ಅವರನ್ನು ಪಡಿಸಿದ ಪಾಡನ್ನೂ ನೋಡಿ ಮರ್ಮಾಹತನಾದನು. ಆದರೂ, ಲೋಕೋತ್ತರವಾದ ಅವನ ಚರಿತೆಯು ಸರ್ವಾವಸ್ಥೆಯಲ್ಲಿಯೂ ನಿರ್ದುಷ್ಟವಾಗಿದ್ದಿತು, ಪರಮ ಪವಿತ್ರವಾಗಿದ್ದಿತು. ಅವನ ಒಂದೊಂದು ಕಾರ್ಯವೂ ಅವನ ಮಹತ್ತರವಾದ ಪರಾರ್ಥಪರತೆಗೂ ನಿಶ್ಚಲವಾದ ಕರ್ತವ್ಯಬುದ್ಧಿಗೂ ನಿದರ್ಶನವಾಗಿದ್ದಿತು. ಆ ವೃದ್ಧವೀರನು ಪಾಂಡವರು ಸುರಕ್ಷಿತವಾಗಿರುವುದೇ ಅಲ್ಲದೆ, ಅರ್ಜುನನ ಬಲವೀರ್ಯ ಪ್ರತಾಪಗಳಿಂದ ಅವರಿಗೆ ಪಾಂಚಾಲಿಯ ಪಾಣಿಗ್ರಹಣವೂ ಆಯಿತೆಂಬುದನ್ನು ಕೇಳಿ ಆನಂದಾಶ್ರುಪೂರ್ಣನಾಗಿ ಸರ್ವಸಿದ್ಧಿಪ್ರದಾಯಕನಾದ ಸ್ವಾಮಿಯ ಸನ್ನಿಧಿಯಲ್ಲಿ ಮಾತೃಸಮೇತರಾದ ಪಾಂಡವರಿಗೆ ಕುಶಲವಾಗಲೆಂದು ಶುದ್ಧಾಂತಃಕರಣದಿಂದ ಪ್ರಾರ್ಥಿಸುತ್ತಿದ್ದನು.

ಪಾಂಡವರ ಅಭ್ಯುದಯವನ್ನು ಕೇಳಿ ಭೀಷ್ಮದ್ರೋಣ ವಿದುರಾದಿಗಳು ಎಷ್ಟು ಸಂತೋಷಪಟ್ಟರೋ ಅಷ್ಟಕ್ಕೆ ಐಮಡಿಯಾಗಿ ಧೃತರಾಷ್ಟ್ರ ದುರ್ಯೋಧನಾದಿಗಳು ದುಃಖಿಸಪಟ್ಟರು. ಯಾರು ಬೆಂದು ಬೂದಿಯಾದರೆಂದು ಆ ದುಷ್ಟರು ಸಂತೋಷಪಟ್ಟರೋ ಅವರು ಇನ್ನೂ ಬದುಕಿರುವರು; ಸ್ವಯಂವರ ಸಭೆಯಲ್ಲಿ ಲಕ್ಷ್ಯಭೇದವನ್ನು ಮಾಡಿ ಪಾಂಚಾಲಿಯನ್ನು ಪಡೆದ ಆ ಬಡಬ್ರಾಹ್ಮಣ ವಟುವೇ ಅರ್ಜುನನು; ಯಾವ ಬ್ರಾಹ್ಮಣ ವೇಷಧಾರಿಗಳ ವಿಕ್ರಾಂತಿಗೆ ಹೆದರಿ ಕರ್ಣ ಶಲ್ಯ ದುರ್ಯೋಧನ ದುಃಶಾಸನಾದಿಗಳು ಪಲಾಯನ ಮಾಡಿದರೋ ಆ ಪ್ರಚಂಡರೇ ಪಾರ್ಥ ಭೀಮಸೇನ ಯುಧಿಷ್ಠಿರ ನಕುಲ ಸಹದೇವರು—ಎಂದು ಕೇಳಿ ಅವರು ಬೆಚ್ಚಿ ಬೆದರಿ ಸ್ತಂಭೀಭೂತರಾದರು. ಇತರ ರಾಷ್ಟ್ರಾಧಿಪತಿಗಳೂ ಕೂಡ, ಧೃತರಾಷ್ಟ್ರ ದುರ್ಯೋಧನಾದಿಗಳ ಕುಹಕೋಪಾಯದಿಂದ ಪಾಂಡವರು ತಾಯಿಯ ಸಮೇತರಾಗಿ ವಾರಣಾವತದಲ್ಲಿ ಮಡಿದರೆಂದು ಕೇಳಿ ಎಷ್ಟು ಶೋಕಪಡುತ್ತಿದ್ದರೋ, ಈಗ ಆ ಧಾರ್ಮಿಕರೂ ವೃತ್ತಸಂಪನ್ನರೂ ಆದ ಯುಧಿಷ್ಠಿರಾದಿಗಳು ಸತ್ತು ಹುಟ್ಟಿದಂತಾಯಿತೆಂದು ಅಷ್ಟು ಸಂತೋಷಪಟ್ಟು, ಧೃತರಾಷ್ಟ್ರಾದಿಗಳನ್ನು ಧಿಕ್ಕರಿಸಿದರು. ನಿಸ್ಪೃಹನಾಗಿದ್ದರೂ, ಅವರ ಸಹವಾಸದಲ್ಲಿದ್ದುದರಿಂದ, ಭೀಷ್ಮನೂ ಆ ಧಿಕ್ಕಾರಕ್ಕೆ ಗುರಿಯಾದನು.

ಈ ಸ್ಥಿತಿಯಲ್ಲಿ ದುರ್ಯೋಧನಾದಿಗಳು ಮುಂದೆ ಮಾಡತಕ್ಕುದೇನೆಂದು ಶಕುನಿ ಶಲ್ಯ ಮೊದಲಾದವರನ್ನು ಕೂಡಿ ಆಲೋಚನೆ ಮಾಡತೊಡಗಿದರು. ಶಕುನಿಯು—"ಪಾಂಡವರು ಹೀನಸ್ಥಿತಿಯಲ್ಲಿರುವರು; ದ್ರುಪದರಾಯನು ಕೂಡ ಅಲ್ಪಬಲವೀರ್ಯವುಳ್ಳವನು. ಪಾಂಡವರನ್ನು ನಾಶಮಾಡಿಯೇ ತೀರ

ಬೇಕು; ಅದಕ್ಕೆ ಇದೇ ಸಮಯ; ಅವರು ಎಷ್ಟರವರೆಂದು ಬಿಟ್ಟರೆ ಮುಂದೆ ಅವರನ್ನು ಸಂಹರಿಸುವುದು ಕಷ್ಟವಾಗುವುದು" ಎಂದು ನುಡಿದನು.

ದುರ್ಮತಿಯಾದ ಶಕುನಿಯ ಮಾತನ್ನು ಕೇಳಿ ಸೋಮದತ್ತನ ಮಗನಾದ ಭೂರಿಶ್ರವನು—"ನಮಗಿರುವ ಸಾಹಾಯ್ಯಸಂಪತ್ತಿಯನ್ನೂ ನಮ್ಮ ಶತ್ರುಗಳ ಸಾಹಾಯ್ಯಸಂಪತ್ತಿಯನ್ನೂ ವಿಚಾರಮಾಡಿ ಕಾರ್ಯಮಾಡಬೇಕು. ಈಗ ಪಾಂಡವರಿಗೆ ಮಿತ್ರಬಲವಿದೆ, ಕೋಶಬಲವಿದೆ, ಸ್ವಯಂಬಲಿಷ್ಠರು, ಪರಾಕ್ರಮ ಶಾಲಿಗಳು. ಅರ್ಜುನನು ಸರ್ವಜನಪ್ರಿಯನಾಗಿದ್ದಾನೆ; ಅವನು ಅಯುಕ್ತ ವನ್ನಾಗಲಿ, ಅನೃತವನ್ನಾಗಲಿ, ಅಪ್ರಿಯವನ್ನಾಗಲಿ ಆಡುವನಲ್ಲ. ಇಂತಹ ಗುಣಸಂಪನ್ನರೂ ರಾಜಲಕ್ಷಣಸಂಪನ್ನರೂ ಆದವರನ್ನು ನಿರ್ಮೂಲಮಾಡ ಬಲ್ಲವರನ್ನು ನಾನು ಕಾಣೆನು. ಅವರ ಶಕ್ತಿಪ್ರಭಾವವು ವಿಪುಳವಾದುದು. ಯುಧಿಷ್ಠಿರನು ಸಾಮ ದಾನ ಭೇದ ದಂಡೋಪಾಯಗಳನ್ನು ಬಲ್ಲವನು. ದ್ರುಪದನು ಸಕಲ ಸಾಹಿತ್ಯವನ್ನುಳ್ಳವನು. ಅವನ ಮೇಲೆ ನಮ್ಮ ಕೈ ನಡೆಯದು. ಆದುದರಿಂದ, ಪಾಂಡವರ ಸಂಗಡ ಸಂಧಿಮಾಡಿಕೊಳ್ಳುವುದು ಸುಕರವಾಗಿಯೂ ಕ್ಷೇಮಕರವಾಗಿಯೂ ನನಗೆ ತೋರುವುದು" ಎಂದನು.

ಕರ್ಣನು ಭೂರಿಶ್ರವನ ಮಾತನ್ನು ಕೇಳಿ—"ಭೂರಿಶ್ರವನು ಕಾಲಜ್ಞನೇ ಅಹುದು; ಅವನು ಹೇಳಿದುದೆಲ್ಲವೂ ನೀತಿಪೂರ್ವಕವಾಗಿಯೂ ಅರ್ಥವತ್ತಾ ಗಿಯೂ ಇದೆ. ಅವನ ಮಾತನ್ನು ಕುರಿತು ನಾನು ಅಸೂಯೆ ಪಡೆನು. ಆದರೂ ನಾನು ಹೇಳುವುದನ್ನೂ ಕೇಳಿರಿ. ಮನುಷ್ಯನು ಹೀಗೋ ಹಾಗೋ ಎಂದು ದ್ವೈಧೀಭಾವದಿಂದ ಯಾವ ಕಾರ್ಯಕ್ಕೂ ಹೋಗಬಾರದು. ಮನಸ್ಸು ಇಬ್ಬಗೆಯಾಗಿದ್ದಲ್ಲಿ ಕಾರ್ಯಸಿದ್ಧಿಯಾಗದು. ಈಗ ಯುದ್ಧಕ್ಕೆ ಹೋಗುವುದೇ ಕರ್ತವ್ಯವು" ಎಂದು ಹೇಳಿದನು.

ಅವನ ಮಾತಿನಂತೆಯೇ ದುರ್ಯೋಧನಾದಿಗಳು ಪಾಂಚಾಲನಗರಕ್ಕೆ ಹೋಗಿ ಯುದ್ಧದಲ್ಲಿ ಪಾಂಚಾಲ ಪಾಂಡವರಿಗೆ ಸೋತು, ಬಂದ ದಾರಿಯನ್ನು ಹಿಡಿದರು.

ಇತ್ತ, ಪಾಂಡವರು ತಾಯಿಯೊಡನೆ ಅರಗಿನ ಮನೆಯಿಂದ ಸುರಕ್ಷಿತವಾಗಿ ತಪ್ಪಿಸಿಕೊಂಡು ಹೋದುದು ಮೊದಲ್ಗೊಂಡು ನಡೆದ ಸಂಗತಿಗಳೆಲ್ಲವನ್ನೂ ವಿದುರನು ಧೃತರಾಷ್ಟ್ರನಿಗೆ ತಿಳಿಸುತ್ತಲೆ, ಅವನು—"ನಮ್ಮ ಪುಣ್ಯವೇ ಸರಿ. ಪಾಂಡವರು ಬದುಕಿದ್ದಾರೆಯೆ! ಅವರಿಗೆ ದ್ರುಪದರಾಯನ ಸಂಬಂಧವೂ ಆಯಿತೆ! ಅವನ ಮೂಲಕವಾಗಿ ಅನೇಕ ಬಲಶಾಲಿಗಳು ಅವರಿಗೆ ಮಿತ್ರರಾಗಿರಬಹುದು. ಸಂಪನ್ನರಾಗಲಿ, ವಿಪನ್ನರಾಗಲಿ ಯಾವ ರಾಜರು ತಾನೆ ದ್ರುಪದರಾಯ

ನನ್ನೂ ಅವನ ಬಳಗವನ್ನೂ ಮಿತ್ರರನ್ನಾಗಿ ಬಯಸೆರು! ಇದು ನನ್ನ ಪುಣ್ಯೋದಯ" ಎಂದು ತನ್ನ ಈರ್ಷ್ಯೆಯನ್ನು ಮರೆಮಾಜಿ ಸಂತೋಷ ಪಟ್ಟವನಂತೆ ಹೊರಗೆ ಕಾಣಿಸಿಕೊಂಡನು.

ಆಗ ವಿದುರನು—"ಮಹಾರಾಜನೇ! ಈ ಬುದ್ಧಿಯು ನಿನಗೆ ನೂರು ವರ್ಷಗಳು ಸ್ಥಿರವಾಗಿರಲಿ" ಎಂದು ಹೇಳಿ ಮನೆಗೆ ಹೋದನು.

ವಿದುರನು ಹೊರಟುಹೋದುದನ್ನು ಕಂಡು ದುರ್ಯೋಧನ ಕರ್ಣರು ಧೃತರಾಷ್ಟ್ರನ ಸಮೀಪಕ್ಕೆ ಹೋಗಿ—"ಮಹಾರಾಜರೇ! ವಿದುರನ ಇದಿರಿಗೆ ನಾವು ಮಾತನಾಡಲಿಲ್ಲ; ಈಗ ನೀವೊಬ್ಬರೇ ಇರುವುದರಿಂದ ಮಾತನಾಡ ಬಂದೆವು. ನೀವು ಈಗ ಏನಮಾಡಬೇಕೆಂದಿದ್ದೀರಿ? ನಿಮ್ಮ ಶತ್ರುಗಳ ಏಳಿಗೆಯೇ ನಿಮ್ಮೇಳಿಗೆಯೆಂದು ಭಾವಿಸುತ್ತೀರಿ. ಯಾವುದು ಕರ್ತವ್ಯವೋ ಅದನ್ನು ಯೋಚಿಸದೆ ಇದ್ದೀರಿ. ಪಾಂಡವರ ಬಲವನ್ನು ಮುರಿಯುವುದೇ ನಮ್ಮ ಕರ್ತವ್ಯವು. ಅವರು ನಮ್ಮನ್ನೂ ನಮ್ಮ ಬಾಂಧವರನ್ನೂ ನಮ್ಮ ಬಲವನ್ನೂ ನಾಶಮಾಡುವುದಕ್ಕೆ ಮುಂಚೆಯೇ ನಾವು ಏನಮಾಡಬೇಕೋ ಅದನ್ನು ಆಲೋಚಿಸಬೇಕು" ಎಂದರು.

ಅದಕ್ಕೆ ಧೃತರಾಷ್ಟ್ರನು—"ದುರ್ಯೋಧನ! ಕರ್ಣ! ನಿಮಗೆ ಯಾವುದು ಇಷ್ಟವೋ ನನಗೂ ಅದೇ ಇಷ್ಟವು. ನನ್ನ ಮನೋಗತವನ್ನು ವಿದುರನು ಊಹಿಸದಿರಲೆಂದು ನಾನು ಅವನಿದಿರಿಗೆ ಪಾಂಡವರ ಗುಣವನ್ನು ಹೊಗಳಿದೆನು" ಎಂದನು.

ಅದಕ್ಕೆ ದುರ್ಯೋಧನನು—"ಅಯ್ಯಾ! ನಾನು ಹೇಳುವುದೇನೆಂದರೆ—ಕುಂತಿಯ ಮಕ್ಕಳಿಗೂ ಮಾದ್ರಿಯ ಮಕ್ಕಳಿಗೂ ಆಗದಂತೆ ಮಾಡುವುದು; ದ್ರುಪದರಾಯನ ಅಮಾತ್ಯರಿಗೆ ಲಂಚವನ್ನು ಕೊಟ್ಟು ವಶಮಾಡಿಕೊಂಡು ದ್ರುಪದರಾಯನಿಗೂ ಯುಧಿಷ್ಠಿರನಿಗೂ ವಿರೋಧವನ್ನು ತಂದುಹಾಕಿ ಯುಧಿಷ್ಠಿರನನ್ನು ಅವನ ಮನೆಯಿಂದ ಉಚ್ಚಾಟನೆ ಮಾಡಿಸುವುದು; ದ್ರೌಪದಿಯನ್ನು ಗಂಡಂದಿರ ಮೇಲೆ ಎತ್ತಿಡುವುದು; ಭೀಮನನ್ನು ಕೊಂದು ಅರ್ಜುನನ ಜಂಬವನ್ನು ಮುರಿಯುವುದು—ಇತ್ಯಾದಿ ಉಪಾಯಗಳಿಂದ ಅವರನ್ನು ನಿಗ್ರಹಿಸುವುದು ಶಕ್ಯವೆಂದು ನನ್ನ ಬುದ್ಧಿಗೆ ತೋರುತ್ತದೆ" ಎಂದನು.

ದುರ್ಯೋಧನನ ಮಾತನ್ನು ಕೇಳಿ ಕರ್ಣನು ಇಂತೆಂದನು:—"ದುರ್ಯೋಧನ! ನಿನ್ನ ಯೋಚನೆಯು ಸರಿಯೆಂದು ನಾನೆಣಿಸೆನು. ಅಜಾತಪಕ್ಷರಾಗಿ ಬಾಲರಾಗಿ ನಿನ್ನ ಸಮೀಪದಲ್ಲಿರುವಾಗಲೇ ಉಪಾಯಗಳಿಂದ ಆ ವೀರರನ್ನು ನೀನು ನಿಗ್ರಹಿಸಲಾರದೆ ಹೋದೆ. ಈಗ ಅವರು ರೆಕ್ಕೆಯುಳ್ಳವರು,

ಹರೆಯದವರು, ವಿದೇಶದಲ್ಲಿರುವರು, ಸಾಹಿತ್ಯಸಂಪನ್ನರು, ಈಗ ಅವರು ಉಪಾಯಕ್ಕೆ ಸಾಧ್ಯರೆ? ಮಹಾತ್ಮನಾದ ಭರತನು ರಾಜ್ಯವನ್ನು ವಿಕ್ರಮದಿಂದ ಸಂಪಾದಿಸಿದನು; ದೇವೇಂದ್ರನು ತ್ರಿಲೋಕಾಧಿಪತ್ಯವನ್ನು ಸಂಪಾದಿಸಿದುದೂ ವಿಕ್ರಮದಿಂದಲೇ; ವಿಕ್ರಮವೇ ಶೂರರಿಗೆ ಸ್ವಧರ್ಮವು. ಆದುದರಿಂದಲೇ ದ್ರುಪದನನ್ನು ಗೆದ್ದು ಪಾಂಡವರನ್ನು ಸೇದುಕೊಂಡು ಬಾ. ಅವರನ್ನು ನಿಗ್ರಹಿಸುವುದಕ್ಕೆ, ಸಾಮವೂ ಅಲ್ಲ, ದಾನವೂ ಅಲ್ಲ, ಭೇದವೂ ಅಲ್ಲ, ದಂಡವೊಂದೇ ಉಪಾಯ."

ಧೃತರಾಷ್ಟ್ರನು ಕರ್ಣನ ಮಾತನ್ನು ಕೇಳಿ—"ಕರ್ಣ! ನೀನು ವಿಕ್ರಮಸಂಪನ್ನನು, ನಿನ್ನ ಮಾತು ನನಗೆ ಅನುಗುಣವಾಗಿದೆ; ನಿನ್ನ ಆಲೋಚನೆಯು ನಮ್ಮ ಸುಖೋದಯಕ್ಕೆ ತಕ್ಕ ಉಪಾಯವಾಗಿರುವುದು. ಆದರೂ, ಭೀಷ್ಮ ದ್ರೋಣ ವಿದುರರನ್ನೂ ಕರೆದು ಕೇಳೋಣ" ಎಂದು ನುಡಿದನು.

ಧೃತರಾಷ್ಟ್ರನು ಎಷ್ಟೇ ಮಗನ ಪಕ್ಷಪಾತಿಯಾದರೂ ವೃದ್ಧ ಭೀಷ್ಮನ ಸಂಗಡ ಆಲೋಚನೆ ಮಾಡದೆ ದುಡುಕಿ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಕರೆಯಿಸಿ ಕೇಳಿದುದಕ್ಕೆ ಆ ಸಮದರ್ಶಿಯು ಶಾಂತನಾಗಿ ಗಂಭೀರಸ್ವರದಿಂದ ಇಂತೆಂದನು:—"ವತ್ಸ! ನನ್ನ ದೃಷ್ಟಿಯಲ್ಲಿ ನೀನೂ ಪಾಂಡುವೂ ಒಂದೇ; ನಾನು ಸಮಾನ ಪ್ರೀತಿಯಿಂದ ಇಬ್ಬರನ್ನೂ ಸಲಹಿದೆನು; ಸಮಾನ ಪ್ರಯತ್ನದಿಂದ ಇಬ್ಬರಿಗೂ ವಿದ್ಯಾಬುದ್ಧಿಯನ್ನು ಕಲಿಸಿದೆನು; ನಿನ್ನ ಮಕ್ಕಳು ಹೇಗೋ ಹಾಗೆ ಪಾಂಡುವಿನ ಮಕ್ಕಳೂ ನನಗೆ ಪ್ರೀತಿಪಾತ್ರರಾಗಿರುವರು; ಪಾಂಡವರನ್ನು ಪ್ರೀತಿಸಿ ರಕ್ಷಿಸುವುದು ನನ್ನ ಕರ್ತವ್ಯವು ಹೇಗೋ ಹಾಗೆ ನಿನ್ನ ಕರ್ತವ್ಯವೂ ಆಗಿರುವುದು. ಪಾಂಡವ ದುರ್ಯೋಧನಾದಿಗಳಾದ ಕೌರವರೆಲ್ಲರೂ ನನ್ನವರು. ಹೀಗಿರುವಲ್ಲಿ, ಪಾಂಡವರ ಸಂಗಡ ಕದನಕ್ಕೆ ಹೋಗುವುದೆಂದರೆ ನನಗೆ ಹೇಗೆ ತಾನೆ ರುಚಿಸುವುದು? ನಮ್ಮ ನಮ್ಮೊಳಗೇ ಕಲಹವು ಸರ್ವಾತ್ಮನಾ ಸರಿಯಲ್ಲ. ನೀವು ಪಾಂಡವರಿಗೆ ಅರ್ಧರಾಜ್ಯವನ್ನು ಕೊಟ್ಟು ಅನ್ಯೋನ್ಯಭಾವದಿಂದಿರುವುದೇ ಉಚಿತವು."

ತರುವಾಯ, ದುರ್ಯೋಧನನ ಕಡೆಗೆ ತಿರುಗಿ ಭೀಷ್ಮನಿಂತೆಂದನು:—"ವತ್ಸ! ಈ ಅಖಂಡರಾಜ್ಯವು ನಮ್ಮ ಹಿರಿಯರದೆಂದು ನೀನು ಹೇಗೆ ಭಾವಿಸುತ್ತೀಯೋ ಹಾಗೆಯೇ ಪಾಂಡವರೂ ತಮ್ಮ ಹಿರಿಯರದೆಂದು ಎಣಿಸುವರು. ಯಶಸ್ವಿಗಳಾದ ಪಾಂಡವರಿಗೆ ರಾಜ್ಯವು ಸಲ್ಲದ ಪಕ್ಷದಲ್ಲಿ ನಿಮಗೆ ಸಲ್ಲುವುದು ಯಾವ ನ್ಯಾಯ? ನಿನ್ನ ತರುವಾಯ ಭರತವಂಶದಲ್ಲಿ ಹುಟ್ಟುವ ರಾಜಕುಮಾರರಿಗೆ ತಾನೆ ರಾಜ್ಯಪ್ರಾಪ್ತಿಯಾಗುವುದು ಹೇಗೆ? ಅಧರ್ಮದಿಂದ

ನೀವು ರಾಜ್ಯವನ್ನು ಆಕ್ರಮಿಸಿದಿರಿ. ಅದಕ್ಕೆ ಪೂರ್ವವೇ ರಾಜ್ಯವು ನ್ಯಾಯವಾಗಿ ಅವರದು. ನನ್ನ ಮತವೇನೆಂದು ಕೇಳುವೆಯೋ ? ಹೇಳುವೆನು ಕೇಳು. ಜ್ಯೇಷ್ಠಭ್ರಾತನಾದ ಯುಧಿಷ್ಠಿರನಿಗೆ ಪ್ರೀತಿಪೂರ್ವಕವಾಗಿ ಅರ್ಧರಾಜ್ಯವನ್ನು ಕೊಡು. ವಿವಾದದಿಂದ ಪ್ರಯೋಜನವಿಲ್ಲ. ನಮ್ಮನಮ್ಮೊಳಗೆ ಕಲಹವಾಡುವುದು ಅನರ್ಥಕ್ಕೆ ಮೂಲವು. ಅರ್ಧರಾಜ್ಯವನ್ನು ಅವರಿಗೆ ಕೊಟ್ಟಲ್ಲಿ ಇಬ್ಬರಿಗೂ ಮಂಗಳವುಂಟು. ಕೊಡದ ಪಕ್ಷದಲ್ಲಿ ಯಾರಿಗೂ ಕ್ಷೇಮವಿಲ್ಲ; ಅಷ್ಟೇ ಅಲ್ಲ; ನಿಮಗೆ ಅಪಕೀರ್ತಿಯೂ ಬರುವುದು. ಅದುಕಾರಣ, ವತ್ಸ! ಕೀರ್ತಿಯನ್ನು ಳಿಸಿಕೊಳ್ಳುವ ಪ್ರಯತ್ನಮಾಡು. ಲೋಕದಲ್ಲಿ ಮನುಷ್ಯರಿಗೆ ಕೀರ್ತಿಯೇ ಪರಮ ಧನವು. ಕೀರ್ತಿಹೀನರ ಬಾಳು ಹೇಯವಾದುದು. ಕೀರ್ತಿವಂತನು ಸತ್ತರೂ ಈ ಲೋಕದಲ್ಲಿ ಯಶಃಕಾಯನಾಗಿರುವನು; ಕೀರ್ತಿಹೀನನು ಬದುಕಿದ್ದರೂ ಸತ್ತಂತೆಯೇ. ನೀನು ಕೀರ್ತಿಯನ್ನು ಳಿಸಿಕೊ, ಪೂರ್ವಿಕರು ಅವಲಂಬಿಸಿದ್ದ ಸನ್ಮಾರ್ಗವನ್ನು ಹಿಡಿದು ನಡೆ. ಪಾಂಡವರೂ ಅವರ ತಾಯಿಯೂ ಬೆಂದುಹೋದರೆಂದು ಕೇಳಿದಂದಿನಿಂದ ನಾನು ಯಾರಿಗೂ ಮೋರೆಯನ್ನು ತೋರಿಸಲಾರದೆ ದುಸ್ಸಹವಾದ ಮನೋವ್ಯಥೆಯಿಂದ ಜೀವನ್ಮೃತನಾಗಿದ್ದೆನು. ನಮ್ಮ ಪುಣ್ಯಕ್ಕೆ ತಾಯಿಯ ಸಮೇತರಾಗಿ ಪಾಂಡವರು ಜೀವಸಹಿತರಾಗಿದ್ದಾರೆ. ಈ ಕ್ಷಣವೇ ಅವರನ್ನು ಕರೆಯಕಳುಹಿಸಿ ಅವರಿಗೆ ಅರ್ಧರಾಜ್ಯವನ್ನು ಕೊಟ್ಟು ನಿನ್ನ ಮೇಲಿರುವ ಕಳಂಕವನ್ನು ಹೋಗಲಾಡಿಸಿಕೊ. ಪಾಂಡವರು ಏಕಹೃದಯರಾಗಿ ಎಲ್ಲರೂ ಒಂದಾಗಿರುವರು; ಇದರ ಮೇಲೆ ಧರ್ಮನಿರತರು. ನೀನು ಧರ್ಮವನ್ನು ಸಲಹುವುದು ನಿನ್ನ ಕರ್ತವ್ಯವೆಂದೊಪ್ಪುವನಾದರೆ, ನನ್ನಿಷ್ಟದಂತೆ ನೀನು ನಡೆಯುವನಾದರೆ, ಕಡೆಯ ಪಕ್ಷ ನಿನ್ನ ಕ್ಷೇಮವನ್ನು ನೀನು ಬಯಸುವನಾದರೆ, ಈ ಕ್ಷಣವೇ ಪಾಂಡವರಿಗೆ ಅರ್ಧರಾಜ್ಯವನ್ನೊಪ್ಪಿಸು."

ಈ ತೆರದಲ್ಲಿ ದುರ್ಯೋಧನನಿಗೆ ಬುದ್ಧಿ ಹೇಳಿ ಭೀಷ್ಮನು ತೂಷ್ಣೀಭಾವವನ್ನು ಅವಲಂಬಿಸಿದನು. ಅವನ ಧರ್ಮಸಮ್ಮತವಾದ ಉಪದೇಶವು ಫಲೋನ್ಮುಖವಾಯಿತು. ದ್ರೋಣಾಚಾರ್ಯನೂ ಧರ್ಮವತ್ಸಲನಾದ ವಿದುರನೂ ಅವನ ವಾಕ್ಯವನ್ನು ಅನುಮೋದಿಸಿದರು. ಕರ್ಣನೊಬ್ಬನು ಇದಕ್ಕಾಗಿ ಅವರೆಲ್ಲರನ್ನೂ ನಿಂದಿಸಿದನು. ಆದರೆ, ಗಂಭೀರನಾದ ಭೀಷ್ಮನಾಗಲಿ, ವೀರ್ಯವಂತನಾದ ದ್ರೋಣಾಚಾರ್ಯನಾಗಲಿ, ಧರ್ಮವತ್ಸಲನಾದ ವಿದುರನಾಗಲಿ ಅವನ ನಿಂದೆಗೆ ಹೆದರಿ ನ್ಯಾಯಮಾರ್ಗವನ್ನು ಬಿಟ್ಟು ಸರಿಯಲಿಲ್ಲ; ಅವರು ಕರ್ಣನನ್ನು ಸಡ್ಡೆಯೇ ಮಾಡಲಿಲ್ಲ.

ಧೃತರಾಷ್ಟ್ರನು ದ್ರೋಣಾಚಾರ್ಯನ ಅಭಿಪ್ರಾಯವನ್ನು ಕೇಳಿದುದಕ್ಕೆ ಆಚಾರ್ಯನು—"ಮಹಾರಾಜನೇ! ಮಂತ್ರಿಕಾರ್ಯದಲ್ಲಿರುವವರು ಹೇಳತಕ್ಕ ಆಲೋಚನೆಯು ಧರ್ಮಸಮ್ಮತವಾಗಿಯೂ ಅರಸರಿಗೆ ಸಂಪದವನ್ನೂ ಕೀರ್ತಿಯನ್ನೂ ತರತಕ್ಕದಾಗಿಯೂ ಇರಬೇಕು. ಭೀಷ್ಮನ ಆಲೋಚನೆಯು ಆ ತೆರವಾಗಿರುವುದು. ಮಹಾತ್ಮ ಭೀಷ್ಮನ ಮತವೇ ನನ್ನ ಮತವು. ಕುಂತಿಯ ಮಕ್ಕಳಿಗೆ ಅರ್ಧರಾಜ್ಯವನ್ನು ಕೊಡುವುದೇ ಸನಾತನಧರ್ಮವು" ಎಂದನು.

ಅದನ್ನು ಕೇಳಿ ಕರ್ಣನು—"ನಾವು ಯಾರನ್ನು ಆಪ್ತರೆಂದು ಭಾವಿಸಿಕೊಂಡು ಇದ್ದೇವೊ ಅವರು ನಮ್ಮ ಶತ್ರುಗಳ ಕಡೆಯೇ ವಾದಿಸುತ್ತಿರುವರು. ನಿಮ್ಮಲ್ಲಿರುವ ಮಂತ್ರಿಗಳಲ್ಲಿ ಯಾರು ಸಾಧುಗಳು ಯಾರು ಸಾಧುಗಳಲ್ಲ, ಯಾರು ದುಷ್ಟರು ಯಾರು ದುಷ್ಟರಲ್ಲ ಎಂಬುದನ್ನು ವಿಚಾರಪೂರ್ವಕವಾಗಿ ತಿಳಿದುಕೊಳ್ಳಿರಿ" ಎಂದು ಧೃತರಾಷ್ಟ್ರನಿಗೆ ಹೇಳಿದನು.

ಅದಕ್ಕೆ ದ್ರೋಣಾಚಾರ್ಯನು—"ಕರ್ಣ! ನೀನು ದುಷ್ಟನು; ಪಾಂಡವರಲ್ಲಿ ಇಲ್ಲದ ದೋಷಗಳನ್ನು ಆರೋಪಿಸುತ್ತಿದ್ದೀಯೆ. ನಾನೇನೋ ಕುಲವೃದ್ಧಿಯನ್ನು ಕೋರಿ ಯಾವುದು ಪರಮಹಿತವೋ ಅದನ್ನು ಹೇಳಿದೆನು; ನೀನು ಅದರಲ್ಲಿ ದೋಷವನ್ನು ಕಂಡ ಪಕ್ಷಕ್ಕೆ ಯಾವುದು ಹಿತವೋ ನೀನೇ ಹೇಳು; ಪರಂತು, ನಾನು ಹೇಳಿದಂತೆ ಮಾಡದೆ ಹೋದರೆ ಕೌರವರು ಶೀಘ್ರವಾಗಿಯೇ ಕೆಡುವರು. ಇದು ನಿಶ್ಚಯವೆಂದು ತಿಳಿ" ಎಂದನು.

ತರುವಾಯ ವಿದುರನು—"ರಾಜನೇ! ನಾವು ನಿನ್ನ ಬಂಧುಗಳು; ನಿನಗೆ ಯಾವುದು ಶ್ರೇಯಸ್ಕರವೋ ಅದನ್ನೇ ಹೇಳುತ್ತೇವೆ; ಸಂಶಯಪಡಬೇಡ. ಭೀಷ್ಮ ದ್ರೋಣರು ನಿನಗೆ ಹಿತವಾದುದನ್ನೇ ಹೇಳಿದರು. ಅವರು ವಯಸ್ಸಿನಲ್ಲಿಯೂ ಜ್ಞಾನದಲ್ಲಿಯೂ ವೃದ್ಧರು, ಶಾಸ್ತ್ರವನ್ನು ಬಲ್ಲವರು; ನಿಮಗೂ ಪಾಂಡವರಿಗೂ ಸಾಮಾನ್ಯರಾದವರೇ ಹೊರತು ಪಕ್ಷಪಾತವನ್ನು ಮಾಡುವರಲ್ಲ. ನಿನ್ನ ಮಂತ್ರಿಗಳೊಳಗೆ ಯಾರು ಪಾಂಡವರಿಗೆ ಅಹಿತವನ್ನು ಕೋರುವರೋ ಅವರು ನಿನ್ನ ಹಿತವನ್ನು ಕೋರುವರಲ್ಲ. ನಿನಗೆ ದುರ್ಯೋಧನಾದಿಗಳಂತೆಯೇ ಪಾಂಡವರೂ ಅಲ್ಲವೆ? ಭೀಷ್ಮ ದ್ರೋಣರು ನಿನಗೆ ಆಪ್ತರು, ನಿನಗೆಂದಿಗೂ ಕೇಡನ್ನು ಮಾಡುವರಲ್ಲ. ಕರ್ಣ ಶಕುನಿ ಪ್ರಭೃತಿಗಳು ಧರ್ಮಿಷ್ಠರಲ್ಲ, ಪ್ರಾಜ್ಞರಲ್ಲ; ಅವರ ಬಾಲಭಾಷೆಯನ್ನು ನೀನು ಕೇಳಬೇಡ. ಅವರು ಹೇಳಿದಂತೆ ನಡೆದರೆ ಮಹಾನರ್ಥವುಂಟಾಗುವುದು. ಶೂರಾಗ್ರೇಸರರೂ ಸತ್ಯವಂತರೂ ಸಾಹಾಯ್ಯಸಂಪನ್ನರೂ ಆದ ಪಾಂಡವರನ್ನು ಯುದ್ಧದಲ್ಲಿ ಜಯಿಸುವುದು ಸಾಧ್ಯವಲ್ಲ. ಸಾಮದಿಂದಾಗುವ ಕಾರ್ಯಕ್ಕೆ ಸಮರಕ್ಕೆ

ಹೋಗುವುದು ದೈವಶಾಪದಿಂದಲ್ಲವೆ! ಭೀಷ್ಮನು ಹೇಳಿದಂತೆ ಯುದ್ಧದ ಚಿಂತೆಯನ್ನು ಬಿಟ್ಟು ಸಂಧಿಮಾಡಿಕೊ" ಎಂದು ನುಡಿದನು.

ಆ ಮಾತನ್ನು ಕೇಳಿ ಧೃತರಾಷ್ಟ್ರನು—"ವಿದುರ! ಭೀಷ್ಮದ್ರೋಣರು ಹೇಳಿದ ಮಾತು ಸತ್ಯವೇ ಸರಿ, ನನಗೆ ಹಿತವಾದುದೇ ಅಹುದು. ನಿನ್ನ ವಚನವೂ ಹಿತವಾದುದು, ಸತ್ಯವಾದುದು. ಮಹಾರಥರಾದ ಕುಂತಿಯ ಮಕ್ಕಳು ಹೇಗೆ ಪಾಂಡುರಾಯನ ಮಕ್ಕಳೋ ಹಾಗೆಯೇ ಧರ್ಮದೃಷ್ಟಿಯಿಂದ ನೋಡಲಾಗಿ ನನ್ನ ಮಕ್ಕಳೂ ಅಹುದು. ಈ ರಾಜ್ಯವು ಹೇಗೆ ನನ್ನ ಮಕ್ಕಳದೋ ಹಾಗೆಯೇ ಪಾಂಡುರಾಯನ ಮಕ್ಕಳದೂ ಅಹುದು; ಸಂಶಯವಿಲ್ಲ. ದೈವವಶಾತ್ ಅವರೆಲ್ಲರೂ ಸುರಕ್ಷಿತರಾಗಿದ್ದಾರೆ. ನೀನೇ ಹೋಗಿ ಅವರೆಲ್ಲರನ್ನೂ ಕರೆದುಕೊಂಡು ಬಾ" ಎಂದನು.

ಈ ರೀತಿಯಲ್ಲಿ, ಧೃತರಾಷ್ಟ್ರನು ಭೀಷ್ಮನ ಉಪದೇಶದಂತೆ ಪಾಂಡವರನ್ನು ಕರೆಯಿಸಿಕೊಳ್ಳುವುದಕ್ಕೆ ವಿದುರನನ್ನು ದ್ರುಪದರಾಜ್ಯಕ್ಕೆ ಕಳುಹಿಸಿದನು. ವಿದುರನು ಆ ರಾಜ್ಯವನ್ನು ಸೇರಿದ ಕೂಡಲೆ ಯುಧಿಷ್ಠಿರಾದಿ ಅಣ್ಣತಮ್ಮಂದಿರೂ ಅವರ ತಾಯಿ ಕುಂತಿಯೂ ಅವರ ಪತ್ನಿಯಾದ ದ್ರೌಪದಿಯೂ ಎಲ್ಲರೂ ಕೂಡಿ ಹಸ್ತಿನಾಪುರಕ್ಕೆ ಪ್ರಯಾಣಮಾಡಿದರು. ಅವರೆಲ್ಲರೂ ಬರುವ ಸಮಾಚಾರವು ತಿಳಿಯುತ್ತಲೆ ಧೃತರಾಷ್ಟ್ರನು ಅವರನ್ನು ಇದಿರ್ಗೊಳ್ಳುವ ನಿಮಿತ್ತವಾಗಿ ಕೃಪಾಚಾರ್ಯನನ್ನೂ ದ್ರೋಣಾಚಾರ್ಯನನ್ನೂ ಕೌರವರಲ್ಲಿ ಕೆಲವರನ್ನೂ ಕಳುಹಿಸಿಕೊಟ್ಟನು.

ಪುರವಾಸಿಗಳು ಪಾಂಡವರು ಮತ್ತೆ ಬರುವರೆಂಬುದನ್ನು ಕೇಳಿ ಪ್ರೀತರಾಗಿ ತಂತಮ್ಮೊಳಗೆ ಇಂತೆಂದು ಮಾತನಾಡಿಕೊಂಡರು :—" ನಮ್ಮನ್ನು ಮಕ್ಕಳಂತೆ ಯಾವನು ಪ್ರೀತಿಸುತ್ತಿದ್ದನೋ ಆ ಧರ್ಮಾತ್ಮನೂ ಪುರುಷಶ್ರೇಷ್ಠನೂ ಆದ ಯುಧಿಷ್ಠಿರನು ಇಂದು ತಂದೆಯ ರಾಜಧಾನಿಗೆ ಪ್ರತ್ಯಾಗಮನಮಾಡುವನು. ಇವನ ಆಗಮನದಿಂದ ಪಾಂಡು ಮಹಾರಾಜನೇ ನಮ್ಮ ಹಿತಾರ್ಥವಾಗಿ ಈ ಲೋಕಕ್ಕೆ ತಿರುಗಿ ಬಂದಂತಾಗುವುದು. ನಾವು ಯಾವ ದಾನ ಮಾಡಿದ್ದರೂ ಯಾವ ಹೋಮ ಮಾಡಿದ್ದರೂ, ತಪಸ್ಸು ಮಾಡಿ ಯಾವ ಪುಣ್ಯವನ್ನು ಗಳಿಸಿದ್ದರೂ, ಆ ಸಕಲ ಸುಕೃತಗಳ ಬಲದಿಂದ ಪಾಂಡುನಂದನರು ಶತಾಯುಗಳಾಗಿರಲಿ!"

ಪಾಂಡವರು ನಗರವಾಸಿಗಳ ಬಾಯಿಂದ ಇತ್ಯಾದಿ ಪ್ರೀತಿವಚನಗಳನ್ನು ಕೇಳುತ್ತ ಕೇಳುತ್ತ ಅರಮನೆಯನ್ನು ಹೊಕ್ಕು ಭೀಷ್ಮಧೃತರಾಷ್ಟ್ರಾದಿಗಳ ಪಾದಕ್ಕೆ ವಂದಿಸಿದರು. ಕೌರವರೆಲ್ಲರೂ ಸೇರಿ ಅವರನ್ನು ಕುಶಲಪ್ರಶ್ನೆ

ಮಾಡಿದರು. ಭೀಷ್ಮನು ಪರಮಸ್ನೇಹಭಾವದಿಂದ ಅವರೆಲ್ಲರನ್ನೂ ಆಲಿಂಗನ ಮಾಡಿಕೊಂಡು ಅವರ ಪ್ರೀತಿಯನ್ನು ಇಮ್ಮಡಿಸಿದನು. ಅವರೂ ಸಕಲರನ್ನೂ ಆದರಪೂರ್ವಕವಾಗಿ ಮಾತನಾಡಿಸಿ ಸಂತೋಷಪಡಿಸಿ ವಿಶ್ರಮಿಸಿಕೊಂಡರು.

ಕೆಲವು ದಿವಸಗಳ ತರುವಾಯ ಭೀಷ್ಮನು ಅವರನ್ನು ಧೃತರಾಷ್ಟ್ರನ ಸಮೀಪಕ್ಕೆ ಕರೆದುಕೊಂಡು ಹೋದನು. ಅವರು ವಿನಯದಿಂದ ಸಮೀಪದಲ್ಲಿ ಹೋಗಿ ನಿಲ್ಲಲು, ಧೃತರಾಷ್ಟ್ರನು ಇಂತೆಂದನು:—"ಕುಂತೀಕುಮಾರರೇ! ನಾನು ಆಡುವ ಮಾತನ್ನು ಕೇಳಿರಿ. ಈ ರಾಜ್ಯವನ್ನು ಪಾಂಡುರಾಯನು ಪಾಲಿಸಿ ವೃದ್ಧಿಗೆ ತಂದನು. ಅವನು ನನ್ನ ಆಜ್ಞೆಯಂತೆ ನಡೆಯುತ್ತ ಅನೇಕ ಶ್ರಮಸಾಧ್ಯವಾದ ಕಾರ್ಯಗಳನ್ನು ಮಾಡಿದನು. ಕೌಂತೇಯರೇ! ನೀವು ಕೂಡ ನಾನು ಹೇಳಿದಂತೆ ನಡೆಯಿರಿ. ಯುಧಿಷ್ಠಿರ! ನನ್ನ ಮಕ್ಕಳು ದುರಾತ್ಮರು, ಅಹಂಕಾರಿಗಳು, ನನ್ನ ಮಾತನ್ನು ಕೇಳರು; ಸ್ವಕಾರ್ಯಪರರು, ಕಲಹಪ್ರಿಯರು. ಆದುದರಿಂದ ನೀವು ಅರ್ಧರಾಜ್ಯವನ್ನು ತೆಗೆದುಕೊಂಡು, ಖಾಂಡವಪ್ರಸ್ಥದಲ್ಲಿ ಸುಖವಾಗಿರಿ. ಅಲ್ಲಿ ಅವರಿಂದ ನಿಮಗೆ ಯಾವ ಬಾಧೆಯೂ ಆಗಲಾರದು."

ಇಂತೆಂದು ಹೇಳಿ ಧೃತರಾಷ್ಟ್ರನು ಯುಧಿಷ್ಠಿರನಿಗೆ ಅರ್ಧರಾಜ್ಯವನ್ನು ಕೊಟ್ಟು ಪಟ್ಟವನ್ನು ಕಟ್ಟಿದನು. ಪಾಂಡವರು ಧೃತರಾಷ್ಟ್ರನ ಆಜ್ಞೆಯು ಶಿರೋಧಾರ್ಯವೆಂದು ಖಾಂಡವಪ್ರಸ್ಥಕ್ಕೆ ಹೋಗಲುದ್ಯುಕ್ತರಾದರು. ದುರ್ಯೋಧನನಿಗೂ ಅವರಿಗೂ ಮತ್ತೆ ವಿವಾದವು ಹುಟ್ಟಬಾರದೆಂದೇ ಪಾಂಡವರಿಗೆ ಪ್ರತ್ಯೇಕವಾಸಸ್ಥಾನವು ಗೊತ್ತಾಯಿತು; ಈ ವಿಷಯವು ಭೀಷ್ಮನಿಗೂ ಸಮ್ಮತವಾಗಿಯೇ ಇದ್ದಿತು. ಪಾಂಡವರು ಸಂತುಷ್ಟರಾಗಿ ಖಾಂಡವಪ್ರಸ್ಥಕ್ಕೆ ಅರಣ್ಯಮಾರ್ಗವಾಗಿ ಪ್ರಯಾಣಮಾಡಿದರು.

ಎಂಟನೆಯ ಅಧ್ಯಾಯ

ಜರಾಸಂಧ ವಧೆ, ರಾಜಸೂಯ ಯಜ್ಞ, ಅಗ್ರಪೂಜೆ, ಶಿಶುಪಾಲ ವಧೆ

ಪಾಂಡವರು ಖಾಂಡವಪ್ರಸ್ಥವನ್ನು ಸೇರುತ್ತಲೆ ಅದು ಸೊಬಗೇರಿ ಒಂದು ಹೊಸದಾದ ಪಟ್ಟಣವೇ ಆಯಿತು. ಆ ಪಟ್ಟಣವು ಇಂದ್ರಪ್ರಸ್ಥವೆಂದು ಹೆಸರುಗೊಂಡು ಪಾಂಡವರ ರಾಜಧಾನಿಯಾಗಿ ಕೋಟೆ ಕೊತ್ತಳಗಳಿಂದ ಸುರಕ್ಷಿತವಾಗಿ, ಇಕ್ಕೆಲದಲ್ಲಿಯೂ ಛಾಯಾವೃಕ್ಷಗಳಿಂದ ಸೊಗಯಿಸುತ್ತಿದ್ದ ವಿಶಾಲವಾದ ಬೀದಿಗಳಿಂದಲೂ, ಚತುರ ಶಿಲ್ಪಿಗಳ ಕೌಶಲವನ್ನು ತೋರುತ್ತಿದ್ದ ಉನ್ನತ ಭವನಗಳಿಂದಲೂ ಶೋಭಿಸುತ್ತಿದ್ದಿತು. ಅಲ್ಲಲ್ಲಿ ಪುಷ್ಪರಾಜಿಗಳಿಂದಲೂ ಲತಾಗೃಹಗಳಿಂದಲೂ ಸುಮನೋಹರವಾಗಿದ್ದ ಉದ್ಯಾನವನಗಳು ಕಣ್ಣಿಗೆ ಆನಂದವನ್ನುಂಟುಮಾಡುತ್ತಿದ್ದುವು. ಚಕ್ರವಾಕಾದಿ ಜಲಚರಪಕ್ಷಿಗಳಿಂದ ಸಮಾಕೀರ್ಣವಾಗಿ ಸ್ವಚ್ಛ ಸಲಿಲದಿಂದ ಪರಿಪೂರ್ಣವಾದ ಸರೋವರಗಳು ಅಲ್ಲಲ್ಲಿ ಕಣ್ಗೊಳಿಸುತ್ತಿದ್ದುವು. ಈ ರೀತಿಯಾಗಿ ಇಂದ್ರಪ್ರಸ್ಥವು ನೋಟಕ್ಕೆ ರಮಣೀಯವಾಗಿಯೂ ವಾಸಕ್ಕೆ ಸುಖಸಾಧನ ಪೂರ್ಣವಾಗಿಯೂ ಇದ್ದಿತು. ಚತುರ್ವೇದವೇತ್ತರಾದ ಬ್ರಾಹ್ಮಣರೂ, ನಾನಾ ಭಾಷಾವೇತ್ತರೂ, ದೇಶದೇಶಗಳನ್ನು ಸಂಚರಿಸುತ್ತ ಧನಾರ್ಜನೆಯನ್ನು ಮಾಡುವುದರಲ್ಲಿ ಕುಶಲರಾದ ವ್ಯವಸಾಯಿಗಳೂ, ಸರ್ವವಿಧ ಕಾರುಕಾರ್ಯಗಳಲ್ಲಿ ನಿಪುಣರಾದ ಶಿಲ್ಪಿಗಳೂ ತಂಡತಂಡವಾಗಿ ಬಂದು ಆ ರಾಜಧಾನಿಯಲ್ಲಿ ನೆಲಸಿದರು.

ಪಾಂಡವರು ಇಂದ್ರಪ್ರಸ್ಥದ ರಮಣೀಯತೆಯನ್ನೂ ಜನಸಮೃದ್ಧಿಯನ್ನೂ ನೋಡಿ ಸುಪ್ರೀತರಾದರು. ಭೀಷ್ಮನು ಪರಮಪ್ರಿಯನಾದ ಯುಧಿಷ್ಠಿರನ ನೂತನ ರಾಜಧಾನಿಯ ಶೋಭಾಸಂಪತ್ತನ್ನು ಕೇಳಿ ಸಂತೋಷಪಟ್ಟನು. ಹಸ್ತಿನಾಪುರದಲ್ಲಿ ಧೃತರಾಷ್ಟ್ರನ ಆಶ್ರಯದಲ್ಲಿ ವಾಸಮಾಡುತ್ತಿದ್ದರೂ ಅವನು ಅನವರತ ಯುಧಿಷ್ಠಿರನ ಹಿತವನ್ನು ಕೋರುತ್ತ, ಉಭಯ ಕುಲವನ್ನೂ ಸಮಾನವಾಗಿ ಪ್ರೀತಿಸುತ್ತಿದ್ದನು. ಅವನು ಯುಧಿಷ್ಠಿರನ ಅಭ್ಯುದಯವನ್ನು ನೋಡಿ ಸಂತುಷ್ಟನಾಗುತ್ತಿದ್ದಂತೆಯೇ ದುರ್ಯೋಧನನ ಶ್ರೇಯೋಭಿವೃದ್ಧಿಯನ್ನೂ ನೋಡಿ ಸಂತೋಷಪಡುತ್ತಿದ್ದನು. ಯುಧಿಷ್ಠಿರನ ಧರ್ಮಬುದ್ಧಿಯನ್ನೂ ಭೀಮನ ಸಾಹಸವನ್ನೂ ಅರ್ಜುನನ ಅಸ್ತ್ರಕುಶಲತೆಯನ್ನೂ

ನೋಡಿ, ಪಾಂಡವರು ಇಂದ್ರಪ್ರಸ್ಥದಲ್ಲಿ ಅನ್ಯೋನ್ಯವಾಗಿದ್ದುಕೊಂಡು ಧರ್ಮದಿಂದ ರಾಜ್ಯಶಾಸನಕಾರ್ಯವನ್ನೂ ಪ್ರಜಾಪಾಲನೆಯನ್ನೂ ಮಾಡಬಲ್ಲವರೆಂದು ಅವನು ದೃಢವಾಗಿ ನಂಬಿದ್ದನು. ಮೇಲಾಗಿ, ಸರ್ವನೀತಿ ವಿಶಾರದನಾದ ವಾಸುದೇವನು ಅವರಿಗೆ ಮಂತ್ರಿಯಾಗಿ ಸದುಪದೇಶ ಮಾಡುತ್ತಿರುವಲ್ಲಿ ಯಾವ ವಿಧದಲ್ಲಿಯೂ ಅವರಿಗೆ ಕೊರತೆಯಾಗದು, ಯಾವ ಹಾನಿಯೂ ಬಾರದು ಎಂಬ ವಿಶ್ವಾಸವು ಅವನಿಗೆ ಸಂಪೂರ್ಣವಾಗಿದ್ದುದರಿಂದ ತಾನು ಪಾಂಡವರ ಸಂಗಡ ವಾಸಮಾಡದಿದ್ದರೂ ಭಯವಿಲ್ಲವೆಂದೆಣಿಸಿದನು. ಅವನು ಬಾಲ್ಯದಲ್ಲಿ ಎಲ್ಲಿ ಪರಿಪಾಲಿತನಾದನೋ, ಯೌವನದಲ್ಲಿ ಎಲ್ಲಿ ತಂದೆಯ ಸಂತೋಷಾರ್ಥವಾಗಿ ವಿಶಾಲರಾಜ್ಯವನ್ನು ಪರಿತ್ಯಜಿಸಿದನೋ, ಪ್ರೌಢಾವಸ್ಥೆಯಲ್ಲಿ ಪ್ರಾಪ್ತಕಾರ್ಯಗಳನ್ನು ಎಲ್ಲಿ ನಿರ್ವಹಿಸುತ್ತಿದ್ದನೋ ಅಲ್ಲಿಯೇ ಈಗಲೂ ಇದ್ದೇ ತೀರಿದನು. ಪೂರ್ವದಂತೆಯೇ ಅವನು ಕುರುರಾಯನಿಗೆ ಅಧೀನನಾಗಿ ಕೌರವ ರಾಜಧಾನಿಯಲ್ಲಿಯೇ ನಿಂತನು.

ಯುಧಿಷ್ಠಿರನು ಖಾಂಡವಪ್ರಸ್ಥದಲ್ಲಿ ರಾಜ್ಯಭಾರವನ್ನು ಮಾಡುತ್ತಿರಲು, ಅವನ ರಾಜನೀತಿಯ ಮಹಿಮೆಯಿಂದ ರಾಷ್ಟ್ರವು ನಿಷ್ಕಂಟಕವಾಗಿ ಸಮೃದ್ಧಿಶಾಲಿಯಾಯಿತು. ಪ್ರಜೆಗಳು ಕೆಟ್ಟಮಾರ್ಗಕ್ಕೆ ಹೋಗದೆ ಕರ್ತವ್ಯತತ್ಪರರಾಗಿದ್ದರು. ನಾನಾ ರಾಷ್ಟ್ರಗಳ ಅರಸರು ಜಿಗೀಷಾ ಶೂನ್ಯರಾಗಿ ಕಪ್ಪಕಾಣಿಕೆಗಳನ್ನು ಕೊಡುತ್ತಲೂ ಪ್ರಿಯಕಾರ್ಯಗಳನ್ನು ಮಾಡುತ್ತಲೂ ಅವನನ್ನು ಸಂತೋಷಗೊಳಿಸುತ್ತಿದ್ದರು. ಅವನ ನಾಲ್ವರು ತಮ್ಮಂದಿರೂ ದಿಗ್ವಿಜಯಾರ್ಥವಾಗಿ ನಾಲ್ಕು ದಿಕ್ಕಿಗೆ ಹೋಗಿ ಸಾಹಸ ಸದ್ಗುಣಗಳಿಂದ ಸಾಗರಾಂತ ಪೃಥ್ವಿಯನ್ನು ಅವನ ಕೈಸೇರಿಸಿದರು. ಮಹಾರಾಜ ಯುಧಿಷ್ಠಿರನು ನಿಖಿಲ ರಾಜಮಂಡಲಿಗೆ ಅಧೀಶ್ವರನಾಗಿ, ವಿಪುಲೈಶ್ವರ್ಯಕ್ಕೆ ಅಧಿಕಾರಿಯಾಗಿ, ರಾಜಸೂಯ ಯಜ್ಞ ಮಾಡಲಿಚ್ಛೈಸಿದನು. ಆ ಸಂಗತಿಯನ್ನು ಕುರಿತು ಅವನು ಮಂತ್ರಿಗಳನ್ನೂ ಭೀಮಾರ್ಜುನಾದಿ ತಮ್ಮಂದಿರನ್ನೂ ವ್ಯಾಸಾದಿ ಋಷಿಗಳನ್ನೂ ಆಲೋಚನೆ ಕೇಳಿದನು. ಅವರೆಲ್ಲರೂ ಯುಧಿಷ್ಠಿರನು ರಾಜಸೂಯ ಯಜ್ಞ ಮಾಡಲು ತಕ್ಕ ಅಧಿಕಾರಿಯೆಂದೇ ಹೇಳಿ ಯಜ್ಞಮಾಡಲು ಅವನನ್ನು ಉತ್ಸಾಹಗೊಳಿಸಿದರು. ಆದರೆ ಆ ಮಹಾರಾಜನು ಶ್ರೀಕೃಷ್ಣನನ್ನು ಕೇಳದೆಯೇ ಯಾವ ಕೆಲಸಕ್ಕೂ ಕೈಹಾಕುತ್ತಿರಲಿಲ್ಲ. ಅವನು ಕೃಷ್ಣನನ್ನು ಕರೆಯಿಸಿಕೊಂಡು—“ನಾನು ರಾಜಸೂಯ ಯಜ್ಞವನ್ನು ಮಾಡಬೇಕೆಂದಿದ್ದೇನೆ. ಆದರೆ ಅದು ಇಚ್ಛೈಸಿದ ಮಾತ್ರಕ್ಕೇ ಆಗುವ ಕೆಲಸವಲ್ಲ. ಅದು ಆಗುವ ಬಗೆಯನ್ನು ನೀನು ಬಲ್ಲೆ. ಯಾರಿಗೆ ಸಕಲವೂ ಸಾಧ್ಯವೋ,

ಯಾವನು ಸರ್ವತ್ರ ಪೂಜ್ಯನೋ, ಯಾವನು ಸಮಸ್ತ ಪೃಥಿವಿಯೊಡೆಯನೋ ಅವನು ರಾಜಸೂಯ ಯಜ್ಞವನ್ನು ಮಾಡುವುದಕ್ಕೆ ತಕ್ಕ ಪಾತ್ರನು” ಎಂದು ಹೇಳಿ, ತಾನು ಆ ಯಜ್ಞವನ್ನು ಮಾಡಲು ತಕ್ಕ ಪಾತ್ರನೇ ಎಂದು ಕೇಳಿದನು; ತನಗೆ ಆಪ್ತರಾಗಿರುವವರೆಲ್ಲರನ್ನೂ ಕೇಳಿಯೂ ಮತ್ತೆ ಕೃಷ್ಣನನ್ನು ಕೇಳುವುದಕ್ಕೆ ಇಂತೆಂದು ಕಾರಣವನ್ನು ನಿರ್ದೇಶಿಸಿದನು:—

“ನಾನು ನನ್ನ ಇತರ ಹಿತೈಷಿಗಳನ್ನೂ ಆಲೋಚನೆ ಕೇಳಿದೆನು. ಅವರೆಲ್ಲರೂ ಆಗಬಹುದೆಂದರು. ಆದರೆ ನಿನ್ನ ಅಭಿಮತವಿಲ್ಲದೆ ನಾನು ಆ ಕಾರ್ಯವನ್ನು ಮಾಡೆನು. ಕೃಷ್ಣ! ಕೆಲವರು ಬಂಧುತ್ವದ ನಿಮಿತ್ತದಿಂದ ದೋಷಗಳನ್ನು ಬಾಯ್ಬಿಟ್ಟು ಹೇಳರು; ಕೆಲವರು ಸ್ವಾರ್ಥಪರರಾಗಿ ಪ್ರಿಯ ವಾಕ್ಯವನ್ನಾಡುವರು; ಕೆಲವರು ತಮಗೆ ಯಾವುದು ಪ್ರಿಯವೋ ಅದನ್ನೇ ಹಿತವೆಂದು ತಿಳಿದುಕೊಳ್ಳುವರು. ಎಲೈ ಮಹಾತ್ಮನೇ! ಲೋಕದಲ್ಲಿ ಅಂತಹವರೇ ಅಧಿಕವಾಗಿರುವರು. ಅವರ ಮಾತನ್ನು ನಂಬಿ ಯಾವ ಕಾರ್ಯವನ್ನೂ ಮಾಡಲಾಗುವುದಿಲ್ಲ. ನಿನ್ನಲ್ಲಿ ಅಂತಹ ದೋಷವಿಲ್ಲ; ನೀನು ಕಾಮಕ್ರೋಧವಿಲ್ಲದವನು; ನನಗೆ ಯಥಾರ್ಥವಾದ ಆಲೋಚನೆಯನ್ನು ಹೇಳು.”

ಯುಧಿಷ್ಠಿರನು ಕೋರಿದಂತೆಯೇ ಶ್ರೀಕೃಷ್ಣನು ಸ್ಪಷ್ಟೋಕ್ತಿಯಿಂದ— “ರಾಜಸೂಯ ಯಜ್ಞವನ್ನು ಮಾಡಲು ನೀನರ್ಹನಲ್ಲ; ಸಮ್ರಾಜರಿಗೆ ಹೊರತು ಬೇರೆ ಯಾರಿಗೂ ಆ ಕೆಲಸಕ್ಕೆ ಅಧಿಕಾರವಿಲ್ಲ. ನೀನು ಸಮ್ರಾಜನಲ್ಲ. ಈಗ ಮಗಧಾಧಿಪತಿ ಜರಾಸಂಧನು ಸಮ್ರಾಜ. ಅವನನ್ನು ಜಯಿಸದಿದ್ದರೆ ನೀನು ರಾಜಸೂಯಕ್ಕೆ ಅಧಿಕಾರಿಯಾಗಲಾರೆ; ಅದನ್ನು ಕೈಕೊಂಡು ಪೂರೈಸಲೂ ಆರೆ” ಎಂದನು.

ಜರಾಸಂಧನು ಸಮ್ರಾಜನು. ಅವನು ತನ್ನ ಅತ್ಯಾಚಾರದಿಂದ ಲೋಕವನ್ನು ಪೀಡಿಸುತ್ತಿದ್ದನು. ಅವನು ರಾಜಸೂಯ ಯಜ್ಞಮಾಡಲು ನಿಶ್ಚಯಿಸಿ ಸಮಸ್ತ ಭೂಪತಿಗಳನ್ನೂ ಬಾಹುಬಲದಿಂದ ಜಯಿಸಿ ಗಿರಿದುರ್ಗದಲ್ಲಿ ಬಂದಿಗಳನ್ನಾಗಿಟ್ಟು, ಯಜ್ಞಕಾಲದಲ್ಲಿ ಅವರೆಲ್ಲರನ್ನೂ ಬಲಿಕೊಡಬೇಕೆಂದಿದ್ದನು. ಕಾರಾಗೃಹದಲ್ಲಿದ್ದ ಈ ರಾಜರ ಹಿತಾರ್ಥವಾಗಿ—“ಎಲೈ! ಭರತಕುಲ ಪ್ರದೀಪನೆ! ಯಾರು ದುಃರಾತ್ಮ ಜರಾಸಂಧನ ಈ ಕ್ರೂರಕರ್ಮವನ್ನು ನಿಲ್ಲಿಸುವರೋ ಅವರ ಯಶೋರಾಶಿ ಭೂಮಂಡಲದಲ್ಲಿ ದೇದೀಪ್ಯಮಾನವಾಗುವುದು; ಯಾರು ಅವನನ್ನು ಜಯಿಸುವರೋ ಅವರು ನಿಶ್ಚಯವಾಗಿ ಸಾಮ್ರಾಜ್ಯವನ್ನು ಪಡೆಯುವರು” ಎಂದು ಕೃಷ್ಣನು ಉಪದೇಶಮಾಡಿದನು.

ಭೀಮಾರ್ಜುನರೂ ಕೃಷ್ಣನೂ ಈ ಮುವ್ವರು ಮಾತ್ರ ದಂಡುದಾಳಿ

ಗಳಿಲ್ಲದೆಯೇ ಜರಾಸಂಧನನ್ನು ಜಯಿಸಲು ಹೊರಟರು. ಹದಿನಾಲ್ಕು ಹಗಲು ಪೌರವರ್ಗ ಮತ್ತು ಸಮಸ್ತ ಮಗಧವಾಸಿಗಳ ಸಮಕ್ಷದಲ್ಲಿ ಜರಾಸಂಧನಿಗೂ ಭೀಮನಿಗೂ ದ್ವೈರಥ್ಯಯುದ್ಧವು ನಡೆಯಿತು. ಜರಾಸಂಧನು ಹತನಾದನು. ಕೃಷ್ಣಾರ್ಜುನ ಭೀಮರು ಕಾರಾಬದ್ಧರಾಗಿದ್ದ ರಾಜರನ್ನು ಬಿಡುಗಡೆಮಾಡಿದರು. ಜರಾಸಂಧನ ವಧೆಯ ಉದ್ದೇಶವು ಕಂಟಕೋದ್ಧರಣವೇ ಹೊರತು ಪರಸ್ವಾಪಹರಣವಲ್ಲ. ಜರಾಸಂಧನನ್ನು ಕೊಂದ ಬಳಿಕ ಅವನ ಮಗ ಸಹದೇವನಿಗೆ ಪಟ್ಟವನ್ನು ಕಟ್ಟಿ ಮುವ್ವರೂ ಹೊರಟುಹೋದರು.

ಶ್ರೀಕೃಷ್ಣನ ಅಭೀಷ್ಟವು ನೆರವೇರುತ್ತಲೆ ಅವನು ಧರ್ಮರಾಯನು ರಾಜಸೂಯ ಯಜ್ಞವನ್ನು ಮಾಡಲು ಅಭಿಮತನಾದನು. ಕೂಡಲೆ ಆ ಯಜ್ಞಕ್ಕೆ ತಕ್ಕ ಕಾರ್ಯಗಳಾರಂಭವಾದುವು. ಶಿಲ್ಪಿಗಳು ಪ್ರಶಸ್ತವಾದ ಯಜ್ಞಶಾಲೆಯನ್ನೂ, ಯಜ್ಞಕ್ಕೆ ಒಂದವರಿಳಿಯುವುದಕ್ಕೆ ಸೊಗಸಾದ ಬಿಡಾರಗಳನ್ನೂ ಕಟ್ಟಿದರು. ಆಚಾರ್ಯ ಧೌಮ್ಯನು ಯಜ್ಞಸಂಭಾರಗಳನ್ನು ಕೂಡಿಸುವ ಭಾರವನ್ನೂ, ಸಹದೇವನು ದೇಶದೇಶಕ್ಕೆ ದೂತರನ್ನು ಕಳುಹಿಸಿ ಬರತಕ್ಕವರನ್ನು ಔತಣ ಹೇಳಿ ಕರೆಯಿಸುವ ಭಾರವನ್ನೂ ವಹಿಸಿದರು. ಮಹರ್ಷಿ ಕೃಷ್ಣದ್ವೈಪಾಯನನು ಬಂದು ವೇದಜ್ಞರಾದ ಬ್ರಾಹ್ಮಣರನ್ನು ಕರೆಯಿಸಿ ಅವರವರು ಮಾಡತಕ್ಕ ಯಾಜ್ಞಿಕ ಕಾರ್ಯಕ್ಕೆ ಅವರನ್ನು ನೇಮಿಸಿದನು. ಯುಧಿಷ್ಠಿರನು ಭೀಷ್ಮ ಧೃತರಾಷ್ಟ್ರ ದ್ರೋಣ ಪ್ರಭೃತಿ ಗುರುಜನರನ್ನೂ ದುರ್ಯೋಧನಾದಿ ಭ್ರಾತೃಗಳನ್ನೂ ಕರೆಯಲಿಕ್ಕೆ ನಕುಲನನ್ನು ಕಳುಹಿಸಿದನು.

ನಕುಲನು ಯುಧಿಷ್ಠಿರನ ಆಜ್ಞೆಯ ಮೇರೆಗೆ ಹಸ್ತಿನಾಪುರಕ್ಕೆ ಹೋಗಿ ವಿನಯಪೂರ್ವಕವಾಗಿ ಭೀಷ್ಮಾದಿ ಗುರುಜನರನ್ನೂ ಆಚಾರ್ಯ ಪ್ರಮುಖ ವಿಪ್ರರನ್ನೂ ಯಜ್ಞಕ್ಕೆ ಬಿಜಯಮಾಡಿಸಬೇಕೆಂದು ಪ್ರಾರ್ಥಿಸಿದನು. ತನ್ನ ಪ್ರಯತ್ನಾತಿಶಯದಿಂದ ಸುಶಿಕ್ಷಿತನಾಗಿ ಸನ್ಮಾನಿತ ಚಕ್ರವರ್ತಿ ಪದವಿಯಲ್ಲಿ ಪ್ರತಿಷ್ಠಿತನಾದ ಯುಧಿಷ್ಠಿರನು ರಾಜಸೂಯ ಯಾಗವನ್ನು ಮಾಡುವನು, ನಿಖಿಲ ರಾಜರೂ ಬಂದು ಅವನ ಚರಣಕ್ಕೆರಗುವರು—ಎಂಬ ಸಮಾಚಾರವನ್ನು ಕೇಳಿ ವೃದ್ಧ ಕೌರವಶ್ರೇಷ್ಠನು ಆನಂದಪರವಶನಾದನು. ಇಷ್ಟು ದಿನಕ್ಕೆ ಶಾಂತಿ ಸಲಿಲದಿಂದ ಅವನ ಹೃದಯಸಂತಾಪವು ಶಮನವಾಯಿತು. ಅಭೀಷ್ಟ ವಿಷಯವು ಕೈಗೂಡಿದುದರಿಂದ ಇಂದು ಆ ವೃದ್ಧ ಪುರುಷಸಿಂಹನ ವಕ್ಷಸ್ಥಲವು ಆನಂದಬಾಷ್ಪದಿಂದ ಪ್ಲಾವಿತವಾಯಿತು. ಹಸ್ತಿನಾಪುರ ವಾಸಿಗಳಾದ ಕೌರವರು ಆಹ್ವಾನವನ್ನು ಸ್ವೀಕರಿಸಿ ಇಂದ್ರಪ್ರಸ್ಥಕ್ಕೆ ಹೋಗಿ ಸೇರಿದರು. ಯುಧಿಷ್ಠಿರನು ಯಥೋಚಿತ ವಿನಯದಿಂದ ವೃದ್ಧ ಪಿತಾಮಹಾದಿ

ಗುರುಜನರ ಚರಣಕ್ಕೆ ಪ್ರಣಾಮ ಮಾಡಿ ಕೈಮುಗಿದುಕೊಂಡು ನಿಂತು ಇಂತೆಂದನು:—"ಆರ್ಯರೇ! ನಾನು ರಾಜಸೂಯ ಯಜ್ಞಕ್ಕೆ ದೀಕ್ಷೆಯನ್ನು ಕೈಕೊಂಡಿರುವೆನು. ತಾವು ಅನುಗ್ರಹಮಾಡಿ ಯಜ್ಞವು ಸಾಂಗವಾಗಿ ನೆರವೇರುವಂತೆ ಸಾಹಾಯ್ಯಮಾಡಬೇಕು. ನನ್ನ ಸಮಸ್ತ ಸಂಪತ್ತಿನಲ್ಲಿಯೂ ತಮಗೆ ಸಂಪೂರ್ಣವಾದ ಅಧಿಕಾರವುಂಟು. ಯಾವ ರೀತಿಯಲ್ಲಿ ನನಗೆ ಸರ್ವಾಂಗ ಶ್ರೇಯೋಲಾಭವುಂಟಾಗುವುದೋ ಕೈಕೊಂಡಿರುವ ಯಜ್ಞವು ಯಾವ ರೀತಿಯಲ್ಲಿ ವಿಧಿವತ್ತಾಗಿ ಸಮಾಪ್ತಿಯಾಗುವುದೋ ಆ ರೀತಿಯಲ್ಲಿ ಸಕಲ ಕಾರ್ಯಗಳೂ ನಡೆಯುವಂತೆ ಮಾಡಬೇಕು."

ರಾಜನ ವಿನಯವಚನದಿಂದ ಎಲ್ಲರೂ ಸಂತುಷ್ಟರಾಗಿ ತಂತಮ್ಮ ಶಕ್ತ್ಯನುಸಾರವಾಗಿ ತಂತಮ್ಮ ಪಾಲಿಗೆ ಬಂದ ಕೆಲಸಗಳನ್ನು ಮಾಡಲೊಪ್ಪಿದರು. ಅಜಾತಶತ್ರುವಾದ ಯುಧಿಷ್ಠಿರನು ದುರ್ಯೋಧನ ದುಃಶಾಸನರನ್ನು ಆದರ ಪುರಸ್ಸರವಾಗಿ ಕಂಡು ಇಬ್ಬರಿಗೂ ಬೇರೆ ಬೇರೆ ಕೆಲಸಗಳನ್ನೊಪ್ಪಿಸಿದನು. ಭೀಷ್ಮ ದ್ರೋಣಾಚಾರ್ಯರು ಕರ್ತವ್ಯಾಕರ್ತವ್ಯಗಳನ್ನು ವಿವೇಚನೆಮಾಡಿ ಹೇಳುವ ಭಾರವನ್ನು ವಹಿಸಿದರು. ಧೃತರಾಷ್ಟ್ರನು ಯಜಮಾನನಾದನು. ಕೃಪಾಚಾರ್ಯನು ಧನಾಧ್ಯಕ್ಷನಾಗಿ ಭೂರಿದಕ್ಷಿಣೆಯನ್ನು ಕೊಡುವ ಕಾರ್ಯವನ್ನು ವಹಿಸಿದನು. ಬಂದ ರಾಜರಿಂದ ಕಾಣಿಕೆಯನ್ನು ಕೊಳ್ಳುವ ಕೆಲಸವು ದುರ್ಯೋಧನನ ಪಾಲಿಗೂ ಭೋಜ್ಯದ್ರವ್ಯಾದಿಗಳನ್ನು ಕುರಿತ ವಿಚಾರವು ದುಃಶಾಸನನ ಪಾಲಿಗೂ ಬಂದುವು. ಅಶ್ವತ್ಥಾಮನು ಬ್ರಾಹ್ಮಣರ ಪರಿಚರ್ಯೆ ಭಾರವನ್ನೂ, ಸಂಜಯನು ರಾಜರ ಪರಿಚರ್ಯಭಾರವನ್ನೂ ಕೈಕೊಂಡರು. ಶ್ರೀ ಕೃಷ್ಣನು ಯಜ್ಞರಕ್ಷಣೆಯ ಭಾರವನ್ನೂ ಬ್ರಾಹ್ಮಣರ ಪಾದಪ್ರಕ್ಷಾಳನಾದಿ ಕೈಂಕರ್ಯವನ್ನೂ ವಹಿಸಿದನು.

ಕಾಲಕ್ಕೆ ಸರಿಯಾಗಿ ಯಜ್ಞಕ್ಕೆ ಆಹೂತರಾದವರೆಲ್ಲರೂ ಬರಲಾರಂಭಿಸಿದರು. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾದಿ ಸಕಲ ವರ್ಣದವರನ್ನೂ ಕರೆದಿದ್ದರು. ಸಕಲರೂ ಸಕುಟುಂಬ ಸಪರಿವಾರರಾಗಿ ಬಂದಿಳಿದರು. ಋಷಿಗಳು ನರಪತಿಗಳು ಪುರವಾಸಿಗಳು ಜನಪದ ವಾಸಿಗಳು ಸರ್ವರೂ ಯಜ್ಞಸ್ಥಲಕ್ಕೆ ಬಂದು ಸೇರಿದರು. ಬಂದವರೆಲ್ಲರೂ ಯಜ್ಞಸಭೆಯ ಶೋಭೆಯನ್ನೂ, ಬಂದವರನ್ನು ಉಪಚರಿಸುತ್ತಿದ್ದ ರೀತಿಯನ್ನೂ, ಆದರಿಸುತ್ತಿದ್ದ ಕ್ರಮವನ್ನೂ, ಯಜ್ಞಸ್ಥಲದಲ್ಲಿದ್ದ ಅರ್ಥರಾಶಿಯನ್ನೂ ನೋಡಿ ವಿಸ್ಮಯಪಟ್ಟು, ಮುಕ್ತಕಂಠದಿಂದ ಯುಧಿಷ್ಠಿರನನ್ನು ಪ್ರಶಂಸೆಮಾಡಿದರು. ನಿರ್ದಿಷ್ಟವಾಗಿದ್ದ ಶುಭದಿವಸ ಯಜ್ಞ ಪ್ರಾರಂಭವಾಯಿತು. ಯುಧಿಷ್ಠಿರನು ಹೇಗೆ ಸಹಸ್ರ ಸಹಸ್ರ ಜನರಿಂದ ಕಾಣಿಕೆ

ಯನ್ನು ಪರಿಗ್ರಹಿಸಿದನೋ ಹಾಗೆಯೇ ಮುಕ್ತಹಸ್ತದಿಂದ ಬ್ರಾಹ್ಮಣರಿಗೆ ದಕ್ಷಿಣೆಯನ್ನೂ ಕೊಟ್ಟನು. ಯಾರು ಏನನ್ನು ಬೇಡಿದರೂ ಅದು ಅವರಿಗೆ ಯಥೇಚ್ಛವಾಗಿ ಲಭಿಸುತ್ತಿದ್ದಿತು. ಈ ತೆರದಲ್ಲಿ ರಾಜಸೂಯ ಯಜ್ಞವು ಅತಿ ಸಂಭ್ರಮದಿಂದ ಸಮಾರಂಭವಾಯಿತು.

ಈ ಮಹಾ ಯಜ್ಞದಲ್ಲಿ ಭೀಷ್ಮನು ಕರ್ತವ್ಯಾಕರ್ತವ್ಯ ವಿಚಾರಭಾರವನ್ನು ವಹಿಸಿ ತನ್ನ ವಿಚಕ್ಷಣೆಯನ್ನೂ ಗುಣಗ್ರಹಣಶಕ್ತಿಯನ್ನೂ ವಿಶೇಷವಾಗಿ ತೋರಿದನು. ಅವನು ಯುಧಿಷ್ಠಿರನನ್ನು ಕುರಿತು—"ವತ್ಸ! ಆಚಾರ್ಯರು, ಋತ್ವಿಜರು, ಸ್ನಾತಕರು, ನೃಪತಿ ಪ್ರಭೃತಿ ಗುಣಶ್ರೇಷ್ಠರು ಅರ್ಘ್ಯವನ್ನು ಕೊಳ್ಳಲು ಸತ್ಪಾತ್ರರಾಗಿರುವರು. ಇವರೊಳಗೆ ಯಾರು ಸರ್ವಶ್ರೇಷ್ಠರೋ ಅವರಿಗೆ ಯಜ್ಞಭೂಮಿಯಲ್ಲಿ ಮೊದಲು ಅರ್ಘ್ಯವನ್ನು ಕೊಟ್ಟು ಅರ್ಚನೆಮಾಡಿ ತರುವಾಯ ಎಲ್ಲರನ್ನೂ ಯಥಾಯೋಗ್ಯವಾಗಿ ಸಮ್ಮಾನಿಸು" ಎಂದನು.

ಅದಕ್ಕೆ ಯುಧಿಷ್ಠಿರನು—"ಪಿತಾಮಹನೇ! ನೀನು ಅಗ್ರಪೂಜೆಗೆ ಯಾರು ಯೋಗ್ಯರೆಂದು ವಿವೇಚನೆ ಮಾಡಿದ್ದೀಯೋ ಅಪ್ಪಣೆ ಕೊಡು" ಎಂದು ಕೇಳಿದನು.

ಭೀಷ್ಮನು ಶ್ರೀ ಕೃಷ್ಣನೇ ಸರ್ವಶ್ರೇಷ್ಠನೆಂದು ಬುದ್ಧಿಪೂರ್ವಕವಾಗಿ ನಿಶ್ಚಯಿಸಿ—"ವತ್ಸ! ಜ್ಯೋತಿಷ್ಮಂಡಲದಲ್ಲಿ ಭಾಸ್ಕರನು ಹೇಗೆ ಅತಿಶಯವಾದ ಪ್ರಭೆಯಿಂದ ಸರ್ವಶ್ರೇಷ್ಠನೆನಿಸಿಕೊಂಡಿರುವನೋ ಹಾಗೆಯೇ ಜೀವಲೋಕದಲ್ಲಿ ತನ್ನ ತೇಜೋಬಲಪರಾಕ್ರಮಗಳಿಂದ ಶ್ರೀ ಕೃಷ್ಣನು ಸರ್ವಶ್ರೇಷ್ಠನೆನಿಸಿರುವನು; ಸೂರ್ಯಕಿರಣಗಳಿಂದ ಭೂಮಿಯು ಪ್ರಕಾಶಗೊಳ್ಳುವಂತೆ ಶ್ರೀ ಕೃಷ್ಣನ ಸಮಾಗಮದಿಂದ ನಮ್ಮ ಸಭೆಯು ಬೆಳಗುತ್ತಿರುವುದು. ಆದುದರಿಂದ ಈ ಪುರುಷೋತ್ತಮನಿಗೆ ಅರ್ಘ್ಯಪ್ರದಾನ ಮಾಡುವುದು ಕರ್ತವ್ಯವು" ಎಂದನು.

ಒಡನೆಯೇ ಯುಧಿಷ್ಠಿರನು ಶ್ರೀ ಕೃಷ್ಣನಿಗೆ ಅರ್ಘ್ಯಪ್ರದಾನ ಮಾಡಲು ನಿಶ್ಚಯಿಸಿದನು. ಭೀಷ್ಮನು ಸಹದೇವನನ್ನು ಕರೆದು ಶ್ರೀ ಕೃಷ್ಣನಿಗೆ ಯಥಾವಿಧಾನವಾಗಿ ಅರ್ಘ್ಯವನ್ನು ಅರ್ಪಿಸೆಂದು ಆಜ್ಞಾಪಿಸಿದನು. ಶ್ರೀ ಕೃಷ್ಣನೂ ಶಾಸ್ತ್ರೋಕ್ತವಾಗಿ ಅರ್ಘ್ಯವನ್ನು ಸ್ವೀಕರಿಸಿದನು. ದ್ವಾರಾವತಿಯ ರಾಜನಾದ ಶ್ರೀ ಕೃಷ್ಣನಿಗಾದ ಪೂಜಾಪುರಸ್ಕಾರಗಳನ್ನು ನೋಡಿ ಅಲ್ಲಿ ನೆರೆದಿದ್ದ ಕ್ಷತ್ರಿಯರೆಲ್ಲರೂ, ಅದರೊಳಗೂ ಚೇದಿ ರಾಜನಾದ ಶಿಶುಪಾಲನು, ಸಹಿಸಲಾರದೆ ಹೋದರು.

ಶಿಶುಪಾಲನು ಅಸೂಯಾಪರನಾಗಿ ಇಂತೆಂದು ನುಡಿದು ಎಲ್ಲರನ್ನೂ

ಜರೆದನು—"ಅಗ್ರಪೂಜೆಗೆ ಅರ್ಹನಾರೆಂದು ಕೇಳಿದವನು ವಿಯೋನಿಜನು, ಹೇಳಿದವನು ನದೀಸುತನು, ಪ್ರತಿಗ್ರಹಿಸಿದವನು ಗೊಲ್ಲನು, ಅರ್ಚಿಸಿದವನೂ ವಿಯೋನಿಜನು. ಆದರೂ ಸದಸ್ಯರೆಲ್ಲರೂ ಮೂಕರಂತಿರುವರು. ನಾನು ಏನ ಹೇಳಲಿ? ಪಾಂಡವ! ಪೂಜ್ಯರಾದವರು ಇದ್ದೂ ಗೊಲ್ಲನನ್ನು ಪೂಜ್ಯನೆಂದೆಣಿಸಿದೆ ಯಲ್ಲ!" ಎಂದು ನುಡಿದು, ಧರ್ಮರಾಯ ಭೀಷ್ಮ ಕೃಷ್ಣ ಸಹದೇವರನ್ನು ಅಲೆಗಳೆದು ತೃಪ್ತನಾಗದೆ, "ಈ ಮಹಾತ್ಮರಾದ ಭೂಪತಿಗಳ ನಡುವೆ ಕೃಷ್ಣನು ರಾಜಭೋಗ್ಯವಾದ ಪೂಜೆಗೆ ಅರ್ಹನಲ್ಲ. ಪಾಂಡವರು ಯಾವುದೋ ಒಂದು ಪ್ರತ್ಯಾಶೆಯಿಂದ ದೇವಕೀಪುತ್ರನನ್ನು ಅರ್ಚಿಸಿದರು. ಅದು ಯುಕ್ತವಲ್ಲ. ಪಾಂಡವರೆ! ಧರ್ಮವು ಅತಿ ಸೂಕ್ಷ್ಮವಾದುದು; ನೀವು ಹುಡುಗರು, ಅರಿತವ ರಲ್ಲ; ಭೀಷ್ಮನು ವೃದ್ಧನು, ಆದರೂ ಅಲ್ಪಬುದ್ಧಿಯುಳ್ಳವನಾದುದರಿಂದ ಧರ್ಮ ವನ್ನು ಅತಿಕ್ರಮಿಸಿದನು. ಕೃಷ್ಣನು ರಾಜನಲ್ಲ. ಆದರೂ ರಾಜರ ಮಧ್ಯದಲ್ಲಿ ಅರ್ಹನಂತೆ ನೀವು ಅವನನ್ನು ಅರ್ಚಿಸಿದಿರಿ. ಕುರುಪುಂಗವ! ಕೃಷ್ಣನು ಹಿರಿಯ ನೆನ್ನುವಿರೋ? ಅವನ ಅಪ್ಪ ವೃದ್ಧ ವಸುದೇವನು ಇರುವಲ್ಲಿ ಅವನ ಮಗನು ಹೇಗೆ ಮಾನ್ಯನಾಗುವನು? ವಾಸುದೇವನು ನಿಮ್ಮ ಪ್ರಿಯವನ್ನು ಬಯಸುವನು ಮತ್ತು ನಿಮ್ಮನ್ನು ಅನುವರ್ತಿಸುವನು ಎನ್ನುವಿರೋ? ದ್ರುಪದರಾಯ ನಿರುವಲ್ಲಿ ಮಾಧವನು ಹೇಗೆ ಪೂಜೆಗೆ ಅರ್ಹನು? ಕುರುನಂದನ! ಕೃಷ್ಣನು ಆಚಾರ್ಯನೆನ್ನುವಿರೋ? ದ್ರೋಣಾಚಾರ್ಯನಿರಲಾಗಿ ವಾರ್ಷ್ಣೇಯನು ಹೇಗೆ ಪೂಜ್ಯನು? ಅವನು ಋತ್ವಿಜನೆನ್ನುವಿರೋ? ವೃದ್ಧ ವ್ಯಾಸನಿರುವಲ್ಲಿ ಕೃಷ್ಣನನ್ನು ಅರ್ಚಿಸಿದುದಕ್ಕೆ ಕಾರಣವೇನು? ಇನ್ನೂ ಪೂಜಾರ್ಹರಾದ ಭೀಷ್ಮ ಅಶ್ವತ್ಥಾಮ ಕೃಪಾಚಾರ್ಯ ದುರ್ಯೋಧನ ಕರ್ಣ ಪ್ರಭೃತಿಗಳು ಇರುವಲ್ಲಿ ಕೃಷ್ಣನು ಹೇಗೆ ಮಾನ್ಯನು? ಅವನು ಋತ್ವಿಜನಲ್ಲ, ಆಚಾರ್ಯನಲ್ಲ, ರಾಜನಲ್ಲ; ಅವನನ್ನು ಯಾವ ಆಸೆಯಿಂದ ಪೂಜಿಸಿದಿರಿ? ಕೃಷ್ಣನೇ ಪೂಜ್ಯ ನೆಂದು ನೀವು ಭಾವಿಸುವ ಪಕ್ಷಕ್ಕೆ ನಮ್ಮನ್ನು ಅವಮಾನಪಡಿಸುವುದಕ್ಕೆ ಬರಮಾಡಿಸಿದಿರೋ? ನಾವು ಭಯದಿಂದ ಕಾಣಿಕೆ ಕೊಟ್ಟವರಲ್ಲ, ಲೋಭ ದಿಂದಲ್ಲ, ನಿಮ್ಮ ಒಲುಮೆಯನ್ನು ಸಂಪಾದಿಸುವ ಆಸೆಯಿಂದಲೂ ಅಲ್ಲ; ಧರ್ಮ ಪ್ರವೃತ್ತಿಯುಳ್ಳ ಯುಧಿಷ್ಠಿರನ ಧರ್ಮಪ್ರಭುತ್ವವನ್ನು ಬಯಸಿ ಕಾಣಿಕೆಯನ್ನು ಕೊಟ್ಟೆವು. ಅಂತಹ ನಮ್ಮನ್ನು ನೀವು ಮಾನ್ಯರೆನ್ನಲಿಲ್ಲ! ಈ ರಾಜಸಭೆಯಲ್ಲಿ ರಾಜಲಕ್ಷಣಗಳೊಂದೂ ಇಲ್ಲದ ಕೃಷ್ಣನಿಗೆ ನೀವು ಸಮ್ಮಾನಮಾಡಿ ನಮಗೆ ಅವಮಾನಮಾಡಿಸಿದುದು ನ್ಯಾಯವೆ? ಇಂತಹ ಪೂಜೆಯನ್ನು ಧರ್ಮಭ್ರಷ್ಟ ನಿಗೆ ಮಾಡುವರುಂಟೆ? ಧರ್ಮರಾಯನಿಗೆ ಧರ್ಮಾತ್ಮನೆಂಬ ಯಶಸ್ಸು ಹೇಗೆ

ಬಂದಿತೋ ತಿಳಿಯದು. ಇಂದು ಧರ್ಮರಾಯನ ದೆಸೆಯಿಂದಲೇ ಧರ್ಮವು ಕಣ್ಮರೆಯಾಯಿತು. ಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿದಾಗಲೇ ನಿಮ್ಮೆಲ್ಲರ ಕೃಪಣತೆ ಹೊರಬಿದ್ದಿತು" ಎಂದು ತನ್ನ ಆಕ್ರೋಶವನ್ನು ತೋರಿದನು.

ಈ ಪ್ರಕಾರವಾಗಿ ಮನಸ್ಸಿಗೆ ಬಂದಂತೆ ಪಾಂಡವರನ್ನು ಜರೆದು, ಆಮೇಲೆ ಕೃಷ್ಣನ ಮೇಲೆ ತಿರುಗಿಬಿದ್ದನು—"ಮಾಧವ! ಕುಂತಿಯ ಮಕ್ಕಳೇನೊ ಭೀತರು, ಕೃಪಣರು; ನಿನ್ನ ಬುದ್ಧಿ ಎತ್ತಹೋಯಿತು? ಈ ಪೂಜೆಗೆ ನೀನು ಅರ್ಹನಲ್ಲವೆಂಬುದನ್ನು ಅರಿಯೆಯಾ? ಕೃಪಣರಾದ ಇವರು ಪೂಜೆಮಾಡ ಬಂದರೆ ಅನರ್ಹನಾದ ನೀನು ಅದಕ್ಕೆ ಹೇಗೊಪ್ಪಿದೆ? ಈಗ ನಿಮ್ಮೆಲ್ಲರ ಸ್ವರೂಪವೂ ತಿಳಿಯಿತು! ಧರ್ಮರಾಯನು ಎಷ್ಟರವನೋ, ಭೀಷ್ಮನು ಎಷ್ಟರವನೋ, ವಾಸುದೇವನು ಎಷ್ಟರವನೋ, ಚೆನ್ನಾಗಿ ತಿಳಿಯಿತು" ಈ ಬಗೆಯ ನಿಷ್ಠುರೋಕ್ತಿಗಳನ್ನಾಡಿ ಶಿಶುಪಾಲನು ತನ್ನ ಕಡೆಯವರಾದ ರಾಜರ ಸಮೇತನಾಗಿ ಹೊರಡಲು ಎದ್ದನು.

ಆಗ ಯುಧಿಷ್ಠಿರನು ಶಿಶುಪಾಲನ ಹತ್ತಿರ ಹೋಗಿ—"ರಾಜನೆ! ನೀನು ಇಂತಹ ಮಾತುಗಳನ್ನಾಡುವುದು ಸರಿಯಲ್ಲ. ನಿನ್ನ ಮಾತುಗಳು ಅತಿ ಕಠಿನವು, ನಿರರ್ಥಕವು ಕೂಡ. ಭೀಷ್ಮನು ಅಧರ್ಮವನ್ನು ನುಡಿಯುವನಲ್ಲ. ನಿನಗಿಂತ ವೃದ್ಧರಾಗಿರುವರು ಕೂಡ ಕೃಷ್ಣನು ಪೂಜಾರ್ಹನೆನ್ನುವರು. ಅವರ ಮಾತನ್ನು ನೀನು ಕಳೆದುಹಾಕುವುದು ಯುಕ್ತವಲ್ಲ. ಚೇದಿಪತಿಯೇ! ಭೀಷ್ಮನು ಕೃಷ್ಣನನ್ನು ಚೆನ್ನಾಗಿ ಬಲ್ಲನು. ನೀನು ಅರಿಯೆ" ಎಂದು ಮೃದು ಮಧುರ ವಚನಗಳಿಂದ ಶಿಶುಪಾಲನನ್ನು ಸಮಾಧಾನಗೊಳಿಸಲು ಯತ್ನಿಸಿದನು.

ಶಿಶುಪಾಲನು ಯುಧಿಷ್ಠಿರನ ನಯವಿನಯದಿಂದ ಶಾಂತನಾಗದಿರುವುದನ್ನು ಕಂಡು ಭೀಷ್ಮನು—"ವತ್ಸ! ಲೋಕಪೂಜಿತನಾದ ಶ್ರೀ ಕೃಷ್ಣನ ಪೂಜೆಯು ಯಾರಿಗೆ ಇಷ್ಟವಲ್ಲವೋ ಹಿತಕರವಾದ ಮಾತುಗಳನ್ನಾಡಿದರೂ ಯಾರು ರೇಗುವರೋ ಅವರ ಕೂಡೆ ನಯದಿಂದ ಮಾತನಾಡುವುದರಿಂದೇನು ಪ್ರಯೋಜನ? ಅವರು ಅನುನಯಕ್ಕೆ ಯೋಗ್ಯರಲ್ಲ" ಎಂದನು.

ತರುವಾಯ ಭೀಷ್ಮನು ಶಿಶುಪಾಲನ ಕಡೆಗೆ ತಿರುಗಿ—"ಚೇದಿರಾಜನೆ! ಈ ರಾಜಸಭೆಯಲ್ಲಿ ಶ್ರೀ ಕೃಷ್ಣನ ತೇಜೋಬಲಕ್ಕೆ ಸೋಲದ ರಾಜರಾರು? ಕೃಷ್ಣನನ್ನು ಪೂಜಿಸುವವರು ನಾವೊಬ್ಬರೇ ಅಲ್ಲ; ಮೂರು ಲೋಕಗಳೂ ಪೂಜಿಸುವುವು. ಆದುದರಿಂದಲೇ ಸಾಧುಗಳೂ ವೃದ್ಧರೂ ಇದ್ದರೂ ಕೂಡ ಅವರ ಮಧ್ಯದಲ್ಲಿ ನಾವು ಕೃಷ್ಣನನ್ನೇ ಅರ್ಚಿಸಿದೆವು. ಅದಕ್ಕೆ ನೀನು ಅಸೂಯೆಪಡುವುದು ಧರ್ಮವಲ್ಲ. ನಾನು ಅನೇಕ ಜ್ಞಾನವೃದ್ಧರ ಸಂಗ

ದಲ್ಲಿದ್ದು ಕೃಷ್ಣನ ಮಾಹಾತ್ಮ್ಯವನ್ನು ಕೇಳಿದ್ದೇನೆ. ಅವರೆಲ್ಲರೂ ಅವನನ್ನು ಸರ್ವಗುಣಸಂಪನ್ನನೆನ್ನುವರು. ನಾವು ಅವನನ್ನು ಯಾವ ಪ್ರತ್ಯಾಶೆಯಿಂದಲೂ ಪೂಜಿಸಿದವರಲ್ಲ. ಸಾಧುಗಳು ಯಾವನನ್ನು ಸರ್ವಭೂತಮಂಗಳಪ್ರದನೆಂದು ಅರ್ಚಿಸುವರೋ ಅವನನ್ನು ನಾವು ಅರ್ಚಿಸಿದೆವು. ಅವನು ಸುಬಾಲನೇನೋ ಅಹುದು; ಆದರೆ ಅಪರೀಕ್ಷಿತನಲ್ಲ. ಗುಣದಲ್ಲಿ ವೃದ್ಧರನ್ನು ಮೀರಿಸಿರುವವನು. ಅವನ ಯಶಸ್ಸನ್ನೂ ಶೌರ್ಯಾದಿ ಗುಣಗಳನ್ನೂ ಅರಿತೇ ನಾವು ಅವನನ್ನು ಪೂಜಿಸಿದೆವು. ಬ್ರಾಹ್ಮಣರಲ್ಲಿ ಜ್ಞಾನವೃದ್ಧನು ಅಧಿಕನೆನಿಸುವನು. ಕ್ಷತ್ರಿಯರಲ್ಲಿ ಬಲಾಢ್ಯನು ಅಧಿಕನೆನಿಸುವನು. ಕೃಷ್ಣನಾದರೋ ವೇದವೇದಾಂಗ ಜ್ಞಾನದಲ್ಲಿಯೂ ಬಲದಲ್ಲಿಯೂ ಅವರಿಬ್ಬರಿಗೂ ಅಧಿಕನಾಗಿರುವನು. ಕೃಷ್ಣನೇ ಆಚಾರ್ಯನು, ಅವನೇ ತಂದೆತಾಯಿ, ಋತ್ವಿಜನು, ರಾಜನು, ಪ್ರಿಯನು, ಸರ್ವವೂ ಅವನೇ ಎಂದು ನಾವು ಅವನಿಗೆ ಅರ್ಘ್ಯವನ್ನು ಕೊಟ್ಟು ಅವನನ್ನು ಸತ್ಕರಿಸಿದೆವು. ಶಿಶುಪಾಲ! ನೀನು ಇನ್ನೂ ಹುಡುಗ; ಕೃಷ್ಣನ ಮಹಿಮೆಯನ್ನು ಅರಿಯೆ. ಯಾರು ತಾನೆ ಅವನನ್ನು ಪೂಜಿಸರು? ಶಿಶುಪಾಲ! ಈ ಪೂಜೆಯು ಅಯುಕ್ತವೆಂದು ನೀನು ಭಾವಿಸಿದಲ್ಲಿ ನಿನ್ನ ಇಷ್ಟಬಂದಂತೆ ಮಾಡಿಕೊ" ಎಂದು ಹೇಳಿ, ಅವನು ಇಷ್ಟವಿದ್ದರೆ ಇರಲಿ, ಇಲ್ಲವಾದರೆ ಹೋಗಲಿ ಎಂದು ಸೂಚಿಸಿದನು.

ಆಗ ಯುಧಿಷ್ಠಿರನ ಅಭಿಷೇಕವನ್ನೂ ಕೃಷ್ಣನ ಅರ್ಚನೆಯನ್ನೂ ನೋಡಿ ಸಹಿಸಲಾರದೆ ಈರ್ಷ್ಯಾಪರತಂತ್ರನಾದ ಶಿಶುಪಾಲನೂ ಅವನ ಪಕ್ಷವನ್ನು ವಹಿಸಿದ ರಾಜರೂ ಕೋಲಾಹಲವನ್ನು ಮಾಡತೊಡಗಿದರು. ಆ ರಾಜರು ರೋಷವೇರಿರುವುದನ್ನು ಯುಧಿಷ್ಠಿರನು ನೋಡಿ ಚಿಂತಿಸುತ್ತ, ಭೀಷ್ಮನನ್ನುದ್ದೇಶಿಸಿ—"ಪಿತಾಮಹನೇ! ಈ ನೃಪತಿಗಳು ರೋಷಾವಿಷ್ಟರಾಗಿರುವರು. ಯಜ್ಞಕ್ಕೆ ವಿಘ್ನಬಾರದಂತೆಯೂ ಪ್ರಜೆಗಳಿಗೆ ಹಿತವಾಗುವಂತೆಯೂ ಏನ ಮಾಡಬೇಕೊ ಹೇಳು" ಎಂದು ಕೇಳಿದನು.

ಲೋಹಸಿರ್ವಿತ ಹೃದಯನಾದ ಭೀಷ್ಮನು—"ಕುರು ಶಾರ್ದೂಲನೆ! ಭಯಪಡಬೇಡ. ಯಜ್ಞಕ್ಕೆ ಯಾವ ವಿಘ್ನವೂ ಬಾರದು. ಸಿಂಹವು ನಿದ್ದೆ ಹೋಗುತ್ತಿರುವಾಗ ನಾಯಿಗಳು ಬೊಗಳುವುವು. ಕೃಷ್ಣನು ಸುಪ್ತಸಿಂಹದಂತೆ ಸುಮ್ಮನಿದ್ದಾನೆ. ದುಷ್ಟಬುದ್ಧಿಯುಳ್ಳ ಶಿಶುಪಾಲನಿಗೂ ಅವನ ಪಕ್ಷವನ್ನು ವಹಿಸಿರುವ ರಾಜರಿಗೂ ಇದು ವಿನಾಶಕಾಲ. ಅದಕ್ಕೆ ತಕ್ಕಂತೆ ಅವರ ಬುದ್ಧಿಯೂ ಕೆಟ್ಟಿದೆ. ಕೃಷ್ಣನೇ ಅವರಿಗೆ ತಕ್ಕ ಶಾಸ್ತಿಮಾಡುವನು" ಎಂದನು.

ಆ ಬಳಿಕ ಯುಧಿಷ್ಠಿರನು ಶ್ರೀ ಕೃಷ್ಣನ ಮಹಿಮೆಯನ್ನು ವಿಸ್ತಾರವಾಗಿ

ಹೇಳೆಂದು ಭೀಷ್ಮನನ್ನು ಪ್ರಾರ್ಥಿಸಲು, ಭೀಷ್ಮನು ಆ ರಾಜಸಭೆಯಲ್ಲಿ ಕೃಷ್ಣನ ಮಾಹಾತ್ಮ್ಯವನ್ನು ನಿರೂಪಿಸಿದನು. ಸಹದೇವನು ಬ್ರಹ್ಮಕ್ಷತ್ರಿಯರೆಲ್ಲರನ್ನೂ ಸತ್ಕರಿಸಿ ಯಜ್ಞವನ್ನು ಸಮಾಪ್ತಿಮಾಡಿದನು.

ಆಗ ಶಿಶುಪಾಲನು ಅಲ್ಲಿ ನೆರೆದಿದ್ದ ರಾಜರನ್ನು ಸಂಬೋಧಿಸಿ—"ಎಲೈ, ರಾಜವರ್ಯರೇ! ನಮಗಾದ ಅವಮಾನವನ್ನು ತಾಳಿಕೊಂಡು ಸುಮ್ಮನಿರುವುದು ಯುಕ್ತವಲ್ಲ. ನಾನು ಸೇನಾಪತಿಯಾಗುವೆನು. ಯುದ್ಧಮಾಡೋಣ, ಏಳಿರಿ" ಎಂದು ಆ ರಾಜರನ್ನು ಉಬ್ಬಿಸಿದನು.

ತರುವಾಯ ಭೀಷ್ಮನ ಕಡೆಗೆ ತಿರುಗಿ, ಶಿಶುಪಾಲನು—"ಎಲೈ ಕುಲಕಳಂಕನೆ! ಪಾಂಡವರು ನಿನ್ನನ್ನು ಯಜಮಾನನ್ನಾಗಿಟ್ಟುಕೊಂಡು ನೀನು ಹೇಳಿದ ದಾರಿಯಲ್ಲಿ ಹೋಗುವುದು, ಕುರುಡರು ಕುರುಡರನ್ನು ಕೈಹಿಡಿದು ದಾರಿ ನಡೆಯುವಂತಿರುವುದು. ಕೃಷ್ಣನ ಬಾಲಲೀಲೆಗಳೆಲ್ಲವನ್ನೂ ಅದ್ಭುತ ಕಾರ್ಯಗಳನ್ನಾಗಿ ನೀನು ಕೊಂಡಾಡುತ್ತೀಯೆ. ಭೀಷ್ಮ! ನೀನು ಜ್ಞಾನವೃದ್ಧನಾದರೂ ಗೊಲ್ಲ ಹುಡುಗನ ನಿಂದಾರ್ಹವಾದ ಕಾರ್ಯಗಳನ್ನು ಕೂಡ ಹೊಗಳುತ್ತೀಯೆ. ಅವನು ಕಂಸನ ಅನ್ನವನ್ನುಂಡು ಬಲಿತು ಕಂಸನನ್ನೇ ಕೊಂದನು. ಮಹಾಬಲನಾದ ಜರಾಸಂಧನು ಕೃಷ್ಣನು ದಾಸನೆಂದು ಅವನ ಸಂಗಡ ಯುದ್ಧಮಾಡಲು ಹೇಸಿದನು. ಕೃಷ್ಣನೂ ಭೀಮಾರ್ಜುನರೂ ಅಂತಹ ಮಾನಾರ್ಹನನ್ನು ಕೊಂದರು. ಅದು ಸಾಧುಕೃತ್ಯವೆ? ಎಷ್ಟು ಪುರಾಣಗಳನ್ನು ಓದಿದರೇನು? ಜನರು ಅವರವರ ಪ್ರಕೃತಿಯನ್ನೇ ಹಿಡಿದು ನಡೆಯುವರು. ನಿನ್ನ ಪ್ರಕೃತಿ ನೀಚವಾದುದು, ಸಂಶಯವಿಲ್ಲ. ನಿನ್ನ ಮಾತನ್ನು ಕೇಳಿ ಕೃಷ್ಣನನ್ನು ಪೂಜ್ಯನನ್ನಾಗೆಣಿಸಿದ ಆ ಪಾಂಡವರು ಎಂತಹ ಪಾಪಿಷ್ಠರು? ಭೀಷ್ಮ! ನೀನು ಧರ್ಮಜ್ಞನೆಂದು ನಾನು ಹೇಳೆನು. ವೃದ್ಧರ ಸೇವೆಯನ್ನು ಮಾಡಿ ಅವರಿಂದ ನೀನು ಧರ್ಮವನ್ನು ಕಲಿತವನಲ್ಲ. ನೀನು ಅನಪತ್ಯನು; ಮಿಥ್ಯಾಧರ್ಮವನ್ನು ಆಚರಿಸುವವನು. ಆದುದರಿಂದ ನಿನ್ನ ವ್ರತೋಪವಾಸಗಳೆಲ್ಲವೂ ವ್ಯರ್ಥ. ನಿನ್ನ ಜ್ಞಾತಿಗಳೇ ನಿನ್ನನ್ನು ಕೊಲ್ಲುವರು. ಸತ್ವಭಾವವುಳ್ಳ ಪಾಂಡವರು ಕೃಷ್ಣನ ದುಷ್ಕಾರ್ಯಗಳೆಲ್ಲವನ್ನೂ ಸಾಧುಕಾರ್ಯಗಳೆಂದು ಭಾವಿಸುವುದು ಆಶ್ಚರ್ಯವಲ್ಲ. ನೀನು ಅವರಿಗೆ ಮಾರ್ಗಪ್ರದರ್ಶಕನು; ನಿನ್ನ ದುರ್ಬೋಧನೆಗೊಳಗಾಗಿ ಅವರು ಬುದ್ಧಿಗೆಟ್ಟಿರುವರು."

ಈ ಪರುಷವಾಕ್ಯಗಳನ್ನು ಕೇಳಿ ಭೀಮಸೇನನು ರೋಷಾವಿಷ್ಟನಾಗಿ ಶಿಶುಪಾಲನ ಮೇಲೆ ಕೈಯೆತ್ತುವುದಕ್ಕೆ ಹೋಗಲು, ಭೀಷ್ಮನು ಅವನನ್ನು ತಡೆದನು. ಆಗ ಶಿಶುಪಾಲನು—"ಏಕೆ ತಡೆಯುತ್ತೀಯೆ? ಪತಂಗವು

ಬೆಂಕಿಯಲ್ಲಿ ಬಿದ್ದು ಸಾಯುವಂತೆ ಭೀಮನು ನನ್ನ ಮೇಲೆ ಬಿದ್ದು ಸಾಯಲಿ" ಎಂದನು.

ಶಿಶುಪಾಲನು ಹಾಗೆನ್ನುತ್ತಲೆ ಭೀಮನ ಕೋಪವು ಮತ್ತಷ್ಟು ಹೆಚ್ಚಲು, ಭೀಷ್ಮನು—"ಈ ಪಾಪಿಷ್ಠ ಶಿಶುಪಾಲನು ಮಂದಬುದ್ಧಿ. ಶ್ರೀ ಕೃಷ್ಣನೇ ಅವನಿಗೆ ಮೃತ್ಯುವಾಗಿರುವುದನ್ನು ಅವನು ಕಾಣನೆ? ನೀನು ಸುಮ್ಮನಿರು. ಇಂದಿನವರೆಗೆ, ಸಂಭಾವಿತರಾದ ರಾಜರಾರು ಕೂಡ ನನ್ನನ್ನು ಈ ರೀತಿ ದೂಷಿಸಲಿಲ್ಲ. ಆದರೂ ಚಿಂತೆಯಿಲ್ಲ. ನೀನು ತಾಳಿಕೊ" ಎನ್ನಲು, ಭೀಮನು ಗುರುವಾಕ್ಯವನ್ನು ಮೀರಲಾರದೆ ಸುಮ್ಮನಾದನು.

ಶಿಶುಪಾಲನು ಭೀಷ್ಮನಾಡಿದ ಮಾತನ್ನು ಸೈರಿಸಲಾರದೆ ರೇಗಿ—"ಭೀಷ್ಮ! ನಾವೆಂತೂ ಕೃಷ್ಣನ ಪ್ರಭಾವವನ್ನು ಸೈರಿಸದವರು. ನೀನೋ? ಅವನ ಬಂದಿಯ ಹಾಗೆ ಅವನನ್ನು ಬಿಡದೆ ಸ್ತೋತ್ರಮಾಡುತ್ತೀಯೆ. ಪರರನ್ನು ಸ್ತೋತ್ರಮಾಡುವುದೇ ನಿನ್ನ ಶೀಲವಾದ ಪಕ್ಷದಲ್ಲಿ ಕೃಷ್ಣನನ್ನು ಬಿಟ್ಟು ಈ ರಾಜರನ್ನು ಸ್ತೋತ್ರಮಾಡು; ರಾಜಶ್ರೇಷ್ಠನಾದ ಬಾಹ್ಲಿಕನನ್ನು ಸ್ತುತಿಸು. ಧನುರ್ವಿದ್ಯಾಕುಶಲನಾದ ಕರ್ಣನನ್ನು ಕೊಂಡಾಡು. ದ್ರೋಣ ಅಶ್ವತ್ಥಾಮರು ಕೋಪಿಸಿಕೊಂಡರೆ ಈ ಭೂಮಂಡಲವೆಲ್ಲವನ್ನೂ ಹುಟ್ಟುಗೆಡಿಸ ಬಲ್ಲರು. ಯುದ್ಧದಲ್ಲಿ ಯಾವ ನರಾಧಿಪರೂ ಇವರಿಗೆ ಸಮನೆನಿಸರು. ನೀನೇಕೆ ಈ ದ್ವಿಜೋತ್ತಮರನ್ನು ಹೊಗಳೆ? ಬಾಹುಬಲಶಾಲಿಯಾದ ದುರ್ಯೋಧನನ್ನೇಕೆ ಶ್ಲಾಘಿಸೆ? ಭರತಾಚಾರ್ಯನೂ ವೃದ್ಧನೂ ಆದ ಕೃಪನನ್ನು ಹೊಗಳ ಬಾರದೇಕೆ? ವಿರಾಟ ದ್ರುಪದರಾಯರೂ ಶಲ್ಯ ಶಕುನಿ ಮೊದಲಾದ ಭೂಪತಿಗಳು ಸಾಮಾನ್ಯರೇ? ಅವರೆಲ್ಲರನ್ನೂ ಬಿಟ್ಟು ಕೃಷ್ಣನನ್ನೇ ಏಕೆ ಪ್ರಶಂಸೆಮಾಡು ತ್ತೀಯೆ? ಭೀಷ್ಮ! ಆತ್ಮನಿಂದೆ, ಆತ್ಮಸ್ತುತಿ, ಪರನಿಂದೆ, ಪರಸ್ತುತಿ—ಇವು ಮಾಡತಕ್ಕುವಲ್ಲವೆಂದು ನೀನು ಅರಿಯೆಯಾ? ಸ್ತೋತ್ರಾರ್ಹನಲ್ಲದ ಈ ಗೊಲ್ಲನನ್ನು ನೀನು ಮೋಹದಿಂದ ಹೊಗಳುತ್ತಿದ್ದೀಯೆ, ಭಕ್ತಿಯಿಂದಲ್ಲ. ಇದನ್ನಾರೂ ಒಪ್ಪರು. ಭೀಷ್ಮ! ಅತಿ ಸಾಹಸಕ್ಕೆ ಹೋಗಬೇಡ. ನಿನ್ನ ಪ್ರಾಣವು ಈ ರಾಜರ ಇಚ್ಛಾಧೀನವೆಂದು ತಿಳಿ" ಎಂದನು.

ಶಿಶುಪಾಲನ ಆ ಕಟುವಚನಗಳನ್ನು ಕೇಳುತ್ತಲೆ, ಭೀಷ್ಮನು—"ಶಿಶು ಪಾಲಾ! ಏನೆಂದೆ? ನನ್ನ ಪ್ರಾಣವು ಈ ರಾಜರ ಇಚ್ಛಾಧೀನವೆ? ಎಂದಿಗೂ ಅಲ್ಲ. ನನ್ನ ಪ್ರಾಣವು ನನ್ನಧೀನ. ಈ ನರಾಧಿಪರನ್ನು ನಾನು ತೃಣಕ್ಕೆ ಕಡೆಯಾಗೆಣಿಸುತ್ತೇನೆ, ಬಲ್ಲೆಯಾ?" ಎಂದನು.

ಭೀಷ್ಮನು ಹೀಗೆಂದು ಸುಮ್ಮನಾಗುತ್ತಲೆ ಆ ರಾಜಸಭೆಯಲ್ಲಿ ಗದ್ದಲ

ಹುಟ್ಟಿತು. ಶಿಶುಪಾಲನ ಕಡೆಯವರೆಲ್ಲರೂ ರೇಗಿಬಿದ್ದರು. ಕೆಲವರು ಭೀಷ್ಮನನ್ನು ಅಪಹಾಸ್ಯಮಾಡಿದರು; ಕೆಲವರು ದೂಷಿಸಿದರು; ಬಿಲ್ಲುವಿದ್ಯೆಯಲ್ಲಿ ಸಮರ್ಥರಾದ ಕೆಲವರು ಪಾಪಿಷ್ಠನಾದ ಈ ವೃದ್ಧ ಭೀಷ್ಮನು ಕ್ಷಮೆಗೆ ಅರ್ಹನಲ್ಲವೆಂದರು; ಕೆಲವರು ಈ ದುರ್ಮತಿಯನ್ನು ಪಶುವನ್ನಂತೆ ಕೊಲ್ಲಬೇಕೆಂದರು; ಮತ್ತೆ ಕೆಲವರು ಅವನನ್ನು ಒಯ್ದು ಉರಿಯುವ ಬೆಂಕಿಯಲ್ಲಿ ಎತ್ತಿಹಾಕಬೇಕೆಂದರು.

ಮತಿವಂತನಾದ ವೃದ್ಧ ಪಿತಾಮಹನು ಅವರಾಡಿದ ಮಾತುಗಳನ್ನು ಕೇಳಿ—"ರಾಜರೇ! ನಿಮ್ಮ ಮಾತು ಕೊನೆಮುಟ್ಟುವಂತಿಲ್ಲ. ಏನೇನಾಡುತ್ತೀರೋ ಆಡಿರಿ, ಆದರೆ ನಾನು ಹೇಳುವುದೆಲ್ಲವನ್ನೂ ಕೇಳಿರಿ. ನೀವು ನನ್ನನ್ನು ಪಶುವನ್ನಂತೆ ಹೊಡೆದು ಹಾಕಿರಿ, ಬೆಂಕಿಯಲ್ಲಿ ಹಾಕಿ ಸುಡಿರಿ, ನೋಡೋಣ; ನನ್ನ ಕಾಲಿಂದ ನಿಮ್ಮ ತಲೆಯನ್ನು ಮೆಟ್ಟುವೆನು. ನೋಡುವಿರಾ? ನಾವು ಪೂಜೆಮಾಡಿದ ಅಚ್ಯುತನು ಇಲ್ಲಿದ್ದಾನೆ. ಯಾರ್ಯಾರು ಮರಣವನ್ನು ಬಯಸುವನೋ ಅವರೆಲ್ಲರೂ ಯುದ್ಧಕ್ಕೆ ಬರಲಿ" ಎಂದನು.

ಭೀಷ್ಮನ ಮಾತನ್ನು ಕೇಳಿ ಶಿಶುಪಾಲನು—"ಜನಾರ್ದನ! ಯುದ್ಧಕ್ಕೆ ಬಾ! ಈ ದಿನ ನಿನ್ನನ್ನೂ ಪಾಂಡವರನ್ನೂ ಕೊಲ್ಲದೆ ಬಿಡೆನು. ನೀವೆಲ್ಲರೂ ವಧಾರ್ಹರು. ನರಾಧಿಪರೆಲ್ಲರನ್ನೂ ಬಿಟ್ಟು ನೀನು ಅರ್ಚನೆ ಮಾಡಿಸಿಕೊಂಡೆ. ನೀನು ರಾಜನಲ್ಲ, ದಾಸನು. ಪೂಜೆಗೆ ಅನರ್ಹನಾದ ನಿನ್ನನ್ನು ಅರ್ಹನನ್ನಾಗೆಣಿಸಿ ಪಾಂಡವರು ಪೂಜಿಸಿದರು. ನೀವೆಲ್ಲರೂ ವಧ್ಯರೇ!" ಎಂದು ಹೇಳಿ, ತನ್ನ ಕಡೆಯ ರಾಜರ ಸಮೇತನಾಗಿ ಯುದ್ಧಕ್ಕೆ ಅಣಿಯಾದನು.

ಯುದ್ಧವು ಅನಿವಾರ್ಯವಾಗಲಾಗಿ ಕೃಷ್ಣನು ಚಕ್ರಗದಾಪಾಣಿಯಾಗಿ ಭೀಷ್ಮನು ಕೊಟ್ಟ ಕೈಯನ್ನು ಹಿಡಿದು ರಥವನ್ನೇರಿದನು; ರಥದಲ್ಲಿ ಕುಳಿತು ಅಲ್ಲಿ ಯುದ್ಧಸನ್ನದ್ಧರಾಗಿ ನಿಂತಿದ್ದ ರಾಜರನ್ನು ಸಂಬೋಧಿಸಿ—"ರಾಜರೇ! ನನ್ನ ಮಾತನ್ನು ಕೇಳಿರಿ. ನಿಮಗೂ ನನಗೂ ವೈರಕ್ಕೆ ಕಾರಣವಿಲ್ಲ. ನೀವು ಸೇನಾಸಹಿತರಾಗಿ ಹೊರಟುಹೋಗಬಹುದು. ಈ ಶಿಶುಪಾಲನು ನನಗೆ ಹಗೆಯಾಗಿ ಅನೇಕ ದುಷ್ಕೃತ್ಯಗಳನ್ನು ಮಾಡಿದ್ದಾನೆ. ಅವೆಲ್ಲವನ್ನೂ ಹೇಳಲಳವಲ್ಲ. ವಧಾರ್ಹವಾದ ಶತಾಪರಾಧಗಳನ್ನು ಕ್ಷಮಿಸುವೆನೆಂದು ಅವನ ತಾಯಿಗೆ ಮಾತುಕೊಟ್ಟು ಅದರಂತೆಯೇ ಅವನನ್ನು ಕ್ಷಮಿಸಿದೆನು. ಇನ್ನು ಅವನನ್ನು ಮನ್ನಿಸಲಾರೆನು. ಅವನು ಯಜ್ಞಕ್ಕೆ ವಿಘ್ನಮಾಡಬೇಕೆಂದಿರುವುದಲ್ಲದೆ ನಾನು ಪಾಂಡವರ ಮೂಲಕವಾಗಿ ಧರ್ಮಸಂಸ್ಥಾಪನೆ ಮಾಡುವುದಕ್ಕೂ ಅಡ್ಡಬರುವನಾಗಿದ್ದಾನೆ. ಈ ಎರಡು ಅಪರಾಧಗಳನ್ನು ನಾನೆಂದಿಗೂ

ಮನ್ನಿಸೆನು; ಇದು ಅವನ ವಿನಾಶಕಾಲ. ಈ ದಿನ ನಿಮ್ಮೆಲ್ಲರ ಮುಂದೆ ಅವನು ಏನೇನೆಂದನೋ ನಿಮಗೆ ತಿಳಿದೇ ಇದೆ. ಈ ಸಮಗ್ರ ರಾಜಮಂಡಲಿಯಲ್ಲಿ ಬಲದೃಪ್ತನಾಗಿ ಅವನು ನಡೆದ ನಡತೆಗೆ ಅವನನ್ನು ದಂಡಿಸದೆ ಬಿಡೆನು" ಎಂದನು.

ಆಗ ಕೃಷ್ಣನು ವರ್ಣಿಸಿದ ಶಿಶುಪಾಲನ ದುಷ್ಕೃತ್ಯಗಳನ್ನು ಕೇಳಿ ಅವನ ಪಕ್ಷವನ್ನು ವಹಿಸಿದ್ದ ರಾಜರೆಲ್ಲರೂ ಅವನನ್ನು ಬಿಟ್ಟು ರಥವನ್ನೇರಿ ಹೊರಟು ಹೋದರು. ಶಿಶುಪಾಲನೊಬ್ಬನೇ ಉಳಿದು ಬಾಣಗಳನ್ನು ಹಿಡಿದು ಕೃಷ್ಣನ ಸಂಗಡ ದ್ವೈರಥ್ಯ ಯುದ್ಧಕ್ಕೆ ನಿಂತನು. ಕೃಷ್ಣನೂ ಧನುರ್ಧರನಾಗಿ ಯುದ್ಧಕ್ಕೆ ಅಣಿಯಾದನು. ಯುದ್ಧವಾರಂಭವಾಯಿತು.

ಶಿಶುಪಾಲನು—"ಕೃಷ್ಣ ನೀನೊಬ್ಬನೇ ನನ್ನ ಶತ್ರು. ಈ ಹೊತ್ತು ನಿನ್ನನ್ನೂ ಪಾಂಡವರನ್ನೂ ಅವರ ಮಕ್ಕಳನ್ನೂ ಅಮಾತ್ಯರನ್ನೂ ಕೊಂದು, ಕಂಸ ಜರಾಸಂಧ ಪ್ರಭೃತಿಗಳ ಋಣವನ್ನು ತೀರಿಸುವೆನು" ಎಂದು ನುಡಿದನು.

ಇಬ್ಬರೂ ಶರವರ್ಷವನ್ನು ಕರೆದರು. ಕಡೆಗೆ ಶಿಶುಪಾಲನು ಕೃಷ್ಣನಿಂದ ಹತನಾದನು. ಯುಧಿಷ್ಠಿರನು ತಮ್ಮಂದಿರ ಮೂಲಕವಾಗಿ ಶಿಶುಪಾಲನ ಉತ್ತರಕ್ರಿಯೆಗಳನ್ನು ಮಾಡಿಸಿ ಅವನ ಸ್ಥಾನದಲ್ಲಿ ಅವನ ಮಗನಿಗೆ ಪಟ್ಟವನ್ನು ಕಟ್ಟಿದನು.

ಈ ಪ್ರಕಾರವಾಗಿ ಪಾಪನಿವಾರಣೆಯನ್ನೂ ಧರ್ಮರಕ್ಷಣೆಯನ್ನೂ ಕೈಕೊಂಡಿದ್ದ ಶ್ರೀಕೃಷ್ಣನು, ಹಿಂದೆ ಅನೇಕ ರಾಜರನ್ನು ಸೆರೆಯಲ್ಲಿಟ್ಟು ಲೋಕಕಂಟಕನಾಗಿ ಮೆರೆಯುತ್ತಿದ್ದ ಜರಾಸಂಧನಿಗೆ ಎಷ್ಟು ಬಗೆಯಲ್ಲಿ ಬುದ್ಧಿ ಹೇಳಿದರೂ ತನ್ನ ಅತ್ಯಾಚಾರವನ್ನು ಬಿಡದೆ ಹೋದುದರಿಂದ ಲೋಕಹಿತಾರ್ಥವಾಗಿ ಅವನನ್ನು ಸಂಹಾರಮಾಡಿ ಸೆರೆಯಲ್ಲಿದ್ದ ರಾಜರೆಲ್ಲರನ್ನು ಬಿಡಿಸಿದಂತೆಯೇ, ಈಗ ಶಿಶುಪಾಲನು ತನ್ನನ್ನು ಆಡಬಾರದ ಮಾತುಗಳನ್ನಾಡಿದರೂ, ಅವನ ದುರ್ಭಾಷೆಯೆಲ್ಲವನ್ನೂ ಸೈರಿಸಿಕೊಂಡು ಅವನ ಅಪರಾಧಗಳೆಲ್ಲವನ್ನೂ ಕ್ಷಮಿಸಿ ತನಗೆ ಶತ್ರುವೆಂದು ವೈರವನ್ನು ಸಾಧಿಸದೆ ಸುಮ್ಮನಿದ್ದು, ಯಾವಾಗ ಅವನು ಯಜ್ಞಕ್ಕೆ ಬಂದ ರಾಜರೆಲ್ಲರನ್ನೂ ಎತ್ತಿಟ್ಟು ಯಜ್ಞಕ್ಕೆ ವಿಘ್ನಮಾಡಿ, ಧರ್ಮಸಾಮ್ರಾಜ್ಯವನ್ನು ನೆಲೆಗೊಳಿಸಲು ಅಡ್ಡಬಂದನೋ ಆಗ, ಅವನನ್ನು ಸಂಹಾರಮಾಡಿದನು; ಹಿಂದೆ ಜರಾಸಂಧನನ್ನು ನಿಗ್ರಹಿಸಿ ಅವನ ಮಗ ಸಹದೇವನಿಗೆ ರಾಜ್ಯವನ್ನು ಕೊಟ್ಟು ಪಟ್ಟವನ್ನು ಕಟ್ಟಿದಂತೆಯೇ ಈಗ ಶಿಶುಪಾಲನನ್ನು ನಿಗ್ರಹಿಸಿ ಅವನ ಮಗನಿಗೆ ಪಟ್ಟವನ್ನು ಕಟ್ಟಿಸಿದನು.

ಯುಧಿಷ್ಠಿರನ ಧರ್ಮಾನುರಾಗ, ಅರ್ಜುನನ ಧೈರ್ಯ, ಭೀಮಸೇನನ

ಪರಾಕ್ರಮ, ನಕುಲನ ಶುದ್ಧಭಾವ, ಸಹದೇವನ ಗುರುಶುಶ್ರೂಷೆ, ಶ್ರೀ ಕೃಷ್ಣನ ಧರ್ಮಾಯತ್ತವಾದ ತೇಜೋಬಲ, ಭೀಷ್ಮನ ಯುಕ್ತಾಯುಕ್ತಜ್ಞಾನ— ಇವೇ ಮೊದಲಾದ ಸಾಧನಗಳಿಂದ ಯಜ್ಞವು ಸರ್ವಾಂಗ ಸಂಪೂರ್ಣವಾಗಿ ನೆರವೇರಿತು.

ಯಜ್ಞಾಂತದಲ್ಲಿ ರಾಜರೆಲ್ಲರೂ ಸಸಾಗರ ಪೃಥ್ವಿಯ ಸಮ್ರಾಜನಾದ ಯುಧಿಷ್ಠಿರನಿಗೆ ಸಮುಚಿತ ಸನ್ಮಾನವನ್ನು ಮಾಡಿದರು. ಈ ಬಗೆಯಾಗಿ ರಾಜಮಂಡಲಿಯಲ್ಲಿ ಯುಧಿಷ್ಠಿರನ ಪ್ರಾಧಾನ್ಯವು ಸ್ಥಾಪಿತವಾಯಿತು. ಆ ರಾಜಕುಮಾರನು ಸಾಮ್ರಾಜ್ಯದಲ್ಲಿ ಪ್ರತಿಷ್ಠಿತನಾದುದನ್ನು ನೋಡಿ ಭೀಷ್ಮನು ಅತಿಶಯವಾಗಿ ಹರ್ಷಗೊಂಡನು. ಕೃಷ್ಣನ ಆಹ್ಲಾದಕ್ಕೆ ಪಾರವಿಲ್ಲವಾಯಿತು. ಪೂರ್ವಕಾಲದ ವೃತ್ತಾಂತವನ್ನರಿತ ವೃದ್ಧರು ಇಂತಹ ಸಮೃದ್ಧಿಪೂರ್ಣವಾದ, ಇಂತಹ ಸರ್ವಾಂಗ ಸಂಪನ್ನವಾದ, ಇಂತಹ ಸಂಭ್ರಮ ಸಮೇತವಾದ ಯಜ್ಞವನ್ನು ತಾವ ಎಂದೂ ಕಂಡುದಿಲ್ಲವೆಂದು ಹೇಳಿಕೊಂಡರು. ಈ ಯಜ್ಞವನ್ನು ಮಾಡಿ ಯುಧಿಷ್ಠಿರನು ಸಾರ್ವಭೌಮತ್ವವನ್ನು ಸಂಪಾದಿಸಿದುದು ಸರ್ವಾಂಶದಲ್ಲಿಯೂ ನ್ಯಾಯಸಮ್ಮತವಾದುದೆಂದು ಎಲ್ಲರೂ ತಮ್ಮತಮ್ಮೊಳಗೆ ಮಾತನಾಡಿಕೊಂಡರು. ಯಜ್ಞವು ಪರಿಸಮಾಪ್ತವಾದ ಬಳಿಕ, ಬಂದವರೆಲ್ಲರೂ ತಮಗಾದ ಪರಿಚರ್ಯದಿಂದ ಸಂತುಷ್ಟರಾಗಿ ಧನಮಾನಗಳಿಂದ ಸಂಪೂಜಿತರಾಗಿ, ಯುಧಿಷ್ಠಿರನನ್ನು ಬೀಳ್ಕೊಂಡು ತಂತಮ್ಮ ಊರಿಗೆ ಹೊರಟರು. ಯುಧಿಷ್ಠಿರನ ಆಜ್ಞಾನುಸಾರವಾಗಿ ಅವನ ಅನುಜರು ಅವರನ್ನು ತಮ್ಮ ಅಧಿಕಾರದ ಎಲ್ಲೆಯ ವರೆಗೆ ಸಾಗಕಳುಹಿಸಿ ರಾಜಧಾನಿಗೆ ಹಿಂದಿರುಗಿದರು.

ರಾಜರೂ ಬ್ರಾಹ್ಮಣರೂ ಆದಿಯಾಗಿ ಎಲ್ಲರೂ ಹೊರಟುಹೋದ ತರುವಾಯ ಭೀಷ್ಮನು ಯುಧಿಷ್ಠಿರನನ್ನು ಸಂಬೋಧಿಸಿ ಇಂತೆಂದನು :—"ವತ್ಸ! ಯಜ್ಞವು ನಿರ್ವಿಘ್ನವಾಗಿ ನಡೆಯಿತು. ನಾನು ಧನ್ಯನಾದೆನು. ನೀನು ಸಾಗರಾಂತ ಪೃಥ್ವಿಯನ್ನು ಸಂಪಾದಿಸಿ ಸಾರ್ವಭೌಮಪದವಿಗೆ ಬಂದುನಿಂತೆ. ಅಪತ್ಯನಿರ್ವಿಶೇಷದಿಂದ ಪ್ರಜೆಗಳನ್ನು ಪಾಲಿಸುತ್ತ, ಧರ್ಮದಿಂದ ಸಾಮ್ರಾಜ್ಯವನ್ನಾಳುತ್ತ, ಭೂಲೋಕದಲ್ಲಿ ಧರ್ಮರಾಜನೆಂದು ಖ್ಯಾತನಾಗು. ನಿನ್ನ ಅಭ್ಯುದಯವನ್ನೂ ವಿನಯವನ್ನೂ ನೋಡಿ ನಾನು ಪರಮಾನಂದಭರಿತನಾದೆನು. ವಾಸುದೇವನ ಅನುಗ್ರಹದಿಂದ ನಿನಗೆ ಉತ್ತರೋತ್ತರಾಭಿವೃದ್ಧಿಯಾಗಲಿ. ನಿನ್ನ ಸಾಮರ್ಥ್ಯದಿಂದಲೂ ಧರ್ಮನಿಷ್ಠೆಯಿಂದಲೂ ನಮ್ಮ ಪವಿತ್ರ ಕುಲದ ಕೀರ್ತಿಯು ಬೆಳಗುತ್ತಿರಲಿ."

ಆ ಬಳಿಕ ಭೀಷ್ಮನು ಧೃತರಾಷ್ಟ್ರನೊಡನೆ ಹಸ್ತಿನಾಪುರಕ್ಕೆ ಪ್ರಯಾ

ಣೋನ್ಮುಖನಾದನು. ಶ್ರೀ ಕೃಷ್ಣನು ದ್ವಾರಕಿಗೆ ಹೊರಟನು. ಧುರ್ಯೋಧನನು ಸೋದರಮಾವನಾದ ಶಕುನಿಯ ಸಮೇತನಾಗಿ ರಮಣೀಯವಾದ ಯುಧಿಷ್ಠಿರನ ಸಭಾಮಂದಿರದಲ್ಲಿಯೇ ಕೆಲವು ದಿವಸಗಳು ವಾಸಮಾಡುತ್ತ ಆ ರಾಜಾಧಿರಾಜನ ವೈಭವವನ್ನೂ ಸೌಭಾಗ್ಯವನ್ನೂ ನೋಡುತ್ತಿದ್ದು ಹಸ್ತಿನಾಪುರಕ್ಕೆ ಹಿಂದಿರುಗಿ ದಾರಿಯುದ್ದಕ್ಕೂ ಆ ರಾಜಭವನದ ಸೊಬಗನ್ನೂ ಜ್ಞಾತಿಯ ಸಂಪತ್ತನ್ನೂ ನೆನೆನೆನೆದು ಮರುಗುತ್ತ ಊರಿಗೆ ಹೋಗಿ ಸೇರಿದನು.

ಒಂಬತ್ತನೆಯ ಅಧ್ಯಾಯ

ದ್ಯೂತ, ದ್ರೌಪದಿಯ ಮಾನಭಂಗ, ವನವಾಸ

ಧರ್ಮರಾಯನು ಪಡೆದ ಮಹೋನ್ನತಿಯನ್ನೂ ಸೌಭಾಗ್ಯವನ್ನೂ ನೆನೆದು ಸಹಿಸಲಾರದೆ ದುರ್ಯೋಧನನು ಅಸೂಯಾಪರನಾಗಿ ಖಾಂಡವಪ್ರಸ್ಥದಲ್ಲಿ ಅವನು ತನಗೆ ತೋರಿದ ಪ್ರೀತಿಯನ್ನೂ ಸೋದರಭಾವವನ್ನೂ ಮರೆತು, ತನ್ನವನೆಂದು ವಿಶ್ವಾಸವಿಟ್ಟು ಯಜ್ಞಾಂಗಗಳಾದ ಕಾರ್ಯಗಳಲ್ಲಿ ತನಗೂ ಒಂದು ಕಾರ್ಯವನ್ನು ಕೊಟ್ಟು ಗೌರವಿಸಿದುದನ್ನು ಲೆಕ್ಕಿಸದೆ, ತಾನು ಅವನಿಗೆ ಕೀಳಾದೆನೆಂದು ದುಃಖಪಡುತ್ತ ತನ್ನ ದುರಾಸೆಯನ್ನು ಶಕುನಿಯೊಡನೆ ಹೇಳಿಕೊಂಡು ಧರ್ಮರಾಯನ ಸಾಮ್ರಾಜ್ಯವನ್ನು ಕಿತ್ತುಹಾಕುವ ಬಗೆ ಏನೆಂದು ಅವನನ್ನು ಕೇಳಿದನು.

ಅದಕ್ಕೆ ಆ ಮಾಯಾವಿಯು ಭೀಮಾರ್ಜುನರನ್ನು ಯುದ್ಧದಲ್ಲಿ ಗೆಲ್ಲಲಸಾಧ್ಯವೆಂದು ಹೇಳಿ, ಧರ್ಮರಾಯನನ್ನು ನೆತ್ತವಾಡುವುದಕ್ಕೆ ಕರೆಯಿಸಿದರೆ ಅವನನ್ನು ಸೋಲಿಸಿ ಅವನ ದೇಶಕೋಶಗಳೆಲ್ಲವನ್ನೂ ಗೆದ್ದುಕೊಡುವೆನೆಂದು ಆಸೆ ಹುಟ್ಟಿಸಿ ದುರ್ಯೋಧನನನ್ನು ದ್ಯೂತಕ್ಕೆ ಪ್ರೋತ್ಸಾಹಪಡಿಸಿದನು.

ಆ ದುಷ್ಟ ಮಂತ್ರಿಯ ಮಾತನ್ನು ಕೇಳಿ ದುರ್ಯೋಧನನು ದ್ಯೂತವಾಡುವುದಕ್ಕೆ ಇಂದ್ರಪ್ರಸ್ಥದಿಂದ ಧರ್ಮರಾಯನನ್ನು ಕರೆಯಿಸೆಂದು ತಂದೆಯನ್ನು ಪೀಡಿಸಿದನು.

ದ್ಯೂತದ ದೆಸೆಯಿಂದ ಅಣ್ಣತಮ್ಮಂದಿರೊಳಗೆ ಕಲಹವು ಹುಟ್ಟುವುದಲ್ಲದೆ ಕುಲವೇ ನಾಶವಾಗುವುದೆಂದು ವಿದುರನು ತಂದೆಮಕ್ಕಳಿಬ್ಬರಿಗೂ ಹೇಳಿದರೂ, ತಂದೆಯೂ ಮಗನಿಗೆ ತದರ್ಥವನ್ನೇ ಎಷ್ಟೋ ಬಗೆಯಲ್ಲಿ ಉಪದೇಶಮಾಡಿದರೂ, ಅಸೂಯೆಯಿಂದ ಪೀಡಿತನಾದ ದುರ್ಯೋಧನನು ಕುಮಂತ್ರಿ

ಶಕುನಿಯ ಬೆಂಬಲವನ್ನು ಕಟ್ಟಿಕೊಂಡು ತನ್ನ ದುರಾಲೋಚನೆಯನ್ನು ಬಿಡ ಲಿಲ್ಲ. ಧರ್ಮಜ್ಞನಾದರೂ ಪುತ್ರಸ್ನೇಹದಿಂದ ಮಗನ ಮಾತನ್ನು ತೆಗೆದುಹಾ ಕಲು ಧೃತರಾಷ್ಟ್ರನಿಗೆ ಶಕ್ಯವಾಗಲಿಲ್ಲ. ಧರ್ಮಾತ್ಮರೂ ಉಭಯಕುಲ ಹಿತ ಚಿಂತಕರೂ ಆದ ಭೀಷ್ಮ ದ್ರೋಣ ಕೃಪಾಚಾರ್ಯರಿಗೆ ಸಕಾಲಕ್ಕೆ ಶಕುನಿ ದುರ್ಯೋಧನರ ಕುಹಕೋಪಾಯವು ತಿಳಿಯಲಿಲ್ಲ. ಆದುದರಿಂದ ದ್ಯೂತವು ನಡೆಯಲೇಬೇಕಾಯಿತು.

ಇಷ್ಟವಿಲ್ಲದಿದ್ದರೂ ವಿದುರನು ಧೃತರಾಷ್ಟ್ರನ ಆಜ್ಞಾನುಸಾರವಾಗಿ ಧರ್ಮರಾಯನನ್ನು ಕರೆಯುವುದಕ್ಕೆ ಇಂದ್ರಪ್ರಸ್ಥಕ್ಕೆ ಹೋಗಿ ತಾನು ಬಂದ ಕಾರ್ಯವನ್ನು ಧರ್ಮರಾಯನಿಗೆ ತಿಳಿಸಿದನು.

"ದ್ಯೂತವು ಅನರ್ಥಕ್ಕೆ ಮೂಲವು; ನೀನು ನಮ್ಮ ಹಿತಚಿಂತಕ; ನಾವು ನೀನು ಹೇಳಿದ ಹಾಗೆ ಕೇಳುವವರು; ನಿನ್ನ ಅಭಿಪ್ರಾಯವೇನು?" ಎಂದು ಧರ್ಮರಾಯನು ವಿದುರನನ್ನು ಕೇಳಿದನು.

ವಿದುರನು—"ದ್ಯೂತವು ಅನರ್ಥಮೂಲವೆಂಬುದನ್ನು ನಾನು ಬಲ್ಲೆನು. ಅದನ್ನು ಅಗಲಿಸಬಾರದೆಂದು ನಾನು ಪ್ರಯತ್ನಮಾಡಿದೆನು. ನನ್ನ ಪ್ರಯತ್ನವು ನಡೆಯಲಿಲ್ಲ. ನಿನಗೆ ಯುಕ್ತವಾಗಿ ತೋರಿದಂತೆ ಮಾಡು" ಎಂದನು.

ಧರ್ಮರಾಯ—"ನನಗೆ ಜೂಜಾಡುವುದಕ್ಕೆ ಇಷ್ಟವಿಲ್ಲ. ಅದರೊಳಗೂ ಶಕುನಿ ಮೊದಲಾದ ಮಾಯಾವಿಗಳ ಸಂಗಡ ಆಡುವುದಕ್ಕೆ ಸರ್ವಾತ್ಮನಾ ಇಷ್ಟವಿಲ್ಲ. ಅವರು ಕರೆಯದೆ ಇದ್ದಿದ್ದರೆ ನಾನಾಗಿ ಆಟಕ್ಕೆ ಹೋಗುತ್ತಿರಲಿಲ್ಲ. ಕರೆದಮೇಲೆ ಹೋಗದಿರುವುದು ಹೇಗೆ?" ಎಂದನು.

ಇಂತೆಂದು ಹೇಳಿ, ಹಿರಿಯನಾದ ಧೃತರಾಷ್ಟ್ರನ ಆಜ್ಞೆಯನ್ನು ಮೀರು ವುದು ಸರಿಯಲ್ಲವೆಂದು ದ್ರೌಪದಿಯನ್ನೂ ತಮ್ಮಂದಿರನ್ನೂ ಅನುಚರರನ್ನೂ ಕೂಡಿ, ದೇವರ ಮೇಲೆ ಭಾರಹಾಕಿ ಹಸ್ತಿನಾಪುರಕ್ಕೆ ಪಯಣಮಾಡಿದನು.

ಪಾಂಡವರು ಹಸ್ತಿನಾಪುರಕ್ಕೆ ಬಂದಿಳಿದ ಬಳಿಕ ಶಕುನಿಯು ಧರ್ಮರಾಯ ನನ್ನು ದ್ಯೂತಸಭೆಗೆ ಕರೆಯುವುದಕ್ಕೆ ಹೋಗಲು, ಧರ್ಮರಾಯನು— "ಶಕುನಿ! ಜೂಜಾಡುವುದು ಪರಾಕ್ರಮಶಾಲಿಗಳಾದ ಕ್ಷತ್ರಿಯರಿಗೆ ಯೋಗ್ಯ ವಲ್ಲ; ಧರ್ಮಯುದ್ಧದಲ್ಲಿ ಗೆಲ್ಲುವುದು ಸತ್ಪುರುಷರಿಗೆ ಅರ್ಹವಾದುದು. ಸುಖ ವನ್ನಾಗಲಿ ಧನವನ್ನಾಗಲಿ ಮೋಸದಿಂದ ಸಂಪಾದಿಸಲು ನನಗಿಷ್ಟವಿಲ್ಲ" ಎಂದನು.

ಅದಕ್ಕೆ ಶಕುನಿಯು—"ಮೋಸವಿಲ್ಲದೆ ಯಾವುದು ತಾನೆ ನಡೆಯುವುದು? ವಿದ್ವಾಂಸನು ವಿದ್ವಾಂಸನಲ್ಲದವನನ್ನು ಗೆಲ್ಲುವನು; ಅದು ಮೋಸವಲ್ಲವೋ?

ಅಸ್ತ್ರವುಳ್ಳವನು ಅಸ್ತ್ರವಿಲ್ಲದವನನ್ನು ಗೆಲ್ಲುವನು; ಅದು ಮೋಸವಲ್ಲವೋ? ಪ್ರಬಲನು ದುರ್ಬಲನನ್ನು ಗೆಲ್ಲುವನು; ಜನರು ಅದನ್ನೇಕೆ ಮೋಸವೆನ್ನುವುದಿಲ್ಲ? ಜೂಜಬಲ್ಲವನು ಜೂಜರಿಯದವನನ್ನು ಗೆಲ್ಲುವನು. ಯಾವುದರಲ್ಲಿ ತಾನೆ ಮೋಸವಿಲ್ಲ? ನಾನು ನಿನ್ನನ್ನು ಮೋಸದಿಂದ ಗೆಲ್ಲುವೆನೆಂದು ನೀನು ಹೆದರುವ ಪಕ್ಷಕ್ಕೆ ಸುಮ್ಮನೆ ಮನೆಗೆ ಹೊಗು" ಎಂದನು.

ಧರ್ಮರಾಯನು ಆ ಮಾತನ್ನು ಕೇಳಿ—"ಶಕುನಿ! ದ್ಯೂತವಾಡಲು ನನಗೆ ಮನಸ್ಸಿಲ್ಲ; ಕರೆದರೆ ಆಡುವುದೇ ನನ್ನ ವಾಡಿಕೆ; ನಡೆ, ಹೋಗೋಣ" ಎಂದನು.

ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ಅನೇಕ ರಾಜರು ದ್ಯೂತ ಸಭೆಯನ್ನು ಪ್ರವೇಶಮಾಡಿದರು. ಭೀಷ್ಮ ದ್ರೋಣ ಕೃಪ ವಿದುರರು ಇಷ್ಟ ವಿಲ್ಲದವರಾದರೂ ಧೃತರಾಷ್ಟ್ರನ ಹಿಂದೆ ಸಭೆಗೆ ಹೋದರು. ದುರ್ಯೋಧನನೂ ಶಕುನಿಯೂ ಪಂತವೊಡ್ಡಿದರು. ಆಟವು ಪ್ರಾರಂಭವಾಯಿತು. ಧರ್ಮರಾಯನು ತನ್ನ ಧನಕನಕರತ್ನ ರಾಶಿಗಳೆಲ್ಲವನ್ನೂ ಒಂದೊಂದನ್ನಾಗಿ ಸೋಲುತ್ತಾ ಹೋದನು; ಚತುರನಾದ ಶಕುನಿಯು ಮೋಸಮಾಡಿ ಮಾಡಿ ಗೆಲ್ಲುತ್ತ ಹೋದನು.

ಹೀಗೆ ದ್ಯೂತವು ನಡೆಯುತ್ತಿರಲು ವಿದುರನು "ಏನಾದರೂ ಮಾಡಿ ಅದನ್ನು ನಿಲ್ಲಿಸಬೇಕೆಂದಾಲೋಚಿಸಿ—"ಮಹಾರಾಜನೇ! ದುರ್ಯೋಧನನು ಭರತ ಕುಲವನ್ನು ಮುರಿಯುವುದಕ್ಕೆ ಹುಟ್ಟಿದ್ದಾನೆ. ಅವನು ನಿಮ್ಮೆಲ್ಲರಿಗೂ ಮೃತ್ಯು ವೆಂದು ತಿಳಿ. ಕೌರವರು ಸುಖವಾಗಿರಬೇಕೆನ್ನುವ ಪಕ್ಷಕ್ಕೆ ಅರ್ಜುನನು ಈ ಪಾಪಿಯನ್ನು ಕೊಲ್ಲಲಿ. ಆ ಮನೆಹಾಳನು ದ್ಯೂತದಲ್ಲಿ ಗೆಲ್ಲುತ್ತಿರುವುದನ್ನು ಕೇಳಿ ನೀನು ಹಿಗ್ಗುತ್ತಿದ್ದೀಯೆ. ಕೇಳು, ಅವನ ಜಯವೇ ಯುದ್ಧಕ್ಕೂ ಕುರುಕುಲ ವಿನಾಶಕ್ಕೂ ಮೂಲವಾಗುವುದು. ಭೀಮಾರ್ಜುನರು ರೇಗಿಬಿದ್ದರೆ ನೀವು ಬಾಳಲಾರಿರಿ. ಮಹಾರಾಜ! ಜೂಜಾಡಿ ಧನವನ್ನು ಸಂಪಾದಿಸಬೇಕೆ? ಬೇರೆ ದಾರಿಯಿಲ್ಲವೆ? ಪಾಂಡವರ ಭಾಗ್ಯದಿಂದ ನಿಮಗೇನಾಗಬೇಕು? ಅವರು ಹೆಚ್ಚೋ? ಅವರ ಭಾಗ್ಯವು ಹೆಚ್ಚೋ? ಅವರ ಭಾಗ್ಯಕ್ಕೆ ಆಸೆಬಿದ್ದು ಅವರ ವೈರವನ್ನು ಕಟ್ಟಿಕೊಳ್ಳಬೇಡಿರಿ. ದುಷ್ಟ ಶಕುನಿಯನ್ನು ತೊಲಗಿಸು" ಎಂದು ಬುದ್ಧಿ ಹೇಳಿದನು.

ಅದನ್ನು ಕೇಳಿ ಮೂರ್ಖ ದುರ್ಯೋಧನನು, ತನ್ನ ದುರ್ವ್ಯಾಪಾರಕ್ಕೆ ವಿದುರನು ಅಡ್ಡಬರುತ್ತಿರುವನೆಂದು ಮುನಿದು—"ವಿದುರ! ನಿನಗೇಕೆ ಈ ಮಾತು? ನೀನು ಯಾವಾಗಲೂ ನಮ್ಮನ್ನು ದೂಷಿಸಿ ನಮ್ಮ ಹಗೆಗಳನ್ನು

ಭೂಷಿಸುತ್ತೀಯೆ. ನಿನ್ನ ಅಂತರಂಗವನ್ನು ನಾನು ಬಲ್ಲೆನು. ನಮ್ಮ ಅನ್ನವನ್ನುಂಡು ನಮಗೆ ಎರಡು ಬಗೆಯುತ್ತೀಯೆ. ಸ್ವಾಮಿದ್ರೋಹಕ್ಕೆ ಮಿಂಚಿದ ಪಾಪವುಂಟೆ? ಹುಡುಗರನ್ನು ಕಾಣುವಂತೆ ನಮ್ಮನ್ನು ಕಾಣುತ್ತೀಯೆ; ಇದು ಸರಿಯೆ? ನೀನು ನಮ್ಮನ್ನು ಬೈಯುವುದೇಕೆ? ನಮ್ಮ ಗುಟ್ಟುಗಳೆಲ್ಲವನ್ನೂ ಹೊರಗೆ ಹಾಕುವುದೇಕೆ? ನಿನ್ನನ್ನು ಕರೆದವರಾರು? ನಿನ್ನ ಹಿತೋಪದೇಶವನ್ನು ಕೇಳಿದವರಾರು? ಇನ್ನು ನಮ್ಮನ್ನು ರೇಗಿಸಬೇಡ; ನೀನು ನಮ್ಮ ಶತ್ರುಗಳ ಮಿತ್ರನು; ಇಲ್ಲಿಂದ ತೊಲಗು" ಎಂದನು.

"ಮಹಾರಾಜ! ರಾಜರ ಮನಸ್ಸು ಸ್ಥಿರವಲ್ಲ; ಮೊದಲು ಆಶ್ರಯವನ್ನು ಕೊಟ್ಟು ಆಮೇಲೆ ಆಶ್ರಿತರನ್ನು ಒನಿಕೆಯಿಂದ ಬಡಿಯುವರು. ದುರ್ಯೋಧನ! ಮೂರ್ಖರನ್ನು ಮಾರ್ಗಕ್ಕೆ ತರುವುದು ಸದರವಲ್ಲ; ಪ್ರಿಯವನ್ನು ನುಡಿಯುವ ಪಾಪಿಷ್ಠರು ದೊರೆಯುವರು; ಅಪ್ರಿಯವಾದರೂ ಚಿಂತೆಯಿಲ್ಲವೆಂದು ಹಿತವನ್ನು ನುಡಿಯುವವರು ದುರ್ಲಭ. ದುರ್ಯೋಧನ! ಅಪ್ರಿಯವಾಗಿದ್ದರೂ ಚಿಂತೆಯಿಲ್ಲ, ಹಿತವನ್ನು ಹೇಳುವವರ ಮಾತನ್ನು ಕೇಳು. ಮಹಾರಾಜನೆ! ದ್ಯೂತವನ್ನು ಇಲ್ಲಿಗೆ ನಿಲ್ಲಿಸು; ಪಾಂಡವರನ್ನು ರೇಗಿಸಬೇಡ" ಎಂದು ವಿದುರನು ಹೇಳಿದನು.

ದ್ಯೂತವನ್ನು ನಿಲ್ಲಿಸಬೇಕೆಂದು ವಿದುರನು ಮಾಡಿದ ಸಾಹಸವೆಲ್ಲವೂ ವ್ಯರ್ಥವಾಯಿತು. ಶಕುನಿಯು ಯುಧಿಷ್ಠಿರನ ವಿತ್ತವೆಲ್ಲವನ್ನೂ ಗೆಲ್ಲುತ್ತ ಗೆಲ್ಲುತ್ತ ಇನ್ನೇನಿದೆ? ಇನ್ನೇನು ಉಳಿದಿದೆ? ಎಂದು ಅಡಿಗಡಿಗೆ ಯುಧಿಷ್ಠಿರನನ್ನು ಕೇಳುತ್ತಿದ್ದನು. ಯುಧಿಷ್ಠಿರನ ಸಕಲ ಸಂಪತ್ತೂ ಕರಗಿತು. ದೇಶ ಹೋಯಿತು, ಕೋಶ ಹೋಯಿತು, ಧನಕನಕ ವಸ್ತುಗಳೆಲ್ಲವೂ ಹೋದುವು: ಆನೆ ಕುದುರೆಗಳೂ, ದನಕರುಗಳೂ, ಹೋದುವು. ಆ ಬಳಿಕ ಯುಧಿಷ್ಠಿರನು ತಮ್ಮಂದಿರನ್ನು ಒಬ್ಬೊಬ್ಬರನ್ನಾಗಿ ಸೋತು ಪರಾಧೀನರನ್ನಾಗಿ ಮಾಡಿದನು. ಕಡೆಗೆ ತನ್ನನ್ನೇ ಪಂತಕ್ಕೊಡ್ಡಿಕೊಂಡು ಪರತಂತ್ರನಾದನು. ಆದರೂ ದ್ಯೂತವು ಕೊನೆ ಮುಟ್ಟಲಿಲ್ಲ. ಇನ್ನೇನು? ಎಂಬ ಶಕುನಿಯ ಸೊಲ್ಲು ಅಡಗಲಿಲ್ಲ. ಕಟ್ಟಕಡೆಗೆ ಯುಧಿಷ್ಠಿರನು ಮಾನಿನಿ ದ್ರೌಪದಿಯನ್ನೂ ಪಂತಕ್ಕೊಡ್ಡಿದನು; ಧರ್ಮಕಾಮಾರ್ಥಗಳ ಸಿದ್ಧಿಗಾಗಿ ಸತ್ಪುರುಷನು ಎಂತಹ ಸ್ತ್ರೀಯನ್ನು ಬಯಸುವನೋ, ಅಂತಹ ಸರ್ವಗುಣಸಂಪನ್ನೆಯೂ ಅನುಕೂಲೆಯೂ ಪ್ರಿಯಂವದೆಯೂ ಆದ ಆ ರಾಜಮಹಿಷಿಯನ್ನೂ ವೈರಿಯ ಪಾಲು ಮಾಡಿದನು. ಸಭಾಸದರೆಲ್ಲರೂ ನಿಟ್ಟುಸಿರು ಬಿಟ್ಟರು; ಭೀಷ್ಮ ದ್ರೋಣ ಕೃಪರ ಮೈ ಬೆವರಿತು; ವಿದುರನು ದುಃಖದಿಂದ ತಲೆಬಾಗಿ ಕುಳಿತನು.

ಶಕುನಿಯು "ಗೆದ್ದೆನು" ಎನ್ನುತ್ತಲೆ, ದುರ್ಯೋಧನನು "ವಿದುರ! ಹೋಗು, ದ್ರೌಪದಿಯನ್ನು ಕರೆದುಕೊಂಡು ಬಾ; ಮನೆಯಲ್ಲಿ ಕಸ ಗುಡಿಸಿ ಕೊಂಡು ಬಿದ್ದಿರಲಿ" ಎಂದನು.

ವಿದುರನು—"ಎಲೋ! ಪಾಪಿಷ್ಠನೆ! ಹೆಮ್ಮೆಯ ಮಾತನ್ನಾಡಬೇಡ. ದ್ರೌಪದಿಯು ನಿಮ್ಮ ದಾಸಿಯಲ್ಲ. ಧರ್ಮರಾಯನು ಯಾವಾಗ ತನ್ನನ್ನೇ ಸೋತನೋ, ಯಾವಾಗ ತನ್ನ ದೇಹವನ್ನೇ ಮಾರಿಕೊಂಡನೋ, ಆಗಲೆ ಅವನ ಸ್ವಾತಂತ್ರ್ಯವೂ ಹೋಯಿತು; ದ್ರೌಪದಿಯ ಮೇಲೆ ಅವನ ಯಾಜಮಾನ್ಯವೂ ಹೋಯಿತು; ದ್ರೌಪದಿಯನ್ನು ಪಂತಕ್ಕೊಡ್ಡುವುದಕ್ಕೆ ಅವನಾರು?" ಎಂದನು.

ದುರಾತ್ಮ ದುರ್ಯೋಧನನು—"ಸೂತ! ಅವನು ಕೆಟ್ಟ; ನೀನು ಹೋಗಿ ದ್ರೌಪದಿಯನ್ನು ಸೆಳೆದುಕೊಂಡು ಬಾ" ಎಂದನು.

ಸೂತನು ಹೋಗಿ ನಡೆದ ಸಂಗತಿಗಳೆಲ್ಲವನ್ನೂ ತಿಳಿಸಿ ದ್ರೌಪದಿಯನ್ನು ಬರಹೇಳುತ್ತಲೆ ಅವಳು—"ಸೂತ! ಏನೆಂದೆ? ಆ ಜೂದಾಳಿಯು ನನ್ನನ್ನು ಸೋತಾಗ ಯಾರಿಗೆ ಒಡೆಯನಾಗಿದ್ದನು? ಮೊದಲು ಯಾರನ್ನು ಸೋತನು? ತನ್ನನ್ನೋ ನನ್ನನ್ನೋ? ಯುಧಿಷ್ಠಿರನನ್ನೂ ಸಭಿಕರನ್ನೂ ಕೇಳಿ ಬಾ, ಹೋಗು" ಎಂದಳು.

ಸೂತನು ಹೋಗಿ ಆ ಪ್ರಶ್ನೆಯನ್ನು ಕೇಳಿದುದಕ್ಕೆ ಯುಧಿಷ್ಠಿರನು ಉಸಿರೆತ್ತಲಿಲ್ಲ; ಸಭಿಕರೂ ಮೌನವಾಗಿದ್ದರು. ದ್ರೌಪದಿಯೇ ಬಂದು ಸಭಿಕರಿಗೆ ಆ ಪ್ರಶ್ನೆಯನ್ನು ಹಾಕಲೆಂದು ದುರ್ಯೋಧನನು ಹೇಳಿದನು. ದುಃಶಾಸನನು ಅಣ್ಣನ ಆಜ್ಞಾನುಸಾರವಾಗಿ ಹೋಗಿ ಬಹಿಷ್ಠೆಯಾಗಿದ್ದ ದ್ರೌಪದಿಯನ್ನು ಮುಂದಲೆಹಿಡಿದು ಬಲಾತ್ಕಾರದಿಂದ ಸೆಳೆದುಕೊಂಡುಬಂದು ಸಭಿಕರ ಮುಂದೆ ನಿಲ್ಲಿಸಿದನು.

ಮಾನಿಷ್ಠೆ ದ್ರೌಪದಿ ಆ ಅವಮಾನವನ್ನು ಸೈರಿಸಲಾರದೆ—"ಎಲೋ! ದುಃಶಾಸನ! ಪಾಪಿ! ಈ ಸಭೆಯಲ್ಲಿ ಶಾಸ್ತ್ರಜ್ಞರೂ, ಸದಾಚಾರಸಂಪನ್ನರೂ, ವೀರಪುರುಷರೂ ನೆರೆದಿರುವರು. ಇವರೆಲ್ಲರೂ ನನಗೆ ಹಿರಿಯರು, ಪೂಜ್ಯರು. ಇದು ನನಗೆ ಗುರುಸ್ಥಾನ. ಇವರ ಮುಂದೆ ನಾನು ಹೇಗೆ ನಿಲ್ಲಲಿ? ನನ್ನನ್ನೆಳೆಯ ಬೇಡ, ಜೋಕೆ! ಇಂದ್ರಾದಿ ದೇವತೆಗಳು ನಿನಗೆ ನೆರವಾಗಿ ಬಂದು ನಿಂತರೂ ನನ್ನ ಗಂಡಂದಿರು ನಿನ್ನನ್ನು ಸುಮ್ಮನೆ ಬಿಡರು" ಎಂದು ದುಃಶಾಸನನನ್ನು ಧಿಕ್ಕರಿಸಿ—"ಭರತವಂಶದ ಧರ್ಮವು ನಾಶವಾಯಿತು! ಭೀಷ್ಮ ದ್ರೋಣ ವಿದುರಾದಿಗಳ ಪೌರುಷವು ನಷ್ಟವಾಯಿತು. ಇಲ್ಲದಿದ್ದರೆ, ಈ ಕರು

ವೃದ್ಧರೆಲ್ಲರೂ ಈ ಅನ್ಯಾಯವನ್ನು ನೋಡಿಕೊಂಡು ಸುಮ್ಮನಿರುತ್ತಿದ್ದಿರೆ?" ಎಂದು ಪ್ರಲಾಪಿಸುತ್ತ ಲಜ್ಜೆಯಿಂದಲೂ ಕೋಪದಿಂದಲೂ ಗಂಡಂದಿರ ಕಡೆಗೆ ತಿರುಗಿನೋಡಿದಳು.

ದೇಶ ಹೋಯಿತು, ಕೋಶ ಹೋಯಿತು, ತಾವೂ ಪರಾಧೀನರಾದರು; ಆದರೂ ಪಾಂಡುಪುತ್ರರು ಎದೆಗೆಡಲಿಲ್ಲ. ಯಾವಾಗ ಪತಿವ್ರತೆಯಾದ ದ್ರೌಪದಿಯು ಶೋಕಾಕುಲೆಯಾಗಿ ಅಳುತ್ತ ತಮ್ಮ ಕಡೆಗೆ ತಿರುಗಿದಳೋ ಆಗ ಆ ರಾಜಪುತ್ರರು ದುಃಖಾಕ್ರಾಂತರಾದರು. ದುಷ್ಟದುಃಶಾಸನನು ಆ ವೀರೇಂದ್ರಾಣಿಯನ್ನು ಮಾತುಮಾತಿಗೂ ದಾಸಿಯೆಂದು ಕರೆಯುತ್ತಾ ಅವಳ ಸೆರಗನ್ನು ಹಿಡಿದೆಳೆಯುತ್ತಿದ್ದನು. ಅದನ್ನು ನೋಡಿ ಕಠಿನ ಹೃದಯರಾದ ದುರ್ಯೋಧನ ಶಕುನಿ ಕರ್ಣ ಪ್ರಭೃತಿಗಳು ಕೇಕೆಹಾಕಿದರು! ಉಳಿದವರೆಲ್ಲರೂ ದ್ರೌಪದಿಯ ಪಾಡನ್ನು ನೋಡಿ ದುಃಖಿಸುತ್ತ, ಆ ದುರಾತ್ಮರನ್ನು ಶಪಿಸಿದರು.

ಇದೆಲ್ಲವನ್ನೂ ನೋಡಿ ಭೀಷ್ಮನು—"ಸುಭಗೆ! ಧರ್ಮವು ಬಹು ಸೂಕ್ಷ್ಮವಾದುದು. ಒಂದು ಕಡೆ, ಯಜಮಾನನಲ್ಲದವನಿಗೆ—ಒಡೆಯನಲ್ಲದವನಿಗೆ—ತನ್ನದಲ್ಲದುದನ್ನು ಪಣತಕ್ಕೊಡ್ಡಲು ಅಧಿಕಾರವಿಲ್ಲ. ಇನ್ನೊಂದುಕಡೆ, ಹೆಂಗಸರು ಗಂಡಂದಿರ ವಶದಲ್ಲಿರತಕ್ಕವರು, ಅವರ ಅಧೀನರು, ಹೀಗಿರುವಲ್ಲಿ, ಯಥಾವತ್ತಾಗಿ ನಿನ್ನ ಪ್ರಶ್ನೆಯನ್ನು ವಿವೇಚನೆ ಮಾಡಿಹೇಳಲು ನನಗೆ ತೋರದು. ಯುಧಿಷ್ಠಿರನಾದರೋ ಸಮೃದ್ಧಿಸಂಪನ್ನವಾದ ಪೃಥ್ವಿಯೆಲ್ಲವನ್ನೂ ಬಿಟ್ಟುಕೊಡಬಲ್ಲನು, ಧರ್ಮವನ್ನು ಬಿಡುವನಲ್ಲ, ಅಂತಹವನು 'ಜಿತೋಸ್ಮಿ, ನಾನು ಸೋತೆನು' ಎಂದು ಒಪ್ಪಿಕೊಂಡಿರುವಲ್ಲಿ ನಿನ್ನ ಪ್ರಶ್ನೆಗೆ ನಾನೇನು ಉತ್ತರಕೊಡಲಿ? ಜೂಜಾಡುವುದರಲ್ಲಿ ಶಕುನಿಯು ಅದ್ವಿತೀಯನು; ಯುಧಿಷ್ಠಿರನು ಅವನಿಗೆ ಮರುಳಾದನು; ಆದುದರಿಂದ, ನಾನು ನಿನ್ನ ಪ್ರಶ್ನೆಗೆ ಉತ್ತರ ಹೇಳಲಾರೆನು" ಎಂದನು.

ಅದಕ್ಕೆ ದ್ರೌಪದಿಯು—"ಚತುರರೂ ದುಷ್ಟಾತ್ಮರೂ ಅಯೋಗ್ಯರೂ ದ್ಯೂತಪ್ರಿಯರೂ ಆದ ಶಕುನಿ ಮೊದಲಾದವರು ಕಪಟವನ್ನರಿಯದ ಧರ್ಮರಾಯನನ್ನು ಕಪಟೋಪಾಯದಿಂದ ದ್ಯೂತಕ್ಕೆಳೆದು ಸೋಲಿಸಿದರು. ಧರ್ಮರಾಯನು ಮೊದಲು ತನ್ನನ್ನು ಸೋತನು. ಆಮೇಲೆ ನನ್ನನ್ನು ಪಣತಕ್ಕೊಡ್ಡಿದನು. ಈ ಸಭೆಯಲ್ಲಿರುವ ಕೌರವರು ತಮ್ಮ ಮಕ್ಕಳಿಗೆ ಹೇಗೋ ಹಾಗೆಯೇ ಸೊಸೆಯರಿಗೂ ಯಜಮಾನರು. ಸೊಸೆಯಾದ ನಾನು ಹೇಳಿದುದನ್ನು ಆಲೋಚಿಸಿ ನನ್ನ ಪ್ರಶ್ನೆಗೆ ನ್ಯಾಯವಾದ ಉತ್ತರವನ್ನು ಕೊಡುವುದು ಅವರ ಕೆಲಸ. ವೃದ್ಧರಿಲ್ಲದ ಸಭೆ ಸಭೆಯಲ್ಲ; ಧರ್ಮವನ್ನು ನುಡಿಯದವರು ವೃದ್ಧ

ರಲ್ಲ; ಸತ್ಯವಲ್ಲದುದು ಧರ್ಮವಲ್ಲ; ಕಪಟದಿಂದ ಹೇಳಿದುದು ಸತ್ಯವಲ್ಲ" ಎಂದಳು.

ದ್ರೌಪದಿಯು ಈ ರೀತಿಯಲ್ಲಿ ದುಃಖದಿಂದ ಸಭಿಕರ ಮುಂದೆ ದೀನೆಯಾಗಿ ಮೊರೆಯಿಡುತ್ತಿರುವುದನ್ನು ನೋಡಿ ದುಃಶಾಸನನು ಕೇಳಲಸಹ್ಯವಾದ, ಆಡಬಾರದ ಪರುಷವಾಕ್ಯಗಳನ್ನಾಡುತ್ತ ಸೆರಗನ್ನೆಳೆಯುತ್ತ ದ್ರೌಪದಿಯನ್ನು ಕಾಡುತ್ತಿದ್ದನು. ಅದನ್ನು ನೋಡಿ ಭೀಮನು ಸುಮ್ಮನಿದ್ದ ಅಣ್ಣನ ಮೇಲೆ ರೇಗಿಬಿದ್ದನು; ಅರ್ಜುನನು ಅವನನ್ನು ಸಮಾಧಾನಗೊಳಿಸಿದನು. ತರುವಾಯ, ದುಃಶಾಸನನು ದ್ರೌಪದಿಯ ವಸ್ತ್ರಾಪಹರಣಮಾಡಲು ತೊಡಗಿದನು. ಆಗ ದ್ರೌಪದಿಯು ಮತ್ತೆ ಇಂತೆಂದು ಸಭಿಕರಿಗೆ ಮೊರೆಯಿಟ್ಟಳು :—

"ಅಯ್ಯೋ! ಗಾಳಿಯೂ ಕೂಡ ಸೋಕದಹಾಗೆ ನನ್ನನ್ನು ಅರಮನೆಯಲ್ಲಿ ಸಲಹುತ್ತಿದ್ದ ಈ ಪಾಂಡುಪುತ್ರರು ಇಂದು ಈ ದುರಾತ್ಮನು ನನ್ನನ್ನು ಪೀಡಿಸುತ್ತಿರುವುದನ್ನು ನೋಡಿಕೊಂಡು ಸುಮ್ಮನಿರುವರಲ್ಲ! ಎಂತಹ ಹೊತ್ತು ಬಂದಿತು? ಹಿಂದೆ ರಾಜರು ಅಂತಃಪುರದಿಂದ ಸ್ತ್ರೀಯರನ್ನು ಸಭೆಗೆ ಕರೆಯಿಸುತ್ತಿರಲಿಲ್ಲ; ಇಂದು ಕೌರವರಿಂದ ಆ ಸನಾತನ ಧರ್ಮವು ಹಾಳಾಯಿತು. ಪಾಂಡವರ ಪತ್ನಿ, ಧೃಷ್ಟದ್ಯುಮ್ನನ ತಂಗಿ, ವಾಸುದೇವನ ಸಖಿ—ನಾನು ದಾಸಿಯೇ? ಕೌರವರೇ, ನನ್ನನ್ನು ಈ ಸಭೆಗೆಳೆದಿರಲ್ಲ! ನಾನು ಧರ್ಮರಾಯನ ಧರ್ಮಪತ್ನಿ, ಅವನಂತೆಯೇ ಕ್ಷತ್ರಿಯವಂಶದಲ್ಲಿ ಹುಟ್ಟಿದವಳು; ನಾನು ದಾಸಿಯೇ? ಅಹುದಾದರೆ ಅಹುದೆನ್ನಿ; ಅಲ್ಲವಾದರೆ ಅಲ್ಲವೆನ್ನಿ; ನೀವು ಹೇಳಿದಂತೆಯೇ ಆಗಲಿ, ಅವರು ನನ್ನನ್ನು ಗೆದ್ದರೆ? ಗೆಲ್ಲಲಿಲ್ಲವೆ? ಹೇಳಿರಿ. ಈ ಪಾಪಿಷ್ಠನು ನನ್ನನ್ನು ಗೋಳಾಡಿಸುತ್ತಿದ್ದಾನೆ; ನಾನು ಎಷ್ಟೆಂದು ಸೈರಿಸಲಿ?"

ಅವಳಾಡಿದ ಮಾತನ್ನು ಕೇಳಿ ಭೀಷ್ಮನು ಇಂತೆಂದನು :—"ಎಲೌ, ಕಲ್ಯಾಣಿಯೆ! ಮಹಾತ್ಮರಾದ ಜ್ಞಾನಿಗಳಿಗೂ ಧರ್ಮಗತಿಯು ತಿಳಿಯಲು ಶಕ್ಯವಲ್ಲ; ನೀನು ಕೇಳುವ ವಿಷಯವು ಸೂಕ್ಷ್ಮವಾದುದು, ಗಹನವಾದುದು; ನಿನ್ನ ಈ ಪ್ರಶ್ನೆಗೆ ಹೀಗೇ ಸರಿಯೆಂದು ನಿಶ್ಚಯಿಸಿ ನಾನು ಉತ್ತರಕೊಡಲಾರೆನು. ಆದರೆ, ಇಷ್ಟುಮಟ್ಟಿಗೆ ಹೇಳಬಲ್ಲೆನು. ಕೌರವರು ಲೋಭಕ್ಕೂ ಮೋಹಕ್ಕೂ ಒಳಗಾಗಿರುವುದರಿಂದ ಅವರ ವಿನಾಶಕಾಲವು ದೂರವಾಗಿಲ್ಲ; ನೀನು ಸೊಸೆಯಾಗಿ ಸೇರಿರುವ ಕುಲವು ಎಂತಹ ಸಂಕಟದಲ್ಲಿಯೂ ಧರ್ಮಮಾರ್ಗವನ್ನು ಬಿಡುವುದಲ್ಲ; ನಿನಗೆ ಈ ಪಾಡುಬಂದರೂ ನೀನು ಧರ್ಮದ ಮೇಲೆಯೇ ದೃಷ್ಟಿಯಿಟ್ಟಿದ್ದೀಯೆ; ಈ ನಡತೆಯು ನಿನಗೆ ಸಲ್ಲುವುದು; ನಿನ್ನ

ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಯುಧಿಷ್ಠಿರನೊಬ್ಬನೇ ಅಧಿಕಾರಿ; ನಿನ್ನನ್ನು ಅವರು ಗೆದ್ದರೋ ಇಲ್ಲವೋ ಎಂಬುವುದನ್ನು ಹೇಳುವುದಕ್ಕೆ ಅವನೇ ತಕ್ಕವನು."

ದುರ್ಯೋಧನನು ಯುಧಿಷ್ಠಿರಾದಿಗಳನ್ನೂ ದ್ರೌಪದಿಯನ್ನೂ ಮನಸ್ಸು ಬಂದಂತೆಲ್ಲ ಹೀಯಾಳಿಸುತ್ತ ಹೋದನು. ಭೀಮನು ರೋಷಾವೇಶವನ್ನು ಹೊಂದಿ ಧೃತರಾಷ್ಟ್ರನ ಮಕ್ಕಳೆಲ್ಲರನ್ನೂ ನಿರ್ನಾಮಮಾಡಿ ಬಿಡುವೆನೆಂದು ಪ್ರತಿಜ್ಞೆಮಾಡಿದನು. ಆಗ ಭೀಷ್ಮ ದ್ರೋಣ ವಿದುರರು—"ನೀನು ಅವರನ್ನು ಸಂಹಾರಮಾಡಶಕ್ತನೇ ಸರಿ; ಪದರಬೇಡ; ತಾಳಿಕೊ" ಎಂದು ಹೇಳಿ ಅವನ ಕೋಪವನ್ನಾರಿಸಿದರು.

ದ್ರೌಪದಿಯ ಪ್ರಶ್ನೆಯನ್ನು ಕುರಿತ ವಿವಾದವೂ ಪರಸ್ಪರ ದೋಷಾರೋಪವೂ ಕೊನೆಮುಟ್ಟದೆ ನಡೆಯುತ್ತಿರಲು, ವಿದುರನು—"ಯುಧಿಷ್ಠಿರನು ತನ್ನನ್ನು ಸೋಲುವುದಕ್ಕೆ ಮುಂದೆಯೇ ದ್ರೌಪದಿಯನ್ನು ಸೋತಿದ್ದ ಪಕ್ಷದಲ್ಲಿ ಅವನು ಅವಳಿಗೆ ಒಡೆಯನೆನಿಸಿಕೊಳ್ಳುತ್ತಿದ್ದನು. ತನ್ನನ್ನು ತಾನು ಕಳೆದು ಕೊಂಡ ಮೇಲೆ ಅವನು ಯಾರಿಗೆ ಒಡೆಯನು? ಅವನು ಒಡೆಯನಲ್ಲದ ಮೇಲೆ ಅವನಿಂದ ಗೆದ್ದೊಡವೆಯೆಂದರೆ ಕನಸಿನ ಗಂಟಲ್ಲವೆ? ಶಕುನಿಯ ಮಾತನ್ನು ಕೇಳಿ ಅನ್ಯಾಯಕ್ಕೆ ಹೋಗಬೇಡಿರಿ" ಎಂದನು.

ಆ ಮಾತನ್ನು ಕೇಳಿ ದುರ್ಯೋಧನನು—"ಭೀಮಾರ್ಜುನರೂ ನಕುಲ ಸಹದೇವರೂ ತಮಗೆ ಯುಧಿಷ್ಠಿರನು ಒಡೆಯನಲ್ಲವೆಂದು ಹೇಳಿಬಿಡಲಿ; ದ್ರೌಪದಿಯನ್ನು ದಾಸತ್ವದಿಂದ ಬಿಡುಗಡೆ ಮಾಡುತ್ತೇನೆ" ಎಂದನು.

ಅದಕ್ಕೆ ಅರ್ಜುನನು—"ದ್ಯೂತಕ್ಕೆ ಮುಂದೆ, ಅವನು ರಾಜನು, ಕುಂತೀ ಸುತನು, ಧರ್ಮರಾಯನು, ಮಹಾತ್ಮನು, ನಮ್ಮೊಡೆಯನು; ಸೋತ ಮೇಲೆ ಅವನು ಯಾರೊಡೆಯನು?" ಎಂದು ಕೇಳಿದನು.

ಆ ಬಳಿಕ ಕರ್ಣನಿಂದ ಪ್ರೇರಿತನಾಗಿ ದುಃಶಾಸನನು ದ್ರೌಪದಿಯನ್ನು ಬಲಾತ್ಕಾರಮಾಡಿ ಎಳೆದುಕೊಂಡು ಹೋಗುವುದಕ್ಕೆ ಪ್ರಯತ್ನಮಾಡಲು, ದ್ರೌಪದಿಯು—"ಭೀಷ್ಮ ದ್ರೋಣ ಅಶ್ವತ್ಥಾಮ ಕೃಪಾಚಾರ್ಯರುಗಳಿರಾ! ನನ್ನನ್ನು ರಕ್ಷಿಸಿರಿ! ವಿದುರ! ಧರ್ಮಿಷ್ಠನೇ! ಧರ್ಮವತ್ಸಲನೇ! ನನ್ನನ್ನು ರಕ್ಷಿಸು! ಧೃತರಾಷ್ಟ್ರ ಮಹಾರಾಜನೇ! ನಿನ್ನ ಸೊಸೆಯನ್ನು ರಕ್ಷಿಸು. ಗಾಂಧಾರಿ! ನೀನು ಮಹಾಭಾಗೆ, ಸರ್ವಜ್ಞೆ; ನಾನು ಸುಯೋಧನನ ಬಾಧೆಯಿಂದ ಬಳಲಿದ್ದೇನೆ; ಅವನ ಕಾಟವನ್ನು ತಾಳಲಾರೆನು, ನನ್ನನ್ನು ಕರುಣಿಸು. ಕುಂತಿ! ನೀನು ಆರ್ಯೆ; ವೀರಜನನಿ, ಅನಾರ್ಯನಿಂದ ಹಿಂಸೆ

ಪಡುತ್ತಿರುವ ನನ್ನನ್ನು—ನಿನ್ನ ಸೊಸೆಯನ್ನು ಏಕೆ ಸಲಹೆ? ನನ್ನ ಮೇಲೆ ನಿನಗೆ ಕರುಣೆಯಿಲ್ಲವೆ? ಸುಯೋಧನನ ಕೈಗೆ ಸಿಕ್ಕಿ ಕೆಟ್ಟೆನಲ್ಲ! ನನ್ನ ಪಾಲಿಗೆ ಪಾಂಡುರಾಯ, ಧರ್ಮರಾಯ ಪ್ರಭೃತಿಗಳಾರೂ ಇಲ್ಲದೆ ಹೋದರಲ್ಲ! ಪತಿವ್ರತೆಯಾದರೂ ಮಂದಭಾಗ್ಯೆಯಾದ ನಾನು ಇನ್ನೇಕಿರಬೇಕು?" ಎಂದು ಗೋಳಾಡಿದಳು.

ಆಗ ವಿದುರನು—"ಮಹಾರಾಜ! ಈ ರೀತಿಯಲ್ಲಿ ನೀವು ದ್ರೌಪದಿಯನ್ನು ಗೋಳಾಡಿಸಿದರೆ, ಭೀಮಾರ್ಜುನರೂ ನಕುಲ ಸಹದೇವರೂ ನಿನ್ನನ್ನೂ ನಿನ್ನ ಮಕ್ಕಳನ್ನೂ ಮಂತ್ರಿಗಳನ್ನೂ ನಾಶಮಾಡದೆ ಬಿಡರು. ನಿನ್ನ ಮಗನನ್ನು ತಡೆ; ಇಲ್ಲದಿದ್ದರೆ ನೀವು ಕೆಟ್ಟುಹೋಗುವಿರಿ" ಎಂದು ಹೇಳಿದನು.

ದುರ್ಯೋಧನನು ದ್ರೌಪದಿಗೆ ಮಾಡುತ್ತಿದ್ದ ಅಪಮಾನವನ್ನು ಸೈರಿಸಲಾರದೆ ಭೀಮನು ಕ್ರೋಧಪರವಶನಾಗಿ—"ನಾನು ದುರ್ಯೋಧನನನ್ನೂ, ಅರ್ಜುನನು ಕರ್ಣನನ್ನೂ, ಸಹದೇವನು ಶಕುನಿಯನ್ನೂ ಕೊಲ್ಲದೆ ಬಿಡೆವು" ಎಂದು ಪ್ರತಿಜ್ಞೆಮಾಡಿದನು.

ಕೋಪಾವಿಷ್ಟನಾದ ಅರ್ಜುನನು ಬಾಣಗಳನ್ನು ಕೈಗೆ ತೆಗೆದುಕೊಂಡು ಕಾಲಾಂತಕನಂತೆ—"ಈ ವೈರಿಗಳೆಲ್ಲರನ್ನೂ ಸುಟ್ಟುಬಿಡುವೆನು" ಎಂದನು.

ಆಗ ಧರ್ಮರಾಯನು—"ಅರ್ಜುನ! ಈಗ ಆ ಸಾಹಸಕ್ಕೆ ಹೋಗಬೇಡ; ನಮ್ಮ ಯಶಸ್ಸು ಕೆಡುವುದು; ಲೋಕಹಿತಾರ್ಥವಾಗಿ ನಿನ್ನ ಕೋಪವನ್ನು ಶಮನಮಾಡಿಕೊ" ಎಂದು ತಮ್ಮನನ್ನು ಸಂತಯಿಸಿದನು.

ಆ ವೇಳೆಗೆ ಹಲವು ದುರ್ನಿಮಿತ್ತಗಳು ಕಂಡುಬರಲಾಗಿ, ಧೃತರಾಷ್ಟ್ರನು—"ದುರ್ಯೋಧನ! ದುಷ್ಟ! ಯಾವಾಗ ಕುರುಪುಂಗವರ ಧರ್ಮಪತ್ನಿಯನ್ನು ಸಭೆಯಲ್ಲಿ ದುರ್ಭಾಷೆಯಾಡಿ ಅಪಮಾನಪಡಿಸಿದೆಯೋ ಆಗಲೆ ನೀನು ಕೆಟ್ಟೆ" ಎಂದು ಮಗನಿಗೆ ಹೇಳಿ, ಸ್ವಕೀಯರ ಹಿತವನ್ನು ಕೋರಿ ದ್ರೌಪದಿಯನ್ನು ಸಮಾಧಾನಗೊಳಿಸಲು ಯತ್ನಿಸಿದನು.

ದುರ್ಯೋಧನನೇ ಮೊದಲಾದ ತನ್ನವರು ಧರ್ಮಚಾರಿಣಿಯಾದ ದ್ರೌಪದಿಯನ್ನು ಹಲವು ಬಗೆಯಲ್ಲಿ ಗೋಳಾಡಿಸಿದುದರಿಂದ ತನಗೂ ತನ್ನ ಮಕ್ಕಳಿಗೂ ಏನೋ ವಿಪತ್ತು ಕಾಯ್ದಿರುವುದೆಂದು ಹೆದರಿ—"ದ್ರೌಪದಿ! ನಿನಗೆ ಬೇಕಾದ ವರಗಳನ್ನು ಕೇಳಿಕೊ. ನೀನು ನನ್ನ ಸೊಸೆಗಳೆಲ್ಲರೊಳಗೆ ಶ್ರೇಷ್ಠೆ; ಧರ್ಮಪರಾಯಣೆ" ಎಂದನು.

ದ್ರೌಪದಿಯು—"ಮಹಾರಾಜನೆ! ನೀನು ವರವನ್ನು ಕೊಡುವುದಾದರೆ, ಧರ್ಮನಿಷ್ಠನೂ ಶ್ರೀಮಂತನೂ ಆದ ಯುಧಿಷ್ಠಿರನು ದಾಸನೆನಿಸಿಕೊಳ್ಳದ

ಹಾಗೆ ಮಾಡು; ರಾಜಕುಮಾರನಾದ ನನ್ನ ಮಗನನ್ನು, ಅರಿಯದವರು ದಾಸಪುತ್ರನೆನ್ನದ ಹಾಗೆ ಮಾಡು" ಎಂದಳು.

ಧೃತರಾಷ್ಟ್ರನು—"ಕಲ್ಯಾಣಿ! ಹಾಗೆಯೇ ಆಗಲಿ; ಇನ್ನೊಂದು ವರವನ್ನು ಕೇಳು; ನಿನ್ನ ಯೋಗ್ಯತೆಗೆ ಒಂದು ವರವು ಸಾಲದು" ಎಂದನು.

ದ್ರೌಪದಿಯು—"ರಥರೂ ಧನುರ್ಧಾರಿಗಳೂ ಆದ ಭೀಮಾರ್ಜುನರೂ, ಯಮಳರಾದ ನಕುಲ ಸಹದೇವರೂ ದಾಸರೆನಿಸಿಕೊಳ್ಳದೆ ಸ್ವವಶರಾಗಿರುವಂತೆ ವರವನ್ನು ಕೊಡು" ಎಂದು ಕೇಳಿದಳು.

ಧೃತರಾಷ್ಟ್ರನು—"ಎಲೌ ಮಹಾಭಾಗೆ! ನೀನು ಕೋರಿದಂತಾಗಲಿ, ನೀನು ಧರ್ಮಚಾರಿಣಿ; ಎರಡು ವರಗಳು ಸಾಲವು; ಮತ್ತೊಂದನ್ನು ಕೋರು" ಎನಲು,

ದ್ರೌಪದಿಯು—"ಲೋಭದಿಂದ ಧರ್ಮನಾಶವಾಗುವುದು; ನಾನು ಮೂರು ವರಗಳಿಗೆ ಅರ್ಹಳಲ್ಲ. ಕ್ಷತ್ರಿಯ ಸ್ತ್ರೀಯರಿಗೆ ಎರಡು ವರಗಳಿಗಿಂತ ಹೆಚ್ಚಾಗಿ ಸಲ್ಲವು. ಮಹಾರಾಜನೇ! ಈ ಪಾಪಿಷ್ಠ ದಾಸ್ಯದಿಂದ ಮುಕ್ತರಾದ ನನ್ನ ಗಂಡಂದಿರು ಸತ್ಕಾರ್ಯಗಳನ್ನು ಮಾಡಿ ಸಮಸ್ತ ಸಂಪದಗಳನ್ನೂ ಸಂಪಾದಿಸಬಲ್ಲರು; ಎರಡು ವರಗಳು ಸಾಕು" ಎಂದಳು.

ಈ ಪ್ರಕಾರವಾಗಿ ಪಾಂಡವರು ಹೋಗಿದ್ದ ಸ್ವಾತಂತ್ರ್ಯವನ್ನೂ ಧನ ಕನಕ ವಸ್ತುಗಳನ್ನೂ ಪಡೆದುಕೊಂಡು ಇಂದ್ರಪ್ರಸ್ಥಕ್ಕೆ ಹೊರಡಲು ನಿಶ್ಚಯಿಸಿ ಧೃತರಾಷ್ಟ್ರನನ್ನು ಬೀಳ್ಕೊಳ್ಳಹೋದರು.

ಆಗ ಮಹಾರಾಜನು ಯುಧಿಷ್ಠಿರನನ್ನು ಉಪಚಾರೋಕ್ತಿಗಳಿಂದ ಸಮಾಧಾನಗೊಳಿಸಿ ಕಡೆಗೆ—"ಉತ್ತಮ ಪುರುಷರು ವೈರಿಗಳ ಸುಕೃತಗಳನ್ನು ಸ್ಮರಿಸುವರೇ ಹೊರತು ದುಷ್ಕೃತಗಳನ್ನೆಂದಿಗೂ ಸ್ಮರಿಸರು. ನೀನು ದುರ್ಯೋಧನನ ಕಾಠಿನ್ಯವನ್ನು ಮನಸ್ಸಿನಲ್ಲಿಡಬೇಡ. ನೀನು ಗುಣವನ್ನೇ ಎಣಿಸುವವನಾದರೆ ನಿಮ್ಮ ತಾಯಿ ಗಾಂಧಾರಿಯನ್ನು ನೋಡು, ವೃದ್ಧನೂ ಅಂಧನೂ ಆದ ನನ್ನನ್ನು ನೋಡು. ನನ್ನ ಮಿತ್ರರನ್ನು ನೋಡಲಿಚ್ಛೆಯಿಂದಲೂ, ನನ್ನ ಮಕ್ಕಳ ಬಲಾಬಲವನ್ನು ಪರೀಕ್ಷಿಸಲಿಚ್ಛೆಯಿಂದಲೂ ಈ ದ್ಯೂತಕ್ಕೆ ಅನುಮೋದಿಸಿದೆನು. ನಿನ್ನಂತಹ ರಾಜನೂ, ಧೀಮಂತನೂ ಸರ್ವಶಾಸ್ತ್ರ ವಿಶಾರದನೂ ಆದ ಮಂತ್ರಿಯೂ ಇರುವಲ್ಲಿ ಕೌರವರಿಗೆ ಭಯವೇನು? ನಿನ್ನಲ್ಲಿ ಧರ್ಮ, ಅರ್ಜುನನಲ್ಲಿ ಧೈರ್ಯ, ಭೀಮಸೇನನಲ್ಲಿ ಪರಾಕ್ರಮ, ಯಮಳರಾದ ನಕುಲ ಸಹದೇವರಲ್ಲಿ ಗುರುಶುಶ್ರೂಷೆ ಇರುವುವು. ಅಜಾತಶತ್ರುವೆ! ನಿನಗೆ ಶುಭವಾಗಲಿ, ಖಾಂಡವಪ್ರಸ್ಥಕ್ಕೆ ಹೋಗಿ ಸುಖವಾಗಿರು. ನನ್ನ ಮಕ್ಕಳಲ್ಲಿ

ಭ್ರಾತೃಭಾವವನ್ನಿಡು. ನಿನ್ನ ಮನಸ್ಸು ಸದಾ ಧರ್ಮದ ಮೇಲಿರಲಿ” ಎಂದನು.

ತರುವಾಯ ಯುಧಿಷ್ಠಿರನು ಧೃತರಾಷ್ಟ್ರನಿಗೆ ನಮಸ್ಕಾರಮಾಡಿ ತಮ್ಮಂದಿರನ್ನೂ ದ್ರೌಪದಿಯನ್ನೂ ಕರೆದುಕೊಂಡು ಇಂದ್ರಪ್ರಸ್ಥಕ್ಕೆ ಪಯಣ ಮಾಡಿದನು.

ಇತ್ತ ದುಃಶಾಸನಾದಿಗಳು ತಾವು ಕಷ್ಟಪಟ್ಟು ಸಂಪಾದಿಸಿದ ಸಂಪತ್ತೆಲ್ಲವನ್ನು ವೃದ್ಧ ಮಹಾರಾಜನು ಶತ್ರುಗಳ ಪಾಲಮಾಡಿದನೆಂದು ವ್ಯಥೆಪಡುತ್ತ ದುರ್ಯೋಧನನೊಡನೆ ಧೃತರಾಷ್ಟ್ರನ ಬಳಿಗೆ ಹೋದರು. ದುರ್ಯೋಧನನು ತಂದೆಯ ಕಾಲಮೇಲೆ ಬಿದ್ದು, ಅರ್ಜುನಾದಿಗಳ ಶೌರ್ಯ ಧೈರ್ಯಗಳನ್ನು ವರ್ಣಿಸಿ, ಅವರಿಂದ ತಮಗುಂಟಾಗಬಹುದಾದ ಅನರ್ಥಗಳೆಲ್ಲವನ್ನೂ ವಿವರಿಸಿ, ಯುದ್ಧದಿಂದಲಾದರೂ ಕಪಟೋಪಾಯದಿಂದಲಾದರೂ ಅಹಿತವನ್ನು ಮಾಡಬಂದ ಶತ್ರುವನ್ನು ಸರ್ವೋಪಾಯದಿಂದಲೂ ಸಂಹಾರಮಾಡಬೇಕೆಂಬ ದೇವಪುರೋಹಿತನಾದ ಬೃಹಸ್ಪತಿಯ ನೀತಿವಾಕ್ಯವನ್ನು ಉದಾಹರಿಸಿ—“ಅಯ್ಯ! ನಾವು ಯುಧಿಷ್ಠಿರಾದಿಗಳನ್ನು ನಾನಾ ಪ್ರಕಾರವಾಗಿ ನೋಯಿಸಿದೆವು. ಅವರು ನಮ್ಮಿಂದ ಪಟ್ಟ ಬಾಧೆಗಳನ್ನು ಎಷ್ಟು ಮಾತ್ರವೂ ಮರೆಯುವರಲ್ಲ. ದ್ರೌಪದಿಗೆ ನಾವು ಮಾಡಿದ ಅಪಮಾನವನ್ನು ಅವರಲ್ಲೊಬ್ಬರೂ ಕ್ಷಮಿಸರು. ಇನ್ನೊಂದು ಬಾರಿ ಪಗಡೆಯಾಡಿ ಅವರನ್ನು ವನವಾಸಕ್ಕೆ ಸಾಗಿಸುವ ಆಲೋಚನೆ ಮಾಡಿದ್ದೇವೆ. ಧರ್ಮರಾಯನನ್ನು ಮರಳಿ ದ್ಯೂತಕ್ಕೆ ಕರೆಯಿಸು” ಎಂದು ವಿನಯಪೂರ್ವಕವಾಗಿ ಕೇಳಿಕೊಂಡನು.

ಧೃತರಾಷ್ಟ್ರನು ಮಗನ ಮಾತಿಗೆ ಮನಸ್ಸು ಕರಗಿದವನಾದರೂ ಆ ನುದ್ಯೂತದಿಂದ ತನ್ನವರಿಗೆ ವಿಪತ್ತು ತಪ್ಪದೆ ಸಂಭವಿಸುವುದೆಂದು ಭಯಪಟ್ಟು, ಪಾಂಡವರೊಡನೆ ಸ್ನೇಹವನ್ನು ಬೆಳೆಯಿಸುವಂತೆ ಅನೇಕ ವಿಧವಾಗಿ ಮಗನಿಗೆ ಬುದ್ಧಿ ಹೇಳಿದನು. ದುರ್ಯೋಧನನು ತಂದೆಯ ಮಾತನ್ನು ಕೇಳದೆ ಹೋಗಲು ಉಪಾಯಾಂತರವನ್ನರಿಯದೆ ಪುನರ್ದ್ಯೂತವಾಗಲಿ ಎಂದೊಪ್ಪಿದನು. ಭೀಷ್ಮದ್ರೋಣಾದಿಗಳೂ ಮತ್ತೆ ದ್ಯೂತವು ಬೇಡವೆಂದು ಹೇಳಿದರು. ಪುತ್ರಸ್ನೇಹದಿಂದ ಧೃತರಾಷ್ಟ್ರನು ಅವರ ಮಾತನ್ನು ಉಪೇಕ್ಷೆಮಾಡಿ ಪಾಂಡವರನ್ನು ಕರೆತರುವಂತೆ ಹೇಳಿ ದೂತನನ್ನು ಕಳುಹಿಸಿಕೊಟ್ಟನು.

ಆಗ ಧರ್ಮದರ್ಶಿನಿಯಾದ ಗಾಂಧಾರಿಯು ದುಃಖಾಕ್ರಾಂತಳಾಗಿ—“ಮಹಾರಾಜ! ಈ ದುರ್ಯೋಧನನು ಕುಲವನ್ನು ನಾಶಮಾಡುವುದಕ್ಕೆ ಹುಟ್ಟಿದ್ದಾನೆ. ಅವನಿಂದ ನಮಗೆ ವಿನಾಶಕಾಲ ಪ್ರಾಪ್ತವಾಗಿದೆ. ಸ್ವದೋಷ

ದಿಂದ ಕೆಡಬೇಡ. ಬಾಲಬುದ್ಧಿಯುಳ್ಳ ಈ ದುಷ್ಟರ ಆಲೋಚನೆಗೊಪ್ಪಬೇಡ. ಈ ಘೋರ ಕುಲಕ್ಷಯಕ್ಕೆ ನೀನು ಕಾರಣವಾಗಬೇಡ. ಶಾಂತರಾದ ಪೃಥೆಯ ಮಕ್ಕಳನ್ನು ಯಾರು ತಾನೇ ರೇಗಿಸಲಾದೀತು? ಶ್ರೇಯಸ್ಸಿನ ನಿಮಿತ್ತವಾಗಿ ಆಗಲಿ ಅಶ್ರೇಯಸ್ಸಿನ ನಿಮಿತ್ತವಾಗಿ ಆಗಲಿ ದುರ್ಬುದ್ಧಿಗಳು ಶಾಸ್ತ್ರಕ್ಕೊಳಗಾಗರು. ವೃದ್ಧರು ಬಾಲಮತಿಗಳಾಗಬಾರದು. ನೀನು ನಿನ್ನ ಮಕ್ಕಳಿಗೆ ಯಜಮಾನನಾಗಿರು. ನನ್ನ ಮಾತನ್ನು ಕೇಳು. ಈ ಕುಲಗೇಡಿಯನ್ನು ತೊರೆದುಬಿಡು. ಪುತ್ರಸ್ನೇಹದಿಂದ ಮೊದಲೇ ನೀನು ಈ ಕೆಲಸವನ್ನು ಮಾಡಲಿಲ್ಲ. ಈಗ ಅದರ ಫಲವು ಪ್ರಾಪ್ತವಾಗಿದೆ. ಶಮ ಧರ್ಮ ನಯಗಳನ್ನು ಬಿಡದೆ ಬುದ್ಧಿವಂತನಾಗಿರು. ಕ್ರೂರಕೃತ್ಯಗಳಿಂದ ಸಂಪಾದಿಸಿದ ಸಿರಿಯು ಧ್ವಂಸವಾಗಿ ಹೋಗುವುದು. ನ್ಯಾಯದಿಂದ ಸಂಪಾದಿಸಿದ ಸಿರಿಯು, ಸುಸ್ಥಿರವಾಗಿ ಪುತ್ರ ಪೌತ್ರ ಪಾರಂಪರ್ಯವಾಗಿ ನಡೆದುಬರುವುದು. ಮಾತಿಗೆ ಮರುಳಾಗಬೇಡ" ಎಂದು ಗಂಡನಿಗೆ ಬುದ್ಧಿ ಹೇಳಿದಳು.

ಗಾಂಧಾರಿಯ ಮಾತನ್ನು ಕೇಳಿ ಧೃತರಾಷ್ಟ್ರನು—"ನಮ್ಮ ಕುಲಕ್ಕೆ ಕೇಡುಗಾಲ ಬಂದರೆ ಬಂದುಹೋಗಲಿ. ಅದನ್ನು ನಾನು ತಡೆಯಲಾರೆನು. ದುರ್ಯೋಧನನು ಮನಸ್ಸುಬಂದಂತೆ ಹೋಗಲಿ; ಪಾಂಡವರು ಮತ್ತೆ ಬರಲಿ, ಪಗಡೆಯಾಡಲಿ; ಏನಾದರೂ ಆಗಿಹೋಗಲಿ" ಎಂದುತ್ತರವನ್ನು ಕೊಟ್ಟು ಸುಮ್ಮನಾದನು.

ಧೃತರಾಷ್ಟ್ರನು ಕಳುಹಿಸಿಕೊಟ್ಟ ದೂತನು ಅರೆದಾರಿ ಪಯಣಮಾಡಿದ್ದ ಧರ್ಮರಾಯನನ್ನು ಸೇರಿ ಮಹಾರಾಜನ ಅಪ್ಪಣೆಯನ್ನು ಬಿನ್ನಯಿಸಿದನು.

ಅದಕ್ಕೆ ಯುಧಿಷ್ಠಿರನು "ವಿಧಾತನ ನಿಯಮಾನುಸಾರವಾಗಿ ಪ್ರಾಣಿಗಳು ಶುಭಾಶುಭಗಳನ್ನು ಪಡೆಯುವುವು. ನಾನು ದ್ಯೂತವಾಡಲಿ ಆಡದೆ ಹೋಗಲಿ ಅವುಗಳು ಆಗದೆ ತೀರವು. ವೃದ್ಧನು ದ್ಯೂತಕ್ಕೆ ಬರಹೇಳಿದ್ದಾನೆ. ದ್ಯೂತವು ಕ್ಷಯಕರವೆಂಬುದನ್ನು ಬಲ್ಲೆನು, ಮಾಡುವುದೇನು? ಹಿರಿಯನಾಜ್ಞೆಯನ್ನು ಮೀರಲಾರೆನು" ಎಂದು ನುಡಿದು ತಮ್ಮಂದಿರನ್ನೂ ಹೆಂಡತಿಯನ್ನೂ ಕರೆದುಕೊಂಡು ಹಸ್ತಿನಾಪುರಕ್ಕೆ ಹಿಂದಿರುಗಿದನು. ಬುದ್ಧಿಶಾಲಿಯಾದರೂ, ಲಜ್ಜೆಯೊಂದುಕಡೆ ಧರ್ಮವೊಂದುಕಡೆ ತನ್ನನ್ನು ಬಾಧಿಸುತ್ತಿದ್ದರೂ, ಶಕುನಿಯು ಮೋಸಗಾರನೆಂದು ತಿಳಿದಿದ್ದರೂ ಅವನು ಕೌರವರಿಗೆ ವಿನಾಶಕಾಲವು ಸಮೀಪಿಸಿದೆಯೆಂದು ಭಾವಿಸಿ ಮತ್ತೆ ಪಗಡೆಯಾಟಕ್ಕೆ ಕುಳಿತನು.

ಮತ್ತೆ ದ್ಯೂತವಾರಂಭವಾಯಿತು. ಯಾರು ಸೋತರೆ ಅವರು ರಾಜ್ಯವನ್ನು ಪರಿತ್ಯಾಗಮಾಡಿ ಹನ್ನೆರಡು ವರ್ಷಗಳ ಕಾಲ ವನವಾಸವನ್ನೂ ತರುವಾಯ

ಜನಭರಿತವಾದೊಂದೂರಿನಲ್ಲಿ ಒಂದು ವರ್ಷ ಅಜ್ಞಾತವಾಸವನ್ನೂ ಮಾಡು ವಂತೆಯೂ, ಅಜ್ಞಾತವಾಸಿಗಳು ಅವಧಿಗೆ ಮುಂಚೆ ಯಾರ ಕಣ್ಣಿಗಾದರೂ ಬಿದ್ದಲ್ಲಿ ಮತ್ತೆ ಹನ್ನೆರಡು ವರ್ಷಗಳು ವನವಾಸ ಮಾಡುವಂತೆಯೂ ಪಂತ ಮಾಡಿಕೊಂಡರು. ಧರ್ಮರಾಯನೂ ಶಕುನಿಯೂ ಮರಳಿ ಪಗಡೆಯಾಡಿದರು; ಮರಳಿ ಧರ್ಮರಾಯನು ಸೋತನು.

ರಾಜಪುತ್ರರೈವರೂ ತಮ್ಮ ಪತ್ನಿಯ ಸಮೇತರಾಗಿ, ರಾಜವೇಷಭೂಷಣ ಗಳನ್ನು ತೆಗೆದಿಟ್ಟು ಕೃಷ್ಣಾಜಿನವನ್ನುಟ್ಟು ಹೊದ್ದು, ಅರಣ್ಯಯಾತ್ರೆಗೆ ಅಣಿ ಯಾದರು. ಆಗ ಧರ್ಮರಾಯನು ಭೀಷ್ಮ ಧೃತರಾಷ್ಟ್ರಾದಿ ವೃದ್ಧರನ್ನೂ ಮಂತ್ರಿಗಳನ್ನೂ ಗಾಂಧಾರಿಯನ್ನೂ ಸಂಬೋಧಿಸಿ—"ನಾವು ವನವಾಸಕ್ಕೆ ಹೋಗಿಬರುವೆವು, ಅಪ್ಪಣೆಯೆ" ಎನ್ನಲು, ಅವರೆಲ್ಲರೂ ಲಜ್ಜೆಯಿಂದ ಮೌನ ವನ್ನು ತಾಳಿದರು; ಕೆಲವರು ಪಾಂಡವರಿಗೆ ಶುಭವಾಗಲೆಂದು ಮನಸ್ಸಿನಲ್ಲಿಯೇ ಹರಸಿದರು. ಆ ಬಳಿಕ ಯುಧಿಷ್ಠಿರನು ಭೀಷ್ಮ ದ್ರೋಣಾದಿಗಳ ಅಡಿಗೆರಗಿ ಪ್ರಯಾಣೋನ್ಮುಖನಾದನು.

ದ್ರೌಪದಿಯು ಹೊರಡುವುದಕ್ಕೆ ಸಿದ್ಧಳಾಗಿ ಬೀಳ್ಕೊಳ್ಳಲು ಕುಂತಿಯ ಬಳಿಗೆ ಹೋದಳು. ಕುಂತಿಯು ಶೋಕಸಂತಪ್ತಳಾಗಿ—"ವತ್ಸೆ! ಈ ಮಹ ದ್ವ್ಯಸನವು ಪ್ರಾಪ್ತವಾಯಿತೆಂದು ಶೋಕಪಡದಿರು. ನೀನು ಸ್ತ್ರೀಧರ್ಮ ವನ್ನು ಬಲ್ಲವಳು, ಮತ್ತು ಶೀಲವತಿ. ಎಲ್ಲವನ್ನೂ ಬಲ್ಲ ನಿನಗೆ ಪತಿಸೇವೆಯ ವಿಷಯದಲ್ಲಿ ನಾನು ಹೇಳತಕ್ಕುದೇನಿದೆ? ನೀನು ಸಾಧ್ವಿ, ಗುಣಸಂಪನ್ನೆ, ಉಭಯಕುಲಕ್ಕೂ ಭೂಷಣವಾಗಿದ್ದೀಯೆ. ಅನಘೆ! ನಿನ್ನ ಕೋಪಾಗ್ನಿ ಯಿಂದ ಕೌರವರು ಬೆಂದುಹೋಗದಿರುವುದು ಅವರ ಭಾಗ್ಯವೇ ಸರಿ! ನಿನ್ನ ಧರ್ಮವೇ ನಿನ್ನನ್ನು ಕಾಯುವುದು. ಕ್ಷಿಪ್ರದಲ್ಲಿಯೇ ನಿನಗೆ ಶ್ರೇಯಸ್ಸುಂಟಾ ಗುವುದು. ವನದಲ್ಲಿ ನನ್ನ ಮಗ ಸಹದೇವನನ್ನು ಮಾತ್ರ ಚೆನ್ನಾಗಿ ನೋಡಿಕೊ" ಎಂದು ಹೇಳಿ, ಸೊಸೆಯನ್ನು ಹೋಗಿ ಬಾ ಎಂದಳು.

ತರುವಾಯ ಆ ವೀರಮಾತೆ ಮಕ್ಕಳ ಹತ್ತಿರ ಹೋಗಿ—"ನೀವು ಸದ್ಧರ್ಮ ಚಾರಿತ್ರರು. ನಿಮಗೆ ಇಂತಹ ವ್ಯಸನವು ಹೇಗೆ ಬಂದಿತು? ಈ ವಿಧಿ ವಿಪರ್ಯಾಸಕ್ಕೇನುಕಾರಣ? ನಿಮ್ಮನ್ನು ಹೆತ್ತ ನನ್ನ ಭಾಗ್ಯದೋಷವೇ ಕಾರಣವಾಗಿರಬೇಕು. ಉತ್ಸಾಹ ಧೈರ್ಯ ಬಲ ಈ ಗುಣಗಳಲ್ಲಿ ನಿಮಗೆ ಬಡತನವಿಲ್ಲ, ಆದರೂ ಸರ್ವಸ್ವವನ್ನೂ ಕಳೆದುಕೊಂಡು ಗತಿಹೀನರಾಗಿ ನೀವು ವನವಾಸಕ್ಕೆ ಹೋಗುವಂತೆ ಆದುದು ಹೇಗೆ? ಕೃಷ್ಣಾ! ನೀನೇಕೆ ನನ್ನ ಕೈಯಬಿಟ್ಟೆ; ದ್ವಾರಕಾವಾಸನೆ! ಎಲ್ಲಿದ್ದೀಯೇ? ನೀನೇಕೆ ನನ್ನನ್ನೂ ಈ

ನರೋತ್ತಮರನ್ನೂ ರಕ್ಷಿಸೆ? ಧರ್ಮಾತ್ಮರು, ಯಶೋವಂತರು, ವೀರರೂ ಆದ ಈ ನನ್ನ ಮಕ್ಕಳ ಮೇಲೆ ದಯೆಯಿಡು. ನೀತ್ಯರ್ಥಗಳನ್ನು ಬಲ್ಲವರಾದ ಭೀಷ್ಮ ದ್ರೋಣ ಕೃಪಾಚಾರ್ಯರು ನಮ್ಮ ಕುಲನಾಥರಾಗಿದ್ದೂ ಕೂಡ ನಮಗೀ ಆಪತ್ತು ಎಲ್ಲಿಂದ ಬಂದಿತು? ಸಹದೇವ! ನೀನು ನನ್ನನ್ನು ಬಿಟ್ಟು ಹೋಗಬೇಡ, ಇಲ್ಲಿಯೇ ಇದ್ದು ನನ್ನನ್ನು ಸಲಹುವ, ಪುಣ್ಯವನ್ನು ಕಟ್ಟಿಕೊ" ಎಂದೀ ಪ್ರಕಾರವಾಗಿ ಪ್ರಲಾಪಿಸಿದಳು.

ಅವರು ಕಾಡಿಗೆ ಹೋಗಲುದ್ಯುಕ್ತರಾಗಿರುವುದನ್ನು ಕಂಡು ಪುರವಾಸಿಗಳು ಗೋಳಿಡಲಾರಂಭಿಸಿದರು. ಬಾಲಕಬಾಲಕಿಯರು ಕಣ್ಣೀರನ್ನು ಸುರಿಸುತ್ತಾ ಅವರ ಹತ್ತಿರ ಹೋಗಿ ನಿಂತರು; ಯುವಕಯುವತಿಯರು ವಿಷಣ್ಣವದನರಾಗಿ ಅವರನ್ನು ನೋಡ ತೊರಟರು. ವೃದ್ಧ ಸ್ತ್ರೀಪುರುಷರು ಅಳುತ್ತಾ ಅವರ ಬೆನ್ನ ಹತ್ತಿದರು. ಸಮಸ್ತ ಖಾಂಡವಪ್ರಸ್ಥವೂ ಹಸ್ತಿನಾಪುರವೂ ದುಃಖಾಕುಲ ವಾಗಿ ಆರ್ತಸ್ವರದಿಂದ ಪರಿಪೂರ್ಣವಾಯಿತು. ಆಬಾಲವೃದ್ಧರೂ ಕುಂತೀ ಪುತ್ರರ ಗುಣಕೀರ್ತನವನ್ನು ಮಾಡುತ್ತಾ ನಿಟ್ಟುಸಿರನ್ನು ಬಿಡುತ್ತಿದ್ದರು.

ಅದನ್ನು ಕಂಡು ಯುಧಿಷ್ಠಿರನು ಮೃದುಮಧುರ ಸ್ವರದಿಂದ—" ಪುರ ವಾಸಿಗಳಿರಾ! ನನ್ನಲ್ಲಿ ಯಾವ ಗುಣವಿಲ್ಲದಿದ್ದರೂ ನೀವು ಕರುಣಾವಶ ವರ್ತಿಗಳಾಗಿ ಗುಣಕೀರ್ತನ ಮಾಡುತ್ತಿರುವಿರಿ; ನಾನು ಕೃತಾರ್ಥನಾದೆನು. ಹಸ್ತಿನಾಪುರದಲ್ಲಿ ಪಿತಾಮಹ ಭೀಷ್ಮನೂ, ಮಹಾರಾಜ ಧೃತರಾಷ್ಟ್ರನೂ, ಧರ್ಮವತ್ಸಲ ವಿದುರನೂ, ಜನನಿ ಕುಂತಿಯೂ ಇರುವರು. ಅವರು ಶೋಕ ಸಂತಾಪದಿಂದ ಬಳಲುತ್ತಿದ್ದಾರೆ. ನೀವು ನನ್ನ ಹಿತಚಿಂತಕರು; ನನ್ನ ಸ್ವಕೀಯರ ರಕ್ಷಣಾಭಾರವನ್ನು ನಿಮ್ಮ ಕೈಯಲ್ಲಿಟ್ಟಿದ್ದೇನೆ; ಅವರನ್ನು ನೀವು ರಕ್ಷಿಸಿರಿ; ನೀವೆಲ್ಲರೂ ಇನ್ನು ನಿಲ್ಲಿರಿ" ಎಂದನು.

ಯುಧಿಷ್ಠಿರನ ಮಧುರ ವಚನವನ್ನು ಕೇಳಿ ಪುರವಾಸಿಗಳು ತಮ್ಮ ತಮ್ಮ ವಿಲಾಪ ಪರಿತಾಪಗಳನ್ನು ಮೆಲ್ಲಮೆಲ್ಲಗೆ ಅಡಗಿಸಿಕೊಂಡು ಹಿಂದಿರುಗಿದರು. ಪಾಂಡವರು ಕುಂತಿಯನ್ನು ವಿದುರನ ಮನೆಯಲ್ಲಿರಿಸಿ ಕೃಷ್ಣೆಯ ಸಮೇತರಾಗಿ ಪುಣ್ಯತೀರ್ಥವಾದ ಜಾಹ್ನವೀತೀರಕ್ಕೆ ಹೋಗಿ ತಾಪಸರ ವೇಷವನ್ನು ತಾಳಿ ಅರಣ್ಯ ಸಂಚಾರಿಗಳಾದರು. ಇಂತು, ಯುಧಿಷ್ಠಿರನ ವಿಸ್ತಾರ ಸಾಮ್ರಾಜ್ಯವು ದುರ್ಯೋಧನನ ಪಾಲಾಯಿತು; ಪಾಂಡವರು ಗತಸರ್ವಸ್ವ ರಾಗಿ ಅಡವಿಯ ಪಾಲಾದರು.

ಹತ್ತನೆಯ ಅಧ್ಯಾಯ

ಅಜ್ಞಾತವಾಸ, ಗೋಧನ ರಕ್ಷಣ, ದ್ರುಪದರಾಯನ ಪುರೋಹಿತನ ದೌತ್ಯ, ಸಂಜಯನ ದೌತ್ಯ

ಪಾಂಡವರಿಗೆ ಬಂದ ಪಾಡನ್ನು ನೋಡಿ ಭೀಷ್ಮನು ಹಗಲಿರುಳೂ ಮರುಗಿದನು. ಪಾಂಡವರಿಗೆ ಸಾಮ್ರಾಜ್ಯಪಟ್ಟವು ಬಂದುದಕ್ಕೆ ಅವನು ಇದುವರೆಗೆ ಎಷ್ಟು ಆನಂದಪಟ್ಟನೋ ಈಗ ಅಷ್ಟು ವ್ಯಥೆಪಟ್ಟನು. ಯುಧಿಷ್ಠಿರನ ಯಾಗದ ವೈಭವವನ್ನು ನೋಡಿ ಅವನೆಷ್ಟು ಆಹ್ಲಾದಪಟ್ಟನೋ ಆ ರಾಜಕುಮಾರರು ಅರಣ್ಯವಾಸಕ್ಕೆ ಗುರಿಯಾದುದನ್ನು ನೋಡಿ ಅಷ್ಟೂ ಅಷ್ಟು ದುಃಖಪಟ್ಟನು. ಧೃತರಾಷ್ಟ್ರ, ದುರ್ಯೋಧನರ ಪಾಪಬುದ್ಧಿಯಿಂದ ಗೃಹಚ್ಛಿದ್ರವಾಯಿತು; ಆ ಗೃಹಚ್ಛಿದ್ರದಿಂದ ಕುಲ ನಾಶವಾಗಿಯೇ ತೀರುವುದು. ಭೀಮನಿಗೆ ಸೈರಣೆಯಿಲ್ಲ, ಅರ್ಜುನನು ಪರಾಕ್ರಮಶಾಲಿ. ಅವರೆಷ್ಟು ಮಾತ್ರಕ್ಕೂ ದುರ್ಯೋಧನನು ತಮಗೆ ಮಾಡಿದ ಅಪಮಾನವನ್ನೂ ಅನ್ಯಾಯವನ್ನೂ ಸಹಿಸಿಕೊಂಡು ಸುಮ್ಮನಿರುವರಲ್ಲ. ದುರ್ಯೋಧನಾದಿಗಳಿಗೆ ಇದು ಕೇಡುಗಾಲ—ಎಂದೀ ಬಗೆಯಾಗಿ ಭೀಷ್ಮನು ಮನಸ್ಸಿನಲ್ಲಿಯೇ ತೊಳಲಿದನು.

ಇತ್ತ, ಪಾಂಡವರು ಅತಿ ಕಷ್ಟದಿಂದ ಹನ್ನೆರಡು ವರ್ಷಗಳು ವನವಾಸ ಮಾಡಿದರು. ಅನಂತರದಲ್ಲಿ ಅವರು ಒಂದು ವರ್ಷಕಾಲ ಮತ್ಸ್ಯರಾಜ್ಯಾಧಿಪತಿ ವಿರಾಟನ ಮನೆಯಲ್ಲಿ ಅಜ್ಞಾತವಾಸ ಮಾಡುವಂತೆ ನಿಶ್ಚಯಿಸಿ ಒಂದು ದುರಾರೋಹವಾದ ಪರ್ವತ ಶಿಖರದ ಮೇಲಿದ್ದ ಒಂದು ಶಮೀವೃಕ್ಷದ ಮೇಲೆ ತಮ್ಮ ಆಯುಧಗಳನ್ನಿಟ್ಟು ಗುಪ್ತವೇಷದಲ್ಲಿ ವಿರಾಟನ ಅರಮನೆಗೆ ಹೋದರು. ಅಲ್ಲಿ ಅವರು ಬೇರೆಬೇರೆಯ ಹೆಸರುಗಳನ್ನಿಟ್ಟುಕೊಂಡು ಬೇರೆಬೇರೆಯ ಕೆಲಸಗಳನ್ನು ಮಾಡಲೊಪ್ಪಿಕೊಂಡರು. ಯುಧಿಷ್ಠಿರನು ಕಂಕನೆಂಬ ಹೆಸರನ್ನಿಟ್ಟುಕೊಂಡು ವಿರಾಟರಾಜನಿಗೆ ಪಗಡೆಯಾಟದಲ್ಲಿ ಒಡನಾಡಿಯಾದನು; ಭೀಮನು ಬಲ್ಲವನೆಂದು ಹೆಸರಿಟ್ಟುಕೊಂಡು ಬಾಣಸಿಗನಾದನು; ಅರ್ಜುನನು ಹೆಂಗಸಿನ ಉಡುಗೆ ತೊಡುಗೆಗಳನ್ನು ಹಾಕಿಕೊಂಡು ಬೃಹನ್ನಳೆಯೆಂಬ ಹೆಸರಿಂದ ವಿರಾಟರಾಜನ ಮಗಳು ಉತ್ತರೆಗೆ ನೃತ್ಯಗೀತಗಳನ್ನು ಕಲಿಸಲೊಪ್ಪಿಕೊಂಡನು; ನಕುಲನು ಗ್ರಂಥಿಕನೆಂಬ ಹೆಸರಿಂದ ವಿರಾಟನ ಕುದುರೆಗಳನ್ನು ಕಾಯುವ ಕೆಲಸಕ್ಕೆ ನಿಂತನು; ಸಹದೇವನು ಗೊಲ್ಲನ ವೇಷವನ್ನು ಹಾಕಿಕೊಂಡು ಅರಿಷ್ಟ

ನೇಮಿಯೆಂದು ಹೆಸರುಗೊಂಡು ದನಕಾಯುವ ಕೆಲಸವನ್ನೊಪ್ಪಿಕೊಂಡನು. ದ್ರೌಪದಿಯು ಸೈರಂಧ್ರಿಯೆಂಬ ಹೆಸರನ್ನು ಧರಿಸಿ ವಿರಾಟರಾಯನ ರಾಣಿಯಾದ ಸುಧೇಷ್ಣೆಯ ಚೇಟಿಯಾಗಿ ಪರಿಚರ್ಯವನ್ನು ಮಾಡತೊಡಗಿದಳು.

ಅಜ್ಞಾತವಾಸದಲ್ಲಿರುವಾಗ ಪಾಂಡವರು ಜನದೃಷ್ಟಿಗೆ ಬದ್ದರೂ ಬೀಳ ಬಹುದೆಂದಾಲೋಚಿಸಿ ಅವರನ್ನು ಕಂಡುಹಿಡಿಯುವ ನಿಮಿತ್ತವಾಗಿ ದುರ್ಯೋಧನನು ಜಲಸ್ಥಲಮಾರ್ಗವಾಗಿ ಗೂಢಚಾರರನ್ನು ಕಳುಹಿಸಿದನು. ಅವರು ನಾನಾ ವೇಷಗಳನ್ನು ಹಾಕಿಕೊಂಡು ಊರೂರುಗಳನ್ನೂ ಕೇರಿಕೇರಿಗಳನ್ನೂ ಬಳಸಿ ಅರಸಿಬಂದರೂ ಪಾಂಡವರ ಸುಳಿವನ್ನೇ ಕಾಣದೆ ಹತಾಶರಾಗಿ ಹಸ್ತಿನಾಪುರಕ್ಕೆ ಮರಳಿದರು. ಮಹಾರಾಜ ದುರ್ಯೋಧನನು ಭೀಷ್ಮ ದ್ರೋಣ ಪ್ರಭೃತಿ ಮಂತ್ರಿವರ್ಗದಿಂದಲೂ ಭ್ರಾತೃವರ್ಗದಿಂದಲೂ ಕೂಡಿ ಒಡ್ಡೋಲಗದಲ್ಲಿರುವ ಸಮಯದಲ್ಲಿ ಚಾರರು ಬಂದು ಸಭೆಯ ಮುಂದೆ ಕೈಜೋಡಿಸಿಕೊಂಡು ನಿಂತು ಇಂತೆಂದು ಬಿನ್ನಯಿಸಿದರು :—

"ಮಹಾಸ್ವಾಮಿ! ನಾವು ದುರವಗಾಹವಾದ ನಿಬಿಡಾರಣ್ಯಗಳನ್ನೂ ಉತ್ತುಂಗ ಶೈಲ ಶಿಖರಗಳನ್ನೂ ದುಷ್ಪ್ರವೇಶ ದುರ್ಗಗಳನ್ನೂ ಜನಸಮಾಕೀರ್ಣ ರಾಜ್ಯಗಳನ್ನೂ ವಿಚಿತ್ರ ಸೌಧಮಾಲೆಗಳಿಂದ ಪರಿವೃತವಾದ ರಾಜಧಾನಿ ಪ್ರಭೃತಿ ಸಕಲ ಸ್ಥಲಗಳನ್ನೂ ಬಿಡದೆ ಬಳಸಿದೆವು; ಎಲ್ಲೆಲ್ಲಿ ಅಲೆದು ಅರಸಿದರೂ ಪಾಂಡವರ ಸುಳಿವನ್ನು ಕಾಣಲಿಲ್ಲ; ಅವರು ತಮ್ಮ ಪತ್ನಿಯೊಡನೆ ಯಾವ ದಾರಿಯಲ್ಲಿ ಎತ್ತಹೋದರೋ, ಯಾವ ಊರಿನಲ್ಲಿ ಯಾವ ವೇಷದಲ್ಲಿರುವರೋ ಒಂದೂ ತಿಳಿಯಲಿಲ್ಲ. ಅಥವಾ, ಅವರು ಯಾವ ವಿಜನಾರಣ್ಯದಲ್ಲಿ ನರಿನಾಯಿಗಳ ಪಾಲಾದರೋ, ಕಾಣದೂರಿಗೆ ಹೋಗಿ ಹಗೆಗಳ ಕೈಗೆ ಸಿಕ್ಕಿ ಮಡಿದರೋ, ಮತ್ತೇನಾದರೋ ತಿಳಿಯದು. ನಾವು ವಿರಾಟರಾಜ್ಯಕ್ಕೆ ಹೋಗಿ ನೋಡಿದೆವು; ಅಲ್ಲಿ ತಮ್ಮ ಪರಮ ಶತ್ರುವಾದ ಆ ರಾಜನ ಸೇನಾಪತಿ ಕೀಚಕನು ಯಾರೂ ಕಂಡುಕೇಳದ ಗಂಧರ್ವರಿಂದ ಹತನಾದ ನೆಂದು ಕೇಳಿದೆವು; ಮುಂದೇನ ಮಾಡಬೇಕೋ ಅಪ್ಪಣೆಯಾಗಬೇಕು."

ಮಹಾರಾಜ ದುರ್ಯೋಧನನು ಚಾರರ ಮಾತನ್ನು ಕೇಳಿ ಕಳವಳಗೊಂಡು ಭೀಷ್ಮಾದಿಗಳ ಕಡೆ ತಿರುಗಿ, ಈ ಸಂದರ್ಭದಲ್ಲಿ ಏನುಮಾಡಬೇಕೆಂಬುದನ್ನು ಆಲೋಚಿಸಿ ಹೇಳಿರೆಂದು ಕೇಳಿದನು. ಮಹಾಮತಿ ಭೀಷ್ಮನು ಧೃತರಾಷ್ಟ್ರ ದುರ್ಯೋಧನರ ಮನೆಯಲ್ಲಿ ಉಂಡು ಉಟ್ಟರೂ ಪಾಂಡವರಿಗೆ ವಿರೋಧಿಯಲ್ಲ; ಅವನು ದುರ್ಯೋಧನನು ಕೇಳಿದ ಮಾತಿಗೆ ಇಂತೆಂದು ಉತ್ತರಕೊಟ್ಟನು :—

"ವತ್ಸ! ಯುಧಿಷ್ಠಿರನಿಗೆ ಯಾವ ಕಾರ್ಯದಿಂದ ಅನಿಷ್ಟವಾಗುವ ಸಂಭವ

ವಿದೆಯೋ ಆ ಕಾರ್ಯದಲ್ಲಿ ಆಲೋಚನೆ ಹೇಳುವುದು ನಮ್ಮಂತಹವರ ಕೆಲಸ ವಲ್ಲ. ನಾನು ನಿಮ್ಮೆಲ್ಲರ ಶುಭವನ್ನು ಕೋರುವಂತೆಯೇ ಯುಧಿಷ್ಠಿರ ಪ್ರಭೃತಿ ಗಳ ಶುಭವನ್ನೂ ಕೋರುತ್ತಿರುವೆನು. ಅಜ್ಞಾತವಾಸ ಮಾಡುತ್ತಿರುವಾಗ ಪಾಂಡವರು ನಿನ್ನ ದೃಷ್ಟಿಗೆ ಬಿದ್ದು ಮತ್ತೆ ಹನ್ನೆರಡು ವರ್ಷಗಳ ಕಾಲ ನಿಬಿಡಾ ರಣ್ಯದಲ್ಲಿ ಅಲೆಯುತ್ತಿರಲಿ ಎಂದು ನಾನೆಂದಿಗೂ ಕೋರೆನು. ಈಗ ನಾನು ಹೇಳುವ ಮಾತು ಈರ್ಷ್ಯಾಮೂಲಕವಾದುದೂ ಅಲ್ಲ, ಅನ್ಯಾಯವೂ ಅಲ್ಲ. ಯಾವನು ಸತ್ಯವ್ರತನೋ ಅವನು ಸಭಾಮಧ್ಯದಲ್ಲಿ ನಿಂತು ನಿರ್ದಾಕ್ಷಿಣ್ಯವಾಗಿ ಯಥಾರ್ಥವಾದ ಉಪದೇಶವನ್ನೇ ಮಾಡುವನು; ನಾನು ಯಥಾರ್ಥವನ್ನು ಹೇಳದೆಹೋದರೆ ಧರ್ಮಭ್ರಷ್ಟನಾಗುವೆನು. ನೀನು ಯಾವಾಗ ಜಿಜ್ಞಾಸ ಮಾಡಿದರೂ ನಾನು ನನ್ನ ಮನೋಗತವನ್ನು ಮರೆಮಾಜದೆ ಸ್ಪಷ್ಟಾಕ್ಷರದಲ್ಲಿ ನಿನಗೆ ಹೇಳದೆ ಬಿಡೆನು; ನಾನು ಬಾಯ್ಬಿಟ್ಟು ಹೇಳುತ್ತೇನೆ, ಕೇಳು—ಯುಧಿಷ್ಠಿ ರನು ಸತ್ಯ, ಧೃತಿ, ಕ್ಷಮೆ, ತೇಜಸ್ವಿತೆ, ಸರಳತೆ—ಇತ್ಯಾದಿ ಸದ್ಗುಣಗಳಲ್ಲಿ ಅದ್ವಿತೀಯನು, ಅವನಿಗೆ ಸಮಾನರಿಲ್ಲ; ಅವನ ಪುಣ್ಯಬಲದಿಂದ, ಅವನು ಕಾಲಿಟ್ಟಲ್ಲಿ ಪಾಪಸ್ಪರ್ಶವಾಗದು; ಅಲ್ಲಿ ವಾಸಮಾಡುವವರು ಸದಾಚಾರ ಸಂಪನ್ನರಾಗಿ ಅನುದಿನವೂ ಸತ್ಕಾರ್ಯವನ್ನೇ ಮಾಡುತ್ತಿರುವರು. ಯುಧಿಷ್ಠಿ ರನು ಧರ್ಮಬುದ್ಧಿಯಿಂದ ಪ್ರೇರಿತನಾಗಿ ಅನುಕ್ಷಣವೂ ಧರ್ಮಮಾರ್ಗದ ಲ್ಲಿಯೇ ನಡೆಯುತ್ತಿರುವನು. ನಾನು ಅವನಿಗೆ ಅಮಂಗಳವನ್ನು ಕೋರೆನು ".

ಭೀಷ್ಮನು ಹೀಗೆಂದು ನುಡಿದು ಮೌನವನ್ನು ಧರಿಸುತ್ತಲೆ ದ್ರೋಣಾ ಚಾರ್ಯ ಪ್ರಭೃತಿಗಳಾದ ವಯೋವೃದ್ಧರೂ ಧರ್ಮಾನುರಕ್ತರೂ ಅವನ ಸ್ಪಷ್ಟೋಕ್ತಿಯನ್ನು ಮೆಚ್ಚಿ ಅನುಮೋದಿಸಿದರು.

ಅನಂತರದಲ್ಲಿ ದುರ್ಯೋಧನನು ವಿರಾಟ ಸೇನಾಪತಿ ಕೀಚಕನು ಹತನಾದ ನೆಂಬ ವಾರ್ತೆಯಿಂದ ಉತ್ಸಾಹಗೊಂಡು ಕರ್ಣ ಪ್ರಭೃತಿಗಳ ಆಲೋಚನೆ ಯನ್ನು ಕೇಳಿ, ಭೀಷ್ಮ ದ್ರೋಣ ವೀರ ಪ್ರಮುಖರೊಡನೆ ವಿರಾಟನ ಗೋಧನ ಹರಣಾರ್ಥವಾಗಿ ಪಯಣಮಾಡಿದರು. ಗೋಗ್ರಹಣಕ್ಕೆ ಕೌರವ ಸೇನೆಯು ಬರುತ್ತಲೆ ವಿರಾಟಕುಮಾರನಾದ ಉತ್ತರನು ಸುಸಜ್ಜಿತ ಸೇನಾಸಮೇತನಾಗಿ ಗೋಧನ ರಕ್ಷಣೆಗೆ ಹೊರಟನು. ಬೃಹನ್ನಳಾ ವೇಷಧಾರಿಯಾದ ಅರ್ಜುನನು ಉತ್ತರನ ಸಾರಥಿಯಾದನು. ಆದರೆ ಉತ್ತರನು ಕೌರವ ವೀರರ ಮುಂದೆ ಹೆದರಿದುದನ್ನು ಕಂಡು ಅರ್ಜುನನು ಶಮೀವೃಕ್ಷದಲ್ಲಿ ಬಚ್ಚಿಟ್ಟಿದ್ದ ಪ್ರಸಿದ್ಧ ಗಾಂಡೀವವನ್ನೂ ಬಾಣಗಳನ್ನೂ ತೆಗೆದುಕೊಂಡುಬಂದು ಉತ್ತರನನ್ನು ಸಾರಥಿಯಾಗಿರೆಂದು ತಾನೇ ಯುದ್ಧಕ್ಕೆ ನಿಂತನು. ನಿಮಿಷಮಾತ್ರದಲ್ಲಿ

ಕೌರವ ಸೇನೆಯು ಗಾಂಡೀವಧರನಾದ ಅರ್ಜುನನ ಗುರುತುಹಿಡಿಯಿತು. ಭೀಷ್ಮನು ಅರ್ಜುನನ ಪರಾಕ್ರಮವನ್ನೂ ಹೊಳೆಯುತ್ತಿರುವ ಮುಖಮಂಡಲವನ್ನೂ ಗಾಂಡೀವಕ್ಕೆ ತೊಡಿಸಿದ್ದ ಸಿಶಿತ ಶರಜಾಲದ ಜೋಡಣೆಯನ್ನೂ ನೋಡಿ ಅವನೇ ಅರ್ಜುನನೆಂದು ನಿಶ್ಚಯಿಸಿ, ಏಕಕಾಲದಲ್ಲಿ ಆಹ್ಲಾದವನ್ನೂ ವಿಸ್ಮಯವನ್ನೂ ಪಟ್ಟನು. ವೀರನ ಗುಣವನ್ನು ವೀರನೇ ಬಲ್ಲನಾದುದರಿಂದ ಕೌರವ ಸಭೆಯಲ್ಲಿ ಭೀಷ್ಮ ದ್ರೋಣರನ್ನು ಬಿಟ್ಟರೆ ಇನ್ನಾರೂ ಅರ್ಜುನನ ವೀರತ್ವವನ್ನೂ ಅಸ್ತ್ರಪ್ರಯೋಗದಲ್ಲಿ ಅವನ ಕೌಶಲ ಮರ್ಮವನ್ನೂ ಬಲ್ಲವರಿರಲಿಲ್ಲ. ಅರ್ಜುನನು ಯುದ್ಧಕ್ಕೆ ಸಜ್ಜಿತನಾಗಿ ಬಂದು ನಿಂತುದನ್ನು ಕಂಡು ಕೌರವರ ಪರಾಜಯವು ತಪ್ಪಿದುದಲ್ಲವೆಂದು ಭೀಷ್ಮನು ತಿಳಿದುಕೊಂಡನು. ಅಜ್ಞಾತವಾಸ ಕಾಲದಲ್ಲಿಯೇ ಅರ್ಜುನನು ಕಾಣಿಸಿಕೊಂಡನು; ಸಂಕೇತಾನುಸಾರವಾಗಿ ಪಾಂಡವರು ಮತ್ತೆ ಹನ್ನೆರಡು ವರ್ಷಗಳು ಅರಣ್ಯವಾಸ ಮಾಡಬೇಕಾಗುವುದು, ಎಂದೆಣಿಸಿ ದುರ್ಯೋಧನನು ಹಿಗ್ಗಿದನು.

ಆಗ ಭೀಷ್ಮನು—" ಕುರುರಾಜ! ಪಾಂಡವರು ಆಡಿದಂತೆ ನಡೆಯುವರು, ದುರಾಸೆಯಿಲ್ಲದವರು, ಪರಮ ಧಾರ್ಮಿಕರು. ಅವರು ಧರ್ಮಭ್ರಷ್ಟರಾಗುವರೆಂದು ನಾನೆಂದಿಗೂ ನಂಬೆನು. ಅವರು ಅಜ್ಞಾತವಾಸದಲ್ಲಿ ಒಂದು ವರ್ಷವಲ್ಲ, ವರ್ಷದ ಮೇಲೆ ಐದು ತಿಂಗಳು ಕಳೆದಿರುವರು. ಅರ್ಜುನನು ಅದನ್ನು ತಿಳಿದೇ ಯುದ್ಧಕ್ಕೆ ಬಂದಿದ್ದಾನೆ, ಸಂದೇಹವಿಲ್ಲ. ಪಾಂಡವರಿಗೆ ಕಪಟೋಪಾಯದಿಂದ ರಾಜ್ಯವನ್ನು ಸಂಪಾದಿಸಿಕೊಳ್ಳುವ ಅಭಿಲಾಷೆ ಇದ್ದಿದ್ದ ಪಕ್ಷದಲ್ಲಿ ಕಪಟದ್ಯೂತದಲ್ಲಿಯೇ ಅವರ ಸಾಮರ್ಥ್ಯವನ್ನು ತೋರಿಸುತ್ತಿದ್ದರು. ಅವರು ಆಟವಾಡುವಂತೆ ಸುಲಭವಾಗಿ ಪ್ರಾಣವನ್ನು ತೊರೆಯಬಲ್ಲರು; ಅಸತ್ಯಪಥದಲ್ಲಿ ಮಾತ್ರ ಹೆಜ್ಜೆಯಿಡರು" ಎಂದು ಹೇಳಿ ಅಸ್ತ್ರಪ್ರಯೋಗದಲ್ಲಿ ಅರ್ಜುನನ ಶ್ರೇಷ್ಠತ್ವವನ್ನು ಕೊಂಡಾಡಿದನು. ದ್ರೋಣಾಚಾರ್ಯನೂ ಅರ್ಜುನನ ಮಹಿಮೆಯನ್ನು ಪ್ರಶಂಸೆಮಾಡಿದನು. ಆದರೆ ದುರ್ಯೋಧನನೂ ಕರ್ಣನೂ ಅರ್ಜುನನ ಸಾಮರ್ಥ್ಯವನ್ನು ತೃಣೀಕರಿಸಿ ತಮ್ಮ ಹೆಮ್ಮೆಯನ್ನೇ ದುರಾಗ್ರಹದಿಂದ ಸಾಡುತ್ತಿದ್ದರು. ಭೀಷ್ಮನು ಕುರುರಾಜನ ಕಾರ್ಯಭಾರವನ್ನು ವಹಿಸಿದ್ದುದರಿಂದ ಅರ್ಜುನನ ವಿಪಕ್ಷಪಕ್ಷವಾಗಿಯೇ ರಣರಂಗದಲ್ಲಿ ನಿಂತು ಕದನಕ್ಕೆ ಪ್ರವರ್ತಿಸಿದನು. ಭೀಷ್ಮನು ಎಣಿಸಿದ್ದಂತೆಯೇ ಅರ್ಜುನನು ಗೆದ್ದನು. ಕೌರವರು ಆಕಳುಗಳನ್ನು ಅಪಹರಿಸಲಾರದೆ ಹತಾಶರಾಗಿ ಬಂದ ದಾರಿಯನ್ನು ಹಿಡಿದರು.

ವಿರಾಟರಾಯನು ತನ್ನ ಮಗನ ಮೂಲಕವಾಗಿ ಅರ್ಜುನನ ವೃತ್ತಾಂತ

ವನ್ನೂ ಗೋಧನ ರಕ್ಷಣೆಯಾದುದನ್ನೂ ಕೇಳಿ ಆಹ್ಲಾದಪಟ್ಟನು. ಕೃಷ್ಣಾ ಸಮೇತರಾದ ಪಾಂಡವರ ಪೂರ್ವೋತ್ತರವು ತಿಳಿದುಬರುತ್ತಲೆ ಅವನ ಆನಂದಕ್ಕೆ ಕೊನೆಯಿಲ್ಲವಾಯಿತು. ಆಗ ಅವನು ತನ್ನ ಮಗಳನ್ನು ಅರ್ಜುನನಿಗೆ ಕೊಡುವ ಆಲೋಚನೆ ಮಾಡಿದನು. ಆದರೆ, ಅರ್ಜುನನು ಸಂವತ್ಸರಕಾಲ ವಿರಾಟ ಕುಮಾರಿಗೆ ವಿದ್ಯೆಯನ್ನು ಕಲಿಸುತ್ತಿದ್ದನು. ಶಿಷ್ಯಳಿಗೆ ಗುರುವಿನಲ್ಲಿ ಎಷ್ಟು ಶ್ರದ್ಧಾಭಕ್ತಿ ಇದ್ದಿತೋ ಗುರುವಿಗೂ ಶಿಷ್ಯಳಲ್ಲಿ ಅಷ್ಟು ಪ್ರೀತಿಯಿದ್ದಿತು. ಈ ಬಗೆಯ ಸಂಬಂಧವನ್ನಾಲೋಚಿಸಿ ಅರ್ಜುನನು ಉತ್ತರೆಯನ್ನು ತನ್ನ ಸೊಸೆಯನ್ನಾಗಿ ಮಾಡಿಕೊಳ್ಳುವೆನೆಂದನು; ಅದಕ್ಕೆ ವಿರಾಟನೂ ಒಪ್ಪಿದನು; ಕೂಡಲೆ ಶ್ರೀಕೃಷ್ಣನಿಗೆ ಹೇಳಿಕಳುಹಿಸಲು, ಆತನು ತನ್ನ ಸೋದರಳಿಯನಾದ ಅಭಿಮನ್ಯುವನ್ನು ಕರೆದುಕೊಂಡು ಸ್ವಜನ ಪರಿಜನ ಸಮೇತನಾಗಿ ವಿರಾಟನ ರಾಜಧಾನಿಗೆ ಬಂದನು. ಪಾಂಡವರ ಮಾವನಾದ ದ್ರುಪದರಾಯನೂ ತನ್ನ ಸ್ವಕೀಯರೊಡನೆ ಅಲ್ಲಿಗೆ ಬಂದು ಸೇರಿದನು. ವಿರಾಟನಗರದಲ್ಲಿ ಸಂಭ್ರಮದಿಂದ ಅಭಿಮನ್ಯುವಿಗೂ ಉತ್ತರೆಗೂ ವಿವಾಹವಾಯಿತು.

ವಿವಾಹಮಹೋತ್ಸವ ಮುಗಿದ ಮಾರನೆಯ ದಿನ ಬೆಳಗಾಗುತ್ತಲೆ ಮದುವೆಗೆ ಬಂದಿದ್ದ ರಾಜರೆಲ್ಲರೂ ವಿರಾಟರಾಯನ ಸಭಾಭವನದಲ್ಲಿ ಸೇರಿದರು. ಆ ರಾಜರ ಸಂಭಾಷಣೆಯೆಲ್ಲ ಮುಗಿದ ತರುವಾಯ, ಶ್ರೀಕೃಷ್ಣನು ಪಾಂಡವರ ಕಾರ್ಯಪ್ರಸ್ತಾವವನ್ನೆತ್ತಿದನು.

ಧರ್ಮರಾಯನು ಶಕುನಿಯ ಸಂಗಡ ಜೂಜಾಡಿ ಮೋಸಹೋಗಿ ರಾಜ್ಯವನ್ನು ಕಳೆದುಕೊಂಡು ವನವಾಸದಲ್ಲಿಯೂ ಅಜ್ಞಾತವಾಸದಲ್ಲಿಯೂ ಪಟ್ಟ ಪಾಡುಗಳೆಲ್ಲವನ್ನೂ ವರ್ಣಿಸಿ, ಕೃಷ್ಣನು ಇಂತೆಂದನು:—"ಈ ಸಂದರ್ಭದಲ್ಲಿ, ಧರ್ಮರಾಯ ದುರ್ಯೋಧನರಿಬ್ಬರಿಗೂ ಯಾವುದು ಹಿತವೋ, ಕುರುಪಾಂಡವರಿಬ್ಬರಿಗೂ ಯಾವುದು ಧರ್ಮವೋ, ಯಾವುದು ವಿಹಿತವೋ, ಯಶಸ್ಕರವೋ ತಾವೆಲ್ಲರೂ ಯೋಚಿಸಿರಿ. ಅಧರ್ಮದಿಂದ ಬರುವುದಾದರೆ ಧರ್ಮರಾಯನು ಸುರಸಾಮ್ರಾಜ್ಯವನ್ನಾದರೂ ಒಲ್ಲನು; ಧರ್ಮಾರ್ಥಗಳೆರಡಕ್ಕೂ ಕುಂದಿಲ್ಲದಂತೆ ಒಂದು ಗ್ರಾಮದ ಯಾಜಮಾನ್ಯವು ಬಂದರೂ ಸಾಕೆನ್ನುವನು. ದುರ್ಯೋಧನಾದಿಗಳು ಸ್ವಸಾಮರ್ಥ್ಯದಿಂದ ರಣದಲ್ಲಿ ಅರ್ಜುನನನ್ನು ಗೆಲ್ಲಲಾರರು. ಆದರೂ ಯುಧಿಷ್ಠಿರ ಪ್ರಭೃತಿಗಳು ಅವರ ಕ್ಷೇಮವನ್ನೇ ಕೋರುತ್ತಿರುವರು. ತಾವೆಲ್ಲರೂ ದುರ್ಯೋಧನಾದಿಗಳ ದುರಾಸೆಯನ್ನೂ ಯುಧಿಷ್ಠಿರನ ಧರ್ಮಬುದ್ಧಿಯನ್ನೂ ಅವರವರ ಸಂಬಂಧವನ್ನೂ ಆಲೋಚಿಸಿ ಕರ್ತವ್ಯವನ್ನು ನಿಶ್ಚಯಿಸಿರಿ. ಅರ್ಧರಾಜ್ಯವನ್ನು ಕೊಟ್ಟು ಸಂಧಿಮಾಡಿ

ಕೊಂಡರೆ ಕೌರವರು ಉಳಿಯುವರು; ಇಲ್ಲವಾದರೆ ಶೂರರಾದ ಪಾಂಡವರು ಮಿತ್ರರೊಡನೆ ಸೇರಿ ಕೌರವರೆಲ್ಲರನ್ನೂ ನಾಶಮಾಡುವರು. ಈ ಅರ್ಥವನ್ನು ಧೃತರಾಷ್ಟ್ರನಿಗೆ ತಿಳಿಸುವುದಕ್ಕಾಗಿ ಧರ್ಮಶೀಲನೂ ಕುಲೀನನೂ ಸಮರ್ಥನೂ ಆದ ಒಬ್ಬ ದೂತನನ್ನು ಕಳುಹಿಸುವುದು ಆವಶ್ಯಕ."

ನಿಷ್ಪಕ್ಷಪಾತಬುದ್ಧಿಯಿಂದ ಹೇಳಿದ ಕೃಷ್ಣನ ಧರ್ಮಾರ್ಥಸಾಧಕವಾದ ಮಧುರವಾಕ್ಯವನ್ನು ಕೇಳಿ ಬಲರಾಮನು, ತಮ್ಮನ ಮಾತು ಧರ್ಮಸಮ್ಮತವಾದುದೆಂದು ಕೊಂಡಾಡಿದರೂ ಧರ್ಮರಾಯನು ತಾನಾಗಿ ಶಕುನಿಯ ಸಂಗಡ ಜೂಜಾಡಿ ಸೋತಿರುವಲ್ಲಿ ಶಕುನಿಯ ಅಪರಾಧವೇನು? ಎಂದು ಧರ್ಮರಾಯನನ್ನು ಮೂದಲಿಸಿ ದುರ್ಯೋಧನನಲ್ಲಿ ಪಕ್ಷಪಾತವನ್ನು ತೋರಿಸಿ ಕಡೆಗೆ, "ಸಂಧಿಯಿಂದ ಬರುವ ಅರ್ಥವೇ ಅರ್ಥವು; ಯುದ್ಧದಲ್ಲಿ ಅನ್ಯಾಯದಿಂದ ಬರುವ ಅರ್ಥವು ಅರ್ಥವೇ ಅಲ್ಲ" ಎಂದು ನುಡಿದು ಕೃಷ್ಣನ ಮಾತನ್ನು ಅನುಮೋದಿಸಿದನು.

ಆ ಬಳಿಕ ಸಾತ್ಯಕಿಯೆದ್ದು ಬಲರಾಮನಾಡಿದ ಮಾತನ್ನು ಆಕ್ಷೇಪಿಸುತ್ತ—"ಮನುಷ್ಯನ ಮನಸ್ಸು ಇರುವಂತೆಯೇ ಅವನ ಬಾಯಿಂದ ಬರುವ ಮಾತೂ ಇರುವುದು. ನಿನ್ನ ಮನಸ್ಸಿನಂತೆಯೇ ನಿನ್ನ ಮಾತು. ಒಂದೇ ಕುಲದಲ್ಲಿ ಬಲಶಾಲಿಗಳೂ ಹುಟ್ಟುವರು, ಷಂಡರೂ ಹುಟ್ಟುವರು. ನೀನು ಷಂಡ; ನೀನಾಡಿದ ಮಾತಿಗೆ ನನಗೆ ಕೋಪವಿಲ್ಲ; ಇವರೆಲ್ಲರೂ ನಿನ್ನ ಮಾತನ್ನು ಕೇಳಿಕೊಂಡು ಸುಮ್ಮನಿರುವರಲ್ಲಾ ಎಂದು ನನಗೆ ಕೋಪ. ಧರ್ಮರಾಯನ ಮೇಲೆ ದೋಷಲೇಶವನ್ನಾದರೂ ಈ ಸಭೆಯ ಮಧ್ಯದಲ್ಲಿ ನಿಂತು ಹೇಳುವಷ್ಟು ಧೈರ್ಯವು ನಿನಗೆಲ್ಲಿಂದ ಬಂದಿತು? ಇಂತಹ ಮಾತನ್ನಾಡುವುದಕ್ಕೆ ನಿನ್ನನ್ನು ಈ ಸಭೆಗೆ ಹೇಗೆ ಬಿಟ್ಟರು? ಖೂಳ ಶಕುನಿಯು ಕಪಟವನ್ನರಿಯದ ಧರ್ಮರಾಯನನ್ನು ದ್ಯೂತದಲ್ಲಿ ಸೋಲಿಸಿದನು. ಪಂತವನ್ನು ಕಟ್ಟಿದಂತೆ ಧರ್ಮರಾಯನು ತಪ್ಪದೆ ನಡೆದನು. ಈಗ ಅವನು ರಾಜ್ಯವನ್ನು ಕೇಳುವುದು ಅನ್ಯಾಯವೆ? ದುರ್ಯೋಧನಾದಿಗಳಿಗೆ ಭೀಷ್ಮದ್ರೋಣಾದಿಗಳು ಎಷ್ಟೋ ಬಗೆಯಲ್ಲಿ ಬುದ್ಧಿ ಹೇಳಿ ಪಾಂಡವರಿಗೆ ಅವರ ಪೈತೃಕರಾಜ್ಯವನ್ನು ಕೊಡಿರೆಂದು ಎಷ್ಟು ಬೇಡಿದರೂ ಅವರು ಕೇಳಲಿಲ್ಲ. ಅವರನ್ನು ಬಾಣದಿಂದ ಬೇಡುವುದೇ ಸರಿಯೆಂದು ನನಗೆ ತೋರುವುದು. ನಮ್ಮನ್ನು ಕೊಲ್ಲಬಂದ ಶತ್ರುಗಳನ್ನು ಕೊಲ್ಲುವುದು ಅಧರ್ಮವಲ್ಲ. ಅಂತಹವರನ್ನು ಯಾಚಿಸುವುದು ಅಧರ್ಮವು, ಅಕೀರ್ತಿಕರವು. ಇಂದು ಧರ್ಮರಾಯನಿಗೆ ರಾಜ್ಯವು ಬರಬೇಕು; ಇಲ್ಲವೆ, ಶತ್ರುಗಳೆಲ್ಲರೂ ರಣದಲ್ಲಿ ಹತರಾಗಬೇಕು" ಎಂದನು.

ಅನಂತರದಲ್ಲಿ ವೃದ್ಧ ದ್ರುಪದರಾಯನು ಸಾತ್ಯಕಿಯ ಮಾತನ್ನು ಪೋಷಿಸುತ್ತ—"ಮಹಾಬಾಹುವೇ! ನೀನು ಹೇಳುವುದೇ ಸರಿ. ದುರ್ಯೋಧನನು ಒಳ್ಳೆಯ ಮಾತಿಗೆ ರಾಜ್ಯವನ್ನು ಕೊಡುವನಲ್ಲ. ಧೃತರಾಷ್ಟ್ರನು ಮಗನ ಮಾತನ್ನು ಮೀರುವನಲ್ಲ. ಭೀಷ್ಮದ್ರೋಣರು ಅವರ ಹಂಗಿಗೊಳಗಾಗಿ ಅವರು ಆಡಿದಂತೆ ಆಡುವರು. ಕರ್ಣ ಶಕುನಿಗಳು ಮೂರ್ಖರು. ಅವರೂ ಅವರ ಜಾಡೆಯನ್ನು ಹಿಡಿಯುವರು. ನನ್ನ ಬುದ್ಧಿಗೆ ಬಲದೇವನ ಮಾತು ಸರಿಹೋಗದು. ಮೃದುವಾಕ್ಯವನ್ನಾಡಿದರೆ ಆ ಪಾಪಾತ್ಮ ದುರ್ಯೋಧನನು ಆಡಿದವರನ್ನು ಅಶಕ್ತರೆನ್ನುವನು. ಆದುದರಿಂದ ನಾವು ಯುದ್ಧಸನ್ನಾಹವನ್ನು ಮಾಡುವುದು ಆವಶ್ಯಕ. ನಮ್ಮ ಮಿತ್ರರಾಜರನ್ನು ಸೇನಾಸಮೇತರಾಗಿ ಬರಹೇಳಲು ದೂತರನ್ನು ಕಳುಹಿಸೋಣ. ಧೃತರಾಷ್ಟ್ರನ ಬಳಿಗೆ ನನ್ನ ಪುರೋಹಿತನನ್ನು ದೂತನನ್ನಾಗಿ ಕಳುಹಿಸುವೆನು. ಆ ಬ್ರಾಹ್ಮಣನು ಧೃತರಾಷ್ಟ್ರ ದುರ್ಯೋಧನರಿಗೂ ಭೀಷ್ಮ ದ್ರೋಣ ವಿದುರಾದಿಗಳಿಗೂ ನಮ್ಮ ಸಂದೇಶವನ್ನು ತಿಳಿಸಲಿ" ಎಂದನು.

ಶ್ರೀಕೃಷ್ಣನು ದ್ರುಪದರಾಯನಾಡಿದ ಮಾತನ್ನು ಕೊಂಡಾಡಿ—"ತಾವು ಆಡಿದ ಮಾತು ತಮಗೆ ಅನುಗುಣವಾಗಿಯೂ ಬಲಶಾಲಿಗಳಾದ ಪಾಂಡವರ ಇಷ್ಟಾರ್ಥಸಿದ್ಧಿಗೆ ಅನುಕೂಲವಾಗಿಯೂ ಇರುವುದು. ಸುನೀತಿಯನ್ನು ಬಯಸುವರಾದ ನಾವು ತಾವು ಹೇಳಿದಂತೆ ಮಾಡುವುದೇ ಕರ್ತವ್ಯ. ಆದರೆ ಕುರುಪಾಂಡವರು ಅವರವರೊಳಗೆ ಮನಸ್ಸು ಬಂದಂತೆ ನಡೆದುಕೊಂಡರೂ, ಬಂಧುತ್ವದಲ್ಲಿ ನಮಗೆ ಅವರಿಬ್ಬರೂ ಸಮಾನರು. ತಾವೂ ನಾವೂ ವಿವಾಹಾರ್ಥವಾಗಿ ಬಂದವರು. ವಿವಾಹವಾಯಿತು. ಸಂತೋಷವಾಗಿ ನಾವು ಇನ್ನು ನಮ್ಮ ನಮ್ಮ ಊರಿಗೆ ಹೊರಡೋಣ. ವಯಸ್ಸಿನಲ್ಲಿಯೂ ಜ್ಞಾನದಲ್ಲಿಯೂ ತಾವು ವೃದ್ಧತಮರು! ನಾವೆಲ್ಲರೂ ತಮಗೆ ಶಿಷ್ಯರ ಹಾಗೆ, ಧೃತರಾಷ್ಟ್ರನು ತಮ್ಮನ್ನು ಮಾನ್ಯರೆಂದೆಣಿಸಿರುವನು, ದ್ರೋಣ ಕೃಪಾಚಾರ್ಯರಿಬ್ಬರೂ ತಮ್ಮ ಮಿತ್ರರು. ಪಾಂಡವರ ಕಾರ್ಯಾರ್ಥವಾಗಿ ಕೌರವರ ಬಳಿಗೆ ತಾವು ದೂತನನ್ನು ಕಳುಹಿಸಬೇಕೆಂಬುದೇ ನಮ್ಮೆಲ್ಲರ ಅಭಿಪ್ರಾಯ. ಕುರುರಾಯನು ನ್ಯಾಯಕ್ಕೆ ಕಟ್ಟುಬಿದ್ದು ಸಂಧಿಮಾಡಿಕೊಳ್ಳುವ ಪಕ್ಷದಲ್ಲಿ ಕುರುಪಾಂಡವರಿಗಿರುವ ಭ್ರಾತೃಭಾವಕ್ಕೆ ಕುಂದುಬಾರದಿರುವುದು. ಹಾಗೆ ಮಾಡದೆ ದುರ್ಯೋಧನನು ಬೆರೆತು ಬುದ್ಧಿಹೀನನಾಗಿ ಸಾಮಕ್ಕೊಡಂಬಡದ ಪಕ್ಷಕ್ಕೆ, ಮೊದಲು ಇತರ ರಾಜರೆಲ್ಲರನ್ನೂ ಕರೆಯಕಳುಹಿಸಿ, ಆಮೇಲೆ ನಮ್ಮನ್ನು ಬರಹೇಳಿರಿ. ಆಗ ಮಂದಬುದ್ಧಿ ದುರ್ಯೋಧನನೂ ಅವನ ಅಮಾತ್ಯರೂ ಬಂಧುಬಳಗವೂ ಅರ್ಜುನನ ಗಾಂಡೀವದಿಂದ ಹತರಾಗದೆ ಹೋಗರು" ಎಂದನು.

ತರುವಾಯ, ಕೃಷ್ಣನು ವಿರಾಟರಾಯನ ಸತ್ಕಾರವನ್ನು ಕೈಕೊಂಡು ದ್ವಾರಕಾಪಟ್ಟಣಕ್ಕೆ ಪಯಣವಾಡಿದನು. ಮದುವೆಗಾಗಿ ಬಂದಿದ್ದವರೆಲ್ಲರೂ ತಮ್ಮ ತಮ್ಮ ಊರಿಗೆ ತೆರಳಿದರು. ಆಗ ಯುಧಿಷ್ಠಿರನೂ ವಿರಾಟನೂ ಯುದ್ಧ ಸನ್ನಾಹವನ್ನು ಮಾಡತೊಡಗಿ ಮಿತ್ರರಾಜರ ಸಾಹಾಯ್ಯವನ್ನು ಪಡೆಯುವುದಕ್ಕಾಗಿ ದೂತರನ್ನು ಕಳುಹಿಸಿದರು. ಅವರು ಕೋರಿದ ರಾಜರೆಲ್ಲರೂ ಸೇನಾ ಸಮೇತರಾಗಿ ಬಂದು ಸೇರಿದರು. ಪಾಂಡವರು ಯುದ್ಧ ಸನ್ನಾಹ ಮಾಡುತ್ತಿರುವುದನ್ನು ಕೇಳಿ ದುರ್ಯೋಧನಾದಿಗಳು ತಮ್ಮ ಮಿತ್ರರಾಜರನ್ನೂ ಸೇನಾ ಸಮೇತರನ್ನಾಗಿ ಕರೆಯಿಸಿಕೊಂಡರು. ದ್ರುಪದರಾಯನು, ಧೃತರಾಷ್ಟ್ರನ ಬಳಿಗೆ ಹೋಗಿ ಆಡತಕ್ಕ ಮಾತುಗಳೆಲ್ಲವನ್ನೂ ತನ್ನ ಪುರೋಹಿತನಿಗೆ ಬೋಧಿಸಿ ಅವನನ್ನು ಹಸ್ತಿನಾಪುರಕ್ಕೆ ಕಳುಹಿಸಿದನು. ನೀತಿಶಾಸ್ತ್ರಾರ್ಥವನ್ನು ಬಲ್ಲ ಆ ಬ್ರಾಹ್ಮಣನು ಶಿಷ್ಯರೊಡಗೂಡಿ ಪಾಂಡವರ ಹಿತಾರ್ಥವಾಗಿ ಹಸ್ತಿನಾಪುರಕ್ಕೆ ಪ್ರಯಾಣಮಾಡಿದನು.

ಇತ್ತ ಅರ್ಜುನನು ಕೃಷ್ಣನ ದರ್ಶನಾರ್ಥವಾಗಿ ದ್ವಾರಕೆಗೆ ಹೊರಟನು. ಆ ವರ್ತಮಾನವನ್ನು ಕೇಳಿ ದುರ್ಯೋಧನನೂ ಕೃಷ್ಣನನ್ನು ಕಾಣುವ ಸಲುವಾಗಿ ಹೊರಟನು. ಇಬ್ಬರೂ ಏಕಕಾಲದಲ್ಲಿ ದ್ವಾರಕಾಪಟ್ಟಣವನ್ನು ಸೇರಿ ಕೃಷ್ಣನನ್ನು ನೋಡಹೋದರು. ಕೃಷ್ಣನು ನಿದ್ದೆಹೋಗುತ್ತಿರಲಾಗಿ ದುರ್ಯೋಧನನು ಅವನ ತಲೆಯ ದೆಸೆಯಲ್ಲಿಯೂ ಅರ್ಜುನನು ಅವನ ಕಾಲ ದೆಸೆಯಲ್ಲಿಯೂ ಕುಳಿತರು. ಕೃಷ್ಣನಿಗೆ ಎಚ್ಚರವಾಗುತಲೆ ಕೃಷ್ಣನು ಮೊದಲು ಅರ್ಜುನನನ್ನು ನೋಡಿ ಆಮೇಲೆ ದುರ್ಯೋಧನನನ್ನು ನೋಡಿದನು. ಕೃಷ್ಣನು ಅವರಿಬ್ಬರ ಯೋಗಕ್ಷೇಮವನ್ನು ವಿಚಾರಿಸಿ ಬಂದ ಕಾರ್ಯವೇನೆಂದು ಕೇಳಿದನು. ದುರ್ಯೋಧನನು "ಈಗ ಪ್ರಾಪ್ತವಾಗಿರುವ ಯುದ್ಧದಲ್ಲಿ ನಿಮ್ಮ ಸಾಹಾಯ್ಯವನ್ನು ಬೇಡಲು ಬಂದೆನು" ಎಂದನು.

ಅದಕ್ಕೆ ಕೃಷ್ಣನು—"ನನಗೆ ಸಖ್ಯದಲ್ಲಿ ನೀವಿಬ್ಬರೂ ಸಮ. ಆದರೆ ಚಿಕ್ಕವನ ಕೋರಿಕೆಯನ್ನು ಮೊದಲು ಕೇಳುವುದು ಧರ್ಮವಾದುದರಿಂದ ಅರ್ಜುನನ ಕೋರಿಕೆಯನ್ನು ಮೊದಲು ಕೇಳಿ ತಿಳಿದುಕೊಳ್ಳುವೆನು" ಎಂದು ನುಡಿದು, "ಅರ್ಜುನ! ರಣಪಟುವಾಗಿರುವ ನನ್ನ ನಾರಾಯಣೀ ಸೇನೆಯು ಆಯುಧಗಳನ್ನು ಧರಿಸಿ ಸಿದ್ಧವಾಗಿರುವುದು. ನಾನು ಅಸ್ತ್ರವನ್ನು ಧರಿಸೆನು, ಯುದ್ಧಮಾಡೆನು. ನಿನಗೆ ನನ್ನ ಸೇನೆಯು ಬೇಕೊ ನಾನು ಬೇಕೊ? ಹೇಳು" ಎಂದು ಕೇಳಿದನು.

ಆಗ ಅರ್ಜುನನು ಕೃಷ್ಣಬಲವೇ ಬಲವೆಂದು ಕೃಷ್ಣನನ್ನೂ, ದುರ್ಯೋ

ಧನನು ಸೇನಾಬಲವನ್ನು ನಚ್ಚಿ ಅವನ ದೊಡ್ಡ ದಂಡನ್ನೂ ವರಿಸಿ ಸಂತುಷ್ಟ ರಾಗಿ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು. ಅಹಂಕಾರಶೂನ್ಯನಾದ ಶ್ರೀ ಕೃಷ್ಣನು ಅರ್ಜುನನು ಕೇಳಿಕೊಂಡಂತೆ, ಅವನ ಸಾರಥಿಯಾಗುವುದಕ್ಕೂ ಒಪ್ಪಿದನು.

ಯುಧಿಷ್ಠಿರನ ಮಿತ್ರರಾಜರೆಲ್ಲರೂ ಸೇನಾಸಮೇತರಾಗಿ ಉಪಪ್ಲವ್ಯ ದಲ್ಲಿಯೂ ದುರ್ಯೋಧನನ ಮಿತ್ರರಾಜರು ತಮ್ಮ ಸೇನೆಗಳೊಡನೆ ಹಸ್ತಿನಾ ಪುರದಲ್ಲಿಯೂ ಬಂದಿಳಿದರು.

ಇತ್ತ, ದ್ರುಪದರಾಯನ ಪುರೋಹಿತನು ಹಸ್ತಿನಾಪುರವನ್ನು ಸೇರಿ, ರಾಜಸಭೆಗೆ ಹೋಗಿ, ಧೃತರಾಷ್ಟ್ರ ಭೀಷ್ಮ ವಿದುರರಿಂದ ಸತ್ಕಾರವನ್ನು ಪಡೆದು, ಕುಶಲಪ್ರಶ್ನೆಗಳಾದ ಬಳಿಕ, ಸಮಸ್ತ ಸೇನಾನಾಯಕರ ಸಮಕ್ಷ ದಲ್ಲಿ ದ್ರುಪದರಾಯನು ಹೇಳಿಕಳುಹಿಸಿದ ಮಾತನ್ನು ಇಂತೆಂದು ಅರಿಕೆ ಮಾಡಿದನು:—

"ಮಹಾಬಾಹುಗಳಿರಾ! ತಾವೆಲ್ಲರೂ ಸನಾತನ ರಾಜಧರ್ಮವನ್ನು ಬಲ್ಲವರು. ಧೃತರಾಷ್ಟ್ರನ ಮಕ್ಕಳೂ ಪಾಂಡುವಿನ ಮಕ್ಕಳೂ ಪಿತ್ರಾರ್ಜಿತ ಧನದಲ್ಲಿ ಸಮಭಾಗಸ್ಥರು. ಈ ಧನವನ್ನೆಲ್ಲ ಧೃತರಾಷ್ಟ್ರನ ಮಕ್ಕಳೇ ತೆಗೆದು ಕೊಂಡಿರುವರು; ಪಾಂಡುವಿನ ಮಕ್ಕಳಿಗೆ ಅವರ ಭಾಗವು ಬರಲಿಲ್ಲ. ಆ ಮಹಾತ್ಮರನ್ನು ಸಾಯಗೊಳಿಸುವ ವರೆಗೂ ಧಾರ್ತರಾಷ್ಟ್ರರು ಉಪಾಯ ಗಳನ್ನು ಮಾಡಿದರು; ಆಯುಃಶೇಷವಿದ್ದುದರಿಂದ ಅವರು ಉಳಿದುಕೊಂಡರು. ಮೇಲಾಗಿ, ಅವರು ತಮ್ಮ ಬಾಹುಬಲದಿಂದ ಸಂಪಾದಿಸಿದ ರಾಜ್ಯವನ್ನು ಕೂಡ ಆ ಕ್ಷುದ್ರ ದುರ್ಯೋಧನಾದಿಗಳು ಶಕುನಿಯ ಸಾಹಾಯ್ಯದಿಂದ ಮೋಸಮಾಡಿ ಅಪಹರಿಸಿದರು. ಪಾಂಡವವೀರರು ರಾಜಸಭೆಯಲ್ಲಿ ಪತ್ನಿ ಯೊಡನೆ ಹಲವುಬಗೆಯ ಅವಮಾನಗಳನ್ನೂ ಅರಣ್ಯವಾಸಾದಿ ನಾನಾ ಕ್ಲೇಶಗಳನ್ನೂ ಅನುಭವಿಸಿದರು. ಕುರುಪುಂಗವರೇ! ಹಿಂದೆ ಆದುದಾಯಿತೆಂದು ಧಾರ್ತರಾಷ್ಟ್ರರ ಕಿಲ್ಬಿಷಗಳೆಲ್ಲವನ್ನೂ ಮರೆತು, ಪಾಂಡವರು ಸಂಧಿಯನ್ನ ಪೇಕ್ಷಿಸುವರು. ಯುದ್ಧಮಾಡುವ ಸಲುವಾಗಿ ದುರ್ಯೋಧನಾದಿಗಳು ಕಾರಣ ಗಳನ್ನು ಹೇಳಿದರೂ ಅವು ಒಪ್ಪತಕ್ಕುವಲ್ಲ. ಸುಹೃಜ್ಜನರಾದ ನೀವು ಪಾಂಡ ವರ ನಡತೆಯನ್ನೂ ದುರ್ಯೋಧನನ ನಡತೆಯನ್ನೂ ಪರ್ಯಾಲೋಚಿಸಿ ಧೃತ ರಾಷ್ಟ್ರನ ಮಕ್ಕಳನ್ನು ಸಂಧಿಗೊಪ್ಪಿಸಬೇಕು. ಪಾಂಡವರು ವೀರರಾದರೂ ಕೌರವರೊಡನೆ ವಿಗ್ರಹವನ್ನು ಬಯಸರು. ಲೋಕಕ್ಕೆ ಹಾನಿಯಾಗದಂತೆಯೇ, ಪ್ರಾಣನಾಶವಾಗದಂತೆಯೇ, ಅವರು ತಮ್ಮ ಭಾಗವನ್ನು ಪಡೆಯ

ಬೇಕೆಂದಿರುವರು. ಪಾಂಡವರ ವಿಪುಲ ಸೇನೆ, ಅರ್ಜುನನ ಪ್ರತಾಪ, ಕೃಷ್ಣನ ಬುದ್ಧಿ—ಇವುಗಳ ಮುಂದೆ ಕಾಳೆಗಕ್ಕೆ ನಿಲ್ಲಬಲ್ಲ ಧೀರರುಂಟೆ? ಕೌರವರೇ! ನ್ಯಾಯವಾಗಿ ಪಾಂಡವರಿಗೆ ಸಲ್ಲಬೇಕಾದುದನ್ನು ಅವರಿಗೆ ಕೊಡಿಸಿಬಿಡಿರಿ; ಈ ಸಮಯವನ್ನು ಬಿಡಬೇಡಿರಿ."

ಪ್ರಾಜ್ಞನಾದ ಭೀಷ್ಮನು ಆ ಬ್ರಾಹ್ಮಣನು ಹೇಳಿದುದೆಲ್ಲವನ್ನೂ ಸಾವಧಾನವಾಗಿ ಕೇಳಿ—"ಕೃಷ್ಣೆಯ ಸಹಿತವಾಗಿ ಸರ್ವರೂ ಕ್ಷೇಮವಾಗಿರುವುದು ನಮ್ಮ ಭಾಗ್ಯವೇ ಸರಿ; ಅವರು ಸಾಹಾಯ್ಯ ಸಂಪನ್ನರಾಗಿರುವುದು ನಮ್ಮ ಭಾಗ್ಯವೇ ಸರಿ; ಅವರು ಧರ್ಮಮಾರ್ಗದಲ್ಲಿ ನಡೆಯುತ್ತಿರುವುದೂ ನಮ್ಮ ಪುಣ್ಯವೇ; ಅವರು ಯುದ್ಧಾಭಿಲಾಷೆಯನ್ನು ಬಿಟ್ಟು ಸಂಧಿಯನ್ನು ಬಯಸುತ್ತಿರುವುದೂ ನಮ್ಮ ಪುಣ್ಯವೇ. ನೀವು ಹೇಳುವುದೆಲ್ಲವೂ ಸತ್ಯವೇ ಆದರೂ, ನನ್ನ ಮನಸ್ಸಿಗೆ ನಿಮ್ಮ ವಾಕ್ಯ ಅತಿ ತೀಕ್ಷ್ಣವಾಗಿ ತೋರುವುದು. ನೀವು ಬ್ರಾಹ್ಮಣಸ್ವಭಾವ ವಶವರ್ತಿಗಳಾಗಿ ಹೀಗೆ ಮಾತನಾಡಿದಂತೆ ತೋರುತ್ತಿದೆ. ಅದು ಹೇಗಾದರೂ ಇರಲಿ, ಪಾಂಡವರು ರಾಜ್ಯವನ್ನು ಕೇಳುವುದೇನೋ ನ್ಯಾಯ; ಅವರು ಇಲ್ಲಿಯೂ ಕಾಡಿನಲ್ಲಿಯೂ ಕಷ್ಟಗಳನ್ನು ಅನುಭವಿಸಿದರು; ಅಜ್ಞಾತವಾಸದಲ್ಲಿ ಪಡಲಾರದ ಪಾಡುಪಟ್ಟರು; ಅವರು ಆಡಿದಂತೆ ನಡೆದರು. ಈಗ ಅವರು ರಾಜ್ಯಕ್ಕೆ ಅರ್ಹರೆಂಬುದಕ್ಕೆ ಅಣುಮಾತ್ರವೂ ಸಂದೇಹವಿಲ್ಲ. ಧನುರ್ಧಾರಿಯಾದ ಅರ್ಜುನನು ಬಲಶಾಲಿಯೆಂಬುದಕ್ಕೂ ಸಂಶಯವಿಲ್ಲ. ಅವನ ಪರಾಕ್ರಮದ ಮುಂದೆ ನಿಲ್ಲಬಲ್ಲ ಮಲ್ಲರು ಮೂರು ಲೋಕದಲ್ಲಿಯೂ ಇರರು. ಉಳಿದವರ ಮಾತು ಹೋಗಲಿ, ದೇವೇಂದ್ರನು ಕೂಡ ರಣಭೂಮಿಯಲ್ಲಿ ಅವನ ಮುಂದೆ ನಿಲ್ಲಲಾರನು" ಎಂದು ಪುರೋಹಿತನ ಮಾತನ್ನು ಅನುಮೋದಿಸಿ ಮಾತನಾಡಿದನು.

ಹೀಗೆ ಭೀಷ್ಮನು ಅರ್ಜುನನನ್ನು ಕೊಂಡಾಡಿದುದನ್ನು ದುರಾತ್ಮನಾದ ಕರ್ಣನು ಕೇಳಿ ಸಹಿಸಲಾರದೆ ಅವನ ಮಾತಿಗೆ ಅಡ್ಡಬಂದು—"ಎಲೈ ಬ್ರಾಹ್ಮಣನೇ! ನೀನು ಹೇಳಿದುದು ಯಾರಿಗೆ ತಾನೆ ತಿಳಿಯದು? ಹಾಡಿದುದನ್ನೇ ಹಾಡುತ್ತೀಯೆ. ಧರ್ಮರಾಯನು ದ್ಯೂತದಲ್ಲಿ ಸೋತು ವನವಾಸವನ್ನೂ ಅಜ್ಞಾತವಾಸವನ್ನೂ ಮಾಡಲೊಪ್ಪಿಕೊಂಡನು; ಒಪ್ಪಂದದ ಮೇರೆಗೆ ನಡೆಯದೆ ಅವನು ಅನ್ಯರ ಬಲವನ್ನು ಕಟ್ಟಿಕೊಂಡು ಮೂರ್ಖನೋಪಾದಿಯಲ್ಲಿ ಪೈತೃಕ ರಾಜ್ಯವನ್ನು ಕೇಳುತ್ತಾನೆ; ಅವನು ಬೆದರಿಸಿದ ಮಾತ್ರಕ್ಕೇ ದುರ್ಯೋಧನನು ಒಂದಡಿಯ ನೆಲವನ್ನೂ ಕೊಡನು; ಧರ್ಮಾರ್ಥವಾಗಿ ಬೇಡಿದರೆ ಸಮಸ್ತ ಭೂಮಂಡಲವನ್ನಾದರೂ ಕೊಡ

ಬಲ್ಲನು. ಅವರು ತಾತಮುತ್ತಾತಂದಿರ ರಾಜ್ಯವನ್ನು ಅಪೇಕ್ಷಿಸಿದಲ್ಲಿ ವನ ವಾಸಕಾಲವು ಪೂರೈಸಲಿ; ಆಮೇಲೆ ಬೇಕಾದರೆ ಅವರು ಬಂದು ದುರ್ಯೋಧನನ ಮರೆಯಲ್ಲಿ ಸುರಕ್ಷಿತವಾಗಿರಲಿ" ಎಂದು ನುಡಿದನು.

ಆ ಮಾತನ್ನು ಕೇಳಿ ಭೀಷ್ಮಪಿತಾಮಹನು—"ಕರ್ಣ! ಸುಮ್ಮನೆ ಏಕೆ ಮಾತನಾಡುತ್ತೀಯೆ? ಅರ್ಜುನನು ಒಬ್ಬನೇ ಆರ್ವರು ರಥಿಕರನ್ನು ಬಡಿದು ಕೆಡವಿದಾಗ ನೀನೆಲ್ಲಿದ್ದೆ? ಜ್ಞಾಪಿಸಿಕೊ. ಈ ಬ್ರಾಹ್ಮಣನು ಹೇಳಿದಂತೆ ನಡೆಯದೆ ಹೋದರೆ ದುರ್ಯೋಧನನು ತನ್ನ ಅಮಾತ್ಯರೊಡನೆ ನಾಶವಾಗುವುದೇನೋ ಸತ್ಯ" ಎಂದು ನುಡಿದು ಪುರೋಹಿತನು ನ್ಯಾಯಸಮ್ಮತವಾಗಿ ಆಡಿದ ಮಾತನ್ನು ಅನುಮೋದಿಸಿ ಅವನು ಅಸಂಗತವಾಗಿ ಆಡಿದ ನಿಷ್ಠುರ ವಾಕ್ಯವನ್ನು ಆಕ್ಷೇಪಿಸಿ, ತನ್ನ ಮಾತಿಗೆ ಅಡ್ಡಬಂದು ದೂತನನ್ನೂ ತನ್ನನ್ನೂ ತಿರಸ್ಕರಿಸಿ ಮಾತನಾಡಿದ ಕರ್ಣನ ಪೊಳ್ಳುಮಾತನ್ನು ನಿರ್ದಾಕ್ಷಿಣ್ಯವಾಗಿ ಎತ್ತಿಹಾಕಿದನು.

ಆಗ ಧೃತರಾಷ್ಟ್ರನು ಕರ್ಣನನ್ನು ಜರೆದು, ಭೀಷ್ಮನನ್ನು ಸಂತೈಸಿ— "ಭೀಷ್ಮನಾಡಿದ ಮಾತು ನಮಗೂ ಪಾಂಡವರಿಗೂ ಮಾತ್ರವೇ ಅಲ್ಲ, ಲೋಕಕ್ಕೂ ಹಿತಕರವಾದುದು, ನಾನು ಆಲೋಚಿಸಿ ಸಂಜಯನನ್ನು ಪಾಂಡವರ ಬಳಿಗೆ ಕಳುಹಿಸುವೆನು; ನೀವು ಊರಿಗೆ ಪಯಣಮಾಡಬಹುದು" ಎಂದು ಹೇಳಿ ಆ ಬ್ರಾಹ್ಮಣನನ್ನು ಕಳುಹಿಸಿಕೊಟ್ಟನು.

ಅನಂತರದಲ್ಲಿ ಧೃತರಾಷ್ಟ್ರನು ಸಂಜಯನನ್ನು ಕರೆಯಿಸಿ—"ಸಂಜಯ! ಪಾಂಡವರು ಉಪಪ್ಲವ್ಯದಲ್ಲಿ ಪಾಳೆಯ ಮಾಡಿರುವರು. ಅವರು ನಮ್ಮಿಂದ ಎಷ್ಟೋ ಹಿಂಸೆಪಟ್ಟರು; ಅವಮಾನವನ್ನೂ ಪಟ್ಟರು; ಆದರೂ ನಮ್ಮಲ್ಲಿ ಕ್ರೋಧವಿಡದೆ ಶಾಂತರಾಗಿರುವರು. ಅವರು ತಮ್ಮ ಸಂಪತ್ತನ್ನು ಸ್ವಬಲದಿಂದ ಸಂಪಾದಿಸಿದರು; ಆದರೂ ನನಗೆ ವಿಧೇಯರಾಗಿಯೇ ಇರುವರು. ದುರ್ಯೋಧನನೂ ಅವನಿಗಿಂತ ಅಲ್ಪನಾದ ಕರ್ಣನೂ ಅವರನ್ನು ದ್ವೇಷಿಸುವರೇ ಹೊರತು ಲೋಕದಲ್ಲಿ ಬೇರೆ ಯಾರೂ ಅವರನ್ನು ದ್ವೇಷಿಸರು. ದುರ್ಯೋಧನನು ಅವರ ಭಾಗವನ್ನು ದಕ್ಕಿಸಿಕೊಳ್ಳುವುದು ಶಕ್ಯವೆಂದೆಣಿಸುತ್ತಾನೆ; ಇದೊಂದು ಬಯಲಾಸೆ. ಯುದ್ಧಕ್ಕೆ ಮುಂದೆಯೇ ಅವರ ಭಾಗವನ್ನು ಅವರಿಗೆ ಬಿಟ್ಟುಬಿಡುವುದು ಲೇಸು. ಕೃಷ್ಣನು ಅರ್ಜುನನಿಗೆ ಸಾರಥಿಯಾಗುವನೆಂದು ಕೇಳುತ್ತೇನೆ. ಯುದ್ಧಕ್ಕೆ ಹೋಗದಿರುವುದೇ ಮಂದಬುದ್ಧಿ ದುರ್ಯೋಧನನಿಗೆ ಶ್ರೇಯಸ್ಕರವು. ಭೀಮಾರ್ಜುನರೂ ನಕುಲಸಹದೇವರೂ ಸಾಮಾನ್ಯರಲ್ಲ; ಆದರೂ ನಾನು ಧರ್ಮರಾಯನಿಗೆ ಹೆದರುವಷ್ಟು ಭೀಮಾ

ರ್ಜುನರಿಗೂ, ಕಡೆಗೆ, ಕೃಷ್ಣನಿಗೂ ಹೆದರನು. ಯುಧಿಷ್ಠಿರನು ಧರ್ಮಿಷ್ಠನು. ಮಹಾತಪಸ್ವಿ. ಬ್ರಹ್ಮಚರ್ಯನಿಷ್ಠನು. ಸಂಕಲ್ಪಮಾತ್ರದಿಂದಲೇ ಅವನ ಇಷ್ಟಾರ್ಥವು ನೆರವೇರುವುದು. ಸಂಜಯ! ನೀನು ಬೇಗ ಹೊರಡು. ಯುಧಿಷ್ಠಿರನನ್ನೂ ಕೃಷ್ಣನನ್ನೂ ಕಂಡು ಪಾಂಡವರ ಸಂಗಡ ನಾನು ಶಾಂತಿಯನ್ನು ಬಯಸುವೆನೆಂದು ತಿಳಿಸು. ಭರತಕುಲಕ್ಕೆ ಹಿತವಾಗುವಂತೆ ಯಾರಾರಿಗೆ ಯಾವಯಾವ ಸಮಯದಲ್ಲಿ ಏನೇನು ಹೇಳುವುದು ಉಚಿತವೋ ಅದನ್ನೆಲ್ಲವನ್ನೂ ಹೇಳು" ಎಂದನು.

ಧೃತರಾಷ್ಟ್ರನ ಆಜ್ಞೆಯ ಪ್ರಕಾರವಾಗಿ ಸಂಜಯನು ಉಪಪ್ಲವ್ಯಕ್ಕೆ ಹೋಗಿ ಕುರುರಾಯನ ಸಂದೇಶವನ್ನು ಪಾಂಡವರಿಗೆ ನಿರೂಪಿಸಲು, ಯುಧಿಷ್ಠಿರನು ಇಂತೆಂದು ನುಡಿದನು :—" ಸಂಜಯ! ನಾನು ಯುದ್ಧವನ್ನು ಅಪೇಕ್ಷಿಸುವೆನೆಂದು ಹೇಳಲಿಲ್ಲವಲ್ಲ. ಯುದ್ಧವಾಗುವುದಕ್ಕಿಂತ ಯುದ್ಧವಾಗದಿರುವುದು ಲೇಸು. ಮನುಷ್ಯನು ಶ್ರಮಪಡದೆಯೇ ಕೃತಾರ್ಥನಾಗುವ ಪಕ್ಷಕ್ಕೆ ಅವನು ಸುಲಭವಾದ ಕಾರ್ಯವನ್ನು ಕೂಡ ಮಾಡನು; ಇನ್ನು, ಯುದ್ಧಕ್ಕೆ ಹೋಗುವನೆ? ಕುಂತಿಯ ಮಕ್ಕಳು ಸುಖವನ್ನಪೇಕ್ಷಿಸುವುದೇನೋ ದಿಟ. ಆದರೆ ಅವರು ಮಾಡುವ ಕಾರ್ಯವೆಲ್ಲವೂ ಧರ್ಮಯುಕ್ತವಾದುದು, ಲೋಕಕ್ಕೆ ಹಿತಕರವಾದುದು, ಅವರು ಕೇವಲ ಧರ್ಮಸಮ್ಮತವಾದ ಸುಖವನ್ನು ಆಶಿಸುವರೇ ಹೊರತು ಬರಿಯ ಇಂದ್ರಿಯಸುಖವನ್ನು ಬಯಸುವರಲ್ಲ. ಧೃತರಾಷ್ಟ್ರನ ಮಹಾಂತವಾದ ಭೋಗವನ್ನು ನೋಡು, ನಮ್ಮ ಬದುಕನ್ನೂ ನೋಡು. ಆಸೆಯಿರುವಲ್ಲಿ ಸುಖವು ಬರುವುದೆ? ಅಷ್ಟು ಐಶ್ವರ್ಯವಿದ್ದರೂ ಧೃತರಾಷ್ಟ್ರನು ಏಕೆ ಗೋಳಿಡುತ್ತಾನೆ? ಅವನು ಮೂರ್ಖನಾದ ಮಗನ ಮಾತಿಗೆ ಕಿವಿಗೊಟ್ಟು ಯಾವಾಗ ಪ್ರಾಜ್ಞನಾದ ವಿದುರನ ಬುದ್ಧಿವಾದವನ್ನು ಕೇಳದೆ ಹೋದನೋ, ಆಗಲೇ ಕೌರವರು ಕೆಟ್ಟರು. ಈಗ ಅರ್ಥಲುಬ್ಧನಾದ ದುರ್ಯೋಧನನ ಮಂತ್ರಿಗಳು, ದುಃಶಾಸನ ಕರ್ಣ ಶಕುನಿಗಳೆಂಬ ತ್ರಿಮೂರ್ತಿಗಳು ತಾನೆ? ಇನ್ನು, ಕೌರವರಿಗೆ ಕ್ಷೇಮವೆಲ್ಲಿಯದು? ಧೃತರಾಷ್ಟ್ರನೂ ಅವನ ಮಗನೂ ನಿಷ್ಕಂಟಕವಾದ ಪೃಥ್ವೀಸಾಮ್ರಾಜ್ಯಕ್ಕೆ ಆಸೆಪಡುತ್ತಿದ್ದಾರೆ. ಸರ್ವಸ್ವವೂ ತಮ್ಮದೇ ಎನ್ನುವ ಲುಬ್ಧರಿಗೆ ನಿಷ್ಕಂಟಕ ರಾಜ್ಯವಾಗಲಿ, ಶಾಂತಿಯಾಗಲಿ ಎಲ್ಲಿಂದ ಬರುವುದು? ದುರ್ಯೋಧನನು ರಾಜ್ಯವನ್ನು ಹೇಗೆ ಸಂಪಾದಿಸಿದನೋ ಲೋಕಕ್ಕೇ ತಿಳಿಯುವುದು. ನಾನು ಹೇಳಬೇಕೆ? ಅವನು ಪಾಂಡವರದೆಲ್ಲವನ್ನೂ ದಕ್ಕಿಸಿಕೊಳ್ಳಬಹುದೆಂದೆಣಿಸುತ್ತಾನೆ. ಸಂಜಯ! ಸಿಂಹಶಾರ್ದೂಲಗಳಂತಿರುವ ಭೀಮಾರ್ಜುನರೂ ನಕುಲಸಹದೇವರೂ ಜೀವಿಸಿರುವ ವರೆಗೂ

ಇಂದ್ರನು ಕೂಡ ನಮ್ಮ ಐಶ್ವರ್ಯವನ್ನು ಅಪಹರಿಸುವ ಸಾಹಸ ಮಾಡನು. ನಾವು ಪಟ್ಟ ಕ್ಲೇಶವನ್ನೂ ನೀನು ಬಲ್ಲೆ; ನಾವು ದುರ್ಯೋಧನನ ವಿಷಯ ದಲ್ಲಿ ಹೇಗೆ ನಡೆದುಕೊಂಡೆವೋ ಅದನ್ನೂ ಬಲ್ಲೆ. ನಿನ್ನ ಮೇಲೆ ನಮಗಿರುವ ಗೌರವದಿಂದ ಅವರನ್ನು ಕ್ಷಮಿಸುವೆನು. ಈಗಲೂ ಅವರು ಪೂರ್ವದಂತೆಯೇ ನಡೆಯುತ್ತಿರುವರು. ಆದರೂ ನೀನು ಹೇಳಿದಂತೆಯೇ ಆಗಲಿ, ಭರತಕುಲಾಗ್ರಣಿ ಯಾದ ಸುಯೋಧನನು ನನ್ನ ಇಂದ್ರಪ್ರಸ್ಥವನ್ನು ನನಗೆ ಕೊಡಲಿ.''

ಆ ಮಾತಿಗೆ ಸಂಜಯನು—"ಪಾಂಡವ ನೀನು ಧರ್ಮನಿಷ್ಠನೆಂಬುದು ಲೋಕವೆಲ್ಲವೂ ಕೇಳಿಬಲ್ಲುದು. ಈಗ ನಾನು ಕಣ್ಣಿಂದ ನೋಡುತ್ತಿರುವೆನು. ಎಲೈ ಅಜಾತಶತ್ರುವೇ! ಕೌರವರು ನಿನ್ನ ಭಾಗವನ್ನು ಕೊಡದೆ ಹೋದರೂ ಚಿಂತೆಯಿಲ್ಲ; ನೀನು ಅವರ ಸಂಗಡ ಯುದ್ಧಕ್ಕೆ ಮಟ್ಟಿಗೆ ಹೋಗದಿರು. ಯುದ್ಧಮಾಡಿ ರಾಜ್ಯವನ್ನು ಸಾಧಿಸುವುದಕ್ಕಿಂತ ಭಿಕ್ಷಾಟನವೇ ಶ್ರೇಯಸ್ಕರ ವೆಂದು ನನಗೆ ತೋರುವುದು. ನೀನು ಪ್ರಾಜ್ಞನು, ಧರ್ಮಿಷ್ಠನು, ಈ ವರೆಗೂ ಕಾಮಕ್ರೋಧಗಳಿಗೆ ವಶನಾಗಿ ಯಾವ ಪಾಪಕರ್ಮವನ್ನೂ ಮಾಡಿದವನಲ್ಲ; ಈಗ ನೀನೇಕೆ ಅಂತಹ ಕಾರ್ಯಕ್ಕೆ ಕೈಹಾಕುತ್ತೀಯೆ? ಸೈರಣೆಯನ್ನು ತಂದುಕೊ. ನೀನು ಕ್ರೋಧದಿಂದ ಯುದ್ಧಕ್ಕೆ ಹೋದರೆ ಭೀಷ್ಮದ್ರೋಣರು ಮೊದಲಾದ ಹಿರಿಯರೂ ನಂಟರೂ ಇಷ್ಟರೂ ಹತರಾಗರೆ? ಅವರೆಲ್ಲರೂ ಹೋದಮೇಲೆ ಸಾಗರಾಂತ ಪೃಥ್ವಿಯ ಸಾಮ್ರಾಜ್ಯವನ್ನು ಗೆದ್ದರೂ ನಿನಗೇನು ಸುಖ? ಯುದ್ಧದಿಂದ ಘೋರ ನರಹತ್ಯವಾಗುವುದು. ಕ್ಷಮೆಯನ್ನು ಅವ ಲಂಬಿಸು. ಯುದ್ಧವನ್ನು ಮಾಡೆಂದು ನಿನ್ನ ಮಂತ್ರಿಗಳು ನಿನ್ನನ್ನು ಕಾಡಿಸಿ ದರೆ ಸರ್ವಸ್ವವನ್ನೂ ಅವರಿಗೊಪ್ಪಿಸಿ ಹೊರಟುಹೋಗು'' ಎಂದು ಯುದ್ಧ ವನ್ನು ನಿಂದಿಸಿ ಕ್ಷಾಂತಿಯನ್ನು ಶ್ಲಾಘಿಸಿದನು.

ಧರ್ಮರಾಯನು—"ಸಂಜಯ! ಧರ್ಮವೇ ಶ್ರೇಷ್ಠವೆಂದು ನೀನು ಹೇಳು ವುದು ಸತ್ಯವೇ ಸರಿ; ಆದರೂ ಯಾವುದು ಧರ್ಮವೋ ಯಾವುದು ಅಧರ್ಮವೋ ಎಲ್ಲ ಸಮಯಗಳಲ್ಲಿಯೂ ತಿಳಿಯುವುದು ಕಷ್ಟ. ಸಾಮಾನ್ಯ ವಾಗಿ ಆಯಾ ವರ್ಣದವರು ಅವರವರ ಧರ್ಮವನ್ನು ಆಚರಿಸಬೇಕು. ಆದರೆ ಆಪತ್ಕಾಲದಲ್ಲಿ ಧರ್ಮಗಳು ವ್ಯತ್ಯಸ್ತವಾಗುವುದು. ಸಾಮಾನ್ಯಕಾಲದಲ್ಲಿ ನಿತ್ಯಧರ್ಮವನ್ನು ಬಿಡುವರೂ ಆಪತ್ಕಾಲದಲ್ಲಿ ಆಪದ್ಧರ್ಮವನ್ನು ಬಿಡುವರೂ ಇಬ್ಬರೂ ಮೂರ್ಖರೆ. ಸಂಜಯ! ಪೃಥ್ವಿಯಲ್ಲಿ ಎಷ್ಟೇ ಧನವಿದ್ದರೂ ನಾನು ಅದನ್ನು ಅಧರ್ಮದಿಂದ ಸಂಪಾದಿಸಲು ಆಶಿಸುವನಲ್ಲ. ಅಷ್ಟೇಕೆ? ಕೃಷ್ಣನು ಇಲ್ಲಿಯೇ ಇರುವನು. ಅವನು ಧರ್ಮೇಶ್ವರನು, ಕುಶಲನು, ನೀತಿಶಾಸ್ತ್ರವನ್ನು

ಬಲ್ಲವನು, ಬ್ರಾಹ್ಮಣರನ್ನು ಉಪಾಸಿಸುವನು. ಅವನನ್ನು ಕೇಳೋಣ; ನಾನು ಸಾಮೋಪಾಯಕ್ಕೊಡಂಬಡದಿದ್ದರೆ ನಿಂದ್ಯನಾಗುವೆನು, ಯುದ್ಧ ಮಾಡಲೊಡಂಬಡದಿದ್ದರೆ ಸ್ವಧರ್ಮಭ್ರಷ್ಟನಾಗುವೆನು; ಹೀಗಿರುವಲ್ಲಿ ಉತ್ತಮ ಪಕ್ಷವಾವುದು? ಶ್ರೀಕೃಷ್ಣನು ಹೇಳಲಿ. ಅನೇಕ ರಾಜಾಧಿರಾಜರು ಅವನ ಬುದ್ಧಿವಾದವನ್ನು ಕೈಕೊಂಡು ಶತ್ರುಗಳನ್ನು ನಿಗ್ರಹಿಸಿ ಮಿತ್ರರನ್ನು ಸಂತೋಷಪಡಿಸಿರುವರು. ಕಾರ್ಯಾಕಾರ್ಯಗಳನ್ನು ನಿಶ್ಚಯಿಸಿ ಹೇಳುವುದರಲ್ಲಿ ಅವನಿಗಿಂತ ಸಮರ್ಥರಿಲ್ಲ; ಅವನು ನಮಗೆ ಪ್ರಿಯನು; ಉಭಯಪಕ್ಷಕ್ಕೂ ಹಿತವನ್ನು ಕೋರುವನು; ಅವನ ಮಾತನ್ನು ನಾನೆಂದಿಗೂ ಮೀರೆನು" ಎಂದನು.

ಆ ಮಾತಿಗೆ ಕೃಷ್ಣನು ಇಂತೆಂದನು:—"ಸಂಜಯ! ನಾನು ಪಾಂಡವರಿಗೆ ವಿನಾಶವನ್ನೆಂದಿಗೂ ಕೋರೆನು; ಅಷ್ಟೇ ಅಲ್ಲ, ಅವರು ಐಶ್ವರ್ಯವಂತರಾಗಿ ತಮ್ಮ ಇಷ್ಟಾರ್ಥಗಳೆಲ್ಲವನ್ನೂ ಪಡೆಯಲೆಂದೂ ಕೋರುವೆನು; ಸೂತ! ಹಾಗೆಯೇ ಬಹುಪುತ್ರವಂತನಾದ ಧೃತರಾಷ್ಟ್ರನ ವೃದ್ಧಿಯನ್ನೂ ಬಯಸುವೆನು. ಸಂಧಿಯ ಮಾತನ್ನು ಬಿಟ್ಟು ಬೇರೆ ಯಾವುದನ್ನೂ ಅವರಿಗೆ ಹೇಳೆನು. ಸಂಧಿಯು ಧೃತರಾಷ್ಟ್ರರಾಯನಿಗೆ ಇಷ್ಟವೆಂದು ನೀನು ಹೇಳುತ್ತೀಯೆ; ಅದು ಪಾಂಡವರಿಗೂ ಇಷ್ಟವೇ. ಸಂಜಯ! ಇನ್ನು ಪಾಂಡುಪುತ್ರನ ಶಮೋಗುಣಕ್ಕಿಂತಲೆ? ಧೃತರಾಷ್ಟ್ರನೂ ಅವನ ಮಕ್ಕಳೂ ದುರಾಸೆಯುಳ್ಳವರು; ಇನ್ನು ಕಲಹವಾಗದಿರುವುದು ಹೇಗೆ? ಧರ್ಮರಾಯನು ಯುದ್ಧಕ್ಕೆ ಹೋಗುವುದು ದೋಷವೆ? ಬ್ರಾಹ್ಮಣಾದಿ ನಾಲ್ಕು ವರ್ಣದವರೂ ತಂತಮ್ಮ ಕರ್ತವ್ಯಕರ್ಮಗಳನ್ನು ಮಾಡುವುದು ಅಧರ್ಮವೆ? ಜಗತ್ತೆಲ್ಲವೂ ಕರ್ಮದಿಂದಲೇ ನಡೆಯುತ್ತಿರುವುದು. ಈ ಲೋಕಧರ್ಮವನ್ನು ಬಲ್ಲವನಾದರೂ ಧೃತರಾಷ್ಟ್ರನ ಮಕ್ಕಳ ನಲುವಾಗಿ ನೀನು ಪಕ್ಷಪಾತಬುದ್ಧಿಯಿಂದ ಯುದ್ಧವು ಕೂಡದೆನ್ನುವುದು ಸರಿಯೆ? ಕೌರವರ ವಧೆಯನ್ನು ಬಿಟ್ಟು ಬೇರೆ ಯಾವ ಉಪಾಯದಿಂದಾದರೂ ಅವರು ರಾಜ್ಯವನ್ನು ಸಾಧಿಸಬಹುದಾದರೆ ಅವರು ಆ ಉಪಾಯವನ್ನು ಅವಲಂಬಿಸದೆ ಹೋಗರು. ಅದರಿಂದ ಧರ್ಮವೂ ಉಳಿಯುವುದು, ಪುಣ್ಯವೂ ಬರುವುದು. ಅಂತಹ ಉಪಾಯವು ಇಲ್ಲದ ಪಕ್ಷದಲ್ಲಿ ಕ್ಷತ್ರಿಯಧರ್ಮವನ್ನು ಅವಲಂಬಿಸಿ ಯಥಾಶಕ್ತಿ ಯುದ್ಧ ಮಾಡುವುದೇ ಕ್ಷತ್ರಿಯನ ಕರ್ತವ್ಯ. ಅದರಿಂದ ಮರಣವು ಪ್ರಾಪ್ತವಾದರೆ, ಅದೂ ಶ್ಲಾಘ್ಯವೇ. ಒಳ್ಳೆಯದು, ನೀನು ಸಾಮವೊಂದೇ ಒಪ್ಪತಕ್ಕದು ಎನ್ನುವೆಯೋ? ಹಾಗಾದರೆ, ಕ್ಷತ್ರಿಯರು ಯುದ್ಧಮಾಡುವುದು ಧರ್ಮ

ತಂತ್ರವೋ, ಯುದ್ಧಮಾಡದಿರುವುದು ಧರ್ಮತಂತ್ರವೋ ಹೇಳು. ನೀನು ಮೊದಲು ಚಾತುರ್ವರ್ಣ್ಯಸಂವಿಭಾಗವನ್ನೂ ಆಯಾ ವರ್ಣದ ಕರ್ಮವನ್ನೂ ಪರ್ಯಾಲೋಚಿಸಿ ಆಮೇಲೆ ನಿನ್ನ ಇಷ್ಟಬಂದಂತೆ ಪಾಂಡವರನ್ನು ದೂಷಿಸು, ಇಲ್ಲವೆ ಭೂಷಿಸು. ಧರ್ಮದಿಂದ ಪ್ರಜಾರಕ್ಷಣೆ ಮಾಡುವುದೇ ಕ್ಷತ್ರಿಯ ಧರ್ಮ. ಯಾವಾಗ ರಾಜರು ಬಲಿಷ್ಠರಾಗಿ ಅನ್ಯರ ಐಶ್ವರ್ಯಕ್ಕೆ ಆಸೆಬಿದ್ದು ಸರಹಿಂಸಕರಾಗುವರೋ ಆಗ ರಾಜರಿಗೆ ಪರಸ್ಪರ ಯುದ್ಧವು ಅವಶ್ಯಂಭಾವಿ. ಆಗ ಅಸ್ತ್ರಶಸ್ತ್ರಗಳೆಲ್ಲವೂ ನಿರ್ಮಿತವಾಗುವುವು. ಕೌರವರು ಅಧರ್ಮವನ್ನು ಆಚರಿಸಿದುದರಿಂದ ಈಗ ಆ ಅನಿಷ್ಟವು ಪ್ರಾಪ್ತವಾಗಿದೆ. ಧೃತರಾಷ್ಟ್ರನೂ ಅವನ ಮಗನೂ ಪಾಂಡವರಿಗೆ ನ್ಯಾಯವಾಗಿ ಸಲ್ಲತಕ್ಕುದೆಲ್ಲವನ್ನೂ ಅಪಹರಿಸಿರುವರು. ದುರ್ಯೋಧನನು ರಾಜಧರ್ಮವನ್ನು ಉಲ್ಲಂಘಿಸಿರುವನು. ಕೌರವರೆಲ್ಲರೂ ಅವನ ಮಾರ್ಗವನ್ನೇ ಹಿಡಿದುಹೋಗುತ್ತಿರುವರು. ಸಂಜಯ! ಯಾರೂ ಕಾಣದಂತೆ ಧನವನ್ನು ಹೊತ್ತುಹಾಕುವ ಕಳ್ಳನೂ, ಎಲ್ಲರೂ ಕಾಣುವಂತೆ ಹಗಲೇ ಬಲ್ಪಿನಿಂದ ಧನವನ್ನು ಅಪಹರಿಸುವ ಕಳ್ಳನೂ ಇಬ್ಬರೂ ಅಪರಾಧಿಗಳೇ; ಇಬ್ಬರೂ ದಂಡನೆಗೆ ಅರ್ಹರೇ. ಅವರನ್ನು ದಂಡಿಸುವುದು ಪುಣ್ಯವೇ ಹೊರತು ಪಾಪವಲ್ಲ. ಅವರ ಕಡಿಮೆ ಏನು? ದುರ್ಯೋಧನನ ಹೆಚ್ಚೇನು? ಆ ಮೂರ್ಖನು ಪಾಂಡವರ ಸೊತ್ತನ್ನು ಅಪಹರಿಸಿರುವನು. ಪರರಾಜ್ಯವನ್ನು ಅಪಹರಿಸುವುದಕ್ಕಿಂತಲೂ ಅನ್ಯಾಕ್ರಾಂತವಾದ ತಮ್ಮ ಪೈತೃಕ ರಾಜ್ಯವನ್ನು ಬರಮಾಡಿಕೊಳ್ಳುವುದು ಪಾಪವೇ? ಅದಕ್ಕಾಗಿ ಯುದ್ಧಮಾಡಿ ಸಾಯುವುದೂ ಪುಣ್ಯವಲ್ಲವೆ? ಸಂಜಯ! ಸಭಾಮಧ್ಯದಲ್ಲಿ ದುಃಶಾಸನನು ದ್ರೌಪದಿಯ ವಿಷಯದಲ್ಲಿ ನಡೆದ ನಡತೆ ಎಂತಹುದು ಯೋಚಿಸು. ಅದನ್ನು ಕಣ್ಣಾರೆ ನೋಡುತ್ತ ಭೀಷ್ಮ ಮುಖ್ಯರಾದ ಕೌರವರೆಲ್ಲರೂ ಏಕೆ ಸುಮ್ಮನಿದ್ದರು? ಆಗ ನೀನು ಧರ್ಮದ ಮಾತನ್ನೇ ಎತ್ತದೆ ಈಗ ಪಾಂಡುಪುತ್ರರಿಗೆ ಧರ್ಮೋಪದೇಶವನ್ನು ಮಾಡುವುದಕ್ಕೆ ಬಂದೆಯಾ? ಇದು ಸರಿಯೆ? ಒಳ್ಳೆಯದು, ನಾನೇ ಹೋಗಿ ಈ ವಿಷಯವನ್ನು ಕುರಿತು ಕೌರವರ ಸಂಗಡ ಮಾತನಾಡಿ ಬರುವೆನು. ಕುರುಪಾಂಡವರಿಬ್ಬರಿಗೂ ಸಾಮೋಪಾಯದಿಂದ ಸಂಧಿಮಾಡಿಸಿದಲ್ಲಿ ನಾನೊಂದು ಪುಣ್ಯಕಾರ್ಯವನ್ನು ಮಾಡಿದಂತಾಗುವುದು; ಅಲ್ಲದೆ, ಸರ್ವರೂ ಸುಖವಾಗಿರುವಂತೆಯೂ ಆಗುವುದು; ಕೌರವರನ್ನು ಮೃತ್ಯುಪಾಶದಿಂದ ಬಿಡಿಸಿದಂತೆಯೂ ಆಗುವುದು. ಕುಂತಿಯ ಮಕ್ಕಳಂತು ಧೃತರಾಷ್ಟ್ರನ ಆಜ್ಞೆಯಂತೆ ನಡೆಯುವುದಕ್ಕೆ ಸಿದ್ಧರಾಗಿರುವರು; ಅವರ ಜ್ಞಾತಿಗಳಾದರೋ ಕದನಕ್ಕೆ ಕಾಯ್ದಿರುವರು.

ಮಹಾತ್ಮರೂ ಧರ್ಮಚಾರಿಗಳೂ ಆದ ಪಾಂಡವರು ಯುದ್ಧಮಾಡುವುದಕ್ಕೆ ಸಮರ್ಥರಾಗಿದ್ದರೂ ಕೌರವರಲ್ಲಿ ಶಾಂತಭಾವದಿಂದಲೇ ನಡೆದುಕೊಳ್ಳುತ್ತಿರುವರು. ಇದೆಲ್ಲವನ್ನೂ ಧೃತರಾಷ್ಟ್ರನಿಗೆ ತಿಳಿಸು. ಆಮೇಲೆ ಅವನಿಗೆ ಹೇಗೆ ತೋರಿದರೆ ಹಾಗೆ ಮಾಡಲಿ."

ಸಂಜಯನು ಯುಧಿಷ್ಠಿರಾದಿಗಳನ್ನು ಕಂಡು ಉಪಚಾರೋಕ್ತಿಗಳನ್ನಾಡಿ ಬೀಳ್ಕೊಳ್ಳುವಾಗ ಯುಧಿಷ್ಠಿರನು ಭೀಷ್ಮನೇ ಆದಿಯಾಗಿ ದಾಸದಾಸಿಯರ ಪರ್ಯಂತ ಸರ್ವರಿಗೂ ಯಥಾಯೋಗ್ಯವಾಗಿ ವಂದನಾದಿಪೂರ್ವಕ ತಮ್ಮೆಲ್ಲರ ಕುಶಲವನ್ನೂ ತಿಳಿಸುವಂತೆ ಹೇಳಿ, ಮೂರ್ಖನೂ ಶಠನೂ, ಪಾಪಶೀಲನೂ ಆದ ದುರ್ಯೋಧನನಿಗೆ ಇಂತೆಂದು ಹೇಳಿದನು :—

"ಧರ್ಮವೇ ಸತ್ಯ. ನನ್ನ ಶತ್ರುಗಳನ್ನು ನಿಗ್ರಹಿಸುವುದಕ್ಕೆ ನನಗಿರುವ ಬಲವೂ ಧರ್ಮವೇ. ನಾವಿರುವಲ್ಲಿ ಕುರುರಾಜ್ಯವೆಲ್ಲವನ್ನೂ ನಿರುಪದ್ರವವಾಗಿ ನೀನೊಬ್ಬನೇ ಆಳಬೇಕೆಂಬುದು ದುರಾಸೆಯೇ ಹೊರತು ಬೇರೆಯಲ್ಲ. ಅದೆಂದಿಗೂ ಸಾಧ್ಯವಾಗಲಾರದು. ನಾವೆಂತೂ ನಿನಗೆ ಅಪ್ರಿಯವಾದುದನ್ನು ಮಾಡೆವು. ಭಾರತ ಮುಖ್ಯವೀರನೆ! ನನ್ನ ಇಂದ್ರಪ್ರಸ್ಥವನ್ನು ನನಗೆ ಕೊಡು, ಇಲ್ಲವೆ ಯುದ್ಧಕ್ಕೆ ಬಾ."

ಇದಲ್ಲದೆ ಅವನು ಕುರುರಾಯನು ಪರಿವಾರಸಮೇತನಾಗಿರುವಾಗ ಅವನಿಗೆ ಅಭಿವಾದನಪೂರ್ವಕವಾಗಿ ಈ ವಿಜ್ಞಾಪನೆಯನ್ನು ತಿಳಿಸೆಂದನು: "ಮಹಾರಾಜನೇ! ನಿನ್ನ ಪ್ರಭಾವದಿಂದ ಪಾಂಡವರು ಸುಖವಾಗಿ ಜೀವಿಸಿರುವರು. ನಿನ್ನ ಅನುಗ್ರಹದಿಂದ ಆ ಹುಡುಗರಿಗೆ ರಾಜ್ಯವು ಪ್ರಾಪ್ತವಾಗಿದ್ದಿತು. ಮೊದಲು ಅವರನ್ನು ರಾಜ್ಯದಲ್ಲಿ ನೆಲೆಗೊಳಿಸಿ ಈಗ ಅವರನ್ನು ಕೈಬಿಡಬೇಡ; ನೀನು ಉಪೇಕ್ಷಿಸಿದಲ್ಲಿ ಅವರು ಕೆಡುವರು. ಈ ರಾಜ್ಯವೆಲ್ಲವೂ ಒಬ್ಬನಿಗೇ ಅಲ್ಲ, ಇಬ್ಬರಿಗೂ ಸೇರಿದುದು. ಅಯ್ಯಾ! ನಾವು ಒಂದಾಗಿ ಬದುಕಬೇಕೆಂದು ಇಚ್ಛೈಸುವೆವು; ಶತ್ರುಗಳ ವಶವಾಗಬೇಡ."

ಹಾಗೆಯೇ, ಅವನು ಭಾರತ ಪಿತಾಮಹ ಭೀಷ್ಮನಿಗೆ ನಮಸ್ಕಾರಪೂರ್ವಕವಾಗಿ ಇಂತೆಂದು ಅರಿಕೆಮಾಡೆಂದನು :—"ಮುಳುಗಿಹೋಗಿದ್ದ ಶಂತನು ವಂಶವನ್ನು ತಾವು ಉದ್ಧಾರಮಾಡಿದಿರಿ. ತಾತ! ನಿಮ್ಮ ಮೊಮ್ಮಕ್ಕಳು ಪರಸ್ಪರ ಪ್ರೀತಿವಂತರಾಗಿರುವ ಹಾಗೆ ಮಾಡಿರಿ!"

ಹಾಗೆಯೇ, ಅವನು ಕೌರವರಿಗೆ ಮಂತ್ರಧಾರಿಯಾದ ವಿದುರನಿಗೆ—"ಸೌಮ್ಯನೇ! ಯುಧಿಷ್ಠಿರನ ಹಿತವನ್ನು ಕೋರಿ ಸಂಧಿಯಾಗುವಂತೆ ಮಾಡು" ಎಂದು ಹೇಳಿಕಳುಹಿಸಿದನು.

ಆಮೇಲೆ, ಅವನು ದುರ್ಯೋಧನನು ಕೌರವರ ಸಮೂಹದಲ್ಲಿ ಕುಳಿತಿರುವಾಗ ಆತನನ್ನು ತಾನು ಮರಳಿ ಮರಳಿ ಬೇಡಿಕೊಂಡೆನೆಂದು ಆ ಕೋಪಿಷ್ಠನಿಗೆ ಈ ಮಾತನ್ನು ತಿಳಿಸೆಂದನು—"ನಾವು ಬಲಿಷ್ಠರಾದರೂ ನಿಮ್ಮನ್ನು ಕೊಲ್ಲಲೊಲ್ಲದೆ, ನೀವು ಪಡಿಸಿದ ಕಷ್ಟಗಳೆಲ್ಲವನ್ನೂ ಅನುಭವಿಸಿದೆವು; ನೀವು ಮಾಡಿದ ಅವಮಾನಗಳೆಲ್ಲವನ್ನೂ ಸಹಿಸಿದೆವು. ಆದುದಾಗಿಹೋಯಿತು. ಅವೆಲ್ಲವನ್ನೂ ಮರೆತುಬಿಡುವೆವು. ನೀನು ಹೆರರ ಸೊತ್ತನ್ನು ದಕ್ಕಿಸಿಕೊಳ್ಳಬೇಕೆಂಬ ದುರಾಸೆಯನ್ನು ಬಿಟ್ಟರೆ ನಮ್ಮೊಳಗೆ ಶಾಂತಿಯೂ ಪ್ರೀತಿಯೂ ಹುಟ್ಟುವುವು. ನಾವೆಂತೂ ಶಾಂತಿಯನ್ನು ಬಯಸುತ್ತಿರುವೆವು. ಸುಯೋಧನ! ಕಡೆಗೆ ನಿನ್ನ ಐವರು ಅಣ್ಣತಮ್ಮಂದಿರಿಗೆ ಐದು ಗ್ರಾಮಗಳನ್ನು ಕೊಟ್ಟರೂ ಸಾಕು; ಅಲ್ಲಿಗೆ ನಮ್ಮ ವ್ಯಾಜ್ಯವು ಹರಿಯುವುದು. ನಾನು ಸಂಧಿಗೂ ಸಿದ್ಧನಾಗಿರುವೆನು, ಯುದ್ಧಕ್ಕೂ ಸಿದ್ಧನಾಗಿರುವೆನು; ಧರ್ಮವನ್ನೂ ಆರ್ಜಿಸಬಲ್ಲೆನು, ಧನವನ್ನೂ ಆರ್ಜಿಸಬಲ್ಲೆನು; ಸಮಯೋಚಿತವಾಗಿ ಮೃದುವಾಗಿಯೂ ಇರಬಲ್ಲೆನು, ಕಠಿನವಾಗಿಯೂ ಇರಬಲ್ಲೆನು."

ಸಂಜಯನು ಯುಧಿಷ್ಠಿರಾದಿಗಳನ್ನು ಬೀಳ್ಕೊಂಡು ಹಸ್ತಿನಾಪುರಕ್ಕೆ ಬಂದು ಆ ದಿನ ರಾತ್ರಿಯೇ ಧೃತರಾಷ್ಟ್ರನ ಬಳಿಗೆ ಹೋಗಿ ಯುಧಿಷ್ಠಿರನ ಕುಶಲಪ್ರಶ್ನಾದಿಗಳನ್ನು ಅರಿಕೆಮಾಡಿ, "ನೀನು ಸಂಧಿಗೊಪ್ಪದೆಹೋದರೆ ಅರ್ಜುನನು ಕೌರವರೆಲ್ಲರನ್ನೂ ಸುಟ್ಟುಬಿಡುವನು. ನಿನ್ನ ದೋಷದಿಂದಲೇ ಈ ಅನರ್ಥವು ಸಂಭವಿಸಿದಂತಾಗುವುದು" ಎಂದು ಧೃತರಾಷ್ಟ್ರನನ್ನು ನಿಂದಿಸಿ, ಆ ದಿವಸ ಮನೆಗೆ ಹೊರಟುಹೋದನು.

ಆ ಮಾತನ್ನು ಕೇಳಿದಾಗಲಿಂದ ಧೃತರಾಷ್ಟ್ರನು ತನ್ನ ಮಕ್ಕಳಿಗೆ ಕೇಡುಗಾಲ ಬಂದಿತೆಂದು ತೊಳಲಿಬಳಲಿದನು. ತಾನೂ ತನ್ನ ಮಕ್ಕಳೂ ಪಾಂಡವರಿಗೆ ಮಾಡಿದ ಅನ್ಯಾಯಗಳನ್ನು ಸ್ಮರಿಸುತ್ತ ಯುಧಿಷ್ಠಿರನ ಧರ್ಮಪರಾಯಣತೆಯನ್ನೂ, ಭೀಮಾರ್ಜುನರ ಶೌರ್ಯವನ್ನೂ ನೆನೆದು ಕಾತರಿಸುತ್ತ ವಿದುರನೊಡನೆ, "ವಿದುರ! ಸಂಜಯನು ಬಂದಾಗಲಿಂದ ಏನು ಸಮಾಚಾರವನ್ನು ತಂದಿರುವನೋ ತಿಳಿಯದೆ ತಪಿಸುತ್ತಿರುವೆನು; ನಿದ್ದೆಯೂ ಬಾರದು; ಏನ ಮಾಡಬೇಕೊ ತಿಳಿಯದು" ಎಂದನು.

ಪ್ರಾಜ್ಞನಾದ ವಿದುರನು ಅದಕ್ಕಿಂತೆಂದು ಹೇಳಿದನು:—"ಚೋರನು, ಕಾಮಾತುರನು, ಧನವನ್ನು ಕಳೆದುಕೊಂಡವನು, ಸಾಧನಹೀನನು, ಪ್ರಬಲನಿಂದ ಪೀಡಿತನಾದ ದುರ್ಬಲನು—ಇವರಾರಿಗೂ ನಿದ್ದೆ ಹತ್ತದು. ನರಾಧಿಪನೇ!

ಈ ದೋಷಗಳಲ್ಲಿ ಯಾವುದೂ ನಿನ್ನನ್ನು ಸೋಕಿಲ್ಲವಲ್ಲ? ಪರವಿತ್ತದ ಮೇಲಣ ಆಸೆಯು ನಿನ್ನನ್ನು ಬಾಧಿಸುವುದಿಲ್ಲವಲ್ಲ?" ಎಂದು ನುಡಿದು ಧೃತರಾಷ್ಟ್ರನ ಇಂಗಿತವನ್ನರಿತು, ಅನೇಕ ದೃಷ್ಟಾಂತಗಳ ಮೂಲಕವಾಗಿ ನೀತಿಯನ್ನು ಹೇಳಿ ಕಡೆಗೆ ಇಂತೆಂದು ಹಿತೋಪದೇಶವನ್ನು ಮಾಡಿದನು:—

"ಮಹಾರಾಜನೇ! ಪಾಂಡುಪುತ್ರರನ್ನು ನೀನೇ ಬೆಳೆಯಿಸಿದೆ; ನೀನೇ ಬುದ್ಧಿವಂತರನ್ನಾಗಿ ಮಾಡಿದೆ; ಅವರು ಈಗಲೂ ನಿನ್ನ ಆಜ್ಞೆಯಲ್ಲಿಯೇ ಇರುವರು. ಅವರಿಗೆ ನ್ಯಾಯವಾಗಿ ಸಲ್ಲಬೇಕಾದಷ್ಟು ರಾಜ್ಯವನ್ನು ಕೊಟ್ಟು ನೀನೂ ನಿನ್ನ ಮಕ್ಕಳೂ ನೆಮ್ಮದಿಯಾಗಿರಬಾರದೆ? ಕೇಡುಗಾಲಕ್ಕೆ ಬುದ್ಧಿಗೆಡುವುದು; ಅನ್ಯಾಯವು ನ್ಯಾಯವಾಗಿ ತೋರುವುದು. ರಾಜನೆ! ಪಾಂಡವರ ಶತ್ರುಮಿತ್ರರೇ ನಿಮ್ಮ ಶತ್ರುಮಿತ್ರರೆಂದು ತಿಳಿ. ಹಾಗೆಯೇ ನಿಮ್ಮೊಳಗೆ ಒಬ್ಬರ ಕಾರ್ಯವೇ ಇನ್ನೊಬ್ಬರ ಕಾರ್ಯವಾಗಿರುವುದೆಂದು ತಿಳಿ. ಇಬ್ಬರೂ ಒಂದಾಗಿ ಸುಖದಿಂದ ಬಾಳುವಂತೆ ಮಾಡು. ಕುರುಕುಲದ ಭವಿಷ್ಯವೆಲ್ಲವೂ ನಿನ್ನ ಕೈಯಲ್ಲಿದೆ. ವನವಾಸದಿಂದ ಬಳಲಿ ಬಂದಿರುವ ಪಾಂಡವರನ್ನು ಸಲಹಿ ನಿನ್ನ ಕೀರ್ತಿಯನ್ನು ಳಿಸಿಕೊ. ಪಾಂಡವರು ಸತ್ವವಂತರು. ದುರ್ಯೋಧನನನ್ನು ಯುದ್ಧಕ್ಕೆ ಹೋಗಲಿಸಬೇಡ. ಒಬ್ಬ ಮಗನನ್ನು ತೊರೆದು ಉಳಿದವರನ್ನು ಳಿಸಿಕೊ. ಅವನನ್ನು ತೊರೆಯದಿದ್ದರೆ ಸರ್ವರೂ ಹತರಾಗುವರು. ರಾಜೇಂದ್ರ! ಯುಧಿಷ್ಠಿರನು ಧರ್ಮಜ್ಞನು, ಪ್ರಾಜ್ಞನು, ದಯಾಳು. ನೀನು ಹಿರಿಯನೆಂದು ನಿನ್ನ ಗೌರವಾರ್ಥವಾಗಿ ಬಹು ಕ್ಲೇಶವನ್ನು ಅನುಭವಿಸಿದನು. ಸರ್ವಲಕ್ಷಣ ಸಂಪನ್ನನಾದ ಆ ರಾಜಕುಮಾರನು ದಾಯಭಾಗಕ್ಕೆ ನಿನ್ನ ಮಕ್ಕಳೆಲ್ಲರಿಗಿಂತಲೂ ಹೆಚ್ಚಾಗಿ ಅರ್ಹನು. ಅವನ ರಾಜ್ಯವನ್ನು ಅವನು ಆಳಲಿ. ದುರ್ಯೋಧನ, ಶಕುನಿ, ಮೂಢ ದುಃಶಾಸನ, ಕರ್ಣ—ಇವರನ್ನು ನಚ್ಚಿ ರಾಜ್ಯಭಾರವನ್ನು ಅವರಿಗೊಪ್ಪಿಸಿದ ಮೇಲೆ ರಾಜ್ಯವು ನಿನ್ನದೆಂಬುದು ಹೇಗೆ? ಗುಣಾಢ್ಯರಾದ ಪಾಂಡವರು ನಿನ್ನನ್ನು ತಂದೆಯಂತೆ ಭಾವಿಸಿ ನಡೆಯುತ್ತಿರುವರು; ಅವರನ್ನು ನೀನು ಮಕ್ಕಳಂತೆ ಕಾಣು."

ಈ ಪ್ರಕಾರವಾಗಿ ವಿದುರನು ಹೇಳಿದ ಹಿತವಚನಗಳೆಲ್ಲವನ್ನೂ ಕೇಳಿ, ಧೃತರಾಷ್ಟ್ರನು—"ನೀನು ನಿತ್ಯವೂ ನನಗೆ ಉಪದೇಶಮಾಡುವುದೆಲ್ಲವೂ ಯಥಾರ್ಥವೇ ಅಹುದು. ನೀನು ಹೇಳಿದಂತೆಯೇ ನಡೆಯಬೇಕೆಂದು ನನ್ನ ಮನಸ್ಸಿನಲ್ಲಿದೆ. ನನ್ನ ಮನಸ್ಸು ಸರ್ವದಾ ಪಾಂಡವರ ಕಡೆಯೇ ಇದ್ದರೂ ದುರ್ಯೋಧನನು ಹತ್ತಿರ ಬರುತ್ತಲೆ ನನ್ನ ಬುದ್ಧಿಯು ಕೆಡುವುದು. ಏನ ಮಾಡಲಿ? ವಿಧಿಯನ್ನು ಮೀರುವುದಕ್ಕೆ ಯಾರಿಗೂ ಶಕ್ಯವಲ್ಲ. ವಿಧಿಯೇ

ಸತ್ಯ, ಪುರುಷಪ್ರಯತ್ನವು ನಿರರ್ಥಕ" ಎಂದು ನುಡಿದು, ಕೇಡಾಳಿಯಾದ ತನ್ನ ಮಗನು ಹೋದ ದಾರಿಯಲ್ಲಿಯೇ ಹೋಗುತ್ತಿದ್ದನು.

ಈ ಸ್ಥಿತಿಯಲ್ಲೊಂದುದಿನ ಪಾಂಡವರ ಸಂದೇಶವನ್ನು ಕೇಳುವ ಸಲುವಾಗಿ ಭೀಷ್ಮ, ದ್ರೋಣ, ಕೃಪ, ಶಲ್ಯ, ವಿದುರ ಪ್ರಮುಖರನ್ನೊಡಗೊಂಡು ಧೃತರಾಷ್ಟ್ರನು ಸಭೆಯನ್ನು ಪ್ರವೇಶಮಾಡಿದನು. ದುರ್ಯೋಧನ ದುಃಶಾಸನ ಕರ್ಣಾದಿಗಳೂ ಸಭೆಯನ್ನು ಹೊಕ್ಕರು. ಸರ್ವರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುತ್ತಲೆ ಸಂಜಯನು ಪಾಂಡವರ ಸಂದೇಶವನ್ನು ಕಥನಮಾಡಿ ಯುಧಿಷ್ಠಿರ ಭೀಮಾರ್ಜುನ ನಕುಲ ಸಹದೇವರ ಶೌರ್ಯಧೈರ್ಯಾದಿ ಸದ್ಗುಣಗಳನ್ನು ವರ್ಣನೆಮಾಡಿ, ಅರ್ಜುನನ ಸಖನಾದ ಕೃಷ್ಣನ ಮಾಹಾತ್ಮ್ಯವನ್ನು ಹೇಳಿ, ಅರ್ಜುನನು ಹೀಗೆಂದು ಪ್ರತಿಜ್ಞೆಮಾಡಿರುವನೆಂದು ತಿಳಿಸಿದನು :—"ಸೂತ! ಅವರೆಲ್ಲರನ್ನೂ ಕೊಲ್ಲಬೇಕೆಂದು ನಿಶ್ಚಯಿಸಿರುವೆನು; ಯಾರನ್ನೂ ಉಳಿಸೆನು. ಈ ಮಾತನ್ನು ಅವರಿಗೆ ತಿಳಿಸು. ಧೃತರಾಷ್ಟ್ರನ ಮಗನ ಹುಚ್ಚುತನವನ್ನು ನೋಡು! ಇಂದ್ರಪ್ರಮುಖದೇವತೆಗಳಿಗೂ ನನ್ನನ್ನು ಗೆಲ್ಲಲಳವಲ್ಲ; ಅಂತಹವರ ಮೇಲೆ ಆ ದುರ್ಯೋಧನನು ಕೈಮಾಡುವದಕ್ಕೆ ಬರುತ್ತಾನೆ! ಆದರೂ ವೃದ್ಧಭೀಷ್ಮ ಕೃಪದ್ರೋಣ ಅಶ್ವತ್ಥಾಮ ವಿದುರರು ಹೇಗೆ ಹೇಳಿದರೆ ಹಾಗಾಗಲಿ. ಕೌರವರೆಲ್ಲರೂ ಆಯುಷ್ಮಂತರಾಗಿರಲಿ!"

ಈ ಪ್ರತಿಜ್ಞೆಯನ್ನು ಸೂಚಿಸಿ ಸಂಜಯನು ಪಾಂಡವರ ಸಂದೇಶವನ್ನು ಹೇಳಿ ಮುಗಿಸಿದನು. ಆ ಸಂದರ್ಭದಲ್ಲಿಯೇ, ಸಂಧಿಯ ಪ್ರಸ್ತಾವಮಾಡುವ ಸಲುವಾಗಿ ಶ್ರೀಕೃಷ್ಣನು ಹಸ್ತಿನಾಪುರಕ್ಕೆ ಬರುವುದರಲ್ಲಿದ್ದಾನೆಂದು ಅರಿಕೆ ಮಾಡಿದನು.

ತರುವಾಯ ವೃದ್ಧ ಭೀಷ್ಮನು ದುರ್ಯೋಧನನಿಗೆ ಕೃಷ್ಣಾರ್ಜುನರ ಗುಣಾತಿಶಯಗಳನ್ನು ಹೇಳಿ, "ದುರ್ಯೋಧನ! ಇಂತಹ ಕೃಷ್ಣಾರ್ಜುನರಿಗೆ ನೀನಿದಿರೆ? ಶಂಖಚಕ್ರ ಗದಾಹಸ್ತನಾಗಿ ಕೃಷ್ಣನೂ, ಅಸ್ತ್ರಧಾರಿಯಾಗಿ ಅರ್ಜುನನೂ ಒಂದೇ ರಥದಲ್ಲಿ ಕುಳಿತು ರಣರಂಗದಲ್ಲಿ ಕಾಣಿಸಿಕೊಂಡಾಗಲ್ಲವೇ ನೀನು ನನ್ನ ಮಾತನ್ನು ನಂಬುವುದು? ಈಗ ನೀನು ನನ್ನ ಮಾತನ್ನು ಕೇಳದೆ ಹೋದರೆ ಬಹುಜನ ಹತವಾಗುವುದು. ಶಾಪಗ್ರಸ್ತನೂ ಹೀನಜಾತನೂ ಆದ ಕರ್ಣ, ಸುಬಲನ ಮಗನಾದ ಶಕುನಿ, ನೀಚನೂ ಪಾಪಿಯೂ ಆದ ನಿನ್ನ ತಮ್ಮ ದುಃಶಾಸನ ಈ ಮೂವರ ಮಾತನ್ನು ನೀನು ವೇದವಾಕ್ಯವೆಂದೆಣಿಸಿ ಕೆಡುತ್ತೀಯೆ" ಎಂದು ಹೇಳಿದನು.

ಅದನ್ನು ಕೇಳಿ ಕರ್ಣನು—"ಪಿತಾಮಹನೆ! ನೀನು ಹಿರಿಯನು. ನೀನು ನನ್ನನ್ನು ಹೀಗೆಂದು ಹಳಿಯಬಹುದೆ? ಸ್ವಧರ್ಮವನ್ನು ಬಿಡದೆ ನಾನು ಕ್ಷತ್ರಿಯಧರ್ಮದಲ್ಲಿರುವೆನು; ನನ್ನಲ್ಲೇನು ದುರ್ವೃತ್ತಿಯನ್ನು ಕಂಡೆ? ನನ್ನನ್ನು ನೀನು ಹೀಯಾಳಿಸುವುದೇಕೆ? ಧೃತರಾಷ್ಟ್ರನ ಮಕ್ಕಳಾದರೂ ನನ್ನಲ್ಲೇನು ಪಾಪವನ್ನು ಕಂಡರು? ದುರ್ಯೋಧನನಿಗೆ ನಾನೆಂದಿಗೂ ಕೇಡನ್ನು ಮಾಡಿದವನಲ್ಲ. ಅಷ್ಟೇ ಅಲ್ಲ, ಅವರ ಹಗೆಗಳಾದ ಪಾಂಡವರೆಲ್ಲರನ್ನೂ ರಣದಲ್ಲಿ ಕೊಂದು ಅವರಿಗೆ ಜ್ಞಾತಿಗಳ ಕಾಟವಿಲ್ಲದಂತೆ ಮಾಡುವೆನು. ಹಿಂದೆ ಯಾರನ್ನು ನಾವು ವೈರದಿಂದ ನೋಯಿಸಿದೆವೋ ಅವರ ಸಂಗಡ ಸಂಧಿಗೆ ಹೋಗುವುದು ವಿವೇಕವೆ? ಧೃತರಾಷ್ಟ್ರದುರ್ಯೋಧನರಿಗೆ ಪ್ರಿಯವಾದ ಕಾರ್ಯವನ್ನು ಮಾಡುವುದೇ ನನ್ನ ಕರ್ತವ್ಯ. ರಾಜ್ಯವು ದುರ್ಯೋಧನನದೇ, ಮತ್ತಾರದೂ ಅಲ್ಲ" ಎಂದನು.

ಕರ್ಣನ ಮಾತು ಕೇಳಿ ಭೀಷ್ಮನು ಧೃತರಾಷ್ಟ್ರನನ್ನು ಸಂಬೋಧಿಸಿ ಮತ್ತಿಂತೆಂದನು:—"ಮಹಾರಾಜ! ಇವನು ಪಾಂಡವರನ್ನು ಕೊಲ್ಲುವೆನೆಂದು ನಿತ್ಯವೂ ಹರಟುತ್ತಾನೆಯೇ ಹೊರತು ಇವನು ಆ ವೀರರಿಗೆ ಎಷ್ಟು ಮಾತ್ರವೂ ಸಮತೂಗಲಾರನು. ಈಗ ನಿನ್ನ ಮಕ್ಕಳಿಗೆ ಕಾಯ್ದಿರುವ ವಿಪತ್ತು ದುರ್ಮತಿ ಸೂತನ ಕೆಲಸವೇ ಎಂದು ತಿಳಿ. ಅವನನ್ನು ಆಶ್ರಯಿಸಿಕೊಂಡು ಮಂದಬುದ್ಧಿ ದುರ್ಯೋಧನನು ಪಾಂಡವರನ್ನು ಗೋಳಾಡಿಸಿದನು, ಅವಮಾನಪಡಿಸಿದನು. ಸೂತನು ಎಷ್ಟರವನು? ಅಂತಹ ಸಾಹಸಕಾರ್ಯವನ್ನೇನ ಮಾಡಿದನು? ವಿರಾಟನಗರದಲ್ಲಿ ಅರ್ಜುನನು ಅವನ ತಮ್ಮನನ್ನು ಕೊಂದು ಕೆಡಹಿದಾಗ ಅವನೇನ ಮಾಡಿದನು? ಭೀಮಾರ್ಜುನರು ಶೂರರು; ರಣದಲ್ಲಿ ವೈರಿಗಳನ್ನು ಗೆಲ್ಲದೆ ಬಿಡರು. ಧನಂಜಯನು ಅಪರಿಮಿತವಾದ ಕುರುಸೇನೆಯನ್ನು ಅಪ್ಪಳಿಸಿ ಅವರ ವಸ್ತ್ರಾಭರಣಗಳೆಲ್ಲವನ್ನೂ ಕಿತ್ತುಕೊಂಡಾಗ ಇವನೆಲ್ಲಿ ಹೋಗಿದ್ದನು? ಅವನ ಪ್ರತಾಪಕ್ಕೆ ಇವನು ತಡೆಯುವನೆ? ಇವನ ಪೊಳ್ಳು ಮಾತುಗಳಿಂದಾಗುವುದೇನು?" ಎಂದನು.

ಅದನ್ನು ಕೇಳಿ ದ್ರೋಣಾಚಾರ್ಯನು ಧೃತರಾಷ್ಟ್ರನನ್ನು ಕುರಿತು—"ಮಹಾರಾಜ! ಭರತಶ್ರೇಷ್ಠನಾದ ಭೀಷ್ಮನು ಹೇಳಿದ ಹಾಗೆ ಮಾಡು. ದುರಾಶಾಪೀಡಿತರ ಮಾತನ್ನು ಕೇಳಿ ನಡೆಯುವುದು ಯುಕ್ತವಲ್ಲ. ಪಾಂಡವರಿಗೆ ಸಮಾನರಾದ ಧನುರ್ಧರರು ಯಾರೂ ಇಲ್ಲ" ಎಂದು ನುಡಿದು ಭೀಷ್ಮನ ಮತವನ್ನು ಸಮರ್ಥಿಸಿದನು.

ತರುವಾಯ ಧೃತರಾಷ್ಟ್ರನು ಸಂಜಯನನ್ನು ಕೇಳಿ ಕೇಳಿ ಪಾಂಡವರು

ಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಿ ಸ್ವಸಾಮರ್ಥ್ಯದಿಂದಲೂ ಮಿತ್ರರಾಜರ ಸಹಾಯದಿಂದಲೂ ರಣೋದ್ಯೋಗಪರರಾಗಿರುವರೆಂದು ತಿಳಿದು, ಮತ್ತೆ ಮತ್ತೆ ಭೀಮಾರ್ಜುನರ ಪ್ರತಾಪವನ್ನೂ ಪಾಂಡವರ ಸಾಹಾಯ್ಯಸಂಪತ್ತಿಯನ್ನೂ ಕೇಳಿ ಸ್ವಬಲಪರಬಲವನ್ನು ಅರಿತು ಕುಸಿದು, ತಾವು ಯುದ್ಧಕ್ಕೆ ಹೋದರೆ ಕುರುಕುಲ ವಿನಾಶವಾಗುವುದೇ ನಿಶ್ಚಯವೆಂಬ ಭೀತಿಯಿಂದ ಕಳವಳಿಸುತ್ತ ಯುದ್ಧದಿಂದ ಪ್ರಯೋಜನವಿಲ್ಲವೆಂದು ನಿನಗೆ ತೋರಿದರೆ ಸಂಧಿಗಾಗಿ ಪ್ರಯತ್ನಮಾಡೋಣ" ಎಂದು ಸಂಜಯನೊಡನೆ ಹೇಳಿದನು.

ಆ ಮಾತನ್ನು ಕೇಳಿ ಸಂಜಯನು, ಪಾಂಡವರಗಿದ್ದ ಜಯಸಾಧನಗಳೆಲ್ಲವನ್ನೂ ವಿಸ್ತರಿಸಿ ಹೇಳಿ—"ಆ ಪಾಪಿಷ್ಠನಾದ ನಿನ್ನ ಮಗನನ್ನೂ ಅವನ ಸಂಗಡಿಗರನ್ನೂ ಸರ್ವೋಪಾಯದಿಂದಲೂ ಅಣಗಿಸಿಡು ಎಂದು ವಿದುರನೂ ನಾನೂ ಎಷ್ಟೋ ಬಗೆಯಲ್ಲಿ ಹೇಳಿದೆವು; ನೀನು ಕೇಳಲಿಲ್ಲ. ಈಗ ನೀನು ಕೊರಗುವುದರಿಂದೇನು ಪ್ರಯೋಜನ?" ಎಂದನು.

ಅದಕ್ಕೆ ದುರ್ಯೋಧನನು—"ಹೆದರಬೇಡ, ಮಹಾರಾಜ! ನಮ್ಮನ್ನು ಕುರಿತು ನೀನು ಕೊರಗಬೇಡ. ಗದಾಯುದ್ಧದಲ್ಲಿ ನನಗೆ ಸಮರಿಲ್ಲ; ನನ್ನನ್ನು ವಿಾರಿಸಿದವರಂತೂ ಈಗಿಲ್ಲ ಮುಂದೆಯೂ ಇರರು. ಭೀಷ್ಮ ದ್ರೋಣ ಕೃಪಾದಿಗಳು ಇರುವಲ್ಲಿ ಭಯವೇನು? ಕರ್ಣನೊಬ್ಬನೇ ಸಾಲದೆ?" ಎಂದು ತನ್ನ ಪ್ರತಾಪವನ್ನು ಹೊಗಳಿಕೊಳ್ಳುತ್ತಲೂ ಜಯಸಾಧನಗಳನ್ನು ಹೇಳಿಕೊಳ್ಳುತ್ತಲೂ ಇದ್ದನು.

ಧೃತರಾಷ್ಟ್ರನು—"ದುರ್ಯೋಧನ, ಯುದ್ಧದ ಯೋಚನೆಯನ್ನು ಬಿಡು. ಯಾವ ಅವಸ್ಥೆಯಲ್ಲಿಯೇ ಆಗಲಿ ಯುದ್ಧವು ವಿಹಿತವೆಂದು ಯಾರೂ ಹೇಳರು. ಅಮಾತ್ಯರೊಡಗೂಡಿ ಬದುಕುವುದಕ್ಕೆ ನಿನಗೆ ಅರ್ಧರಾಜ್ಯವು ಸಾಲದೆ? ಪಾಂಡವರಿಗೆ ಅವರ ಪಾಲನ್ನು ಕೊಟ್ಟುಬಿಡು. ನಮಗೆ ಹಿತರಾದ ಭೀಷ್ಮ ದ್ರೋಣಾದಿಗಳಾರೂ ಯುದ್ಧವನ್ನೊಪ್ಪರು; ನಾನೂ ಒಪ್ಪೆನು" ಎನುತಲೆ,

ದುರ್ಯೋಧನನು—"ನೀನೂ ಬೇಡ, ಭೀಷ್ಮದ್ರೋಣಾದಿಗಳೂ ಬೇಡ; ನಾನೂ ದುಃಶಾಸನನೂ ಕರ್ಣನೂ ಯುಧಿಷ್ಠಿರಾದಿಗಳನ್ನು ರಣದಲ್ಲಿ ಬಲಿ ಹಾಕುವೆವು. ನನ್ನ ಪ್ರಾಣವು ಹೋಗಲಿ, ಧನವು ಹೋಗಲಿ, ಸರ್ವಸ್ವವೂ ಹೋಗಲಿ; ನಾನಂತೂ ಅರ್ಧರಾಜ್ಯವನ್ನು ಕೊಟ್ಟು ಅವರ ನೆರೆಯಲ್ಲಿರೆನು. ಅರ್ಧರಾಜ್ಯದ ಮಾತು ಹಾಗಿರಲಿ. ಸೂಜಿಯ ಮೊನೆಯೂರುವಷ್ಟು ನೆಲವನ್ನು ಕೂಡ ಅವರಿಗೆ ಕೊಡೆನು" ಎಂದು ನುಡಿದನು.

ಧೃತರಾಷ್ಟ್ರನು—"ಏನಾದರೂ ಆಗಿಹೋಗಲಿ, ಇನ್ನು ದುರ್ಯೋಧನನ

ಆಸೆಯ ಬಿಟ್ಟೆನು. ಈ ಮಂದಮತಿಯನ್ನು ಅನುವರ್ತಿಸುವ ರಾಜರಿಗೋಸ್ಕರ ನಾನು ವ್ಯಥೆಪಡುತ್ತೇನೆ” ಎಂದು ಅಲ್ಲಿ ನೆರೆದಿದ್ದ ರಾಜರ ಕಡೆ ತಿರುಗಿ ಹೇಳಿದನು.

ಆಗ ಕರ್ಣನು ಧೃತರಾಷ್ಟ್ರನನ್ನು ಲಕ್ಷ್ಯಮಾಡದೆಯೆ ದುರ್ಯೋಧನನನ್ನು ಸಂಬೋಧಿಸಿ—“ಪಿತಾಮಹನೂ ದ್ರೋಣನೂ ಈ ನರೇಂದ್ರಮುಖ್ಯರೂ ನಿನ್ನ ಬಳಿಯಲ್ಲಿಯೇ ಇರಲಿ; ನನ್ನ ಸೇನೆಯೊಡನೆ ಹೊರಟು ಪಾಂಡವರನ್ನೂ ಅವರ ಪುತ್ರಪೌತ್ರರನ್ನೂ ಮಿತ್ರರಾಜರನ್ನೂ ನಿಮಿಷಮಾತ್ರದಲ್ಲಿ ಇಲ್ಲವೆನಿಸಿಬಿಡುವೆನು” ಎಂದನು.

ಅದನ್ನು ಕೇಳಿ ಭೀಷ್ಮನು—“ಎಲೊ! ಕರ್ಣ! ಏನೆಂದೆ? ನಿನಗೀಬುದ್ಧಿ ಹುಟ್ಟಿರುವುದು ಕೇಡುಗಾಲಕ್ಕೇ ಹೊರತು ಬೇರೆಯಿಲ್ಲ. ನೀನು ಮುಖ್ಯನು. ಮುಖ್ಯನು ಹತನಾದರೆ ಅವನ ಅನುಗತರಾದ ಧೃತರಾಷ್ಟ್ರಪುತ್ರರೂ ಹತರಾಗುವರು, ಇದನ್ನು ನೀನರಿಯೆಯಾ? ಖಾಂಡವ ದಹನಕಾಲದಲ್ಲಿ ಅರ್ಜುನನು ಮಾಡಿದ ಸಾಹಸವನ್ನು ಕೇಳಿಯೂ ಇಂತಹ ಮಾತನ್ನಾಡುವೆಯಾ? ನೀನೂ ನಿನ್ನ ಬಾಂಧವರೂ ಯೋಚಿಸಿ ಮಾತನಾಡಿರಿ. ಕಿರೀಟಿಯನ್ನು ಕೃಷ್ಣನು ರಕ್ಷಿಸುತ್ತಿರುವನು. ಕೃಷ್ಣಾರ್ಜುನರಿಬ್ಬರೂ ನಿನ್ನ ಬಾಣಗಳನ್ನು ಭಸ್ಮಮಾಡಿಬಿಡುವರು” ಎಂದನು.

ಕರ್ಣನು—“ಕೃಷ್ಣನೇನೋ ಹಾಗೆಯೇ ಸರಿ. ಆ ಮಹಾತ್ಮನು ಇನ್ನೂ ಅಧಿಕನೆಂದೇ ಒಪ್ಪಿಕೊಳ್ಳುವೆನು. ಆದರೆ ಪಿತಾಮಹನು ತಾನಾಡಿದ ಪರುಷವಾಕ್ಯದಿಂದ ಏನಾಗುವುದೋ ಕೊಂಚ ಕೇಳಲಿ! ಇದೋ! ನನ್ನ ಶಸ್ತ್ರಗಳನ್ನು ಕೆಳಗಿಟ್ಟೆನು. ಇನ್ನುಮೇಲೆ ಪಿತಾಮಹನು ನನ್ನನ್ನು ಸಭೆಯಲ್ಲಿ ನೋಡುವನೇ ಹೊರತು ರಣರಂಗದಲ್ಲಿ ನೋಡಲಾರನು. ಪಿತಾಮಹನೆ! ನೀನು ತೆಪ್ಪಗಾದ ಮೇಲೆ ಭೂಮಿಪಾಲರೆಲ್ಲರಿಗೂ ನನ್ನ ಪ್ರಭಾವವನ್ನು ತೋರಿಸುವೆನು” ಎಂದು ನುಡಿದು ಮಹಾಧನುಷ್ಮಂತನಾದ ಕರ್ಣನು ಸಭೆಯನ್ನು ಬಿಟ್ಟು ಹೊರಟುಹೋದನು.

ಭೀಷ್ಮನು ದುರ್ಯೋಧನನ ಕಡೆಗೆ ತಿರುಗಿ ನಕ್ಕು—“ಸೂತಪುತ್ರನು ಎಂತಹ ಸತ್ಯಪ್ರತಿಜ್ಞನು! ವೈರಿಗಳೆಲ್ಲರನ್ನೂ ತಾನೊಬ್ಬನೇ ನಾಶಮಾಡುವೆನೆಂದು ಅಡಿಗಡಿಗೂ ಪೌರುಷವನ್ನು ಕೊಚ್ಚುತ್ತಾನಲ್ಲ! ಇದೇನೇ ಅವನ ಪೌರುಷ? ಹೀಗೆಯೇನೇ ಅವನು ಪ್ರತಿಜ್ಞೆಯನ್ನು ಸಲ್ಲಿಸುವುದು? ಕರ್ಣ! ಭೀಮನು ಬಂದು ನಮ್ಮ ಭಟರ ತಲೆಗಳನ್ನು ಉತ್ತರಿಸಿ ಸೇನೆಯೆಲ್ಲವನ್ನು ಅಳಿಸುವುದನ್ನು ನೀನು ನೋಡದೆ ಹೋಗುವೆಯಾ?” ಎಂದು ಹೇಳಿದನು.

ಆ ಮಾತಿಗೆ ದುರ್ಯೋಧನನು—"ಇತರರಂತೆಯೇ ಪೃಥೆಯ ಮಕ್ಕಳೂ. ಅವರಿಗೆ ಜಯವಾಗುವುದೆಂದು ನೀನು ಎಣಿಸುವುದಕ್ಕೇನುಕಾರಣ? ನಾವೂ ಅವರೂ ವಯಸ್ಸಿನಲ್ಲಿಯೂ, ಪರಾಕ್ರಮದಲ್ಲಿಯೂ, ಬುದ್ಧಿಯಲ್ಲಿಯೂ, ಶಾಸ್ತ್ರ ಜ್ಞಾನದಲ್ಲಿಯೂ ಸಮಾನರು. ಇಬ್ಬರೂ ಸಮಜಾತೀಯರು, ಮಾನುಷ ಗರ್ಭದಲ್ಲಿ ಹುಟ್ಟಿದವರೇ. ಹೀಗಿರುವಲ್ಲಿ, ಪಿತಾಮಹನೆ! ಪಾಂಡವರಿಗೇ ಜಯವಾಗುವುದೆಂದು ನೀನು ಹೇಗೆಬಲ್ಲೆ? ನನಗೆ ದ್ರೋಣಾದಿಗಳ ಸಾಹಾಯ್ಯವೂ ಬೇಡ, ಇತರ ರಾಜರ ಸಾಹಾಯ್ಯವೂ ಬೇಡ. ನಾನೂ ಕರ್ಣನೂ ನನ್ನ ತಮ್ಮ ದುಃಶಾಸನನೂ ಸಾಕು. ನಮ್ಮ ಬಾಣಗಳಿಂದ ಪಾಂಡವರೈವರ ಸೊಕ್ಕನ್ನು ಮುರಿದು ಕೃಷ್ಣಾರ್ಜುನರ ಬಿಂಕವನ್ನು ಬಿಡಿಸುವೆವು" ಎಂದು ಗಳಹಿದನು.

ಆಗ ವಿದುರನು—"ಜ್ಞಾತಿವಿರೋಧವೂ ಅತ್ಯಾಶೆಯೂ ಅನರ್ಥಕ್ಕೆ ಕಾರಣಗಳಾಗುವುವು. ಯುದ್ಧದಲ್ಲಿ ಜಯಪರಾಜಯಗಳು ನಿಶ್ಚಿತವಲ್ಲ" ಎಂದು ಹೇಳಿ, "ಧೃತರಾಷ್ಟ್ರ! ಯುದ್ಧದಲ್ಲಿ ಇತ್ತಂಡಕ್ಕೂ ಜಯವಾಗಲಾರದು. ಯುಧಿಷ್ಠಿರನನ್ನು ಆದರಿಸಿ ಪ್ರೀತಿಯಿಂದ ವಶಮಾಡಿಕೊ" ಎಂದು ನುಡಿದನು.

ಮರಳಿ ಧೃತರಾಷ್ಟ್ರನು, ಅರ್ಜುನನಿಗೆ ಶ್ರೀಕೃಷ್ಣನ ಬಲವಿರುವುದರಿಂದ ಅವನನ್ನು ಜಯಿಸುವುದಾರಿಗೂ ಸಾಧ್ಯವಲ್ಲವೆಂದು ಹೇಳಿ—"ದುರ್ಯೋಧನ! ಸುಹೃತ್ತುಗಳ ಮಾತನ್ನು ಕೇಳು. ವೃದ್ಧನಾದ ಭೀಷ್ಮ ಪಿತಾಮಹನ ಬುದ್ಧಿವಾದವನ್ನು ಅಂಗೀಕರಿಸು. ಹಾಗೆಯೇ ದ್ರೋಣಕೃಪಾದಿಗಳ ಮಾತನ್ನೂ ಕೇಳು. ಅವರು ನಮಗೆ ಆಪ್ತರು. ನಿನಗೆ ನಾನು ಹೇಗೋ ಅವರೂ ಹಾಗೆಯೇ. ಅರ್ಜುನನೊಬ್ಬನೇ ಸಾಕು; ಐವರೂ ಕೂಡಿದಲ್ಲಿ ಅವರಿಗೆ ನಮ್ಮನ್ನು ನಿಗ್ರಹಿಸುವುದು ಘನವೆ? ಅರ್ಜುನಾದಿಗಳನ್ನು ಭ್ರಾತೃಗಳೆಂದು ತಿಳಿದು ಅರ್ಧರಾಜ್ಯವನ್ನು ಕೊಟ್ಟು ಅವರ ಪ್ರೀತಿಯನ್ನು ಸಂಪಾದಿಸು" ಎಂದನು.

ದುರ್ಯೋಧನನು ತಂದೆಯ ಮಾತನ್ನು ಕಡ್ಡಿಗೆ ಕಡೆಯಾಗೆಣಿಸಿ ಕದನಕ್ಕೆ ಕಾಲಕೆರೆಯುತ್ತಿದ್ದನು. ಸರ್ವರೂ ಮೌನವನ್ನು ಧರಿಸಿದರು. ರಾಜರೆಲ್ಲರೂ ಎದ್ದು ಹೊರಟುಹೋದರು.

ಆ ಬಳಿಕ ಧೃತರಾಷ್ಟ್ರನು ಅಪೇಕ್ಷಿಸಿದ ಮೇರೆಗೆ ಸಂಜಯನು ಕೃಷ್ಣಾರ್ಜುನರ ಗುಣಕಥನಮಾಡಿದನು. ಆಗ ಧೃತರಾಷ್ಟ್ರನು ಅವರಿಬ್ಬರ ಮಹಿಮೆಯನ್ನು ಕೇಳಿ ತನ್ನ ಮಗನನ್ನು ಕರೆದು—"ದುರ್ಯೋಧನ! ಕೇಶವನಿಗೆ ಶರಣಾಗತನಾಗು; ಸಂಜಯನು ನಮಗೆ ಹಿತನು. ಅವನ ಮಾತನ್ನು ನಂಬು" ಎಂದನು.

ದುರ್ಯೋಧನನು—"ಭಗವಾನ್ ದೇವಕೀಪುತ್ರನು ಅರ್ಜುನನನ್ನು ಹಿಂದಿಕ್ಕಿಕೊಂಡು ನಿಂತು ಜೀವಲೋಕವನ್ನೇ ನಾಶಮಾಡಲಿ, ನಾನು ಬೇರೆ ಕೇಶವನ ಮರೆಹೊಗೆನು" ಎನಲು,

ಧೃತರಾಷ್ಟ್ರನು ಸಮಾಪದಲ್ಲಿದ್ದ ಹೆಂಡತಿಯನ್ನು ಸಂಬೋಧಿಸಿ— "ಗಾಂಧಾರಿ! ದುರ್ಮತಿಯಾದ ಈ ನಿನ್ನ ಮಗನು ಇನ್ನು ಕೆಟ್ಟುಹೋಗು ವನು. ಈರ್ಷ್ಯೆಯಿಂದಲೂ ಗರ್ವದಿಂದಲೂ ಕೆಟ್ಟು ತನಗೆ ಹಿರಿಯರೂ ಹಿತಚಿಂತ ಕರೂ ಆದವರ ಮಾತೆಲ್ಲವನ್ನೂ ತೃಣೀಕರಿಸುತ್ತ ಇದ್ದಾನೆ" ಎಂದನು.

ಅದನ್ನು ಕೇಳಿ ಗಾಂಧಾರಿಯು—"ಎಲೊ, ದುಷ್ಟಾತ್ಮನೆ! ಹಿರಿಯರ ಆಜ್ಞೆಯನ್ನು ಕಳೆಯುತ್ತೀಯಲ್ಲ! ಮೂರ್ಖ! ತಾಯಿತಂದೆಗಳನ್ನೂ ತೊರೆದು ಧನವನ್ನೂ ಪ್ರಾಣವನ್ನೂ ನೀಗಿಕೊಂಡು ನನ್ನನ್ನು ಶೋಕಕ್ಕೆ ಈಡುಮಾಡಿ ಹಗೆಗಳು ಸಂತೋಷಪಡುವಂತೆ ಮಾಡುತ್ತೀಯಲ್ಲ! ಭೀಮಸೇನನ ಗದೆಯ ಪೆಟ್ಟು ಬಿದ್ದಾಗ ನಿನ್ನ ತಂದೆಯ ಮಾತನ್ನು ನೀನು ಸ್ಮರಿಸದೆ ಹೋಗೆ" ಎಂದಳು.

ಹನ್ನೊಂದನೆಯ ಅಧ್ಯಾಯ

ಶ್ರೀಕೃಷ್ಣನ ರಾಯಭಾರ

ಸಂಜಯನು ತನ್ನ ದೌತ್ಯವನ್ನು ಮುಗಿಸಿಕೊಂಡು ಹಿಂದಕ್ಕೆ ಹೊರಟು ಹೋದ ಕೂಡಲೆ ಅವನಾಡಿದ ಮಾತಿನಿಂದ ಧರ್ಮರಾಯನು ಧೃತರಾಷ್ಟ್ರ ದುರ್ಯೋಧನರು ತನ್ನ ಪಾಲಿನ ರಾಜ್ಯವನ್ನು ನಯವಿನಯಕ್ಕೆ ಕೊಡಲೊಪ್ಪ ರೆಂದು ಅರಿತು ಮುಂದೆ ಮಾಡತಕ್ಕ ಕಾರ್ಯವನ್ನು ಯೋಚಿಸತೊಡಗಿದನು. ಧೃತರಾಷ್ಟ್ರನು ಲೋಭಿ, ಲೋಭಿಯಾದ ಮಗನ ವಶನು. ಮಗನ ಮೇಲಣ ಪ್ರೀತಿಯಿಂದ ಧರ್ಮವನ್ನಾಚರಿಸನು. ಈ ಸ್ಥಿತಿಯಲ್ಲಿ ಧರ್ಮರಾಯನು ಆಪದ್ಬಾಂಧವನಾದ ಶ್ರೀಕೃಷ್ಣನೇ ತಮ್ಮನ್ನು ಕಡೆಹಾಯಿಸುವನೆಂದು ಸಂಪೂರ್ಣವಾಗಿ ನಂಬಿ ತಮ್ಮಂದಿರನ್ನು ಮೊದಲ್ಗೊಂಡು ತನ್ನವರೆಲ್ಲರ ಅನುಮತಿಯಿಂದ ಪೂರ್ವಕಥೆಯೆಲ್ಲವನ್ನೂ ಅನುವಾದಿಸಿ ಇಂತೆಂದು ಕೃಷ್ಣನ ಸಾಹಾಯ್ಯವನ್ನು ಬೇಡಿದನು:—

"ಕೃಷ್ಣ! ಸಂಜಯನು ಹೇಳಿದುದೆಲ್ಲವನ್ನು ನೀನು ಕೇಳಿದೆ. ಧೃತ ರಾಷ್ಟ್ರನು ಸಂಧಿಗೊಪ್ಪುವನಂತೆ; ಆದರೆ ನಮ್ಮ ರಾಜ್ಯವನ್ನು ಮಾತ್ರ

ಕೊಡನಂತೆ. ಅವನು ದುರ್ಯೋಧನನ ಮಾತನ್ನು ಕೇಳಿಕೊಂಡು ಸ್ವಪ್ರ ಯೋಜನವನ್ನು ಸಾಧಿಸುತ್ತ ನಮಗೆ ದ್ರೋಹವನ್ನು ಎಣಿಸುತ್ತಿರುವನು. ನಾನು ಹೆತ್ತತಾಯನ್ನೂ ಆಪ್ತಮಿತ್ರರನ್ನೂ ಕೂಡ ಪೋಷಿಸುವ ಸ್ಥಿತಿಯಲ್ಲಿಲ್ಲ! ಕೃಷ್ಣ! ಇದಕ್ಕಿಂತ ಇನ್ನು ದುಃಖವುಂಟೆ! ನನಗೆ ಭರತವಂಶವನ್ನು ತೊಡೆಯ ಲಿಷ್ಟವಿಲ್ಲ. ನೀನು ನನಗೆ ನಾಥನಾಗಿ ನನ್ನನ್ನು ರಕ್ಷಿಸುತ್ತಿದ್ದರೂ ಕೂಡ ನಾನು ಐದು ಗ್ರಾಮಗಳನ್ನು ಬೇಡಿದೆನು. ದುಷ್ಟ ದುರ್ಯೋಧನನು ಅವನ್ನು ಕೂಡ ನೀಡಲೊಲ್ಲನು ; ಎಷ್ಟಾದರೂ ದಣಿಯದೆ ಸರ್ವಸ್ವವೂ ತನ್ನದೇ ಎಂದು ಬಗೆಯುತ್ತಿರುವನು. ಮಧುಸೂಧನ! ರಾಜ್ಯಭ್ರಷ್ಟರಾಗಿ ಇಷ್ಟು ವರ್ಷಗಳೂ ನಾವು ಹೇಗೆ ಬಳಲಿದೆವೊ ನೀನು ಕಾಣೆಯಾ? ನಮ್ಮ ಸಿರಿಯನ್ನು ನಾವು ಕಳೆದುಕೊಳ್ಳುವುದು ಯಾವ ಬಗೆಯಲ್ಲಿಯೂ ನ್ಯಾಯವಲ್ಲ. ಅದನ್ನು ಬರಮಾಡಿ ಕೊಳ್ಳುವ ನಿಮಿತ್ತವಾಗಿ ನಾವು ಹೋರಾಡಿ ಹತರಾದರೂ ಲೇಸೆ. ನಾವೂ ಅವರೂ ಶಾಂತರಾಗಿ ಕಷ್ಟಸುಖಗಳಲ್ಲಿ ಸಮಭಾಗಸ್ಥರಾಗಿ ನಮ್ಮ ನಮ್ಮ ಸಂಪದವನ್ನು ನಾವು ಅನುಭವಿಸುವುದು ಉತ್ತಮಕಲ್ಪ. ಹಾಗಾಗದ ಪಕ್ಷ ದಲ್ಲಿ ನಾವು ಕೌರವರನ್ನು ನಿಗ್ರಹಿಸಿ ರಾಷ್ಟ್ರಗಳನ್ನು ಗೆದ್ದುಕೊಳ್ಳದೆ ಬಿಡೆವು. ಇದೇನೋ ಪರಮಘಾತುಕಕೃತ್ಯವೆಂದು ಬಲ್ಲೆನು. ಕೃಷ್ಣ! ಹಗೆಯು ನಮ್ಮ ಬಳಗವಲ್ಲದೆ ಹೋಗಲಿ, ಕಡೆಗೆ ಪರಮನೀಚನಾಗಲಿ, ಆತಹವನನ್ನು ಕೂಡ ಕೊಲ್ಲುವುದು ಯುಕ್ತವಲ್ಲ. ಹೀಗಿರುವಲ್ಲಿ, ನಮ್ಮ ಜ್ಞಾತಿಗಳೂ ಹಿರಿಯರೂ ಪರಮಪೂಜ್ಯರೂ ಆದವರನ್ನು ಕೊಲ್ಲುವುದು ಮಹಾ ಪಾತಕವೆಂದು ಬೇರೆ ಹೇಳಬೇಕೆ? ಕ್ಷತ್ರಿಯಧರ್ಮವು ಎಂತಹ ಪಾಪಕರ್ಮ! ಅದು ಧರ್ಮ ವಾಗಲಿ ಅಧರ್ಮವಾಗಲಿ, ಬೇರೆ ಯಾವ ವೃತ್ತಿಯೂ ನಮಗೆ ಸಲ್ಲದಲ್ಲಾ! ಶೂದ್ರನು ಸೇವೆಮಾಡಿ ಜೀವಿಸುವನು, ವೈಶ್ಯನು ಪಣ್ಯವನ್ನು ಮಾರಿ ಜೀವಿಸು ವನು, ನಾವು ಕೊಲೆಯಿಂದ ಜೀವಿಸುವೆವು, ಬ್ರಾಹ್ಮಣನು ಬವನಾಸಿಯನ್ನು ಹಿಡಿದು ಜೀವಿಸುವನು. ತಂತಮ್ಮ ಧರ್ಮವನ್ನು ಅನುಸರಿಸಿಯೇ ಕ್ಷತ್ರಿಯನು ಕ್ಷತ್ರಿಯನನ್ನು ಕೊಲ್ಲುವನು, ದೊಡ್ಡ ಮೀನು ಸಣ್ಣ ಮೀನನ್ನು ನುಂಗು ವುದು, ನಾಯಿ ನಾಯನ್ನು ಕೊಲ್ಲುವುದು. ಯುದ್ಧರಂಗದಲ್ಲಿಯಾದರೋ ಯಾವಾಗಲೂ ಕಲಿಪುರುಷನು ತಾಂಡವವಾಡುತ್ತಿರುವನು ; ಅವನ ಪ್ರಭಾವ ದಿಂದ ಎಡೆಬಿಡದೆ ಕೊಲೆಯಾಗುತ್ತಿರುವುದು. ಯುದ್ಧವು ಎಷ್ಟು ದೀರ್ಘಕಾಲ ನಡೆದರೂ ಕೊನೆಮುಟ್ಟುವುದಲ್ಲ. ವೈರವು ವೈರದಿಂದ ಹೆಚ್ಚುವುದೇ ಹೊರತು ಅಡಗುವುದಿಲ್ಲ. ಆದುದರಿಂದ ಪರಪಕ್ಷವನ್ನು ನಿಃಶೇಷವಾಗಿ ನಾಶಮಾಡಿದ ಹೊರತು ಶಾಂತಿಯು ಸ್ಥಿರವಾಗಿ ನೆಲಸದು. ಆದರೆ ಪರಪಕ್ಷವನ್ನು ಹೀಗೆ

ನಿರ್ಮೂಲಮಾಡುವುದಕ್ಕಿಂತ ಘೋರತರವಾದ ಕೃತ್ಯವು ಯಾವುದೂ ಇಲ್ಲ. ಅದರಿಂದ ಶಾಶ್ವತವಾದ ಅಪಕೀರ್ತಿ ಬೇರೆ ಬರುವುದು; ಅದು ಹೋಗಲಿ, ರಾಜ್ಯದಾಸೆಯನ್ನೇ ಬಿಟ್ಟು ಶಾಂತಿಯನ್ನು ನೆಲೆಗೊಳಿಸುವೆವು ಎಂದರೆ, ರಾಜ್ಯ ಹೋದರೂ ಒಂದೇ, ಪ್ರಾಣ ಹೋದರೂ ಒಂದೇ. ನಮಗೆ ರಾಜ್ಯವನ್ನು ತ್ಯಜಿಸುವುದಕ್ಕೂ ಮನಸ್ಸಿಲ್ಲ, ಕುಲವನ್ನು ನಾಶಮಾಡುವುದಕ್ಕೂ ಮನಸ್ಸಿಲ್ಲ. ಇಂತಹ ಸಂಕಟದಲ್ಲಿ ಹಗೆಯ ಕಾಲಿಗೆ ಬಿದ್ದಾದರೂ ಸಂಧಿಯನ್ನು ಬೇಡುವುದು ಲೇಸು. ಆದರೆ ನಾವು ಯುದ್ಧದ ಆಲೋಚನೆಯನ್ನು ಬಿಟ್ಟು ಶಾಂತಿಗೋಸ್ಕರ ಪಡುವ ಶ್ರಮವೆಲ್ಲವೂ ನಿಷ್ಫಲವಾದರೆ, ಯುದ್ಧವು ಆಗಿಯೇ ತೀರುವುದು. ಯಾವಾಗ ಕಾಳಗವು ಕೈಗಟ್ಟುವುದೋ ಆಗ ಪರಾಕ್ರಮವನ್ನು ತೋರಿಸಬೇಕಾಗುವುದು. ಆದರೆ ಧೃತರಾಷ್ಟ್ರನು ನಮಗೆ ಪೂಜ್ಯನು. ಅವನ ಮೇಲೆ ಕೈಮಾಡುವುದು ಹೇಗೆ? ಅವನಾದರೋ, ಮಗನ ಮೇಲಣ ಪ್ರೀತಿಯಿಂದ ಮಗನ ವಶವರ್ತಿಯಾಗಿರುವನೇ ಹೊರತು ತ್ರಾಪಿಯೆಂದರೂ ನನುಗೊಳಿಯನು. ಕೃಷ್ಣ! ಈ ಸ್ಥಿತಿಯಲ್ಲಿ ನಮ್ಮ ಕರ್ತವ್ಯವೇನು? ಅರ್ಥ ಧರ್ಮಗಳೆರಡಕ್ಕೂ ಹಾನಿಬಾರದಿರುವುದಕ್ಕೆ ಹದುವೇನು? ನೀನು ನಮಗೆ ಪ್ರಿಯನು, ಹಿತನು, ಕಾರ್ಯಗತಿಯನ್ನು ಬಲ್ಲವನು. ಈ ಕಷ್ಟಕಾಲದಲ್ಲಿ ಸರ್ವವನ್ನೂ ಬಲ್ಲ ಆಪ್ತನೂ ಮಿತ್ರನೂ ನಮಗಿನ್ನಾರು?"

ಶ್ರೀಕೃಷ್ಣನೂ ಜ್ಞಾತಿಗಳ ಮಧ್ಯದಲ್ಲಿದ್ದು ಕೋಟಲೆಪಟ್ಟವನೇ. ಅವನು ಬಹುರಾಜ್ಯ ವಿಜೇತನಾದರೂ ಜ್ಞಾತಿಗಳಿಗೆ ಕೊಡದೆ ತನ್ನೈಶ್ವರ್ಯವನ್ನು ಭೋಗಿಸಿದವನಲ್ಲ. ಆದರೂ—"ಜ್ಞಾತಿಗಳಿಗೆ ನನ್ನ ಸಂಪತ್ತಿನಲ್ಲಿ ಅರ್ಧಾಂಶವನ್ನು ಕೊಟ್ಟೂ ಕೂಡ ಅವರಾಡುವ ಕಟುವಾಕ್ಯವನ್ನು ಕೇಳಿಕೊಂಡು ಅವರ ದಾಸನಂತೆ ನಡೆದುಕೊಳ್ಳುತ್ತಿದ್ದೇನೆ. ಬಲದೇವನು ಬಲಿಷ್ಠನು, ಗದನು ಸುಕುಮಾರನು, ಪ್ರದ್ಯುಮ್ನನು ಸುಂದರನು. ಅಂಧಕ ವೃಷ್ಣಿ ವಂಶೀಯರು ಪರಾಕ್ರಮಶಾಲಿಗಳು. ಅವರು ಯಾರಿಗೆ ಸಾಹಾಯ್ಯವನ್ನು ಮಾಡರೋ ಅವರು ಕೆಡುವರು, ಯಾರಿಗೆ ಮಾಡುವರೋ ಅವರು ಅನಾಯಾಸವಾಗಿ ಅತುಲೈಶ್ವರ್ಯವನ್ನು ಪಡೆಯುವರು. ಇವರೆಲ್ಲರೂ ನನ್ನ ಪಕ್ಷದವರಾದರೂ ನಾನು ಅಸಹಾಯನಾಗಿ ಕಾಲವನ್ನು ತಳ್ಳುತ್ತಿದ್ದೇನೆ. ಆಹುಕನೂ ಅಕ್ರೂರನೂ ನನ್ನ ಪರಮಮಿತ್ರರು. ಆದರೂ ಒಬ್ಬನನ್ನು ಪ್ರೀತಿಸಿದರೆ ಇನ್ನೊಬ್ಬನಿಗೆ ಕೋಪಬರುವುದು. ಇದನ್ನರಿತು ನನ್ನ ಪ್ರೀತಿಯನ್ನು ಹೊರಗೆ ತೋರಿಸಿಕೊಳ್ಳದಿದ್ದೇನೆ. ಅವರನ್ನು ಪರಿತ್ಯಜಿಸಿಬಿಡುವೆನೆಂದರೆ, ಅವರ ಮೇಲೆ ನನಗೆ ಪ್ರೀತಿಯಿರುವುದರಿಂದ, ಅವರನ್ನು ಪರಿತ್ಯಾಗಮಾಡುವುದೂ ಕಷ್ಟ. ಅವರು

ಯಾರ ಪಕ್ಷವನ್ನು ವಹಿಸಿದರೆ ಅವರ ದುಃಖಕ್ಕೆ ಪಾರವಿಲ್ಲ. ಅವರು ಯಾರ ಪಕ್ಷವನ್ನು ಹಿಡಿಯರೋ ಅವರಿಗಿಂತ ದುಃಖಿಗಳು ಇಲ್ಲವೆನ್ನಿಸುವರು. ಹೀಗಿರುವಲ್ಲಿ, ಏನಾದರೂ ಆಗಲೆಂದು ನಾನು ಜೂದಾಳಿಗಳಾದ ಇಬ್ಬರ ಮಕ್ಕಳ ತಾಯಿಯಂತೆ ಇಬ್ಬರಿಗೂ ಜಯವಾಗಲೆಂದು ಹರಸುತ್ತೇನೆ. ನಾರದ! ಈ ಮಿತ್ರರಿಬ್ಬರನ್ನು ವಶಮಾಡಿಕೊಳ್ಳುವುದಕ್ಕೆ ನಾನಿಷ್ಟು ಕಷ್ಟಪಡುತ್ತಿದ್ದೇನೆ" ಎಂದು ಒಂದು ಸಂದರ್ಭದಲ್ಲಿ ಶ್ರೀಕೃಷ್ಣನು ನಾರದನ ಸಂಗಡ ಹೇಳಿಕೊಂಡನು.

ಅದೇ ಪ್ರಕಾರವಾಗಿ ಕೌರವ ಪಾಂಡವರಿಬ್ಬರ ಯೋಗಕ್ಷೇಮವನ್ನೂ ಬಯಸಿ ಧರ್ಮರಾಯನ ಮಾತನ್ನು ಕೇಳಿ ಕೃಷ್ಣನು ಇಂತೆಂದನು:—"ನಿಮ್ಮಿಬ್ಬರ ಹಿತಾರ್ಥವಾಗಿ ಕುರುರಾಯನ ಬಳಿಗೆ ಹೋಗಿಬರುವೆನು. ನಿನ್ನ ಯೋಗಕ್ಷೇಮಕ್ಕೆ ಭಂಗ ಬಾರದಂತೆ ಸಂಧಿಮಾಡಿಸಿದ ಪಕ್ಷಕ್ಕೆ ನಾನು ಮಹಾಪುಣ್ಯಕಾರ್ಯವನ್ನು ಮಾಡಿದಂತಾಗುವುದು; ನಾನು ಕುರುಪಾಂಡವರನ್ನು ಮಾತ್ರವೇ ಅಲ್ಲ, ಲೋಕವನ್ನೇ ಮೃತ್ಯುಪಾಶದಿಂದ ಬಿಡಿಸಿದಂತಾಗುವುದು."

ಕೃಷ್ಣನು ಸಂಜಯನ ಮೂಲಕವಾಗಿ ಧೃತರಾಷ್ಟ್ರನ ಅಭಿಪ್ರಾಯವನ್ನು ತಿಳಿದು ಯುಧಿಷ್ಠಿರನ ಬುದ್ಧಿಯು ಧರ್ಮವನ್ನು ಆಶ್ರಯಿಸಿರುವುದನ್ನೂ ಧೃತರಾಷ್ಟ್ರನ ಮತಿಯು ಮಗನ ದುರ್ಬುದ್ಧಿಯನ್ನು ಆಶ್ರಯಿಸಿರುವುದನ್ನೂ ಕಂಡು, ಜಯವಾಗಲಿ, ವಧೆಯಾಗಲಿ ಯುದ್ಧವು ಕ್ಷತ್ರಿಯನ ಸ್ವಧರ್ಮವಾದುದರಿಂದ ದೈನ್ಯದಿಂದ ಅದಕ್ಕೆ ಹಿಮ್ಮೆಟ್ಟಬಾರದೆಂದು ಯುದ್ಧಪಕ್ಷವನ್ನು ಸಮರ್ಥಿಸಿ—"ರಾಜನೇ! ನೀನು ಅವರನ್ನು ಮಾರ್ದವದಿಂದ ಉಪಚರಿಸುತ್ತಿರುವವರೆಗೂ ಅವರು ನಿನಗೆ ರಾಜ್ಯವನ್ನು ಬಿಟ್ಟುಕೊಡರು; ಧೃತರಾಷ್ಟ್ರನ ಮಕ್ಕಳು ದಯಾದಾಕ್ಷಿಣ್ಯಶೂನ್ಯರು; ಧರ್ಮಾರ್ಥಗಳನ್ನು ಲಕ್ಷ್ಯಮಾಡುವರಲ್ಲ; ಕೋಪದ ವೇಳೆಯಲ್ಲಿ ನಿಮಗೆ ಅಪಕಾರಮಾಡಿದುದು ಹೋಗಲೆಂದರೂ ಉಪಶಾಂತರಾದಮೇಲೂ ಕೂಡ ಅವರು ಅನುತಾಪವನ್ನು ಪಡುವರಲ್ಲ. ಆದುದರಿಂದ ಅವರು ನಿನ್ನ ಕೋರಿಕೆಯಂತೆ ನಡೆಯರು. ಭೀಷ್ಮ ದ್ರೋಣ ಪ್ರಮುಖರ ಮುಂದೆಯೇ ದ್ಯೂತದಲ್ಲಿ ದಾನಧರ್ಮಶೀಲನಾದ ನಿನ್ನನ್ನು ವಂಚಿಸಿ ರಾಜ್ಯವನ್ನು ಅಪಹರಿಸಿದ ಆ ಪಾಪಿ ದುರ್ಯೋಧನನಿಗೆ ನೀನು ಕರುಣೆಯನ್ನು ತೋರಿಸಕೂಡದು. ಅವನು ಲೋಕಕ್ಕೇ ವಧಾರ್ಹನು, ಇನ್ನು ನಿನ್ನಿಂದ ವಧ್ಯನೆಂದು ಹೇಳಬೇಕೆ? ಧೃತರಾಷ್ಟ್ರ ಭೀಷ್ಮರು ನಿನಗೆ ಪೂಜ್ಯರೆಂದು ಹೇಳಿದೆಯಲ್ಲವೆ? ನಾನೊಪ್ಪಿದೆನು. ನೀನು ಅವರನ್ನು ಅವಶ್ಯವಾಗಿ ವಂದಿಸು. ರಾಜನೇ! ನಿನ್ನ ಅರ್ಥವು ಕೆಡದಂತೆ ಸಂಧಿಗೆ ಪ್ರಯತ್ನಪಡುವೆನು. ಆದರೆ

ವಸ್ತುಸ್ಥಿತಿಯನ್ನು ಬಗೆದು ನೋಡಲಾಗಿ ಯುದ್ಧವು ಅವಶ್ಯಂಭಾವಿಯೆಂದು ತೋರುವುದು. ನೀನು ಯುದ್ಧಕ್ಕೆ ತಕ್ಕ ಸನ್ನಾಹಗಳನ್ನು ಮಾಡುತ್ತಿರು.”

ಎಂದು ನುಡಿದು, ತಾನು ಹಸ್ತಿನಾಪುರಕ್ಕೆ ಹೋಗುವುದರಿಂದ ಯುಧಿಷ್ಠಿರನ ಉದ್ದೇಶವು ನೆರವೇರದೆ ಹೋದರೂ, ತನ್ನ ಕರ್ತವ್ಯವನ್ನು ತಾನು ಮಾಡಿದಂತಾಗುವುದು; ಕಡೆಯ ಪಕ್ಷ, ಲೋಕಾಪವಾದವಾದರೂ ತಪ್ಪುವುದು ಎಂದು ಶ್ರೀಕೃಷ್ಣನು ಹೇಳಿದನು.

ಶ್ರೀಕೃಷ್ಣನು ಹಸ್ತಿನಾಪುರಕ್ಕೆ ಹೋಗುವ ಸಮಾಚಾರವನ್ನು ಬೇಹುಕಾರರಿಂದ ತಿಳಿದು ಅವನನ್ನು ಸಂಭ್ರಮದಿಂದ ಇದಿರುಗೊಳ್ಳುವುದಕ್ಕಾಗಿ ತಕ್ಕ ಸಂವಿಧಾನಗಳನ್ನು ಮಾಡುವಂತೆ ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು. ದುರ್ಯೋಧನನು ತಂದೆಯ ಆಜ್ಞೆಯಂತೆ ಶ್ರೀಕೃಷ್ಣನು ಬರುವ ದಾರಿಯಲ್ಲಿ ರಮಣೀಯವಾದ ಸ್ಥಳಗಳಲ್ಲಿ ಸರ್ವರತ್ನ ಸಮಾಕೀರ್ಣವಾದ ಮಂಟಪಗಳನ್ನು ಕಟ್ಟಿಸಿ, ವಿಚಿತ್ರವಾದ ಪೀಠಗಳನ್ನು ಹಾಕಿಸಿ, ವಿವಿಧ ಅನ್ನಪಾನಗಳನ್ನೂ ಭಕ್ಷ್ಯಭೋಜ್ಯಗಳನ್ನೂ ಮಾಡಿಸಿ. ಬಗೆಬಗೆಯ ವಸನಭೂಷಣಗಳನ್ನೂ ಪರಿಮಳಗಳನ್ನೂ ಸುಗಂಧ ಪುಷ್ಪಮಾಲಿಕೆಗಳನ್ನೂ ಮಂಟಪಮಂಟಪಕ್ಕೂ ಕಳುಹಿಸಿಕೊಟ್ಟನು. ಅದರೊಳಗೂ ವೃಕಸ್ಥಲದಲ್ಲಿ ಕೃಷ್ಣನು ತಂಗುವ ಸಲುವಾಗಿ ಸೊಗಸಾದ ಮಂಟಪವನ್ನು ಕಟ್ಟಿಸಿ ಅಲ್ಲಿ ಅಂಗಮಣೆ ಇಡುವುದಕ್ಕೆ ಬಹು ರತ್ನಗಳನ್ನು ಕಳುಹಿಸಿಕೊಟ್ಟನು. ಧೃತರಾಷ್ಟ್ರ ದುರ್ಯೋಧನರು ಕೃಷ್ಣನನ್ನು ಒಲಿಸಿಕೊಳ್ಳುವುದಕ್ಕೆ ಇಷ್ಟು ಬೆಡಗುಮಾಡಿದರೂ ಕೃಷ್ಣನು ಆ ವಿವಿಧ ರತ್ನರಾಜಿಗಳ ಕಡೆಗೆ ತಿರುಗಿ ಕೂಡ ನೋಡದೆ ಅಲ್ಲಿಂದ ಮುಂದಕ್ಕೆ ಹೊರಟನು.

ಧೃತರಾಷ್ಟ್ರನು ಶ್ರೀಕೃಷ್ಣನ ಆಗಮನವನ್ನು ಕೇಳಿ ಅವನಿಗೆ ವಿವಿಧ ವಸ್ತುವಾಹನಗಳನ್ನೂ ದಾಸದಾಸಿಯರನ್ನೂ ಕಾಣಿಕೆ ಕೊಡುವೆನೆಂದು ವಿದುರನ ಸಂಗಡ ಹೇಳಿ ತನ್ನ ಅರಮನೆಯನ್ನೂ ದುರ್ಯೋಧನ ದುಃಶಾಸನರ ಅರಮನೆಗಳನ್ನೂ ಶೃಂಗಾರಮಾಡಿ ದುಃಶಾಸನನ ಮನೆಯಲ್ಲಿ ಕೃಷ್ಣನನ್ನು ಇಳಿಸುವಂತೆ ನಿಶ್ಚಯಿಸಿದನು.

ಧೃತರಾಷ್ಟ್ರನ ಸಡಗರವನ್ನು ನೋಡಿ ವಿದುರನು—“ಮಹಾರಾಜನೆ! ಎಲ್ಲ ಕಾರ್ಯಗಳಲ್ಲಿಯೂ ನಿಷ್ಕಪಟಿಯಾಗಿ ನಡೆ. ಅತಿಥಿಯಾದ ಕೃಷ್ಣನಿಗೆ ನೀನು ಏನು ಕೊಟ್ಟರೆ ತೀರುವುದು? ಭೂಲೋಕವನ್ನು ಕೊಟ್ಟರೂ ಸಾಲದು. ಕೃಷ್ಣನಿಗೆ ನೀನು ಏನೇನು ಕೊಡುವೆನೆಂದು ಹೇಳುತ್ತೀಯೋ ಅದು ನಿನ್ನ ಧರ್ಮಬುದ್ಧಿಯಿಂದಲೂ ಅಲ್ಲ, ಅವನ ಪ್ರೀತ್ಯರ್ಥವಾಗಿಯೂ ಅಲ್ಲ; ನೀನು

ಮಾಡುವುದೆಲ್ಲವೂ ಠಕ್ಕು, ಹೇಳುವುದೆಲ್ಲವೂ ಠೌಳಿ. ಅವನು ನಿನ್ನ ಬಾಹ್ಯ ಕಾರ್ಯಗಳಿಗೆ ಬೆರಗಾಗಿ ನಿನ್ನ ಅಂತರಂಗವನ್ನು ಅರಿಯದೆ ಹೋಗುವನಲ್ಲ. ಪಾಂಡವರು ಐದೇ ಐದು ಗ್ರಾಮಗಳನ್ನು ಕೇಳುತ್ತಾರೆ; ಅಷ್ಟುಮಾತ್ರ ವನ್ನೂ ನೀನು ಕೊಡೆ, ಸಂಧಿಗೂ ಒಪ್ಪೆ; ಹೊನ್ನು ಕೊಟ್ಟು ಆ ಮಹಾ ಬಾಹುವನ್ನು ಒಲಿಸಿಕೊಳ್ಳಲಿಚ್ಛಯಿಸುತ್ತೀಯೆ; ಕೃಷ್ಣನಿಗೂ ಪಾಂಡವರಿಗೂ ಆಗದಂತೆ ಮಾಡಬೇಕೆಂದು ಈ ಹರುವನ್ನೆತ್ತಿದ್ದೀಯೆ. ನಾನು ಕೃಷ್ಣನ ಮಾಹಾತ್ಮ್ಯವನ್ನೂ ಬಲ್ಲೆನು, ಅರ್ಜುನನಿಗೆ ಅವನಲ್ಲಿರುವ ದೃಢಭಕ್ತಿಯನ್ನೂ ಬಲ್ಲೆನು, ಕೃಷ್ಣನು ಅರ್ಘ್ಯಪಾದ್ಯಗಳನ್ನು ಬಿಟ್ಟು ಒಂದು ತೃಣವನ್ನೂ ಅಪೇಕ್ಷಿ ಸನು. ಅವನಿಷ್ಟಪ್ರಕಾರವಾಗಿ ಆತಿಥ್ಯವನ್ನು ಮಾಡು. ಕೃಷ್ಣನು ನಿಮ್ಮಿಬ್ಬರ ಹಿತವನ್ನೂ ಕೋರಿ ಸಂಧಿಮಾಡಲೆಳಸಿ ಬಂದಿರುವನು. ಅವನ ಇಷ್ಟದಂತೆ ನಡೆ" ಎಂದನು.

ಅದಕ್ಕೆ ದುರ್ಯೋಧನನು, ಕೃಷ್ಣನನ್ನು ಕುರಿತು ವಿದುರನು ಹೇಳಿದು ದೆಲ್ಲವೂ ದಿಟವೆಂದೊಪ್ಪಿಯೂ—"ಕಾಲದೇಶವನ್ನು ನೋಡಲಾಗಿ ನಾವು ಮೊದಲು ಎಣಿಸಿದಂತೆ ಕೃಷ್ಣನಿಗೆ ಸತ್ಕಾರವನ್ನು ಮಾಡತಕ್ಕುದಲ್ಲ. ನಾವು ಈಗ ಏನು ಮಾಡಿದರೂ ಅಂಜಿ ಮಾಡಿದಂತಾಗುವುದು. ಬುದ್ಧಿವಂತ ನಾದ ಕ್ಷತ್ರಿಯನು ಅವಮಾನಕರವಾದ ಕಾರ್ಯವನ್ನು ಮಾಡಬಾರದು. ಕೃಷ್ಣನು ಮೂರು ಲೋಕಗಳಲ್ಲಿಯೂ ಪೂಜ್ಯತಮನೆಂಬುದನ್ನು ನಾನು ಬಲ್ಲೆನು. ಆದರೆ ಯುದ್ಧವನ್ನು ನಿಶ್ಚಯಿಸಿರುವುದರಿಂದ ಇದು ಅತಿಥಿಸತ್ಕಾರಕ್ಕೆ ಸಮಯವಲ್ಲ" ಎಂದು ಕೃಷ್ಣನಿಗೆ ಕಾಣಿಕೆಗಳಾವುದನ್ನೂ ಕೊಡಕೂಡದೆಂದು ಹೇಳಿದನು.

ಆ ಮಾತನ್ನು ಕೇಳಿ ಕುರುಪಿತಾಮಹ ಭೀಷ್ಮನು—"ನೀವು ಸತ್ಕರಿಸಿರಿ, ಸತ್ಕರಿಸದೆ ಹೋಗಿರಿ, ಜನಾರ್ದನನು ಕೋಪಿಸಿಕೊಳ್ಳನು. ಅವನು ಯಾವ ಕಾರ್ಯವನ್ನು ಮಾಡಬೇಕೆಂದು ಮನಸ್ಸು ಮಾಡುವನೋ ಯಾರೂ ಯಾವ ಬಗೆಯಿಂದಲೂ ಆ ಕಾರ್ಯವನ್ನು ಆಗದಂತೆ ಮಾಡಲಾರರು. ವಾಸುದೇವನ ಮೂಲಕವಾಗಿ ಪಾಂಡವರ ಸಂಗಡ ಸಂಧಿಯನ್ನು ಮಾಡಿಕೊ. ಆ ಧರ್ಮಾ ತ್ಮನು ಧರ್ಮಾರ್ಥಗಳೆರಡಕ್ಕೂ ಅನುಕೂಲವಾದುದನ್ನೇ ಹೇಳುವನು. ನೀನೂ ನಿನ್ನ ಬಾಂಧವರೂ ಕೂಡಿ ಅವನಿಗೆ ಪ್ರಿಯವಾದುದೇ ಆಗಲಿ ಎಂದು ಹೇಳಿರಿ" ಎಂದನು.

ದುರ್ಯೋಧನನು—"ಪಿತಾಮಹನೇ! ರಾಜ್ಯವನ್ನು ಹಸಿಗೆ ಮಾಡಿ ಕೊಂಡು ಪಾಂಡವರ ಸಂಗಡ ಅನುವಾಗಿರೆಂದು ನೀನು ಹೇಳುವ ಪಕ್ಷಕ್ಕೆ

ನನ್ನ ಪ್ರಾಣವಿರುವ ವರೆಗೂ ಆ ಕೆಲಸವು ನನ್ನಿಂದಾಗದು. ಪಾಂಡವರನ್ನು ಹಿಂದಿಟ್ಟುಕೊಂಡಿರುವ ಕೃಷ್ಣನನ್ನು ಸೆರೆಯಲ್ಲಿಟ್ಟರೆ ಪಾಂಡವರೊಬ್ಬರೇ ಅಲ್ಲ ಪೃಥ್ವಿಯೇ ನನ್ನ ಅಧೀನವಾಗುವುದು. ಇದಕ್ಕೆ ಹದನೇನು? ಆಲೋಚಿಸಿ ಹೇಳು" ಎಂದನು.

ಕೃಷ್ಣನನ್ನು ಸೆರೆಯಲ್ಲಿಡುವೆನೆಂದು ದುರ್ಯೋಧನನು ಆಡಿದ ಮಾತನ್ನು ಕೇಳಿ ಧೃತರಾಷ್ಟ್ರನು—"ಪ್ರಜಾಪಾಲಕನೇ! ಇನ್ನು ಇಂತಹ ಮಾತನ್ನಾಡಬೇಡ. ಕೃಷ್ಣನು ದೂತನಾಗಿ ಬರುವನು. ಅವನು ನಮಗೆ ಅಪಕಾರವನ್ನು ಮಾಡಿದವನಲ್ಲ. ಅವನನ್ನು ಸೆರೆಯಲ್ಲಿಡುವುದು ಯಾವ ನ್ಯಾಯ?" ಎಂದನು.

ಅದನ್ನು ಕೇಳಿ ಭೀಷ್ಮನು—"ಧೃತರಾಷ್ಟ್ರ! ನಿನ್ನೀ ಮಗನು ಬರಿ ಮೂರ್ಖನು; ಅವನಿಗೆ ಕೇಡುಗಾಲ ಬಂದಿದೆ. ಅವನ ಹಿತರು ಎಷ್ಟು ಬಗೆಯಲ್ಲಿ ಬೇಡಿದರೂ ಅವನು ಕೆಟ್ಟ ಬುದ್ಧಿಯನ್ನು ಬಿಡನು. ಮಿತ್ರರ ಮಾತನ್ನು ಕಳೆದು ನೀನೂ ಕೂಡ ಅವನ ದಾರಿಯನ್ನೇ ಹಿಡಿಯುತ್ತಿದ್ದೀಯಲ್ಲ! ಪಾಪಿಯೂ ಘಾತುಕನೂ ಆದ ಈ ನಿನ್ನ ಮಗನ ಕೆಟ್ಟ ಮಾತನ್ನು ಕಿವಿಯಿಂದ ಕೇಳಲಾರೆನಲ್ಲ" ಎಂದು ಹೇಳಿ, ಹೇಸಿ ಆ ಸ್ಥಳವನ್ನು ಬಿಟ್ಟು ಹೊರಟು ಹೋದನು.

ಇತ್ತ, ವೃಕಸ್ಥಲದಲ್ಲಿ ತಂಗಿದ್ದ ಶ್ರೀಕೃಷ್ಣನು ಬೆಳಗಾಗುತ್ತಲೆ ಎದ್ದು ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು ಹಸ್ತಿನಾಪುರಕ್ಕೆ ಪಯಣಮಾಡಿದನು. ದುರ್ಯೋಧನನ ಹೊರತು ಭೀಷ್ಮ ದ್ರೋಣ ಕೃಪಾದಿಗಳೂ ಪುರವಾಸಿಗಳೂ ಕೃಷ್ಣನನ್ನು ಇದಿರ್ಗೊಂಡು ಕೃಷ್ಣನ ಸಂಮಾನಾರ್ಥವಾಗಿ ಅಲಂಕರಿಸಿದ್ದ ನಗರಕ್ಕೆ ಬಿಜಯಮಾಡಿಸಿದರು. ಅಲ್ಲಿ ಕೃಷ್ಣನು ಧೃತರಾಷ್ಟ್ರನ ಅರಮನೆಗೆ ಹೋಗಿ ರಾಜಪುರೋಹಿತರಿಂದ ಅರ್ಘ್ಯಪಾದ್ಯಾದಿಗಳನ್ನು ಕೈಕೊಂಡು ಕುಶಲ ಪ್ರಶ್ನಾದಿಗಳನ್ನು ಕೇಳುತ್ತ ಸ್ವಲ್ಪ ಕಾಲವಿದ್ದು, ಕುರುಸಭೆಯಲ್ಲಿದ್ದವರೆಲ್ಲರನ್ನೂ ಯಥಾನ್ಯಾಯವಾಗಿ ಆದರಿಸಿ, ವಿದುರನ ಮನೆಗೆ ಹೊರಟನು; ಅಲ್ಲಿ ವಿದುರನು ಮಾಡಿದ ವಿಚಾರಗಳನ್ನು ಕೈಕೊಂಡು ಕುಂತಿಯ ಬಳಿಗೆ ಹೋಗಿ ಯುಧಿಷ್ಠಿರಾದಿಗಳ ಕ್ಷೇಮಸಮಾಚಾರವನ್ನು ಆಕೆಗೆ ತಿಳಿಸಿ ಕುಂತಿಯು ಹೇಳಿಕೊಂಡ ದುಃಖಗಳನ್ನು ಆಲಿಸಿ ಆಕೆಯನ್ನು ಸಮಾಧಾನಗೊಳಿಸಿ ದುರ್ಯೋಧನನ ಮನೆಗೆ ಹೋದನು. ದುರ್ಯೋಧನನು ಶ್ರೀ ಕೃಷ್ಣನಿಗೆ ಅರ್ಘ್ಯಪಾದ್ಯಗಳನ್ನು ಕೊಟ್ಟು ಭೋಜನಕ್ಕೆ ಹೇಳಿದನು.

ಕೃಷ್ಣ.—"ಭಾರತನೇ! ದೂತರು ತಾವು ಬಂದ ಕಾರ್ಯವು ನೆರವೇರಿದ

ಮೇಲೆಯೇ ಭೋಜನಾದಿ ಸತ್ಕಾರಗಳನ್ನು ಕೈಕೊಳ್ಳುವುದು ಶಿಷ್ಟಾಚಾರ. ನಾನು ಬಂದ ಕಾರ್ಯವಾಗಲಿ, ಆಮೇಲೆ ನೀನು ನನ್ನನ್ನೂ ಅಮಾತ್ಯರನ್ನೂ ಸತ್ಕರಿಸು."

ದುರ್ಯೋಧನ.—"ನನಗೂ ನಿಮಗೂ ವಿಗ್ರಹವಿಲ್ಲ, ವೈರವಿಲ್ಲ; ನನ್ನ ಮನೆಯಲ್ಲಿ ನೀವು ಏತಕ್ಕೆ ಭೋಜನ ಮಾಡಕೂಡದು?"

ಕೃಷ್ಣನು—"ನಾನು ಕಾಮದಿಂದಾಗಲಿ, ಕ್ರೋಧದಿಂದಾಗಲಿ, ದ್ವೇಷ ದಿಂದಾಗಲಿ, ಲೋಭದಿಂದಾಗಲಿ, ಧರ್ಮವನ್ನು ಬಿಡೆನು. ಪ್ರೀತಿಯಿಂದಿಟ್ಟನ್ನ ವನ್ನು ಉಣಬಹುದು; ಆಪತ್ಕಾಲದಲ್ಲಿ ಪರಾನ್ನವನ್ನುಣಬಹುದು. ನಮ್ಮಲ್ಲಿ ನಿನಗೆ ಪ್ರೀತಿಯೂ ಇಲ್ಲ, ನಾವು ಆಪನ್ನರೂ ಅಲ್ಲ. ಹಗೆಯಿಟ್ಟನ್ನವನ್ನು ಉಣಲೂ ಬಾರದು, ಹಗೆಗೆ ಅನ್ನವನ್ನಿಡಲೂ ಬಾರದು. ಪಾಂಡವರು ನನಗೆ ಪ್ರಾಣವಾಗಿರುವರು. ಅವರನ್ನು ನೀನು ನಿಷ್ಕಾರಣವಾಗಿ ದ್ವೇಷಿಸುತ್ತಿದ್ದೀಯೆ. ಅವರು ನಿನ್ನ ಭ್ರಾತೃಗಳು, ಗುಣವಂತರು. ಅವರನ್ನು ಪ್ರೀತಿಸುವವರು ನನ್ನನ್ನು ಪ್ರೀತಿಸುವರು; ಅವರನ್ನು ದ್ವೇಷಿಸುವವರು ನನ್ನನ್ನು ದ್ವೇಷಿಸುವರು. ಕಾಮಕ್ರೋಧಕ್ಕೆ ವಶರಾಗಿ ಗುಣವಂತರನ್ನು ದ್ವೇಷಿಸುವವರು ಪುರುಷಾಧ ಮರು. ಸಜ್ಜನರಾದ ಜ್ಞಾತಿಗಳನ್ನು ಮೋಹದಿಂದಾಗಲಿ ಲೋಭದಿಂದಾಗಲಿ ದ್ವೇಷಿಸುವವನ ಸಿರಿಯು ಬಹುಕಾಲ ಉಳಿಯದು. ನಿನ್ನ ದೌಷ್ಟ್ಯದಿಂದ ಕಲುಷಿತವಾದ ಅನ್ನವು ತಿನ್ನತಕ್ಕುದಲ್ಲ" ಎಂದು ನಿರ್ದಾಕ್ಷಿಣ್ಯವಾಗಿ ಸ್ಪಷ್ಟೋಕ್ತಿಯನ್ನಾಡಿ ಅವನ ಸತ್ಕಾರವನ್ನು ವರ್ಜಿಸಿ ವಿದುರನ ಮನೆಗೆ ಹೋಗಿ ಹಸ್ತಿನಾಪುರದಲ್ಲಿ ತಾನು ಇದ್ದಷ್ಟು ಕಾಲ ಅವನು ಭಕ್ತಿಯಿಂದ ನಿವೇದನಮಾಡಿದ ಪವಿತ್ರವಾದ ಅನ್ನಪಾನಾದಿಗಳನ್ನು ಸ್ವೀಕರಿಸಿ ಸುಪ್ರೀತ ನಾಗುತ್ತಿದ್ದನು.

ಆ ದಿವಸ ರಾತ್ರಿಯೆಲ್ಲವೂ ವಿದುರನಿಗೂ ಕೃಷ್ಣನಿಗೂ ದೂತಕಾರ್ಯವನ್ನು ಕುರಿತು ಸಂಭಾಷಣೆ ನಡೆಯಿತು. ವಿದುರನು—"ಕೇಶವ! ನಿನ್ನ ಆಗಮನವು ಉಚಿತವಾದುದೆಂದು ಹೇಳಲಾರೆನು. ದುರ್ಯೋಧನನು ದುಷ್ಟನು. ಹಿರಿಯರ ಮಾತನ್ನು ಕೇಳುವನಲ್ಲ; ಭೀಷ್ಮದ್ರೋಣ ಕೃಪಕರ್ಣಾದಿಗಳ ಮುಂದೆ ಯಾರೂ ಅಲ್ಲವೆಂದು ನಂಬಿ ಅವರಿಂದ ತನ್ನ ಇಷ್ಟಾರ್ಥವು ಸಿದ್ಧಿಸುವುದೆಂದು ನೆಚ್ಚಿ ಯಾರನ್ನೂ ಲಕ್ಷ್ಯಮಾಡದಿರುವನು. ಪಾಂಡವ ಕೌರವರಿಬ್ಬರಿಗೂ ಸ್ನೇಹಭಾವವನ್ನೂ ಶಾಂತಿಯನ್ನೂ ಉಂಟುಮಾಡುವ ಸಲುವಾಗಿ ನೀನು ಬಂದಿದ್ದೀಯೆ. ಆದರೆ ಧೃತರಾಷ್ಟ್ರನ ಮಕ್ಕಳು ಪಾಂಡವರಿಗೆ ಅವರ ಪಾಲಿನ ರಾಜ್ಯವನ್ನು ಕೊಡಲೊಪ್ಪರು. ನಿನ್ನ ಮಾತು ನಿರರ್ಥಕವಾಗುವುದು.

ದುರ್ಯೋಧನನು ಸಮಸ್ತ ಪೃಥ್ವೀಸಾಮ್ರಾಜ್ಯವನ್ನು ಬಯಸುತ್ತಿರುವನು. ನಿನ್ನ ವೈರಿಗಳೆಲ್ಲರೂ ಅವನ ಪಕ್ಷವನ್ನು ವಹಿಸಿರುವರು. ಆ ದುಷ್ಟರ ನಡುವೆ ನೀನು ಮಧ್ಯಸ್ಥನಾಗಿ ಹೋಗುವುದು ನನಗಿಷ್ಟವಿಲ್ಲ. ನಿನ್ನ ಪ್ರಭಾವ ಪೌರುಷ ಬುದ್ಧಿಗಳನ್ನು ನಾನು ಬಲ್ಲೆನು. ಆದರೂ ನಿನ್ನಲ್ಲಿ ನನಗಿರುವ ಭಕ್ತಿವಿಶ್ವಾಸ ದಿಂದ ಈ ಮಾತುಗಳನ್ನು ಹೇಳಿದೆನು" ಎಂದನು.

ವಿದುರನ ಮಾತನ್ನು ಕೇಳಿ ಕೃಷ್ಣನು ಸವಿನುಡಿಗಳಿಂದಿಂತೆಂದನು:—

"ವಿದುರ! ನೀನು ಮಹಾಪ್ರಾಜ್ಞನು, ವಿಚಕ್ಷಣನು; ಗುಣಾಢ್ಯನಾದ ನೀನು ನನ್ನಂತಹವನಿಗೆ ಹೇಳತಕ್ಕುದನ್ನು ಬಿಡದೆ ಹೇಳಿದೆ. ನೀನು ಹೇಳುವುದೆಲ್ಲವೂ ಒಪ್ಪತಕ್ಕುದಾದರೂ, ನಾನು ಬಂದಿರುವುದಕ್ಕೆ ಕಾರಣವನ್ನು ಹೇಳುವೆನು, ಕೇಳು. ದುರ್ಯೋಧನನ ದೌರಾತ್ಮ್ಯವನ್ನೂ ಅವನ ಪಕ್ಷವನ್ನು ವಹಿಸಿರುವ ಕ್ಷತ್ರಿಯರ ವೈರವನ್ನೂ ತಿಳಿದೇ ನಾನು ಬಂದಿರುವೆನು. ಈ ಆಪತ್ಕಾಲದಲ್ಲಿ ಪೃಥ್ವಿಯನ್ನು ಮೃತ್ಯುಪಾಶದಿಂದ ಬಿಡಿಸುವವನಿಗೆ ಪುಣ್ಯ ಬರುವುದು. ಯಾವನು ಧರ್ಮಕಾರ್ಯವನ್ನು ಯಥಾಶಕ್ತಿ ಮಾಡಲು ಯತ್ನಿಸುವನೋ ಅವನಿಗೆ ಕಾರ್ಯವು ಕೈಗೂಡದಿದ್ದರೂ ಪುಣ್ಯವು ಬಾರದಿರದು. ಕುರು ಪಾಂಡವರು ರಣದಲ್ಲಿ ಹತರಾಗುವರೆಂಬ ಭಯದಿಂದ ಸಂಧಿಮಾಡಿಸುವುದ ಕ್ಕಾಗಿ ಪ್ರಯತ್ನಮಾಡುವೆನು. ಕಡೆತಲೆಯ ಮೃತ್ಯುರೂಪವಾಗಿರುವ ಈ ಘೋರ ವಿಪತ್ತಿಗೆ ಕೌರವನೇ ಮೂಲ. ಕರ್ಣ ದುರ್ಯೋಧನರಿಂದಲೇ ಇದು ಹುಟ್ಟಿರುವುದು. ಉಳಿದವರೆಲ್ಲರೂ ಅವರಾಡಿದಂತಾಡುವರು. ಕೆಡುತ್ತಿರು ವವರನ್ನು ಕಂಡು ಮಿತ್ರನಾದವನು ಯಥಾಶಕ್ತಿ ಬುದ್ಧಿಹೇಳಿ ಅವರನ್ನು ಸಲಹಲು ಯತ್ನಮಾಡದಿದ್ದರೆ ಅವನು ಮಿತ್ರನಲ್ಲ, ಘಾತುಕನು. ಅಂತಹವ ರನ್ನು ಜುಟ್ಟನ್ನು ಹಿಡಿದೆಳೆದಾದರೂ ಆ ಕಾರ್ಯದಿಂದ ಹಿಮ್ಮೆಟ್ಟಿಸಬೇಕು. ನಾನೇನೋ ಧೃತರಾಷ್ಟ್ರನ ಮಕ್ಕಳ ಹಿತವನ್ನೂ ಹಾಗೆಯೇ ಪಾಂಡವರ ಹಿತವನ್ನೂ, ಅಷ್ಟೇ ಅಲ್ಲ, ಲೋಕದಲ್ಲಿರುವ ಕ್ಷತ್ರಿಯರೆಲ್ಲರ ಹಿತವನ್ನೂ ಸಾಧಿಸಲು ನಿರ್ವಂಚನೆಯಾಗಿ ಯತ್ನಿಸುವೆನು. ಹೀಗೆ ಪರಹಿತಕ್ಕಾಗಿ ಪ್ರಯಾಸಪಡುತ್ತಿರುವ ನನ್ನಲ್ಲಿ ದುರ್ಯೋಧನನು ಸಂಶಯಪಟ್ಟರೆ ಅದಕ್ಕೆ ನಾನು ಹೊಣೆಯಲ್ಲ. ನಾನು ನನ್ನ ಕರ್ತವ್ಯವನ್ನು ಮಾಡಿ ಸಂತುಷ್ಟನಾಗು ವೆನು. ಅಲ್ಲದೆ, ಅದರಿಂದ ನಾನು ಮಿತ್ರಋಣವನ್ನು ತೀರಿಸಿದಂತೆಯೂ ಆಗುವುದು. ನಾನು ಬಂದಿರುವುದಕ್ಕೆ ಇನ್ನೊಂದು ನಿಮಿತ್ತವೂ ಉಂಟು. ಜ್ಞಾತಿಗಳಾದ ಪಾಂಡವಕೌರವರು ಕಾದಾಡುತ್ತಿರುವುದನ್ನು ನೋಡಿ ನೋಡಿ ನನ್ನ ಕೈಯಲ್ಲಾದರೂ ಕೂಡ ನಾನು ಅವರ ಹಗೆಯನ್ನು ಹರಿಸದೆ ಹೋದೆ

ನೆಂದು ಮುಂದೆ ಮೂರ್ಖರು ನನ್ನನ್ನು ದೂರುವುದಕ್ಕೆ ಅವಕಾಶವಿರದು. ನಾನೆಂತೂ ಇಬ್ಬರ ಹಿತವನ್ನೂ ಕೋರಿ ಬಂದಿರುವೆನು. ಇಷ್ಟರಮೇಲೆ ದುರ್ಯೋಧನನು ಧರ್ಮಾರ್ಥಯುಕ್ತವಾದ ನನ್ನ ಮಾತನ್ನು ತಿರಸ್ಕರಿಸಿದರೆ ಅವನ ಹಣೆಯು ಬರೆಹವಿದ್ದಂತಾಗಲಿ."

ಈ ವಿಧವಾಗಿ ಕೃಷ್ಣನೂ ವಿದುರನೂ ರಾತ್ರಿಯು ಕಳೆದುಹೋದುದನ್ನೇ ಕಾಣದೆ ಸಂಭಾಷಣೆಯಲ್ಲಿದ್ದರು. ಪ್ರಭಾತವಾಯಿತು. ಸೂತಮಾಗಧರು ಶಂಖ ದುಂದುಭಿ ವಾದ್ಯವನ್ನು ಮಾಡಿದರು. ಕೃಷ್ಣನು ಎದ್ದು ಸ್ನಾನ ಸಂಧ್ಯಾದಿ ಪ್ರಾತಃಕೃತ್ಯಗಳನ್ನು ಮಾಡುತ್ತಿರುವ ವೇಳೆಗೆ ಶಕುನಿ ದುರ್ಯೋಧನರು ಬಂದು—"ಧೃತರಾಷ್ಟ್ರನು ಭೀಷ್ಮಪ್ರಮುಖ ಕುರುರಾಜರನ್ನೂ ಸಕಲ ಪಾರ್ಥಿವರನ್ನೂ ಕೂಡಿ ಓಲಗದಲ್ಲಿರುವನು; ಎಲ್ಲರೂ ತಮ್ಮ ಆಗಮನವನ್ನು ಪ್ರಾರ್ಥಿಸುವರು" ಎಂದರು.

ಶ್ರೀಕೃಷ್ಣನು ಅವರಿಬ್ಬರನ್ನೂ ಆದರಿಸಿ, ನಿತ್ಯಕರ್ಮಗಳನ್ನು ತೀರಿಸಿಕೊಂಡು ತರುವಾಯ ಬ್ರಾಹ್ಮಣರಿಗೆ ಹಿರಣ್ಯ, ವಸ್ತ್ರ, ಗೋವು, ಅಶ್ವ—ಇವನ್ನು ದಾನಮಾಡಿ, ಅಗ್ನಿಗೂ ಬ್ರಾಹ್ಮಣರಿಗೂ ಪ್ರದಕ್ಷಿಣವನ್ನುಮಾಡಿ ರಥವನ್ನೇರಿ ಸಭೆಗೆ ಹೊರಟನು. ವಿದುರನೂ ತನ್ನ ರಥದಲ್ಲಿ ಕುಳಿತು ಕೃಷ್ಣನ ಹಿಂದೆಯೇ ಹೊರಟನು. ಕೃಷ್ಣನು ಬರುತ್ತಲೆ, ಧೃತರಾಷ್ಟ್ರ ಭೀಷ್ಮ ದ್ರೋಣ ಮೊದಲಾದವರು ಮರ್ಯಾದಾರ್ಥವಾಗಿ ಎದ್ದು ನಿಂತು ಕೃಷ್ಣನು ಭದ್ರಾಸನವನ್ನು ಅಲಂಕರಿಸುತ್ತಲೆ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತು ಮೌನವನ್ನವಲಂಬಿಸಿದರು.

ಆಗ ಕೃಷ್ಣನು ಧೃತರಾಷ್ಟ್ರನನ್ನು ಕುರಿತು ಸಭಿಕರೆಲ್ಲರಿಗೂ ಕೇಳಿಸುವ ಹಾಗೆ ಮೇಘಗಂಭೀರಸ್ವರದಿಂದ ಇಂತೆಂದನು:—"ಭಾರತನೇ! ವೀರರು ನಷ್ಟವಾಗದೆಯೇ ಕೌರವ ಪಾಂಡವರಿಗೆ ಸಂಧಿಯಾಗಮಾಡೆಂದು ನಿನ್ನನ್ನು ಯಾಚಿಸುವುದಕ್ಕೆ ನಾನು ಬಂದಿರುವೆನು. ಇದಕ್ಕಿಂತ ಲೇಸಾದ ಬೇರೆ ಯಾವ ಮಾತನ್ನೂ ನಾನು ನಿನಗೆ ಹೇಳಲಾರೆನು. ನಿನಗೆ ಸಕಲವೂ ತಿಳಿದೇ ಇದೆ. ರಾಜವಂಶಗಳೊಳಗೆ ನಿಮ್ಮ ವಂಶವೇ ಶ್ರೇಷ್ಠವಾದುದು. ಈ ವಂಶಜರು ವಿದ್ಯಾವಿನಯಸಂಪನ್ನರು, ಸತ್ಯವಂತರು, ಕೃಪಾಳುಗಳು, ಕ್ಷಮಾಶೀಲರು, ನಿರ್ವಂಚಕರು—ಇತ್ಯಾದಿ ಗುಣಸಂಪನ್ನರೆಂದು ಹೆಸರುಗೊಂಡಿರುವರು; ಮೇಲೂ, ಲೋಕದಲ್ಲಿ ನರಹಿಂಸಕರಲ್ಲವೆಂದು ಖ್ಯಾತಿಯನ್ನು ಸಂಪಾದಿಸಿರುವರು. ಇಂತಹ ಘನವಾದ ಕುಲಕ್ಕೆ ಕುಂದು ಬರುವಹಾಗೆ ನಿನ್ನವರು ನಡೆಯಬಹುದೆ? ಅದರೊಳಗೂ ನೀನು ಹಾಗೆ ನಡೆಯಬಹುದೆ? ಕೌರವವರ್ಯನೇ!

ದುರ್ಯೋಧನಾದಿ ನಿನ್ನ ಮಕ್ಕಳು ಧರ್ಮಾರ್ಥಗಳನ್ನು ಒತ್ತರಿಸಿ ಮನಸ್ಸು ಬಂದಂತೆ ಪರರನ್ನು ದುಃಖಪಡಿಸುತ್ತಿರುವರು; ಲೋಭದಿಂದ ಬುದ್ಧಿಗೆಟ್ಟು ಶಿಷ್ಟಾಚಾರವನ್ನು ಬಿಟ್ಟು, ಮರ್ಯಾದೆ ಮೀರಿ, ತಮ್ಮ ಬಂಧುಗಳಿಗೆ ಅನ್ಯಾಯ ವನ್ನು ಮಾಡುತ್ತಿರುವರು. ಇದರಿಂದುಂಟಾಗುವ ಘೋರ ವಿಪತ್ತಿಗೆ ಕೌರ ವರೇ ಕಾರಣ. ನೀನು ಉಪೇಕ್ಷೆ ಮಾಡಿದರೆ, ಲೋಕವೇ ನಾಶವಾಗುವುದು; ನೀನು ಮನಸ್ಸುಮಾಡಿದರೆ ಆ ವಿಪತ್ತನ್ನು ತೊಲಗಿಸಬಹುದು. ಭರತ ಶ್ರೇಷ್ಠನೇ! ಆ ಅಮಂಗಳವನ್ನು ನಿವಾರಿಸುವುದು ನಮ್ಮಿಬ್ಬರ ಕೈಯಲ್ಲಿರು ವುದು. ನೀನು ನಿನ್ನ ಮಕ್ಕಳನ್ನು ಸರಿಮಾಡು, ನಾನು ಪಾಂಡವರನ್ನು ಸರಿ ಮಾಡುವೆನು. ನಿನ್ನಾಜ್ಞೆಯನ್ನು ಪಾಲಿಸುವುದು ನಿನ್ನ ಮಕ್ಕಳ ಮತ್ತು ಅವರ ಸಂಗಡಿಗರ ಕರ್ತವ್ಯ. ಅವರಿಗೆ ಅದರಿಂದ ಕ್ಷೇಮವುಂಟು. ಪಾಂಡವರನ್ನು ಸಹಾಯರನ್ನಾಗಿ ಮಾಡಿಕೊ. ನೀನು ಎಷ್ಟು ಪ್ರಯಾಸಪಟ್ಟರೂ ನಿನಗೆ ಅವರಿಗಿಂತ ಆಪ್ತರು ದೊರೆಯರು. ಅವರ ಬೆಂಬಲವು ನಿನಗಿದ್ದಲ್ಲಿ ನೀನು ಲೋಕೇಶ್ವರನಾಗಬಹುದು, ನಿನಗೆ ವೈರಿಗಳೇ ಇರರು. ಯುದ್ಧವಾದಲ್ಲಿ ಸರ್ವವೂ ಹಾಳಾಗುವುದು. ರಾಜನೇ! ಇತ್ತಂಡವೂ ನಾಶವಾದರೆ, ನೀನು ಯಾವ ಧರ್ಮವನ್ನು ಸಾಧಿಸಿದಂತಾಗುವುದು? ಪಾಂಡವರು ಮಡಿಯಲಿ, ನಿನ್ನ ಮಕ್ಕಳೇ ಮಡಿಯಲಿ, ಅದರಲ್ಲಿ ನಿನಗೇನು ಸುಖ? ಹೇಳು. ಉಭಯ ಪಕ್ಷದವರೂ ಶೂರರೇ, ಉಭಯ ಪಕ್ಷದವರೂ ಕಾಳಗಕ್ಕೆ ಸೊಂಟಕಟ್ಟಿರು ವರು. ಆದರೆ ಯುದ್ಧಾಂತದಲ್ಲಿ ಪಾಂಡವರೆಲ್ಲರನ್ನೂ ನೋಡಬೇಕೆಂದರೆ ನೀನು ನೋಡಲಾರೆ, ಕೌರವರೆಲ್ಲರನ್ನೂ ನೋಡಬೇಕೆಂದರೂ ನೋಡಲಾರೆ. ಈ ಮಹತ್ತರವಾದ ಭಯದಿಂದ ಎಲ್ಲರನ್ನೂ ರಕ್ಷಿಸು. ಪೃಥ್ವಿಯ ರಾಜರೆಲ್ಲರೂ ಕೂಡಿರುವರು. ಕೋಪಾವಿಷ್ಟರಾಗಿ ಇವರು ಪ್ರಜೆಗಳೆಲ್ಲರನ್ನೂ ನಿರ್ಮೂಲ ಮಾಡಿಬಿಡುವರು. ಪ್ರಜೆಗಳನ್ನು ನಾಶಗೊಳಿಸಬೇಡ, ಅವ್ಯರೂ ಸತ್ಕುಲ ಪ್ರಸೂತರೂ ಗುಣಾಢ್ಯರೂ ಆದ ಈ ರಾಜರ ಮಂಡಲಿಯನ್ನು ಈ ಮಹಾ ಭಯದಿಂದ ರಕ್ಷಿಸು. ಪಾಂಡವರಲ್ಲಿ ನಿನಗಿದ್ದ ಪ್ರೀತಿಯನ್ನು ಮತ್ತೆ ಇಡು. ತಂದೆಯಿಲ್ಲದ ಮಕ್ಕಳನ್ನು ನೀನು ಕೈಹಿಡಿದು ಬೆಳೆಸಿದೆ. ಈಗಲೂ ಅವರನ್ನು ನಿನ್ನ ಮಕ್ಕಳಂತೆಯೇ ಸಲಹು. ಅವರನ್ನು ರಕ್ಷಿಸುವುದು ನಿನ್ನ ಭಾರ; ಅವರೊಳಗೂ ಈ ಸಂಕಟಕಾಲದಲ್ಲಿ ಅವರನ್ನು ರಕ್ಷಿಸುವುದು ನಿನ್ನ ಕರ್ತವ್ಯ. ಪಾಂಡವರು ಅಭಿವಾದನಪೂರ್ವಕವಾಗಿ—"ನಿಮ್ಮ ಆಜ್ಞಾನುಸಾರವಾಗಿ ನಾವೂ ನಮ್ಮ ಪರಿವಾರವೂ ಬಹು ದುಃಖವನ್ನು ಅನುಭವಿಸಿದೆವು, ವನವಾಸ ಮಾಡಿದೆವು, ಅಜ್ಞಾತವಾಸ ಮಾಡಿದೆವು; ನೀವು ಆಡಿದ ಮಾತಿಗೆ ತಪ್ಪುವ

ರಲ್ಲವೆಂದು ನಂಬಿದೆವು. ಈಗ ನಮ್ಮ ರಾಜ್ಯಾಂಶವನ್ನು ನಮಗೆ ಕೊಡಿರಿ. ನಿಮ್ಮಲ್ಲಿ ಗುರುತ್ವವಿಟ್ಟು ನಾವು ಬಹು ಕ್ಲೇಶವನ್ನು ಸಹಿಸಿದೆವು. ನೀವೇ ನಮಗೆ ತಾಯಿತಂದೆಗಳು; ನಮ್ಮನ್ನು ಧರ್ಮಮಾರ್ಗದಲ್ಲಿ ಇರಗೊಡಿಸಿರಿ. ನೀವು ಧರ್ಮಮಾರ್ಗದಲ್ಲಿರಿ' ಎಂದು ನಿನಗೆ ಬಿನ್ನೈಸಿ ಈ ನಿನ್ನ ಸಭೆಯಲ್ಲಿ ಸೇರಿದಿರುವ ರಾಜರಿಗೂ ಇಂತೆಂದು ಬಿನ್ನೈಸುವಂತೆ ನನಗೆ ಹೇಳಿರುವರು :— 'ಸಭಾಸದರು ಧರ್ಮಜ್ಞರಾಗಿದ್ದಲ್ಲಿ ಅನ್ಯಾಯವನ್ನು ಮಾಡಗೊಡಿಸರು. ಎಲ್ಲಿ ಧರ್ಮವು ಅಧರ್ಮದಿಂದ, ಸತ್ಯವು ಅಸ್ರತದಿಂದ ಹತವಾಗುವುದೋ ಅಲ್ಲಿ ಸಭಾಸದರೇ ಹತರಾದರೆಂದು ಅರಿಯಬೇಕು.' ಭರತಶ್ರೇಷ್ಠನೇ! ಪಾಂಡವರು ಆಡುವ ಮಾತು ಸತ್ಯವಾಗಿಯೂ ನ್ಯಾಯವಾಗಿಯೂ ಇರುವುದು. ಜನೇಶ್ವರ! ನೀನು ಅವರಿಗೆ ರಾಜ್ಯವನ್ನು ಕೊಡೆನೆನ್ನಬಹುದೆ? ಇಲ್ಲಿ ಸೇರಿರುವ ಮಹೀ ಪಾಲರು ಹೇಳಲಿ."

ತರುವಾಯ, ಕೃಷ್ಣನು ಪಾಂಡವರಿಗೆ ಧೃತರಾಷ್ಟ್ರ ದುರ್ಯೋಧನ ಶಕುನಿ ದುಃಶಾಸನರು ಮಾಡಿದ ಪ್ರಾಣಾಂತ ಹಿಂಸೆಯನ್ನೂ ದ್ರೋಹವನ್ನೂ, ದ್ರೌಪದಿಗೆ ಮಾಡಿದ ಮಾನಭಂಗವನ್ನೂ, ಪಾಂಡವರು ಅನುಭವಿಸಿದ ಕಷ್ಟ ಗಳನ್ನೂ, ಇಷ್ಟಾದರೂ ಅವರು ಕ್ಷತ್ರಿಯಧರ್ಮವನ್ನು ಬಿಡದೆ ಇದ್ದುದನ್ನೂ ಅನುವಾದಮಾಡಿ ಕೊನೆಗೆ—"ನಾನಾದರೋ ಅವರ ಶ್ರೇಯಸ್ಸನ್ನು ಇಚ್ಛ ಯಿಸುವಂತೆಯೇ ನಿಮ್ಮ ಶ್ರೇಯಸ್ಸನ್ನೂ ಇಚ್ಛಯಿಸುವೆನು. ನೀನು ಧರ್ಮದ ಮೇಲೆಯೂ ಸುಖದ ಮೇಲೆಯೂ ದೃಷ್ಟಿಯಿಡು. ಅನರ್ಥವನ್ನು ಅರ್ಥ ವೆಂದೂ, ಅರ್ಥವನ್ನು ಅನರ್ಥವೆಂದೂ ಎಣಿಸಿ, ಪ್ರಜೆಗಳನ್ನು ನಾಶಮಾಡ ಲೀಯಬೇಡ. ಲೋಭದಿಂದ ಪ್ರೇರಿತರಾಗಿ ನಿನ್ನ ಮಕ್ಕಳು ಅತಿ ದೂರ ಹೋಗಿದ್ದಾರೆ. ಅವರನ್ನು ತಡೆದಿಡು. ಪಾಂಡವರಾದರೋ ನಿನ್ನನ್ನು ಓಲ ಯಿಸುವುದಕ್ಕೆ ಹೇಗೋ ಹಾಗೆಯೇ ಕಾಳಗಕ್ಕೂ ಸೊಂಟ ಕಟ್ಟಿರುವರು. ಇಷ್ಟರಮೇಲೆ ನಿನ್ನ ಇಷ್ಟಬಂದಂತೆ ಮಾಡು" ಎಂದು ಹೇಳಿದನು.

ಶ್ರೀಕೃಷ್ಣನು ಹೇಳಿದುದೆಲ್ಲವನ್ನೂ ಕೇಳಿ ಧೃತರಾಷ್ಟ್ರನು—"ಕೃಷ್ಣ! ನೀನು ಹೇಳಿದುದೆಲ್ಲವೂ ಧರ್ಮಸಮ್ಮತವಾಗಿಯೂ ಸ್ವರ್ಗಕ್ಕೆ ಸೋಪಾನ ವಾಗಿಯೂ ಲೋಕಕ್ಕೆ ಹಿತಕರವಾಗಿಯೂ ಇರುವುದು. ಆದರೆ ದುರಾತ್ಮ ನಾದ ನನ್ನ ಮಗನು ನನ್ನ ಇಷ್ಟಾನುಸಾರವಾಗಿ ನಡೆಯನು. ನಾನು ಹೇಳಿ ಆಯಿತು; ನಮ್ಮ ಹಿತರಾದ ಭೀಷ್ಮ ದ್ರೋಣ ವಿದುರಾದಿಗಳು ಹೇಳಿ ಆಯಿತು; ಗಾಂಧಾರಿಯೂ ಹೇಳಿ ಆಯಿತು. ಅವನು ಯಾರ ಮಾತನ್ನೂ ಕೇಳುವನಲ್ಲ. ಆ ಪಾಪಿಷ್ಠನಿಗೆ ನೀನೇ ಬುದ್ಧಿಹೇಳಿ ನೋಡು" ಎಂದನು.

ಆಗ ಕೃಷ್ಣನು ದುರ್ಯೋಧನನನ್ನು ಸಂಬೋಧಿಸಿ—"ದುರ್ಯೋಧನ! ನಾನು ಹೇಳುವುದನ್ನು ಕೇಳು. ನೀನು ಮಹಾ ಪ್ರಾಜ್ಞರ ಕುಲದಲ್ಲಿ ಹುಟ್ಟಿದವನು. ಧರ್ಮದಿಂದ ನಡೆಯುವುದು ನಿನ್ನ ಕೆಲಸ. ದುಷ್ಕುಲದಲ್ಲಿ ಹುಟ್ಟಿ ದುರಾತ್ಮರೂ ನರಹಿಂಸಕರೂ ಲಜ್ಜಾಹೀನರೂ ಆಗಿರುವವರು ನೀನು ಉದ್ದೇಶಿಸಿರುವ ಕಾರ್ಯಗಳನ್ನು ಮಾಡುವರೇ ಹೊರತು ಮತ್ತಾರೂ ಮಾಡರು. ಲೋಕದಲ್ಲಿ ಸಾಧುಗಳ ವರ್ತನವು ಧರ್ಮಾರ್ಥಗಳೆರಡಕ್ಕೂ ಸಂಗತವಾಗಿರುವುದು. ಅಸಾಧುಗಳ ವರ್ತನವು ಅವುಗಳಿಗೆ ವಿರೋಧವಾಗಿರುವುದು. ನಿನ್ನ ಪ್ರವೃತ್ತಿಯು ಧರ್ಮಾರ್ಥಗಳಿಗೆ ವಿರೋಧವಾದುದು, ಘೋರವಾದುದು, ಕಡೆಗೆ ಅದು ಪ್ರಾಣಹಾನಿಗೂ ಕಾರಣವಾಗುವುದು. ನೀನು ಆ ಅನಿಷ್ಟವನ್ನು ನಿವಾರಿಸಿ ನಿನ್ನ ಸೋದರರ, ಮಿತ್ರರ, ಭೃತ್ಯರ ಹಿತವನ್ನು ಕೋರುವವನಾದರೆ ಪ್ರಾಜ್ಞರೂ ಶೂರರೂ ಮಹೋತ್ಸಾಹರೂ ವಿದ್ವಾಂಸರೂ ಆದ ಪಾಂಡವರ ಸಂಗಡ ಸಂಧಿಮಾಡಿಕೊ. ಅದು ಧೃತರಾಷ್ಟ್ರ ಭೀಷ್ಮ ದ್ರೋಣ ಪ್ರಮುಖರಿಗೂ ಜ್ಞಾತಿಗಳಿಗೂ ಮಿತ್ರರಿಗೂ—ಸರ್ವರಿಗೂ ಅಭಿಮತವಾಗಿರುವುದು, ಸರ್ವರಿಗೂ ಹಿತವಾಗಿಯೂ ಇರುವುದು. ಹೆಚ್ಚು ಮಾತೇಕೆ? ಆ ಸಂಧಿಯು ಜಗತ್ತಿಗೇ ಮಂಗಳಕರವಾಗಿರುವುದು. ನಿನ್ನ ತಾಯಿತಂದೆಗಳ ಆಜ್ಞಾನುಸಾರವಾಗಿ ನಡೆ. ಸುಪುತ್ರರಾದವರು ತಂದೆಯು ಹೇಳಿದುದೇ ತಮಗೆ ಹಿತವೆಂದೆಣಿಸುವರು. ಸಂಧಿಮಾಡಿಕೊಳ್ಳುವುದು ನಿಮ್ಮ ತಂದೆಗೆ ಇಷ್ಟ. ನೀನೂ ನಿನ್ನ ಮಂತ್ರಿಗಳೂ ಅದಕ್ಕೆ ಇಷ್ಟಪಡಿರಿ. ಯಾವನು ಸಜ್ಜನರ ಮತವನ್ನು ಅತಿಕ್ರಮಿಸಿ ದುರ್ಜನರ ಮತವನ್ನು ಹಿಡಿದು ನಡೆಯುವನೋ ಅವನು ತಾನೂ ಕೆಟ್ಟು, ತನ್ನ ಪಾಡನ್ನು ನೋಡಿ ತನ್ನ ಮಿತ್ರರೂ ವ್ಯಥೆಪಡುವಂತೆ ಮಾಡುವನು. ಸ್ವಕೀಯರನ್ನು ದ್ವೇಷಿಸಿ ಪರಕೀಯರ ಸಾಹಾಯ್ಯವನ್ನು ಕೋರುವವುಂಟೆ? ನೀನು ನಿನ್ನವರಾದ ಆ ವೀರರಲ್ಲಿ ವಿರೋಧವನ್ನು ಕಟ್ಟಿಕೊಂಡು ಅಪ್ರಯೋಜಕರು, ಅಸಮರ್ಥರು, ಮೂಢರು ಆದ ಅವರಿವರನ್ನು ತ್ರಾಹಿಯೆನ್ನುತ್ತೀಯಲ್ಲ! ನೀನು ಪಾಂಡವರನ್ನು ಚಿಕ್ಕಂದಿನಿಂದ ದುಃಖಪಡಿಸಿದೆ; ಆದರೂ ಆ ಮಹಾತ್ಮರು ನಿನ್ನಲ್ಲಿ ಕ್ರೋಧವಿಡದೆ ಉದಾರಭಾವವನ್ನೇ ತೋರಿಸುತ್ತಿರುವರು. ಅವರ ವಿಷಯದಲ್ಲಿ ನೀನೂ ಉದಾರಭಾವವನ್ನು ತೋರಿಸಬಾರದೆ? ಅವರು ನಿನ್ನ ಮುಖ್ಯ ಬಂಧುಗಳು. ಅವರ ವಿಷಯದಲ್ಲಿ ನೀನು ಕ್ರೋಧವಶನಾಗಿ ನಡೆಯಬೇಡ. ಧರ್ಮಾರ್ಥ ಕಾಮಗಳನ್ನು ಪಡೆಯುವುದಕ್ಕೆ ಧರ್ಮವೇ ಉಪಾಯವು. ರಾಜಮಂಡಲಿಯಲ್ಲಿ ಹೆಸರುಗೊಂಡಿರುವ ಈ ಸಮೃದ್ಧ ಸಾಮ್ರಾಜ್ಯವನ್ನು ನೀನು ಹೀನೋಪಾಯವಾದ ಅಧರ್ಮ

ದಿಂದ ದಕ್ಕಿಸಿಕೊಳ್ಳುವ ಯತ್ನಮಾಡುತ್ತೀಯೆ. ಯಾವನು ಧರ್ಮದಿಂದ ನಡೆಯುವವರನ್ನು ಕಪಟೋಪಾಯದಿಂದ ಕೆಡಿಸಲು ಯತ್ನಿಸುವನೋ ಅವನು ತಾನೇ ಕೆಡುವನು. ಕ್ರೋಧವನ್ನು ಜಯಿಸಿದವನು ಎಂತಹ ನಿಕೃಷ್ಟರಾದರೂ ಅನ್ಯರನ್ನು ಉಪೇಕ್ಷೆಮಾಡನು; ಇನ್ನು, ಸ್ವಕೀಯರೂ ಮಹಾತ್ಮರೂ ಆದ ಪಾಂಡವರನ್ನು ನೀನು ಉಪೇಕ್ಷೆಮಾಡಬಹುದೆ? ನಿನಗೆ ದುರ್ಜನಸಂಗಕ್ಕಿಂತ ಸಜ್ಜನರಾದ ಪಾಂಡವರ ಸಂಗವು ಹಿತಕರವಲ್ಲವೆ? ನೀನು ಅವರನ್ನೊಲಿಸಿ ಕೊಂಡರೆ ನಿನ್ನ ಇಷ್ಟಾರ್ಥಗಳೆಲ್ಲವೂ ಕೈಗೂಡವೆ? ಪಾಂಡವರು ಕಟ್ಟಿದ ರಾಜ್ಯವನ್ನು ಭೋಗಿಸುತ್ತ ಪಾಂಡವರನ್ನು ಉಪೇಕ್ಷಿಸಿ ಹೆದರ ಮರೆಹೊಗು ತ್ತೀಯೆ. ನೀನು ದುಃಶಾಸನಾದಿಗಳ ಮೇಲೆ ರಾಜ್ಯಭಾರವನ್ನು ಬಿಟ್ಟು ನಿನ್ನ ಪ್ರಭುತ್ವವು ಸುಸ್ಥಿರವಾಗಿರಬೇಕೆಂದು ಕೋರಬಹುದೆ? ಜ್ಞಾನದಲ್ಲಿ, ಧರ್ಮಾರ್ಥ ಗಳಲ್ಲಿ, ವಿಕ್ರಮದಲ್ಲಿ, ದುಃಶಾಸನ ಕರ್ಣ ಶಕುನಿಗಳು ಪಾಂಡವರಿಗೆ ಸರಿಯೆ, ಸಾಟಿಯೆ? ಕಲಿಭೀಮನ ಇದಿರಿಗೆ ಅವರು ನಿಲ್ಲಬಲ್ಲರೆ? ಭೀಷ್ಮ ದ್ರೋಣ ಕೃಪಾದಿಗಳಾಗಲಿ, ಈ ಕರ್ಣನಾಗಲಿ, ಅರ್ಜುನನ ಮುಂದೆ ನಿಲ್ಲಬಲ್ಲರೆ? ಅರ್ಜುನನು ಅಸಹಾಯಶೂರನು, ಅಜೇಯನು, ಅದರ ಮೇಲೆ ಅವನಿಗೆ ಬೆಂಬಲವಾಗಿ ನಾನೂ ಇರುವಲ್ಲಿ ಅವನನ್ನು ಯುದ್ಧಕ್ಕೆ ಕರೆಯಬಲ್ಲ ಧೀರ ನಾರು? ದುರ್ಯೋಧನ! ನಿನ್ನ ಮಕ್ಕಳನ್ನು ನೋಡು, ಸೋದರರನ್ನು ನೋಡು, ಜ್ಞಾತಿಗಳನ್ನೂ ಮಿತ್ರರನ್ನೂ ನೋಡು. ಸ್ವಾರ್ಥಕ್ಕಾಗಿ—ನಿನ್ನೊಬ್ಬನಿಗಾಗಿ—ಇವರೆಲ್ಲರನ್ನೂ ಬಲಿಕೊಡಬೇಡ; ಈ ಕೌರವಕುಲವನ್ನು ನಾಶಮಾಡಿ ಕುಲಘ್ನನೆನಿಸಿಕೊಳ್ಳಬೇಡ; ಕೀರ್ತಿಯನ್ನು ನೀಗಬೇಡ. ನೀನು ಸಂಧಿಗೊಪ್ಪಿದರೆ ಮಹಾರಥರಾದ ಪಾಂಡವರೇ ಸಾಮ್ರಾಜ್ಯದಲ್ಲಿ ನಿನ್ನ ತಂದೆ ಯನ್ನೂ, ಯೌವರಾಜ್ಯದಲ್ಲಿ ನಿನ್ನನ್ನೂ ಇಡುವರು. ನಿನಗೆ ತನ್ನಿಂದ ತಾನಾಗಿ ಬರುವ ಸಂಪದವನ್ನು ಉಪೇಕ್ಷಿಸಬೇಡ. ಪಾಂಡವರಿಗೆ ಅರ್ಧರಾಜ್ಯವನ್ನು ಕೊಟ್ಟು ಆ ಮಹದೈಶ್ವರ್ಯವನ್ನು ಸಂಪಾದಿಸು. ಪಾಂಡವರ ಸಂಗಡ ಸ್ನೇಹವನ್ನು ಬೆಳೆಯಿಸಿ ಚಿರಕಾಲ ಸುಖವಾಗಿರು" ಎಂದು ಬುದ್ಧಿವಾದವನ್ನು ಹೇಳಿದನು.

ಕೃಷ್ಣನ ಮಾತನ್ನು ಕೇಳಿ ಭೀಷ್ಮನು—"ಭರತರ್ಷಭ! ಕೃಷ್ಣನು ಸುಹೃದ ರಾದ ನೀವುಗಳು ಅನ್ಯೋನ್ಯವಾಗಿರಬೇಕೆಂದು ಹಾರೈಸಿ, ನಿನಗೆ ಹಿತಕರವಾದ ಮಾತುಗಳನ್ನು ಹೇಳಿದನು. ಅಯ್ಯಾ! ಅವನ ಮಾತನ್ನು ಕೇಳು, ಕೇಳದೆ ಹೋದರೆ ಶ್ರೇಯಸ್ಸಾಗಲಿ ಸುಖವಾಗಲಿ ನಿನಗೆಂದಿಗೂ ಲಭಿಸದು. ಆ ಮಹಾ ಬಾಹು ಧರ್ಮಾರ್ಥಗಳೆರಡಕ್ಕೂ ಸಾಧನವಾದ ಮಾತನ್ನೇ ಆಡಿರುವನು.

ಅದನ್ನು ಕಳೆದು ಪ್ರಜೆಗಳನ್ನು ಅಳಿಸಬೇಡ. ಲೋಕದಲ್ಲಿ ಬೆಳಗುತ್ತಿರುವ ಭಾರತಲಕ್ಷ್ಮಿಯನ್ನು ಧೃತರಾಷ್ಟ್ರನು ಜೀವಿಸಿರುವಾಗಲೆ ನಿನ್ನ ದೌರಾತ್ಮ್ಯದಿಂದ ನೀಗಿಕೊಳ್ಳುತ್ತೀಯೆ, ಜೋಕೆ! ಭಾರತಶ್ರೇಷ್ಠನೇ! ಕೃಷ್ಣನ ಮಾತನ್ನು ನೀನು ದುರಹಂಕಾರದಿಂದ ಅತಿಕ್ರಮಿಸಿದರೆ, ನೀನೂ ನಿನ್ನ ಅಮಾತ್ಯರೂ, ಮಿತ್ರ ಭ್ರಾತೃ ಬಾಂಧವರೂ ಹತರಾಗುವಿರಿ. ಕುಲಗೇಡಿಯೆಂದೆನಿಸಿಕೊಳ್ಳಬೇಡ, ತಾಯಿತಂದೆಗಳನ್ನು ಶೋಕಸಾಗರದಲ್ಲಿ ಮುಳುಗಿಸಬೇಡ" ಎಂದು ಹೇಳಿದನು.

ಭೀಷ್ಮನು ಸುಮ್ಮನಾದ ಬಳಿಕ ಆಚಾರ್ಯ ದ್ರೋಣನು ಕೋಪಾವಿಷ್ಟನಾಗಿ ನಿಟ್ಟುಸಿರುಬಿಡುತ್ತ—"ಅಯ್ಯಾ! ಕೇಶವನು ಆಡಿದ ಮಾತು ಧರ್ಮಾರ್ಥಯುಕ್ತವಾದುದು. ಭೀಷ್ಮನ ಮಾತು ಕೂಡ ಹಾಗೆಯೇ ಇರುವುದು. ಅವರು ಬಹುಶ್ರುತರು, ಪ್ರಾಜ್ಞರು, ಕ್ರೋಧವಿಲ್ಲದವರು, ನಿಮ್ಮ ಹಿತಚಿಂತಕರು; ಅವರು ಹೇಳಿದಂತೆ ಮಾಡು. ನಿನ್ನನ್ನು ಈಗ ಯುದ್ಧಕ್ಕೆ ಯಾರು ಪ್ರೋತ್ಸಾಹ ಮಾಡುತ್ತಿದ್ದಾರೋ ಅವರು ನಿನ್ನ ಹಿತೈಷಿಗಳಲ್ಲ. ಅವರಿಂದ ನಿನ್ನ ಇಷ್ಟಾರ್ಥವು ಕೈಗೂಡದು. ಯಾವ ಸೇನೆಯಲ್ಲಿ ಕೃಷ್ಣನೂ ಅರ್ಜುನನೂ ಇರುವರೋ ಆ ಸೇನೆಯನ್ನು ಜಯಿಸುವುದು ಸಾಧ್ಯವಲ್ಲ. ಭಾರತನೇ! ಅರ್ಜುನನು ಸಾಮಾನ್ಯನಲ್ಲ. ದೇವಕೀಪುತ್ರನನ್ನು ದೇವತೆಗಳೂ ಇದಿರಿಸಲಾರರು. ನಿನ್ನ ಹಿತಾರ್ಥವಾಗಿ ಹೇಳಬೇಕಾದುದೆಲ್ಲವನ್ನೂ ಹೇಳಿ ಆಯಿತು. ಇನ್ನು ನಿನ್ನ ಇಷ್ಟಬಂದಂತೆ ಮಾಡಿಕೊ" ಎಂದು ಕೃಷ್ಣ ಭೀಷ್ಮರ ಮಾತನ್ನು ಸಮರ್ಥಿಸಿ, ಅವರ ಮಾತಿಗೆ ವಿರೋಧವಾಗಿ ನಡೆದರೆ ಆಗುವ ಅನರ್ಥವನ್ನು ಸ್ಪಷ್ಟವಾಗಿ ಸೂಚಿಸಿದನು.

ಅನಂತರ, ವಿದುರನು ದುರ್ಯೋಧನನನ್ನು ನೋಡಿ—"ದುರ್ಯೋಧನ! ನಿನ್ನ ಮೇಲೆ ನನಗೆ ಕೋಪವಿಲ್ಲ; ವೃದ್ಧರಾದ ನಿಮ್ಮ ತಾಯಿತಂದೆಗಳಿಗಾಗಿ ನಾನು ದುಃಖಪಡುತ್ತೇನೆ. ಅವರು ನಿನ್ನಂತಹ ದುಷ್ಟಪುತ್ರನನ್ನು ದಿಕ್ಕನ್ನಾಗಿ ನಂಬಿ, ಮಿತ್ರರಿಲ್ಲದೆ, ಅಮಾತ್ಯರಿಲ್ಲದೆ, ಗತಿಹೀನರಾಗಿ ಅಲೆಯಬೇಕಾಗುವುದಲ್ಲ! ಕೇಡಿಗನು, ಕುಲನಾಶಕನು, ಪಾಪಿಷ್ಠನು ಆದ ನಿನ್ನಂತಹ ಮಗನನ್ನು ಹೆತ್ತು, ಅವರು ಗೋಳಿಡುತ್ತ ತಿರುಪೆತ್ತಿ ಹೊಟ್ಟೆಹೊರೆಯುತ್ತ ಭೂಮಿಯ ಮೇಲೆ ಇರಬೇಕಾಗುವುದಲ್ಲ! ಎಂದು ನಾನು ವ್ಯಥೆಪಡುತ್ತೇನೆ" ಎಂದನು.

ಆಗ ಧೃತರಾಷ್ಟ್ರನು, ಸೋದರರ ಮತ್ತು ರಾಜರ ನಡುವೆ ಕುಳಿತಿದ್ದ ದುರ್ಯೋಧನನನ್ನು ಸಂಬೋಧಿಸಿ—"ದುರ್ಯೋಧನ! ಶೌರಿಯ ಮಾತನ್ನು ಕೇಳು. ನಮ್ಮ ಯೋಗಕ್ಷೇಮಾರ್ಥವಾಗಿಯೇ ಅವನು ಬಂದಿರುವನು. ಈ ಸಮಯವನ್ನು ಬಿಟ್ಟರೆ ನೀನು ಕೆಟ್ಟೆ" ಎಂದನು.

ಧೃತರಾಷ್ಟ್ರನ ಮಾತನ್ನು ಕೇಳಿ ವ್ಯಥೆಪಟ್ಟು ಭೀಷ್ಮ ದ್ರೋಣರು ಇಂತೆಂದು ದುರ್ಯೋಧನನಿಗೆ ಮತ್ತೆ ಬುದ್ಧಿ ಹೇಳಿದರು:—ಕೃಷ್ಣಾರ್ಜುನರು ಯುದ್ಧಸನ್ನದ್ಧರಾಗಿರುವಾಗಲೆ, ಧೌಮ್ಯನು ಶತ್ರುಬಲಕ್ಷಯಕ್ಕಾಗಿ ಮಾರಣ ಹೋಮಮಾಡದಿರುವಾಗಲೆ, ಯುಧಿಷ್ಠಿರನ ಕೋಪವು ಕೆರಳದಿರುವಾಗಲೆ, ಅರ್ಜುನನು ಗಾಂಡೀವವನ್ನೂ ಭೀಮನು ಗದೆಯನ್ನೂ ಎತ್ತದಿರುವಾಗಲೆ, ನಕುಲ ಸಹದೇವ ಧೃಷ್ಟದ್ಯುಮ್ನಾದಿ ವೀರರು ರಣರಂಗವನ್ನು ಪ್ರವೇಶ ಮಾಡದಿರುವಾಗಲೆ ವೈರವನ್ನು ಬಿಟ್ಟು ಸಂಧಿಮಾಡಿಕೊ. ನೀನು ಯುಧಿಷ್ಠಿರನ ಅಡಿಗೆರಗು; ಯುಧಿಷ್ಠಿರನು ನಿನ್ನನ್ನು ಎರಡು ಕೈಗಳಿಂದಲೂ ಬಾಚಿ ಅಪ್ಪಿ ಕೊಳ್ಳಲಿ. ಭೀಮಸೇನನು ಶಾಂತನಾಗಿ ನಿನ್ನನ್ನು ಅಪ್ಪಿಕೊಂಡು, ಸಂಧಿಮಾಡಿ ಕೊಳ್ಳೋಣ ಎನ್ನಲಿ. ಅರ್ಜುನ ನಕುಲ ಸಹದೇವರು ನಿನ್ನನ್ನು ಅಭಿವಂದಿಸಲಿ. ನೀನು ಅವರ ಮಂಡೆಯನ್ನು ನಲ್ಮೆಯಿಂದಾಘ್ರಾಣಿಸು. ನೀನೂ ಪಾಂಡು ಪುತ್ರರೂ ಒಂದಾದುದನ್ನು ನೋಡಿ ಈ ನರಾಧಿಪರೆಲ್ಲರೂ ಆನಂದಾಶ್ರುವನ್ನು ಕರೆಯಲಿ. ನೀವೆಲ್ಲರೂ ಒಂದಾದ ಶುಭವಾರ್ತೆಯು ಸಮಸ್ತ ರಾಜಧಾನಿ ಗಳಲ್ಲಿಯೂ ಉದ್ಘೋಷಿತವಾಗಲಿ.''

ದುರ್ಯೋಧನನು ಕುರುಸಭೆಯಲ್ಲಿ ತನಗೆ ರುಚಿಸದ ಮಾತುಗಳನ್ನು ಕೇಳಿ ಇಂತೆಂದನು:—''ಕೇಶವ! ನೀನು ಎಲ್ಲವನ್ನೂ ಪರ್ಯಾಲೋಚಿಸಿ ಆ ಬಳಿಕ ಮಾತನಾಡುವುದು ಯುಕ್ತವು. ನೀನು ನನ್ನೊಬ್ಬನನ್ನೇ ನಿಂದಿಸುತ್ತೀಯೆ. ಹಾಗೆಯೇ ಭೀಷ್ಮ ದ್ರೋಣ ವಿದುರಾದಿಗಳೂ ಮತ್ತೆ ಯಾರನ್ನೂ ಮಾತ ನಾಡಿಸದೆ ನನ್ನೊಬ್ಬನನ್ನೇ ಜರಿಯುತ್ತಿರುವರು. ಅಂತಹ ಮಾಡಬಾರದ ಕೆಲಸವನ್ನು ನಾನೇನುಮಾಡಿದೆ? ಯುಧಿಷ್ಠಿರಾದಿಗಳು ತಾವಾಗಿ ಒಪ್ಪಿ ಶಕುನಿಯ ಸಂಗಡ ಜೂಜಾಡಿ ರಾಜ್ಯವನ್ನು ಸೋತರೆ ನಾನು ಮಾಡಿದ ಅಪರಾಧವೇನು? ಹಾಗೂ, ಅವರಿಂದ ಗೆದ್ದಿದ್ದ ಧನವೆಲ್ಲವನ್ನೂ ನಾನು ಅವರಿಗೆ ಹಿಂದಕ್ಕೆ ಕೊಡಿಸಿದೆನು. ಅವರು ಮತ್ತೆ ಜೂಜಾಡಿ ಸೋತು ವನವಾಸಕ್ಕೆ ಹೋದರೆ ಅದಕ್ಕೆ ನಾನು ಹೊಣೆಯೆ? ಅಶಕ್ತರಾಗಿದ್ದರೂ ಅವರು ಶಕ್ತರಂತೆ ನಮ್ಮ ಸಂಗಡ ವಿರೋಧಕಟ್ಟಿಕೊಂಡರೆ ಅದು ನನ್ನ ತಪ್ಪೆ? ಅವರು ನಮ್ಮನ್ನು ಕೊಲ್ಲಲಿಚ್ಛೈಸುವಹಾಗೆ ಅವರಿಗೆ ನಾವೇನು ಅಂತಹ ಅಪಕಾರವನ್ನು ಮಾಡಿದೆವು? ಅವರಿಗೆ ಹೆದರಿ ನಾವು ಬೇರೆ ತಲೆಬಾಗಿಸುವ ರಲ್ಲ; ರಣದಲ್ಲಿ ಒಂದು ವೇಳೆ ಸತ್ತರೂ ಸಾಯುವೆವು. ಶರಶಯ್ಯೆಯಲ್ಲಿ ಮಲಗುವುದು ಕ್ಷತ್ರಿಯಧರ್ಮ, ಜೀವಗಳ್ಳನಾಗಿ ಶತ್ರುವಿಗೆ ಶರಣಾಗತ ನಾಗುವನು ಕ್ಷತ್ರಿಯನೆ? ಬ್ರಾಹ್ಮಣನಿಗೆ ಪ್ರಣಾಮಮಾಡುವುದೇನೋ

ಧರ್ಮ, ಮತ್ತೆ ಯಾರಿಗೂ ನಾನು ಮಾಡೆನು. ಏನೇ ಆಗಲಿ, ನಾನು ಪಾಂಡವರಿಗೆ ರಾಜ್ಯಾಂಶವನ್ನು ಕೊಡೆನು. ಧೃತರಾಷ್ಟ್ರನು ಜೀವಂತನಾಗಿರುವ ವರೆಗೂ ನಾವೂ ಅವರೂ ಶಸ್ತ್ರಗಳನ್ನು ಎತ್ತಿಟ್ಟು ಅವನ ಕೈಯ ಕೆಳಗಿರೋಣ. ನಾನು ಬಾಲಕನೂ ಪರಾಧೀನನೂ ಆಗಿದ್ದಾಗ ನಮ್ಮ ತಂದೆ ಅಜ್ಞಾನದಿಂದಲೋ ಭಯದಿಂದಲೋ ರಾಜ್ಯವನ್ನು ಪಾಂಡವರ ಪಾಲು ಮಾಡಿದ್ದನು. ನಾನು ಬದುಕಿರುವ ವರೆಗೂ ಪಾಂಡವರಿಗೆ ರಾಜ್ಯವಾಗಲಾರದು; ಅಷ್ಟೇಕೆ? ಸೂಜಿಯ ಮೊನೆಯೂರುವಷ್ಟು ನೆಲವನ್ನು ಕೂಡ ಅವರಿಗೆ ಕೊಡೆನು.”

ದುರ್ಯೋಧನನ ಮಾತನ್ನು ಕೇಳಿ ಕೃಷ್ಣನು—“ನಿನಗೆ ವೀರಶಯ್ಯೆಯಾಗಬೇಕೊ? ಏಕಾಗಬಾರದು? ನಿನಗೆ ಮಾತ್ರವೇ ಅಲ್ಲ. ನಿನ್ನ ಅಮಾತ್ಯರಿಗೂ ವೀರಶಯ್ಯೆಯು ಲಭಿಸುವುದು! ಎಲೈ ಮೂಢ! ಪಾಂಡವರಿಗೆ ನೀನು ಯಾವ ಅನ್ಯಾಯವನ್ನೂ ಮಾಡಲಿಲ್ಲವೆಂದು ಗಳಹುತ್ತೀಯೆ? ನರಾಧಿಪರೇ! ನೀವು ಹೇಳಿರಿ. ಎಲೋ ನರಾಧಮನೇ! ಪಾಂಡವರ ಸಿರಿಯನ್ನು ನೋಡಿ ಸೈರಿಸಲಾರದೆ ನೀನೂ ನಿನ್ನ ದುರ್ಮಂತ್ರಿ ಶಕುನಿಯೂ ಅವರನ್ನು ದ್ಯೂತಕ್ಕೆ ಸೆಳೆಯಲಿಲ್ಲವೆ? ಪ್ರಾಜ್ಞನೇ! ಅಕ್ಷದ್ಯೂತದಿಂದ ಸಾಧುಗಳ ಬುದ್ಧಿಯು ಕೂಡ ಕೆಡುವುದು. ಇನ್ನು, ಆಡುವವರು ದುಷ್ಟರಾದಲ್ಲಿ ವಿರೋಧವೂ ವಿಪತ್ತೂ ತಪ್ಪವು ಎಂಬುದನ್ನು ನೀನು ಕಾಣೆಯಾ? ಕುಲೀನೆ, ಶೀಲಸಂಪನ್ನೆ, ಪತಿವ್ರತೆ, ಮಿತ್ರಾತ್ರರೂ ಅಲ್ಲ—ಸಾಕ್ಷಾತ್ ಭ್ರಾತೃಭಾರ್ಯೆ—ಇಂತಹ ರಾಜಪತ್ನಿಯನ್ನು, ಮಾನಿನಿಯನ್ನು ಯಾವ ನೀಚನಾದರೂ ರಾಜಸಭೆಗೆಳೆದು ತಂದು ತುಚ್ಛ ಭಾಷೆಯನ್ನಾಡುವನೆ? ನೀನು ಆ ಕೆಲಸಕ್ಕೂ ಹೇಸಲಿಲ್ಲ. ಆ ಸಾಧುಗಳು ವನವಾಸಕ್ಕೆ ಹೊರಟಾಗ ಕರ್ಣನೂ ದುಃಶಾಸನನೂ ನೀನೂ ಕೂಡ ಅವರನ್ನು ಆಡಬಾರದ ಮಾತುಗಳನ್ನಾಡಿ ಅವಮಾನಪಡಿಸಲಿಲ್ಲವೆ? ನೀನು ವಾರಣಾವತದಲ್ಲಿ ತಾಯಿಯ ಸಮೇತರನ್ನಾಗಿ ಅವರನ್ನು ಸುಟ್ಟು ಭಸ್ಮಮಾಡುವ ಪ್ರಯತ್ನವನ್ನು ಮಾಡಲಿಲ್ಲವೆ? ಇನ್ನೂ ಎಷ್ಟು ಬಗೆಯಲ್ಲಿ ನೀನು ಅವರನ್ನು ನಾಶಮಾಡುವ ಪ್ರಯತ್ನ ಮಾಡಲಿಲ್ಲ? ಪಾಂಡವರಲ್ಲಿ ನಿನಗೆ ಅಷ್ಟು ದ್ವೇಷಬುದ್ಧಿಯಿದ್ದರೂ, ನೀನು ಅವರಿಗೆ ಅಷ್ಟು ವಂಚನೆ ಮಾಡಿದರೂ, ಅವರನ್ನು ಅಷ್ಟು ನೋಯಿಸಿದರೂ ನೀನು ಅಪರಾಧಿಯಲ್ಲವೆಂದು ಸೊರಪುತ್ತೀಯಲ್ಲ: ನಿನ್ನದು ಎಂತಹ ಗುಂಡಿಗೆ! ಇಂತಹ ದುರಾಚಾರಿಯಾದ ನೀನು ರಾಜಪದವಿಯಲ್ಲಿರುವುದಕ್ಕೆ ಯೋಗ್ಯನೆ! ಪಾಂಡವರು ತಮ್ಮ ಹಿರಿಯರ ಪಾಲಿನ ರಾಜ್ಯವನ್ನು ಯಾಚಿಸುತ್ತಿದ್ದಾರೆ; ನೀನು ಕೊಡೆ. ನೀನಾಗಿ ಕೊಡುವ

ಕಾಲವು ಬರುವುದು. ನಿನ್ನ ತಾಯಿತಂದೆಗಳೂ ಭೀಷ್ಮ ದ್ರೋಣ ವಿದುರರೂ ಸಂಧಿಮಾಡಿಕೊ ಎಂದು ಎಷ್ಟೋ ಬಗೆಯಲ್ಲಿ ನಿನ್ನನ್ನು ಬೇಡಿದರೂ, ನೀನು ಕೇಳಲಿಲ್ಲ. ಇದು ನೀಚಬುದ್ಧಿಯಲ್ಲವೆ? ಸಂಧಿಯಿಂದ ನಿನಗೆ ಮಹತ್ತರವಾದ ಲಾಭವುಂಟು. ಆಪ್ತರ ಮಾತನ್ನು ಮೀರಿ ನಡೆದರೆ ನಿನ್ನ ಇಷ್ಟಾರ್ಥವು ಕೈಗೂಡದು, ಖಂಡಿತವಾಗಿ ತಿಳಿ. ನೀನು ಉದ್ದೇಶಿಸಿರುವ ಕಾರ್ಯವು ಧರ್ಮಸಮ್ಮತವಾದುದೂ ಅಲ್ಲ, ಯಶಸ್ಕರವಾದುದೂ ಅಲ್ಲ" ಎಂದನು.

ಕೃಷ್ಣನಾಡಿದ ಮಾತುಗಳನ್ನು ಕೇಳಿ ದುಃಶಾಸನನು—"ರಾಜನೇ! ನೀನಾಗಿ ಪಾಂಡವರ ಸಂಗಡ ಸಂಧಿಗೊಪ್ಪದಿದ್ದರೆ ಅಯ್ಯನೂ ಭೀಷ್ಮ ದ್ರೋಣರೂ ಸೇರಿ ನಿನ್ನನ್ನೂ ನನ್ನನ್ನೂ ವಿಕರ್ಣನ ಮಗನನ್ನೂ ಕೈಕಾಲು ಗಳನ್ನು ಕಟ್ಟಿ ಪಾಂಡವರ ವಶಮಾಡಿಬಿಡುವರು" ಎಂದು ಹೇಳಿದನು.

ಒಡನೆಯೇ ದುರ್ಯೋಧನನು ಧೃತರಾಷ್ಟ್ರ ಭೀಷ್ಮ ದ್ರೋಣ ವಿದುರ ಕೃಷ್ಣ ಪ್ರಮುಖರನ್ನು ಲಕ್ಷ್ಯಮಾಡದೆಯೇ ಸಭೆಯಿಂದ ಎದ್ದುಹೋದನು. ಅವನ ಹಿಂದೆಯೇ ಅವನ ತಮ್ಮಂದಿರು, ಮಂತ್ರಿಗಳು, ರಾಜರು ಕೂಡ ಹೊರಟರು.

ಲಜ್ಜಾಹೀನನೂ ದುಷ್ಟನೂ ಆದ ಆ ದುರ್ಯೋಧನನ ನಡತೆಯನ್ನು ನೋಡಿ ಭೀಷ್ಮನು—"ಯಾವನು ಕೋಪಕ್ಕೊಳಗಾಗಿ ಧರ್ಮಾರ್ಥಗಳನ್ನು ತ್ಯಜಿಸಿ ಕಷ್ಟಕ್ಕೀಡಾಗುವನೋ ಅವನ ಪಾಡನ್ನು ನೋಡಿ ಅವನ ಶತ್ರುಗಳು ನಗರೆ? ದುರಾತ್ಮನಾದ ಈ ರಾಜಕುಮಾರನು ರಾಜ್ಯಮದದಿಂದ ಸೊಕ್ಕಿ ಕ್ರೋಧಾಂಧನಾಗಿ ತನ್ನ ಇಷ್ಟಸಾಧನವನ್ನರಿಯದಿರುವನು. ಜನಾರ್ದನ! ರಾಜರೆಲ್ಲರೂ ಮರುಳಾಗಿ ದುರ್ಯೋಧನನನ್ನೂ ಅವನ ಮಂತ್ರಿಗಳನ್ನೂ ಅನುಸರಿಸುತ್ತಿರುವುದನ್ನು ನೋಡಿದರೆ ಕ್ಷತ್ರಿಯರೆಲ್ಲರಿಗೂ ಇದು ವಿನಾಶ ಕಾಲವೆಂದು ತೋರುವುದು" ಎಂದನು.

ಆಗ ಕಮಲನೇತ್ರನಾದ ಶ್ರೀಕೃಷ್ಣನು, ಸಭೆಯಲ್ಲಿ ಉಳಿದಿದ್ದ ಭೀಷ್ಮ ದ್ರೋಣ ಪ್ರಮುಖರನ್ನು ಕುರಿತು—"ಕುರುವೃದ್ಧರೆಲ್ಲರೂ ಸೇರಿ ರಾಜ್ಯೈಶ್ವರ್ಯದಿಂದ ಕೊಬ್ಬಿರುವ ಈ ರಾಜನ ಸೊಕ್ಕಿಳಿಸಿ ಬಲಾತ್ಕಾರದಿಂದಲಾದರೂ ಅವನನ್ನು ಮಾರ್ಗಕ್ಕೆ ತರದಿರುವುದು ಅನ್ಯಾಯ. ನಿಮ್ಮ ಹಿತಾರ್ಥವಾಗಿ ನಾನೊಂದುಪಾಯವನ್ನು ಹೇಳುತ್ತೇನೆ, ಕೇಳಿರಿ. ಆ ಕೆಲಸವನ್ನು ಮಾಡು ವುದಕ್ಕೆ ಕಾಲವೂ ಪ್ರಾಪ್ತವಾಗಿದೆ. ಅದೇನೆನ್ನುವಿರೊ? ದುರ್ಯೋಧನ ಕರ್ಣ ಶಕುನಿ ದುಃಶಾಸನರನ್ನು ಕೈಕಾಲು ಕಟ್ಟಿ ಪಾಂಡವರ ಬಳಿಗೆ ಕೊಟ್ಟುಕಳುಹಿಸಿರಿ. ಅರಿಂದಮರೇ! ಹಾಗೆ ಮಾಡುವುದು ಅನ್ಯಾಯವಲ್ಲ.

ತ್ಯಜೇತ್ಕುಲಾರ್ಥೇ ಪುರುಷಂ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ |
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ||

ಎಂಬಂತೆ, ಕುಲರಕ್ಷಣಾರ್ಥವಾಗಿ ಒಬ್ಬ ಪುರುಷನನ್ನೂ, ಗ್ರಾಮರಕ್ಷಣಾರ್ಥವಾಗಿ ಕುಲವನ್ನೂ, ಜನಪದರಕ್ಷಣಾರ್ಥವಾಗಿ ಗ್ರಾಮವನ್ನೂ, ಆತ್ಮರಕ್ಷಣಾರ್ಥವಾಗಿ ಪೃಥಿವಿಯನ್ನೂ ತ್ಯಜಿಸಬೇಕು ಎಂದು ಪ್ರಾಜ್ಞರು ಹೇಳುವರು. ಪ್ರಾಜ್ಞನೇ! ದುರ್ಯೋಧನನನ್ನು ಕಟ್ಟಿಹಾಕು. ಪಾಂಡವರೊಡನೆ ಸಂಧಿಮಾಡಿಕೊಂಡು ನಿನ್ನ ಕುಲವನ್ನುಳಿಸು. ಕ್ಷತ್ರಿಯಶ್ರೇಷ್ಠನೇ! ನಿನ್ನ ದೆಸೆಯಿಂದ ಸಮಸ್ತ ಕ್ಷತ್ರಿಯಕುಲವೂ ನಾಶವಾಗದಂತಿರಲಿ'' ಎಂದು ಹೇಳಿದನು.

ಶ್ರೀ ಕೃಷ್ಣನ ಸುಭಾಷಿತವನ್ನು ಕೇಳಿ ಧೃತರಾಷ್ಟ್ರನು ದೂರದರ್ಶಿನಿಯಾದ ಗಾಂಧಾರಿಯನ್ನು ಕರೆಯಿಸಿ—“ಪ್ರಾಜ್ಞೆ! ರಾಜ್ಯೈಶ್ವರ್ಯ ಲೋಭದಿಂದ ನಿನ್ನ ಮಗನು ರಾಜ್ಯವೊಂದನ್ನೇ ಅಲ್ಲ, ಪ್ರಾಣವನ್ನೂ ನೀಗಿಕೊಳ್ಳುವುದರಲ್ಲಿದ್ದಾನೆ'' ಎಂದು ನುಡಿದನು.

ಆ ಮಾತಿಗೆ ಯಶಸ್ವಿನಿಯಾದ ಆ ರಾಜಪುತ್ರಿಯು—“ನನ್ನ ಮಗನನ್ನು ಕರೆಯಿಸು. ಧರ್ಮಾರ್ಥಗಳನ್ನು ಬಿಟ್ಟವನು ರಾಜ್ಯವಾಳುವುದಕ್ಕೆ ಅರ್ಹನಲ್ಲ. ಆದರೂ ವಿನೀತನಲ್ಲದ ಈ ಅಪ್ರಯೋಜಕನಿಗೆ ರಾಜ್ಯವು ಲಭಿಸಿದೆ. ಇದಕ್ಕೆ ನಿನಗಿರುವ ಪುತ್ರಸ್ನೇಹವೇ ಕಾರಣ. ನೀನೇ ಅವನನ್ನು ಹೆಚ್ಚಿಸಿದೆ. ಅವನು ಪಾಪಾತ್ಮನೆಂದು ತಿಳಿದು ತಿಳಿದೂ ಅವನ ದಾರಿಯನ್ನೇ ಹಿಡಿಯುತ್ತೀಯೆ; ಅವನ ಬುದ್ಧಿ ಹೋಗುವಂತೆಯೇ ನಿನ್ನ ಬುದ್ಧಿಯೂ ಹೋಗುತ್ತಿದೆ! ಅಶಿಕ್ಷಿತನಾಗಿ ಬೆಳೆದ ಅವನನ್ನು ಈಗ ದಾರಿಗೆ ತರಲಾಗುವುದೆ? ದುಷ್ಟ ಸಹವಾಸದಲ್ಲಿರುವ ಮೂರ್ಖನಿಗೆ ಪಟ್ಟವನ್ನು ಕಟ್ಟಿದ ಫಲವನ್ನು ನೀನು ಅನುಭವಿಸುತ್ತಿದ್ದೀಯೆ'' ಎಂದು ಗಂಡನನ್ನು ಆಕ್ಷೇಪಿಸಿದಳು.

ಆ ವೇಳೆಗೆ ವಿದುರನು ದುರ್ಯೋಧನನನ್ನು ಮತ್ತೆ ಸಭೆಗೆ ಕರೆದುಕೊಂಡು ಬರಲು, ಗಾಂಧಾರಿ ಮಗನ ಕಡೆಗೆ ತಿರುಗಿ—“ದುರ್ಯೋಧನ! ಭರತಶ್ರೇಷ್ಠನಾದ ನಿನ್ನ ತಂದೆಯೂ, ಭೀಷ್ಮ ದ್ರೋಣ ಕೃಪ ವಿದುರ ಪ್ರಮುಖರಾದ ನಿನ್ನ ಹಿತಚಿಂತಕರೂ ಹೇಳಿದ ಹಾಗೆ ಸಂಧಿಮಾಡಿಕೊ. ಪ್ರಾಜ್ಞನೇ! ರಾಜ್ಯವನ್ನು ಸಂಪಾದಿಸುವುದಾಗಲಿ ಭೋಗಿಸುವುದಾಗಲಿ ಕಾಮವೊಂದರಿಂದಲೇ ಶಕ್ಯವಾಗದು. ಯಾವನು ಕಾಮಕ್ರೋಧಗಳ ವಶವಾಗುವನೋ ಅವನು ರಾಜ್ಯವನ್ನು ಶೀಘ್ರವಾಗಿಯೇ ನೀಗಿಕೊಳ್ಳುವನು. ಮೊದಲು ತನ್ನನ್ನು ಜಯಿಸಬಲ್ಲವನು, ತನ್ನಲ್ಲಿರುವ ಕಾಮಕ್ರೋಧಗಳನ್ನು ಅಡಗಿಸಬಲ್ಲವನು

ಲೋಕವನ್ನೇ ಜಯಿಸಬಲ್ಲನು ಎಂಬುದನ್ನು ನೀನರಿಯೆಯಾ? ಪ್ರಭುತ್ವವು ಮಹತ್ತರವಾದ ಕಾರ್ಯವು. ದುರಾತ್ಮರಾದವರು ರಾಜ್ಯವನ್ನು ಆಶಿಸುವರೇ ಹೊರತು ಲಭಿಸಿದ ರಾಜ್ಯವನ್ನು ಳಿಸಿಕೊಳ್ಳಲಾರರು. ಯುದ್ಧಮಾಡುವುದರಲ್ಲಿ ಕಲ್ಯಾಣವಿಲ್ಲ, ಧರ್ಮವಿಲ್ಲ, ಅರ್ಥವಿಲ್ಲ; ಇನ್ನು ಸುಖವೆಲ್ಲಿಯದು? ಪಾಂಡವರ ಪಾಲನ್ನು ಪಾಂಡವರಿಗೆ ಕೊಟ್ಟು ಅವರ ವಿರೋಧವನ್ನು ಹರಿಸಿಕೊ. ನೀನೂ ನಿನ್ನ ಮಂತ್ರಿಗಳೂ ಬಾಳುವುದಕ್ಕೆ ಅರ್ಧರಾಜ್ಯವು ಸಾಲದೆ? ಹದಿಮೂರು ವರ್ಷಗಳ ಕಾಲ ಪಾಂಡವರು ನೊಂದುದು ಸಾಕು. ಕೋಪಾವೇಶದಿಂದ ಕುರುವಂಶವನ್ನು ನಿರ್ಮೂಲಮಾಡಬೇಡ. ಭೀಷ್ಮ ದ್ರೋಣಾದಿಗಳು ಪಿಂಡಕ್ಕೆ ಹಂಗಿಗರಾಗಿ ಪ್ರಾಣವಾದರೂ ಕೊಡುವರೇ ಹೊರತು ಪಾಂಡವರ ಮೇಲೆಂದಿಗೂ ಕೋಪಿಸಿಕೊಳ್ಳರು, ಅವರಿಗೆ ಅಮಂಗಳವನ್ನು ಕೋರರು. ದುರ್ಯೋಧನ! ದುರಾಶೆಯನ್ನು ಬಿಡು; ಪಾಂಡವರ ಪಾಲನ್ನು ಪಾಂಡವರಿಗೆ ಕೊಡು" ಎಂದಳು.

ತಾಯಿಯ ಹಿತವಚನವನ್ನು ಅನಾದರಮಾಡಿ ದುರ್ಯೋಧನನು ರೇಗಿ ಮತ್ತೆ ಸಭೆಯನ್ನು ಬಿಟ್ಟು ಹೊರಟು ಕರ್ಣ ಶಕುನಿ ದುಃಶಾಸನರ ಕೂಡೆ ಆಲೋಚನೆ ಮಾಡಿ ಕೃಷ್ಣನನ್ನು ಹಿಂಗಟ್ಟುಮುರಿಕಟ್ಟಿ ಸೆರೆಯಲ್ಲಿಟ್ಟರೆ ಪಾಂಡವರು ಸುಮ್ಮನಾಗುವರೆಂದೆಣಿಸಿ, ಆ ದುಷ್ಕರವಾದ ಕಾರ್ಯವನ್ನು ಮಾಡಲೆಣಿಸಿದನು. ಕೃಷ್ಣನು ಅವನ ಕೂಟಯುಕ್ತಿಯನ್ನು ಲಕ್ಷ್ಯವೇ ಮಾಡಲಿಲ್ಲ; ವಿದುರ ಧೃತರಾಷ್ಟ್ರರು ದುರ್ಯೋಧನನನ್ನೂ ಅವನ ದುರ್ಮಂತ್ರಿಗಳನ್ನೂ ಛೀಗುಟ್ಟಿದರು. ಮಗನು ತನ್ನ ದುರಾಶೆಯನ್ನೂ ದುರಾಗ್ರಹವನ್ನೂ ಬಿಡುವನಲ್ಲವೆಂದು ಧೃತರಾಷ್ಟ್ರನು ಶ್ರೀಕೃಷ್ಣನು ಹೊರಡುವ ಸಮಯದಲ್ಲಿ ಅವನಿಗೆ ಹೇಳಿಕೊಂಡನು.

ಶ್ರೀಕೃಷ್ಣನು ಧೃತರಾಷ್ಟ್ರ ದ್ರೋಣ ಭೀಷ್ಮ ವಿದುರ ಬಾಹ್ಲಿಕ ಕೃಪರನ್ನುದ್ದೇಶಿಸಿ ಇಂತೆಂದನು:—"ಅಶಿಷ್ಟನೂ ದುಷ್ಟನೂ ಆದ ದುರ್ಯೋಧನನು ರೋಷದಿಂದ ಸಭೆಯಿಂದೆದ್ದು ಹೋದುದನ್ನು ನೀವೆಲ್ಲರೂ ಕಂಡಿರಿ; ಧೃತರಾಷ್ಟ್ರನು ತನ್ನ ಮಕ್ಕಳು ಅಂಕೆಯಲ್ಲಿಲ್ಲವೆಂದು ಹೇಳಿದುದನ್ನೂ ನೀವು ಕೇಳಿದಿರಿ. ಇನ್ನು ನಾನು ಯುಧಿಷ್ಠಿರನ ಬಳಿಗೆ ಹೊರಡುವೆನು."

ಹೀಗೆಂದು ನುಡಿದು ಶ್ರೀಕೃಷ್ಣನು ಸಭಾಸದರನ್ನು ಬೀಳ್ಕೊಂಡು ತನ್ನ ಶುಭ್ರ ರಥವನ್ನೇರಿ ಕುಂತಿಯ ಬಳಿಗೆ ಹೋಗಿ ಅಭಿವಾದನಮಾಡಿ, ಕುರುಸಭೆಯಲ್ಲಿ ನಡೆದ ವೃತ್ತವನ್ನು ಸಂಗ್ರಹವಾಗಿ ಆಕೆಗೆ ತಿಳಿಸಿ, ದುರ್ಯೋಧನನಿಗೂ ಅವನ ವಶವರ್ತಿಗಳಿಗೂ ಕಾಲವು ಪಕ್ವವಾಗಿದೆಯೆಂದು ಸೂಚಿಸಿ, ತಾನು

ಪಾಂಡವರ ಬಳಿಗೆ ಹೋಗಿಬರುವೆನೆಂದು ಹೇಳಿ ಪಾಂಡವರಿಗೆ ಹೇಳತಕ್ಕುದೇನಾದರೂ ಉಂಟೇ ಎಂದು ಆಕೆಯನ್ನು ಕೇಳಿದನು.

ಆ ಪ್ರಾಜ್ಞೆ—

"ಕೇಶವ! ನಾನು ಹೀಗೆ ಹೇಳಿದೆನೆಂದು ಅವರವರಿಗೆ ತಿಳಿಸು":—

"ನಿನ್ನ ರಾಜಧರ್ಮವು ಶಿಥಿಲವಾಗುತ್ತಿದೆ. ಸ್ವಧರ್ಮದಮೇಲೆ ದೃಷ್ಟಿಯಿಡು. ಬ್ರಹ್ಮನು ದುಷ್ಟರನ್ನು ನಿಗ್ರಹಿಸುವುದಕ್ಕೂ ಶಿಷ್ಟರನ್ನು ಪರಿಪಾಲಿಸುವುದಕ್ಕೂ ಕ್ಷತ್ರಿಯರನ್ನು ಸೃಷ್ಟಿಸಿರುವನು. ಅವರು ಬಾಹುಬಲದಿಂದ ಜೀವಿಸತಕ್ಕವರು" ಎಂದು ಯುಧಿಷ್ಠಿರನಿಗೂ;

"ಅರ್ಜುನನು ಭೀಮನ ಬೆಂಬಲದಿಂದ ಸಮಸ್ತ ಪೃಥ್ವಿಯನ್ನೂ ಗೆದ್ದು ಯಶಸ್ವಿಯಾಗಿ, ನಷ್ಟವಾದ ದಾಯಭಾಗವನ್ನು ವಾಸುದೇವನ ಸಾಹಾಯ್ಯದಿಂದ ರಣದಲ್ಲಿ ಸಂಪಾದಿಸುವನು ಎಂಬರ್ಥವನ್ನು, ಅರ್ಜುನನನ್ನು ಹೆತ್ತ ಸಮಯದಲ್ಲಿ ಆಕಾಶವಾಣಿಯಿಂದ ನಾನು ಕೇಳಿದೆನು" ಎಂದು ಅರ್ಜುನನಿಗೂ;

"ಯಾವ ಕಾರ್ಯಕ್ಕಾಗಿ ಕ್ಷತ್ರಿಯಳಾದವಳು ಮಗನನ್ನು ಹೆರುವಳೋ ಆ ಕಾರ್ಯಕ್ಕೆ ಕಾಲವೊದಗಿದೆ. ವೀರಪುರುಷರು ಯುದ್ಧವು ಸಂಘಟಿಸಿದಾಗ ಧೈರ್ಯಸ್ಥೈರ್ಯವನ್ನು ಬಿಡರು" ಎಂದು ಭೀಮಸೇನನಿಗೂ;

"ಎಲೌ! ಮಹಾಭಾಗೆ! ಸತ್ಕುಲಜಾತೆ! ಕೀರ್ತಿಸಂಪನ್ನೆ! ನನ್ನ ಮಕ್ಕಳ ವಿಷಯದಲ್ಲಿ ನೀನು ನಡೆದ ನಡತೆಯು ನಿನ್ನ ಕುಲಗೌರವಕ್ಕೂ ಗುಣಕ್ಕೂ ಅನುರೂಪವಾಗಿರುವುದು" ಎಂದು ದ್ರೌಪದಿಗೂ;

ಕ್ಷತ್ರಿಯಧರ್ಮದಿಂದ ಜೀವಿಸುವವನು ವಿಕ್ರಮದಿಂದ ಗಳಿಸಿದ ಅರ್ಥದಿಂದ ಸಂತೋಷಪಡುವನು. ನೀವು ಧರ್ಮಾಚರಣೆಯಲ್ಲಿರುವವರು. ನಿಮ್ಮ ಕಣ್ಣಮುಂದೆಯೇ ದುರ್ಯೋಧನಾದಿಗಳು ಪಾಂಚಾಲಿಯನ್ನು ಕೆಟ್ಟ ಮಾತುಗಳನ್ನಾಡಿ ಅವಮಾನಪಡಿಸಿದರು. ಅದನ್ನು ಕ್ಷಮಿಸುವರುಂಟೆ?" ಎಂದು ನಕುಲ ಸಹದೇವರಿಗೂ;

ತಿಳಿಸೆಂದು ಕೃಷ್ಣನ ಮೂಲಕವಾಗಿ ತನ್ನ ಮಕ್ಕಳಿಗೂ ಸೊಸೆಗೂ ಸಂದೇಶವನ್ನು ಹೇಳಿಕಳುಹಿಸಿದಳು.

ಕುಂತಿಯು ಆಡುತ್ತಿದ್ದ ಮಾತುಗಳನ್ನು ಭೀಷ್ಮ ದ್ರೋಣರು ಕೇಳಿ ಅವಿಧೇಯನಾದ ದುರ್ಯೋಧನನ ಬಳಿಗೆ ಹೋಗಿ ಬೇಸರದೆ ಮತ್ತೆ ಇಂತೆಂದು ಬುದ್ಧಿ ಹೇಳಿದರು:—"ಕೃಷ್ಣನ ಸನ್ನಿಧಿಯಲ್ಲಿ ಕುಂತಿಯು ಉಗ್ರವಾಗಿ, ಪರಂತು ಅರ್ಥವತ್ತಾಗಿಯೂ ಧರ್ಮಯುಕ್ತವಾಗಿಯೂ, ಆಡಿದ ಮಾತು

ಗಳನ್ನು ನೀನು ಕೇಳಿದೆಯಾ? ಆಕೆಯ ಮಕ್ಕಳು ಆಕೆಯು ಹೇಳಿದ ಹಾಗೆಯೇ ಮಾಡುವರು. ಅದರೊಳಗೂ ವಾಸುದೇವನು ಆಕೆಯ ಮಾತನ್ನು ಒಪ್ಪಿರುವು ದರಿಂದ ಅವರು ಹಾಗೆ ಮಾಡದೆ ಬಿಡರು. ಯುಧಿಷ್ಠಿರನ ಸಾಹಾಯ್ಯಕ್ಕೆ ಮಲ್ಲರಾದ ಸೋದರರೂ ಮಹಿಮಾನ್ವಿತನಾದ ಕೃಷ್ಣನೂ ಇರುವಾಗ ಅವನು ನಿನ್ನನ್ನು ಕ್ಷಮಿಸನು. ನೀನು ನಿನ್ನ ಮಂತ್ರಿಗಳೊಡನೆ ಹೋಗಿ ಪಾಂಡವರ ಸ್ನೇಹವನ್ನು ಮಾಡಿ ಅವರ ಸಂಗಡ ಸುಖವಾಗಿರುವ ಪ್ರಯತ್ನಮಾಡು. ಯುದ್ಧವು ಬೇಡ. ದುರ್ನಿಮಿತ್ತಗಳು ಕಾಣುತ್ತಲಿವೆ. ಈಗ ಸಂಧಿವಿಗ್ರಹಗಳು ನಿನ್ನ ಕೈಯಲ್ಲಿವೆ."

ದುರ್ಯೋಧನನು ಅವರ ಮಾತನ್ನು ಕೇಳಿ ಹುಬ್ಬು ಗಂಟುಹಾಕಿಕೊಂಡು ಯಾವ ಮಾತನ್ನೂ ಆಡದೆ ತಲೆಬಾಗಿ ಸುಮ್ಮನಿರಲು, ಭೀಷ್ಮನು—"ಧರ್ಮ ರಾಯನು ಹಿರಿಯರ ಶುಶ್ರೂಷೆಯನ್ನು ಮಾಡುವವನು, ಅಸೂಯೆಯಿಲ್ಲದವನು, ಬ್ರಹ್ಮಜ್ಞಾನಿ, ಸತ್ಯವಾದಿ. ಅಂತಹವನ ಮೇಲೆ ನಾವು ಕದನಕ್ಕೆ ಹೋಗ ಬೇಕಲ್ಲಾ! ಇದಕ್ಕಿಂತ ದುಃಖಕರವಾದುದೇನಿದೆ?" ಎಂದುಕೊಂಡನು.

ಆಗ ದ್ರೋಣಾಚಾರ್ಯನು—"ಕ್ಷತ್ರಿಯಧರ್ಮವನ್ನವಲಂಬಿಸಿ ಮಗನಿ ಗಿಂತಲೂ ಅಧಿಕನಾದ ಅರ್ಜುನನ ಮೇಲೆ ನಾನು ಯುದ್ಧಮಾಡಬೇಕಾಗಿ ಬಂದಿರುವುದಲ್ಲಾ! ಕ್ಷತ್ರಿಯಜೀವನವು ಕೆಟ್ಟಜೀವನ! ಪಾಪಾತ್ಮನಾದವನು ಬೇಡವೆಂದರೂ ಪಾಪವನ್ನೇ ಇಚ್ಛಿಸುವನು; ಪುಣ್ಯಾತ್ಮನಾದವನು ಪಾಪ ದಿಂದ ಪ್ರೇರಿತನಾದರೂ ಪುಣ್ಯವನ್ನೇ ಇಚ್ಛಿಸುವನು. ನೀನು ಪಾಂಡವರಿಗೆ ವಂಚನೆ ಮಾಡುತ್ತಿದ್ದರೂ ಅವರು ನಿನಗೆ ಪ್ರಿಯವನ್ನೇ ಮಾಡಲಿಚ್ಛಿಸುವರು. ಕುರುವೃದ್ಧನೂ ನಾನೂ ವಿದುರನೂ ವಾಸುದೇವನೂ—ಇಷ್ಟುಮಂದಿ ಹೇಳಿದರೂ ನಿನ್ನ ಹಿತವನ್ನು ನೀನು ಅರಿಯದೆ ಹೋದೆ. ನಿನಗೆ ದಂಡು ದಾಳಿ ಇದೆ ಎಂಬ ಹೆಮ್ಮೆಯಿಂದ ಪಾಂಡವಸೇನೆಯ ಮೇಲೆ ಬೀಳಬೇಕೆಂದಿದ್ದೀಯೆ. ಪಾಂಡವರ ಐಶ್ವರ್ಯವನ್ನು ಅಪಹರಿಸಿ ನಿನ್ನದೆಂದೆಣಿಸುತ್ತೀಯೆ. ಪಾಂಡ ವರು ನಿನ್ನ ರಾಷ್ಟ್ರಕ್ಕೆ ದಂಡೆತ್ತಿಬಂದು ರಾಜ್ಯವನ್ನು ಗೆಲ್ಲುವ ಯತ್ನಮಾಡು ತ್ತಿದ್ದಾರೆ. ನಾವಿಬ್ಬರೇನೋ ನಮ್ಮ ಕರ್ತವ್ಯವನ್ನು ಮಾಡಿದೆವು. ನಮ್ಮ ಕಾಲವಾಯಿತು, ನಾವು ಕೃತಕೃತ್ಯರಾದೆವು. ನೀನು ಪಾಂಡವರ ಸಂಗಡ ಯುದ್ಧಮಾಡಿದರೆ, ಸುಖವನ್ನೂ ರಾಜ್ಯವನ್ನೂ ಧರ್ಮವನ್ನೂ ಮಿತ್ರರನ್ನೂ ನೀಗಿಕೊಂಡು ಮಹದ್ವ್ಯಸನಕ್ಕೆ ಗುರಿಯಾಗುವೆ. ಪತಿವ್ರತಾಶಿರೋಮಣಿಯೂ ಸತ್ಯವಾದಿನಿಯೂ ಆದ ದ್ರೌಪದಿಯು ಪಾಂಡವರಿಗೆ ಜಯವಾಗಲೆಂದು ಹರಸುತ್ತಿರುವಲ್ಲಿ, ಅವರನ್ನು ನೀನು ಹೇಗೆ ತಾನೆ ಜಯಿಸಬಲ್ಲೆ? ಕೌರವರ

ಹಿತಾರ್ಥವಾಗಿ ಆ ವೀರರ ಸಂಗಡ ಸಂಧಿಮಾಡಿಕೊ; ಮಿತ್ರನ ಕರ್ತವ್ಯದ ಮೇಲೆ ದೃಷ್ಟಿಯಿಟ್ಟು ಇನ್ನೂ ಒಂದು ಸಾರಿ ಹೇಳುತ್ತೇನೆ ಕೇಳು, ಯುದ್ಧಕ್ಕೆ ಹೋಗಿ ನಾಶವಾಗಬೇಡ" ಎಂದನು.

ಇತ್ತ, ಉಪಪ್ಲಾವ್ಯಕ್ಕೆ ಹೊರಟ ಶ್ರೀಕೃಷ್ಣನು ಕರ್ಣನನ್ನು ತನ್ನ ರಥದ ಮೇಲೆ ಕುಳ್ಳಿರಿಸಿಕೊಂಡು ಅವನ ಸಂಗಡ ಮಾತನಾಡುತ್ತ—"ಕರ್ಣ! ನೀನು ಕುಂತಿಯ ಹೊಟ್ಟೆಯಲ್ಲಿ ಯುಧಿಷ್ಠಿರನಿಗೆ ಮುಂದೆಯೇ ಹುಟ್ಟಿದವನು. ಶಾಸ್ತ್ರರೀತಿಯಾಗಿ ನೀನು ಪಾಂಡುವಿನ ಮಗನು. ನಾನು ನಿನಗೆ ರಾಜ್ಯಾಭಿಷೇಕ ಮಾಡಿಸುವೆನು; ನೀನು ರಾಜನಾಗಿರು, ಧರ್ಮರಾಯನು ಯುವರಾಜನಾಗಿರಲಿ" ಎಂದು ಹೇಳಿದನು.

ಅದಕ್ಕೆ ಕರ್ಣನು—"ಕೃಷ್ಣ! ನೀನು ನನ್ನ ಮೇಲಣ ಪ್ರೀತಿಯಿಂದ ನನ್ನ ಶ್ರೇಯಸ್ಸನ್ನು ಕೋರಿಯೇ ಈ ಮಾತನ್ನು ಹೇಳಿದೆ. ನಾನು ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನಾದರೂ ಸೂತಕುಲದಲ್ಲಿ ಹುಟ್ಟಿದ ಅಧಿರಥನೂ ಅವನ ಹೆಂಡತಿಯೂ ನನ್ನನ್ನು ಮಗನಂತೆ ಸಾಕಿ ಸಲಹಿದರು. ನನ್ನ ಹೆಂಡತಿಯೂ ಸೂತಕುಲದವಳೇ. ಅವಳ ದೆಸೆಯಿಂದ ನನಗೆ ಮಕ್ಕಳೂ ಮೊಮ್ಮಕ್ಕಳೂ ಆಗಿರುವರು. ಭೂಮಂಡಲವನ್ನು ಕೊಟ್ಟರೂ ನಾನು ಅವರೆಲ್ಲರನ್ನೂ ತೊರೆದು ಪಾಂಡವರ ಕಡೆಗೆ ಬಾರೆನು. ನಾನು ದುರ್ಯೋಧನನ ಆಶ್ರಯಬಲದಿಂದ ಹದಿಮೂರು ವರ್ಷಗಳು ರಾಜ್ಯವನ್ನಾಳಿದೆನು. ಅವನು ನನ್ನ ಸಾಹಾಯ್ಯವನ್ನು ನಚ್ಚಿ ಪಾಂಡವರಮೇಲೆ ಯುದ್ಧಸನ್ನಾಹವನ್ನು ಮಾಡುತ್ತ ನನ್ನನ್ನು ಅರ್ಜುನನಿಗೆ ಪ್ರತಿಯೋಧನನ್ನಾಗಿ ವರಿಸಿರುವನು. ಪಾಂಡವರಿಗೆ ಅಂಜಿಯಾಗಲಿ ಅವರ ರಾಜ್ಯಕ್ಕೆ ಆಸೆಪಟ್ಟಾಗಲಿ, ನಾನು ದುರ್ಯೋಧನನಿಗೆ ದ್ರೋಹಮಾಡೆನು. ನಾನು ಯುದ್ಧಕ್ಕೆ ಹಿಮ್ಮೆಟ್ಟಿದರೆ ನನಗೂ ಅರ್ಜುನನಿಗೂ ಕೂಡ ಅಪಕೀರ್ತಿ ಬರುವದು. ನನಗೆ ರಾಜ್ಯವು ಬಂದಲ್ಲಿ ನಾನು ಅದನ್ನು ದುರ್ಯೋಧನನಿಗೆ ಕೊಟ್ಟುಬಿಡುವೆನೇ ಹೊರತು ನಾನು ಇಟ್ಟುಕೊಳ್ಳೆನು. ಯುಧಿಷ್ಠಿರನು ಗೆದ್ದಲ್ಲಿ ಮಹಾರಾಯನಾಗಿ ಅವನು ರಾಜ್ಯವನ್ನಾಳಲಿ. ಪೃಥ್ವಿಯೆಲ್ಲವೂ ಧರ್ಮರಾಯನ ರಾಷ್ಟ್ರವಾಗುವುದು ಯುಕ್ತವೇ" ಎಂದನು.

ಅದಕ್ಕೆ ಕೃಷ್ಣನು—"ಹಾಗಾದರೆ, ನಿನಗೆ ರಾಜ್ಯವು ಬೇಡವೊ? ನಾನು ಹೇಳಿದ ಉಪಾಯವು ನಿನಗೆ ಸೇರದೊ? ಇನ್ನು, ಭೂಮಂಡಲಕ್ಕೆ ವಿನಾಶ ಕಾಲ ಬಂದಹಾಗಿದೆಯೇ. ಪಾಂಡವರು ಗೆಲ್ಲುವುದು ನಿಶ್ಚಯ. ವಿನಾಶ ಕಾಲಕ್ಕೆ ಧರ್ಮವೇ ಅಧರ್ಮವಾಗಿ ತೋರುವುದು" ಎಂದನು.

ಕರ್ಣನು ಆ ವಿನಾಶಕ್ಕೆ ಹೆಡುಸಿಯೂ ತಾನೂ ದುರ್ಯೋಧನ ದುಃಶಾಸ

ನೂ ನಿಮಿತ್ತವೆಂದೊಪ್ಪಿಕೊಂಡು—"ಕೃಷ್ಣ! ರಣದಲ್ಲಿ ಗೆದ್ದು ಬದು ಬಂದರೆ ಇಲ್ಲಿಯೇ ನಿನ್ನ ದರ್ಶನಕ್ಕೆ ಬರುವೆನು; ಸತ್ತರೆ ಸ್ವರ್ಗದಲ್ಲಿ ನಿನ್ನ ಸ ಕಾಣುವೆನು" ಎಂದು ನುಡಿದು ಕೃಷ್ಣನನ್ನು ಪ್ರೇಮದಿಂದ ಆಲಿಂಗನೆಮಾ ಕೊಂಡು ವಿಷಾದಪಡುತ್ತ ಅವನನ್ನು ಬೀಳ್ಕೊಂಡು ಹಸ್ತಿನಾಪುರ ಹಿಂದಿರುಗಿದನು.

ಹನ್ನೆರಡನೆಯ ಅಧ್ಯಾಯ

ಕುರುಕ್ಷೇತ್ರ, ಭೀಷ್ಮನ ಸೇನಾಧಿಪತ್ಯ, ಶರಶಯ್ಯೆ

ಇಂತು ಯುದ್ಧವು ಅನಿವಾರ್ಯವಾಯಿತು. ನಯ ವಿನಯಕ್ಕೆ ಬಗೆ ಹರಿಯದ ಜ್ಞಾತಿಗಳ ವಿವಾದವು ಗಾಂಡೀವದಿಂದಲೂ ಗದೆಯಿಂದಲೂ ಬಗೆಹರಿಯಬೇಕಾಯಿತು.

ಯುಧಿಷ್ಠಿರನು ಕೃಷ್ಣನ ಸಮಕ್ಷದಲ್ಲಿ ತಮ್ಮಂದಿರನ್ನು ಕಲೆಯ ಹಾಕಿ— "ನರೋತ್ತಮರೇ! ನಮ್ಮ ವಿಜಯಾರ್ಥವಾಗಿ ಏಳಕ್ಷೌಹಿಣೀ ಸೇನೆಯಿದೆ; ಅಲ್ಲದೆ, ನಮ್ಮಲ್ಲಿ ದ್ರುಪದ, ವಿರಾಟ, ಧೃಷ್ಟದ್ಯುಮ್ನ, ಶಿಖಂಡಿ, ಸಾತ್ಯಕಿ, ಚೇಕಿತಾನ, ಭೀಮಸೇನ ಎಂಬೀ ಏಳ್ವರು ವಿಖ್ಯಾತ ವೀರರಿರುವರು. ಇವರೆಲ್ಲರೂ ವೇದವಿದರು, ಶೂರರು, ಸುಚರಿತ್ರರು, ನೀತಿವಂತರು, ಯುದ್ಧ ವಿಶಾರದರು, ಅಸ್ತ್ರವಿದ್ಯೆಯನ್ನು ಬಲ್ಲವರು. ಎಲ್ಲರೂ ಸೇನಾಧಿಪತ್ಯಕ್ಕೆ ತಕ್ಕ ವರೇ. ಇವರೊಳಗೆ ವ್ಯೂಹರಚನೆಯನ್ನು ಬಲ್ಲವರಾಗಿ ಭೀಷ್ಮನ ಇದಿರಿಗೆ ನಿಲ್ಲಲು ಸಮರ್ಥರಾರು?" ಎಂದು ಅವರವರ ಅಭಿಪ್ರಾಯವನ್ನು ಕೇಳಿದನು.

ಒಬ್ಬೊಬ್ಬರು ಒಬ್ಬೊಬ್ಬನ ಹೆಸರನ್ನು ಹೇಳಿದರು. ಕಡೆಗೆ ಶ್ರೀಕೃಷ್ಣನು— ಮಹಾರಾಜನೇ! ಈಗ ಹೇಳಿದವರೆಲ್ಲೂ ವಿಕ್ರಮಿಗಳೇ ಅಹುದು; ಅಕ್ಷೌಹಿಣೀ ಪತಿಗಳಾಗಿ ನಿನ್ನ ಶತ್ರುಗಳ ಮುಂದೆ ನಿಂತು ಕಾದುವವರೇ ಅಹುದು. ನಮ್ಮ ಸೈನ್ಯವೂ ಸಾರವತ್ತಾಗಿದೆ; ದುರ್ಯೋಧನನ ಸೈನ್ಯವನ್ನು ಮರ್ದನಮಾಡ ಬಲ್ಲುದು. ಸೇನಾಧಿಪತ್ಯಕ್ಕೆ ಮಾತ್ರ ಧೃಷ್ಟದ್ಯುಮ್ನನು ತಕ್ಕವನೆಂದು ನನಗೆ ತೋರುವುದು" ಎಂದನು.

ನೆರೆದಿದ್ದ ರಾಜರೆಲ್ಲರೂ ಕೃಷ್ಣನ ವಚನಕ್ಕೆ ಅಭಿಮತರಾಗಿ ಹರ್ಷದಿಂದು ದ್ಘೋಷಿಸಿದರು. ಯುಧಿಷ್ಠಿರಾದಿ ಸರ್ವರೂ ಕುರುಕ್ಷೇತ್ರವನ್ನು ಪ್ರವೇಶ ಮಾಡಿದರು. ಯುಧಿಷ್ಠಿರನು ದ್ರುಪದಾದಿ ಏಳ್ವರನ್ನು ವಿಧಿವತ್ತಾಗಿ ಅಕ್ಷೌ

ಹಿಣಿಯ ಅಧಿಪತಿಗಳನ್ನಾಗಿಟ್ಟು ಧೃಷ್ಟದ್ಯುಮ್ನನನ್ನು ಸರ್ವ ಸೈನ್ಯಾಧಿಪತ್ಯಕ್ಕೆ ನೇಮಿಸಿ ಅಭಿಷೇಕಮಾಡಿದನು. ಆ ಸೇನಾಪತಿಗಳೆಲ್ಲರಿಗೂ ಅರ್ಜುನನು ಅಧಿಪತಿಯಾದನು. ಕೃಷ್ಣನು ಅರ್ಜುನನಿಗೆ ನೇತೃವೂ ಸಾರಥಿಯೂ ಆದನು.

ಇತ್ತ, ದುರ್ಯೋಧನನು ತನ್ನ ಹನ್ನೊಂದುಕ್ಷೌಹಿಣೀ ಸೈನ್ಯಕ್ಕೆ ಕೃಪ, ದ್ರೋಣ, ಶಲ್ಯ, ಜಯದ್ರಥ, ಸುದಕ್ಷಿಣ, ಕೃತವರ್ಮ, ಅಶ್ವತ್ಥಾಮ, ಕರ್ಣ, ಭೂರಿಶ್ರವಸ್ಸು, ಶಕುನಿ, ಬಾಹ್ಲಿಕ, ಎಂಬೀ ವೀರರನ್ನು ಬೇರೆಬೇರೆ ಸೇನಾನಾಯಕರನ್ನಾಗಿ ನೇಮಿಸಿದನು. ಆ ಬಳಿಕ ಅವನು ರಾಜರೆಲ್ಲರೊಡನೆ ಭೀಷ್ಮನ ಬಳಿಗೆ ಹೋಗಿ ಕೈಜೋಡಿಸಿ ನಿಂತು—"ಪ್ರಣೇತಾರನು ಇಲ್ಲದಿದ್ದರೆ ಮಹತ್ತಮವಾದ ಸೈನ್ಯವಾದರೂ ಯುದ್ಧದಲ್ಲಿ ಭಗ್ನವಾಗುವುದು. ಯಾರಿಬ್ಬರ ಬುದ್ಧಿಯೂ ಸಮವಾಗಿರದು. ದಳಪತಿಗಳಲ್ಲಿ ಪರಸ್ಪರವಾಗಿ ಅಸೂಯೆ ಇರುವ ಸಂಭವವೂ ಉಂಟು. ಅವರು ಬುದ್ಧಿವಂತನಾದ ಒಬ್ಬ ಪ್ರಣೇತೃವಿನ ಆಜ್ಞೆಗೊಳಪಡದೆ ಸ್ವಬುದ್ಧಿ ವಶವರ್ತಿಗಳಾಗಿ ನಡೆದರೆ ಅಪಜಯವು ತಪ್ಪದು. ಸೇನಾಪತಿಯು ಸುಕುಶಲನು, ಶೂರನು, ಶುದ್ಧನು, ಹಿತೈಷಿಯೂ ಆಗಿರಬೇಕು. ಯಾರು ಅಂತಹ ಗುಣಸಂಪನ್ನನಾದ ಸೇನಾಪತಿಯನ್ನು ವರಿಸುವರೋ ಅವರು ರಣದಲ್ಲಿ ಹಗೆಯನ್ನು ಗೆಲ್ಲುವರು. ನೀನು ನನ್ನ ಹಿತೈಷಿ, ಧರ್ಮನಿರತನು. ನಿನ್ನನ್ನು ಸಂಹಾರಮಾಡುವಷ್ಟು ಸಮರ್ಥರಾರೂ ಇಲ್ಲ. ನಮಗೆ ನೀನು ಸೇನಾಪತಿಯಾಗು" ಎಂದು ಬೇಡಿದನು.

ಅದಕ್ಕೆ ಭೀಷ್ಮನು—"ಮಹಾಬಾಹುವೇ! ನೀನು ಹೇಳಿದುದೆಲ್ಲವೂ ಸರಿ. ನನಗೆ ನೀವು ಹೇಗೋ ಪಾಂಡವರೂ ಹಾಗೆಯೇ. ಅವರ ಹಿತವನ್ನೂ ನಾನು ಚಿಂತಿಸಬೇಕು. ನಾನು ನಿಮ್ಮ ಪರವಾಗಿ ನಿಂತು ಯುದ್ಧಮಾಡುತ್ತೇನೆ. ಒಂದು ಕ್ಷಣದಲ್ಲಿ ನಾನು ಜಗತ್ತೆಲ್ಲವನ್ನೂ ನಿರ್ಮಾನುಷವನ್ನಾಗಿ ಮಾಡಬಲ್ಲೆನು, ಆದರೆ ಪಾಂಡುಪುತ್ರರನ್ನು ಮಾತ್ರ ನಾನೆಂದಿಗೂ ಕೆಡಿಸಲಾರೆನು. ಅವರು ನನ್ನನ್ನು ಕೊಲ್ಲುವ ವರೆಗೂ ನಾನು ಅವರ ದಂಡಿನಲ್ಲಿ ದಿನಕ್ಕೆ ಹತ್ತು ಸಹಸ್ರ ಯೋಧರನ್ನು ಕತ್ತರಿಸಿಹಾಕುವೆನು. ಆದರೆ ಕರ್ಣನು ರಣದಲ್ಲಿ ತನ್ನ ಮುಂದೆ ನಾನಲ್ಲವೆಂದು ಪ್ರತಾಪವನ್ನು ಹೇಳಿಕೊಳ್ಳುತ್ತಾನೆ. ಆದುದರಿಂದ ಕರ್ಣನೇ ಮೊದಲು ಯುದ್ಧಮಾಡಲಿ, ಅವನು ಒಲ್ಲೆನೆಂದರೆ ನಾನು ಮಾಡುವೆನು" ಎಂದನು.

ಅದನ್ನು ಕೇಳಿ ಕರ್ಣನು—"ಮಹಾರಾಜನೇ! ಭೀಷ್ಮನು ಬದುಕಿರುವ ವರೆಗೂ ನಾನು ಯುದ್ಧಮಾಡೆನು. ಭೀಷ್ಮನು ಹತನಾದ ಮೇಲೆ ನಾನು ಗಾಂಡೀವಧಾರಿಯಾದ ಅರ್ಜುನನ ಸಂಗಡ ಕಾದುವೆನು" ಎಂದನು.

ದುರ್ಯೋಧನನು ವಿಧಿವತ್ತಾಗಿ ಭೀಷ್ಮನಿಗೆ ಸರ್ವ ಸೇನಾಧಿಪತ್ಯಕ್ಕೆ ಪಟ್ಟವನ್ನು ಕಟ್ಟಿ ಬ್ರಾಹ್ಮಣರಿಗೆ ಭೂರಿದಕ್ಷಿಣೆಯನ್ನು ಕೊಟ್ಟು ಅವರ ಹರಕೆಯನ್ನು ಕೈಕೊಂಡು, ಸೋದರರೊಡಗೂಡಿ ಸೇನಾಸಮೇತನಾಗಿ ಭೀಷ್ಮನನ್ನು ಮುಂದಿಟ್ಟುಕೊಂಡು ಕುರುಕ್ಷೇತ್ರಕ್ಕೆ ಹೊರಟನು. ಅಲ್ಲಿ ತೃಣ ಕಾಷ್ಠ ಸಮೃದ್ಧವಾದ ಸಮಭೂಮಿಯಲ್ಲಿ ದುರ್ಯೋಧನನು ತನ್ನ ಶಿಬಿರವನ್ನು ಸ್ಥಾಪಿಸಿದನು.

ಬೆಳಗಾಯಿತು; ಧೃತರಾಷ್ಟ್ರನ ಕುಮಾರರು ಸೈನ್ಯದ ನಡುವೆ ಬಂದು ನಿಂತರು. ದುರ್ಯೋಧನನು ಭೀಷ್ಮಾದಿಗಳನ್ನು ಒಬ್ಬೊಬ್ಬರನ್ನಾಗಿ ಕರೆದು— “ಪಾಂಡವರ ಚತುರಂಗಬಲವು ಸಾಗರ ಸದೃಶವಾಗಿರುವುದು. ಧೃಷ್ಟ ದ್ಯುಮ್ನನನ್ನು ಮುಂದುಮಾಡಿಕೊಂಡು ಧನುರ್ಧಾರಿಗಳಾದ ಭೀಮಾರ್ಜುನ ಪ್ರಭೃತಿಗಳು ಆ ಚತುರಂಗಬಲವನ್ನು ರಕ್ಷಿಸುತ್ತಿರುವರು. ಜಯಿಸಲು ದುರ್ಘಟವಾದೀ ಅದ್ಭುತ ಸೈನ್ಯವನ್ನು ಎಷ್ಟು ದಿವಸದಲ್ಲಿ ನೀವು ನಾಶ ಮಾಡಬಲ್ಲಿರಿ” ಎಂದು ಕೇಳಿದನು.

ಅದಕ್ಕೆ ಭೀಷ್ಮನು—“ನನ್ನ ಮಹಾಸ್ತ್ರಗಳು ಒಂದೊಂದು ಸಾರಿಗೆ ಶತಸಹಸ್ರ ಭಟರನ್ನು ಕೊಲ್ಲುವುವು. ನಾನು ಸಮರದಲ್ಲಿ ನಿಂತು ಅವುಗಳನ್ನು ಪ್ರಯೋಗಮಾಡಿದರೆ ಒಂದು ತಿಂಗಳಲ್ಲಿ ಆ ಮಹಾ ಸೈನ್ಯವನ್ನು ಇಲ್ಲ ವೆನಿಸಿಬಿಡುವೆನು” ಎಂದನು.

ಆ ಬಳಿಕ ದ್ರೋಣಾಚಾರ್ಯನು—“ಮಹಾಬಾಹುವೇ! ನಾನು ಮುದುಕ, ಶಕ್ತಿಯಿಲ್ಲದವನು, ಭೀಷ್ಮನಿಗೆ ಹೇಗೋ ಹಾಗೆ ನನಗೂ ಒಂದು ತಿಂಗಳು ಬೇಕಾಗುವುದು. ಇಷ್ಟೇ ನನ್ನ ಪರಮಶಕ್ತಿ” ಎಂದನು.

ಕರ್ಣನು ತನ್ನ ಬಾರಿ ಬರುತ್ತಲೆ, ಐದು ರಾತ್ರಿಗಳಲ್ಲಿ ಪಾಂಡವಬಲವನ್ನು ಅಪ್ಪಳಿಸಿ ಕೆಡಹುವೆನೆಂದು ಪ್ರತಿಜ್ಞೆಮಾಡಿದನು.

ಅವನ ಪ್ರತಿಜ್ಞೆಯನ್ನು ಕೇಳುತ್ತಲೆ ಭೀಷ್ಮನು ಗಟ್ಟಿಯಾಗಿ ನಕ್ಕು— “ನೀನು ಅಂತಹ ಶೂರನೇ ಸರಿ! ಪಾರ್ಥನು ಧನುರ್ಬಾಣಗಳನ್ನೂ ಶಂಖ ವನ್ನೂ ಹಿಡಿದು ವಾಸುದೇವನ ಸಹಿತವಾಗಿ ರಥದಲ್ಲಿ ಕುಳಿತು ರಣರಂಗಕ್ಕೆ ಬಾರದಿರುವ ವರೆಗೂ ನೀನು ಹಾಗೆಯೇ ತಿಳಿದುಕೊಂಡಿರು. ಅಲ್ಲಿಯ ವರೆಗೆ ನಿನ್ನ ಇಷ್ಟಬಂದಂತೆಲ್ಲ ಹೇಳಿಕೊ” ಎಂದನು.

ಅದೇ ರೀತಿ ಯುಧಿಷ್ಠಿರನು ಭೀಷ್ಮಾದಿಗಳು ತಂತಮ್ಮ ಶಕ್ತಿಯನ್ನು ಪ್ರಕಾಶಗೊಳಿಸಿದುದನ್ನು ಚಾರರ ಮುಖದಿಂದ ಕೇಳಿ, ಶತ್ರುಗಳನ್ನು ನಾಶ ಮಾಡುವುದಕ್ಕೆ ನಿನಗೆಷ್ಟುಕಾಲ ಬೇಕೆಂದು ಅರ್ಜುನನನ್ನು ಪ್ರಶ್ನೆಮಾಡಲು,

ಅನನು ಕೃಷ್ಣನನ್ನು ನೋಡುತ್ತ—"ಅವರೆಲ್ಲರೂ ಮಹಾತ್ಮರು, ಕೃತಾಸ್ತ್ರರು, ಯುದ್ಧನಿಪುಣರು, ನಮ್ಮನ್ನು ಹನನಮಾಡಲಾಪರು, ಸಂದೇಹವಿಲ್ಲ. ಆದರೂ ಕಳವಳಪಡಬೇಡ. ನಾನು ವಾಸುದೇವನ ಬೆಂಬಲವುಳ್ಳವನು, ಮೂರು ಲೋಕಗಳನ್ನೂ ನಿಮಿಷಮಾತ್ರದಲ್ಲಿ ನಾಶಮಾಡಲಾಪೆನು. ಇದಲ್ಲದೆ, ನನ್ನ ದಿವ್ಯಾಸ್ತ್ರವೂ ಇದೆ. ಆದರೆ ಸಾಮಾನ್ಯರ ಮೇಲೆ ದಿವ್ಯಾಸ್ತ್ರವನ್ನು ಬಿಡುವುದು ಯುಕ್ತವಲ್ಲ. ನೀನು ನ್ಯಾಯಮಾರ್ಗದಲ್ಲಿಯೇ ಹೋಗಿ ಹಗೆಯನ್ನು ಗೆಲ್ಲತಕ್ಕವನು. ನಿನಗೆ ಅಸ್ತ್ರವಿದ್ವಾಂಸರೂ ಯುದ್ಧಾಕಾಂಕ್ಷಿಗಳೂ ಆದೀ ವೀರರ ಸಾಹಾಯ್ಯವಿರುವುದು. ಇದರ ಮೇಲೆ ನೀನು ಸ್ವಯಂ ಸಮರ್ಥನು. ಹೀಗಿರುವಲ್ಲಿ ಭಯವೇನು" ಎಂದನು.

ಉಭಯಸೈನ್ಯಗಳೂ ಈ ಪ್ರಕಾರವಾದ ಸಂಭಾಷಣೆಯಲ್ಲಿ ಇರುಳನ್ನು ಕಳೆದರು. ಪ್ರಭಾತವಾಯಿತು; ಆಕಾಶವು ನಿರ್ಮಲವಾಗಿದ್ದಿತು. ರಾಜರೆಲ್ಲರೂ ಸ್ನಾನಾದಿ ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು ಬ್ರಾಹ್ಮಣರ ಆಶೀರ್ವಾದವನ್ನು ಕೈಕೊಂಡು ದುರ್ಯೋಧನನ ಪ್ರೇರಣೆಯಿಂದ ಸೇನಾಸಮೇತರಾಗಿ ರಣರಂಗಕ್ಕೆ ಹೊರಟರು. ಹಾಗೆಯೇ ಯುಧಿಷ್ಠಿರನೂ ತನ್ನ ಚತುರಂಗ ಬಲವನ್ನು ಧೃಷ್ಟದ್ಯುಮ್ನನ ಆಜ್ಞೆಗೊಳಪಡಿಸಿ ಯುದ್ಧರಂಗಕ್ಕೆ ಹೊರಡಿಸಿದನು.

ಇಂತು ಪಾಂಡವ ಕೌರವರು ಸೇನಾಸಮೇತರಾದ ತಂತಮ್ಮ ಮಿತ್ರರೊಡನೆ ಯುದ್ಧಕ್ಕೆ ಇದಿರಾಂತು ನಿಂತರು. ಭೀಷ್ಮಾಚಾರ್ಯನು ಸ್ವಪರಪಕ್ಷಗಳ ಸೇನಾನಾಯಕರನ್ನು ಕಲೆಯಹಾಕಿ ಸಮರ ಸಭೆಯನ್ನು ಮಾಡಿ ಉಭಯಪಕ್ಷದವರ ಅಭಿಪ್ರಾಯಗಳನ್ನೂ ಸಮ್ಮತಿಯನ್ನೂ ಕೊಂಡು ಯುದ್ಧನಿಯಮಗಳನ್ನು ಮಾಡಿದನು. ಉಭಯಪಕ್ಷದವರೂ ತಂತಮ್ಮ ಕಡೆಯ ಭಟರನ್ನು ಗುರುತುಹಿಡಿಯುವುದಕ್ಕಾಗಿ ಹಲವು ಸಂಜ್ಞೆಗಳನ್ನು ಕಲ್ಪಿಸಿಕೊಂಡರು.

ಆ ಬಳಿಕ ಸರ್ವಧರ್ಮವನ್ನೂ ಬಲ್ಲ ಭೀಷ್ಮನು ಯುದ್ಧಕ್ಕೆ ಅಣಿಯಾಗಿದ್ದ ರಾಜರೆಲ್ಲರನ್ನೂ ಕರೆದು—"ಕ್ಷತ್ರಿಯವೀರರೇ! ನಿಮಗೆ ಸ್ವರ್ಗಕ್ಕೆ ಹೋಗುವುದಕ್ಕೆ ಈಗ ದ್ವಾರವು ತೆರೆದಿದೆ. ಪುರಾತನ ಋಷಿಗಳು ನಿಮಗೀ ಶಾಶ್ವತ ಪಥವನ್ನು ತೋರಿಸಿರುವರು. ಶ್ರದ್ಧೆಯಿಂದ ಯುದ್ಧಮಾಡಿ ಸಂಭಾವಿತರೆನಿಸಿಕೊಳ್ಳಿರಿ. ಕ್ಷತ್ರಿಯರು ವ್ಯಾಧಿಯಿಂದ ಮನೆಯಲ್ಲಿ ಸಾಯುವುದು ಅಧರ್ಮವು, ಸಮರದಲ್ಲಿ ಮಡಿಯುವುದೇ ಕ್ಷತ್ರಿಯರ ಸನಾತನಧರ್ಮವು" ಎಂದನು. ಆ ಮಾತನ್ನು ಕೇಳಿ ಉತ್ಸಾಹಗೊಂಡು ರಾಜರು ತಂತಮ್ಮ ಸೈನ್ಯದೆಡೆಗೆ ಮರಳಿದರು.

ದುರ್ಯೋಧನನು ಪಾಂಡವರ ಸೇನಾವ್ಯೂಹವನ್ನೂ ಸೇನಾನಾಯಕರನ್ನೂ ನೋಡಿ ಎದೆಗುಂದಿದನು. ಅದನ್ನು ಕಂಡು ಕುರುಪಿತಾಮಹನು ಸಿಂಹನಾದವನ್ನು ಮಾಡಿ ಶಂಖವನ್ನೂದಿ ಅವನನ್ನು ಹರ್ಷಗೊಳಿಸಿದನು. ಒಡನೆಯೇ ಶಂಖ ಭೇರಿ ಮುಂತಾದ ವಾದ್ಯಧ್ವನಿಗಳು ಮೇಳೈಸಿ ಮೊಳಗಿದುವು. ಪಾಂಡವ ವೀರರೂ ತಂತಮ್ಮ ದಿವ್ಯ ಶಂಖಗಳನ್ನೂದಿದರು. ಆ ಘೋಷವು ದುರ್ಯೋಧನಾದಿಗಳ ಹೃದಯವನ್ನು ಭೇದಿಸಿ, ಭೂವ್ಯೋಮಾಕಾಶವನ್ನು ಆವರಿಸಿತು.

ಬಾಣಗಳನ್ನು ಬಿಡುವ ಸಮಯಕ್ಕೆ ಅರ್ಜುನನು ಕೌರವರ ಸೈನ್ಯವನ್ನು ನೋಡಿ ಕರುಣೆಯಿಂದ ಕರಗಿ—"ಕೃಷ್ಣ! ಯುದ್ಧಕ್ಕೆ ಬಂದಿರುವ ನನ್ನ ಈ ಸ್ವಜನರನ್ನು ನೋಡಿದೊಡನೆಯೇ ನನ್ನ ಕೈಕಾಲುಗಳು ಉಡುಗಿಹೋದುವು; ಬಾಯೊಣಗುತ್ತಿದೆ, ಮೈ ಬೆವರುತ್ತಿದೆ; ಗಾಂಡೀವವು ತನಗೆ ತಾನೇ ಕೈಯಿಂದ ಕಳಚಿಕೊಳ್ಳುತ್ತಿದೆ, ಬುದ್ಧಿ ಭ್ರಮಿಸುತ್ತಿದೆ, ನಿಂತಿರಲಾರೆನು; ಅಪಶಕುನಗಳು ಕಾಣುತ್ತಿವೆ, ಯುದ್ಧದಲ್ಲಿ ಸ್ವಜನವನ್ನು ಕೊಲ್ಲುವುದರಿಂದ ನನಗೆ ಬರುವುದೇನು? ಕೃಷ್ಣ! ನನಗೆ ವಿಜಯವೂ ಬೇಡ, ರಾಜ್ಯವೂ ಬೇಡ, ಸುಖವೂ ಬೇಡ. ಯಾರಿಗೋಸ್ಕರ ರಾಜ್ಯವನ್ನೂ ಸುಖವನ್ನೂ ಬಯಸಬೇಕೋ ಅವರು ಧನವನ್ನೂ ಪ್ರಾಣವನ್ನೂ ತೊರೆಯಲು ಸಿದ್ಧರಾಗಿ ಯುದ್ಧಕ್ಕೆ ಬಂದಿರುವಲ್ಲಿ ನಮಗೆ ರಾಜ್ಯದಿಂದಾಗುವುದೇನು? ಭೋಗದಿಂದೇನು? ಪ್ರಾಣದಿಂದ ತಾನೆ ಏನು? ಅವರಾರು? ಬೇರೆ ಯಾರೂ ಅಲ್ಲ; ಆಚಾರ್ಯರು, ತಾತಂದಿರು, ಸೋದರಮಾವಂದಿರು, ಮಾವಂದಿರು, ಭಾವಮೈದುನರು, ಮಕ್ಕಳು, ಸಂಬಂಧಿಗಳು! ಅವರು ನನ್ನನ್ನು ಕೊಂದರೂ ಕೊಲ್ಲಲಿ. ತ್ರಿಲೋಕಾಧಿಪತ್ಯವು ಬಂದರೂ ನಾನು ಅವರನ್ನು ಕೊಲ್ಲೆನು. ಅವರಂತೂ ಲೋಭದಿಂದ ಬುದ್ಧಿಗೆಟ್ಟು ಕುಲಕ್ಷಯದಿಂದಾಗುವ ಕೇಡನ್ನೂ ಮಿತ್ರದ್ರೋಹದಿಂದ ಬರುವ ಪಾಪವನ್ನೂ ತಿಳಿಯಲರಿಯರು; ತಿಳಿದವರಾಗಿ ನಾವೇಕೆ ಆ ಪಾಪವನ್ನು ಮಾಡದಿರಬಾರದು? ಆದರಿಂದ ಜಾತಿಧರ್ಮ ಕುಲಧರ್ಮಗಳು ನಿರ್ಮೂಲವಾಗುವುವು. ರಾಜ್ಯಸುಖದಾಶೆಯಿಂದ ನಾನು ಅವರನ್ನೆಂದಿಗೂ ಕೊಲ್ಲೆನು. ಶಸ್ತ್ರಪಾಣಿಗಳಾದ ಧಾರ್ತರಾಷ್ಟ್ರರು ಅಶಸ್ತ್ರನಾದ ನನ್ನನ್ನು ಕೊಂದರೂ ನಾನು ಅವರಿಗೆ ಪ್ರತೀಕಾರಮಾಡೆನು" ಎಂದು ನುಡಿದು ತನ್ನ ಬಿಲ್ಲುಬಾಣಗಳನ್ನೊಂದುಕಡೆ ಹಾಕಿ ಶೋಕಾಕುಲನಾಗಿ ರಥದಲ್ಲಿ ಕುಳಿತನು.

ಕೃಷ್ಣನು ಅರ್ಜುನನ ವಿಷಾದವನ್ನು ನೋಡಿ—"ಅರ್ಜುನಾ! ಈ ವಿಷಮ ಕಾಲದಲ್ಲಿ ನೀನು ಹೀಗೆ ವಿಷಾದಪಡಬಹುದೆ? ನೀನಾಡುವ ಮಾತು

ಕ್ಷತ್ರಿಯರಿಗೊಪ್ಪದು. ನೀನು ಕ್ಷತ್ರಿಯನಾಗಿ ಹುಟ್ಟಿ ಕ್ಷತ್ರಿಯಧರ್ಮವನ್ನು ನಲಹುವುದೇ ನಿನ್ನ ಕರ್ತವ್ಯ. ಸ್ವಜನವಾಗಲಿ, ಮಿತ್ರರಾಗಲಿ, ಹಿರಿಯರಾಗಲಿ, ಕಿರಿಯರಾಗಲಿ, ಯಾರು ಯುದ್ಧಕ್ಕೆ ಬರುವರೋ ಅವರ ಸಂಗಡ ನ್ಯಾಯವನ್ನು ಬಿಡದೆ ಯುದ್ಧಮಾಡುವುದು ಕ್ಷತ್ರಿಯಧರ್ಮ. ನೀನು ಕ್ಷತ್ರಿಯಕುಲಸಂಭೂತನು, ನಿನ್ನ ಧರ್ಮವನ್ನು ಉಪೇಕ್ಷಿಸಬೇಡ, ಗಾಂಡೀವವನ್ನು ಕೈಗೆ ತೆಗೆದುಕೊ, ಯುದ್ಧಕ್ಕೆ ನಡೆ, ಕೀರ್ತಿಯನ್ನು ಪಡೆ" ಎಂದು ಉಪದೇಶ ಮಾಡಿ ಅರ್ಜುನನನ್ನು ಯುದ್ಧಕ್ಕೆ ಹುರಿದುಂಬಿಸಿದನು.

ಅರ್ಜುನನು ಮತ್ತೆ ಗಾಂಡೀವವನ್ನು ಹಿಡಿದನು. ಪಾಂಡವರೂ ಅವರ ಅನುಯಾಯಿಗಳೂ ಸಂತೋಷದಿಂದ ಶಂಖಧ್ವನಿಯನ್ನು ಮಾಡಿದರು. ಒಡನೆಯೇ ಯುಧಿಷ್ಠಿರನು ಕವಚವನ್ನೂ ಆಯುಧಗಳನ್ನೂ ಕಳೆದಿಟ್ಟು ರಥದಿಂದಿಳಿದು, ಕೈಜೋಡಿಸಿಕೊಂಡು ಪಾದಚಾರಿಯಾಗಿ ರಿಪುಸೇನಾಭಿಮುಖವಾಗಿ ಹೊರಟನು. ಅದನ್ನು ಕಂಡು ಅರ್ಜುನಾದಿಗಳು ಹೆದರಿ ಅವನ ಬೆನ್ನಹತ್ತಿ, ಶತ್ರುಸೈನ್ಯದ ಕಡೆಗೆ ನಿರಾಯುಧನಾಗಿ ಹೋಗಲೇಕೆಂದು ಕೇಳಿದರೂ ಮಾತನಾಡದೆ ಮುಂದುಮುಂದಕ್ಕೆ ನಡೆಯುತ್ತ ತಮ್ಮಂದಿರೊಡನೆ ಭೀಷ್ಮನ ಬಳಿಗೆ ಹೋಗಿ ಅವನೆರಡು ಪಾದಗಳನ್ನೂ ತನ್ನೆರಡು ಕೈಗಳಿಂದ ಹಿಡಿದುಕೊಂಡು—"ದುರ್ಧರ್ಷನೇ! ನಮಸ್ಕಾರಮಾಡುತ್ತೇನೆ. ನಿನ್ನ ಸಂಗಡ ನಾವು ಯುದ್ಧ ಮಾಡುವೆವು, ಅನುಜ್ಞೆ ಕೊಡು, ಆಶೀರ್ವಾದಮಾಡು" ಎಂದು ಬೇಡಿದನು.

ಭೀಷ್ಮನಿಂತೆಂದನು:—"ನೀನು ಬಾರದೆಹೋಗಿದ್ದರೆ ನಿನಗೆ ಅಪಜಯವಾಗಲೆಂದು ಶಪಿಸುತ್ತಿದ್ದೆನು. ಮಗನೇ! ನಾನು ಪ್ರೀತನಾದೆನು. ಯುದ್ಧ ಮಾಡು, ನಿನಗೆ ಜಯವಾಗಲಿ. ಯುಧಿಷ್ಠಿರ! ಪುರುಷನು ಅರ್ಥಕ್ಕೆ ದಾಸನು, ಅರ್ಥವು ಯಾರಿಗೂ ದಾಸನಲ್ಲ. ನಾನು ಕೌರವರಿಗೆ ಅರ್ಥಪಾಶದಿಂದ ಕಟ್ಟು ಬಿದ್ದಿದ್ದೇನೆ. ನಿನ್ನ ಪರವಾಗಿ ಯುದ್ಧಮಾಡುವುದೊಂದು ಹೊರತು ನನ್ನಿಂದೇನಾಗಬೇಕು ಕೇಳು" ಎಂದನು.

ಅದಕ್ಕೆ ಯುಧಿಷ್ಠಿರನು—"ಮಹಾಬಾಹುವೇ! ಕೌರವರ ಪರವಾಗಿಯೇ ಯುದ್ಧಮಾಡು, ಆದರೆ ನಿತ್ಯವೂ ನನ್ನ ಹಿತವನ್ನು ಕೋರು" ಎಂದನು.

ಭೀಷ್ಮನು—"ನಾನೇನೊ ನಿನ್ನ ಶತ್ರುಗಳ ಪರವಾಗಿ ಯುದ್ಧಮಾಡಬೇಕಾಗಿದೆ; ಹೀಗಿರುವಲ್ಲಿ ನಾನು ನಿನಗೇನು ಸಾಹಾಯ್ಯವನ್ನು ಮಾಡಬಹುದು ಹೇಳು" ಎಂದು ಮತ್ತೆ ಕೇಳಿದನು.

ಯುಧಿಷ್ಠಿರನು—"ನೀನು ಅಪರಾಜಿತನು, ರಣದಲ್ಲಿ ನಿನ್ನನ್ನು ಗೆಲ್ಲುವ ಬಗೆ ಹೇಗೆ ಹೇಳು" ಎಂದನು.

ಭೀಷ್ಮನು—"ಕೌಂತೇಯ! ಸಾಕ್ಷಾತ್ ದೇವೇಂದ್ರನಾದರೂ ನನ್ನನ್ನು ಜಯಿಸಲಾರನು" ಎಂದನು.

ಯುಧಿಷ್ಠಿರನು—"ಹಾಗಾದರೆ, ನಿನಗೆ ಅಡ್ಡಬೀಳುತ್ತೇನೆ; ಯುದ್ಧದಲ್ಲಿ ಶತ್ರುಗಳು ನಿನ್ನನ್ನು ಕೊಲ್ಲುವ ಬಗೆ ಹೇಗೆ ಹೇಳು" ಎಂದನು.

ಭೀಷ್ಮನು—"ನನ್ನನ್ನು ಜಯಿಸತಕ್ಕವರನ್ನು ನಾನು ಕಾಣೆನು; ನನ್ನ ಮರಣಕಾಲವು ಇನ್ನೂ ಬಂದಿಲ್ಲ; ಇನ್ನೊಂದು ಸಾರಿ ಬಾ" ಎಂದನು.

ಯುಧಿಷ್ಠಿರನು ಭೀಷ್ಮನ ಮಾತನ್ನು ಶಿರಸಾವಹಿಸಿ ಮತ್ತೆ ಅಭಿವಂದಿಸಿ ಬಳಿಕ ದ್ರೋಣ ಕೃಪ ಶಲ್ಯರ ಅಡಿಗೆರಗಿ ಅವರ ಅನುಜ್ಞೆಯನ್ನೂ ಆಶೀರ್ವಾದವನ್ನೂ ಪಡೆದನು. ತರುವಾಯ ಅವನು ಕೌರವ ಸೈನ್ಯ ಮಧ್ಯದಲ್ಲಿ ನಿಂತು—"ಯಾರಾರು ನಮ್ಮನ್ನು ವರಿಸುವರೋ ಅವರನ್ನು ನಾವು ಸಖ್ಯನಿಮಿತ್ತವಾಗಿ ವರಿಸುವೆವು" ಎಂದು ಗಟ್ಟಿಯಾಗಿ ಕೂಗಿ ಹೇಳಿದನು.

ಆಗ ಯುಯುತ್ಸುವೆಂಬವನು—"ಅನಘನೇ! ನನ್ನನ್ನು ವರಿಸುವುದಾದರೆ ನಿಮ್ಮ ಪರವಾಗಿ ನಾನು ಯುದ್ಧಮಾಡುವೆನು" ಎಂದನು.

ಧರ್ಮರಾಯನು—"ಬರುವವರೆಲ್ಲರೂ ಬನ್ನಿರಿ. ಯುಯುತ್ಸೂ! ಬಾ ಅವಿವೇಕಿಗಳಾದ ನಿಮ್ಮಣ್ಣಂದಿರ ಮೇಲೆ ಯುದ್ಧಮಾಡೋಣ. ಮಹಾಬಾಹುವೇ! ಸರ್ವರ ಸಮ್ಮತಿಯಿಂದ ನಿನ್ನನ್ನು ವರಿಸುತ್ತೇನೆ. ನನಗಾಗಿ ಯುದ್ಧಮಾಡು. ಧೃತರಾಷ್ಟ್ರನ ಕುಲತಂತುವೂ ನೀನೇ, ಅವನಿಗೆ ಪಿಂಡವನ್ನು ಕಾಣಿಸುವವನೂ ನೀನೇ ಆಗುವೆ, ಬಾ" ಎಂದನು.

ಯುಯುತ್ಸುವು ಕೌರವರನ್ನು ಪರಿತ್ಯಜಿಸಿ ಪಾಂಡುಪುತ್ರರನ್ನು ಸೇರಿದನು.

ಆ ಬಳಿಕ ಯುಧಿಷ್ಠಿರಾದಿ ಸರ್ವರೂ ಯುಯುತ್ಸುವನ್ನು ಕೂಡಿ ತಮ್ಮ ಸೈನ್ಯವನ್ನು ಹೊಕ್ಕರು. ಯುಧಿಷ್ಠಿರನು ಮತ್ತೆ ಹೊಂಬಣ್ಣದಿಂದ ಹೊಳೆಯುತ್ತಿರುವ ಕವಚವನ್ನು ತೊಟ್ಟು ಆಯುಧಪಾಣಿಯಾಗಿ ರಥವನ್ನೇರಿದನು. ಅಲ್ಲಿ ನೆರೆದಿದ್ದ ನೃಪರೆಲ್ಲರೂ ಪಾಂಡವರು ಮಾನ್ಯರಾದವರನ್ನು ಸಮ್ಮಾನಿಸಿದುದನ್ನೂ ಅವರ ಜ್ಞಾತಿಗಳಿಗೆ ಸಕಾಲದಲ್ಲಿ ತೋರಿದ ಕೃಪಾಸೌಹೃದಾದಿಗಳನ್ನೂ ನೋಡಿ ಅವರ ಸುಗುಣಗಳನ್ನು ಕೊಂಡಾಡಿದರು.

ಯುದ್ಧವಾರಂಭವಾಯಿತು. ದುಃಶಾಸನನು ಭೀಷ್ಮನನ್ನು ಪ್ರಮುಖನನ್ನಾಗಿಟ್ಟುಕೊಂಡು ಸೇನೆಯೊಡನೆ ಹೊರಟನು. ಹಾಗೆಯೇ ಪಾಂಡವರು ಭೀಮಸೇನನನ್ನು ಪ್ರಮುಖನನ್ನಾಗಿಟ್ಟುಕೊಂಡು ಭೀಷ್ಮನ ಸಂಗಡ ಯುದ್ಧಮಾಡಲಿಚ್ಛಿಸಿ ಹರ್ಷದಿಂದ ಹೊರಟರು.

ಭೇರಿ ಮೃದಂಗ ಶಂಖಾದಿ ವಾದ್ಯಧ್ವನಿ, ಮತ್ತಭಟರ ಭೈರವರ

ಕೋದಂಡಪಾಣಿಗಳ ಧನುಷ್ಟಂಕಾರ, ರಥಗಳ ಘರ್ಘರಶಬ್ದ, ಅಶ್ವಗಳ ಹೇಷಾರವ, ಹಸ್ತಿಗಳ ಬೃಂಹಿತ ಧ್ವನಿ—ಇವುಗಳಿಂದ ರಣರಂಗವು ಭೀಕರವಾಯಿತು. ರಥಚಕ್ರಗಳ ಹರಿದಾಟದಿಂದಲೂ, ಕುದುರೆಗಳ ಕಾಲ್ತುಳಿತದಿಂದಲೂ ದೂಳೆದ್ದು ದಿಕ್ಕುಗಳನ್ನು ಕವಿಯಿತು. ಈ ಹಗಲಗತ್ತಲೆಯಲ್ಲಿ ಉಭಯ ಪಕ್ಷಗಳ ಸೇನಾನಾಯಕರೂ, ರಥಕ್ಕೆ ರಥ, ಅಶ್ವಕ್ಕೆ ಅಶ್ವ, ಹಸ್ತಿಗೆ ಹಸ್ತಿ, ಪದಾತಿಗೆ ಪದಾತಿ—ಈ ಮೇರೆ ತಂತಮ್ಮ ಚತುರಂಗ ಬಲವನ್ನು ಇದಿರೊಡ್ಡಿ ಕದನ ಕೇಳಿಯನ್ನಾಡಿದರು. ಭೀಷ್ಮನ ಸೇನಾಪತ್ಯದಲ್ಲಿ ಹತ್ತು ದಿನ ಕಾಳಗವು ನಡೆಯಿತು. ಪ್ರತಿದಿನವೂ ಸೂರ್ಯೋದಯದಿಂದ ಸೂರ್ಯಾಸ್ತಮಯದ ವರೆಗೂ ವೀರಪ್ರಮುಖರು ಸಿಂಹಶಾರ್ದೂಲಗಳಂತೆ ದ್ವಂದ್ವಯುದ್ಧದಲ್ಲಿಯೂ, ಸಾಗರದ ಮೇಲೆ ಸಾಗರವು ಉಕ್ಕಿಬಿದ್ದಂತೆ ಸೇನೆಗಳು ಸಂಕುಲ ಯುದ್ಧದಲ್ಲಿಯೂ ಒಬ್ಬರ ಮೇಲೊಬ್ಬರು ಬಿದ್ದು ಕೈದಣಿಯ ಹೊಡೆದಾಡಿ, ಹೊತ್ತು ಬೀಳುತ್ತಲೆ ಬಳಲಿ ಬೆಂಡಾಗಿ ಶಿಬಿರವನ್ನು ಸೇರುತ್ತಿದ್ದರು.

ಮೊದಲನೆಯ ದಿವಸದ ಯುದ್ಧದಲ್ಲಿ ಪಾಂಡವರ ಸೇನೆ ಭಗ್ನವಾಯಿತು. ಆ ರಾತ್ರಿ ಯುಧಿಷ್ಠಿರನು ಸೋದರರನ್ನೊಡಗೊಂಡು ಕೃಷ್ಣನ ಬಳಿಗೆ ಹೋಗಿ—"ಕೃಷ್ಣ! ಭೀಷ್ಮನ ಶರಘಾತವನ್ನು ತಾಳಲಾರದೆ ನಮ್ಮ ಭಟರು ಓಡಿ ಹೋಗುತ್ತಿರುವರು. ಅವನ ಮುಂದೆ ನಾವಲ್ಲ. ನನಗೆ ದಿಕ್ಕು ತೋರದು. ಇಷ್ಟು ಮಂದಿ ನೃಪಾಲರನ್ನು ಕೊಲ್ಲಿಸಲು ನನಗಿಷ್ಟವಿಲ್ಲ. ನನ್ನ ತಮ್ಮಂದಿರು ಅಣ್ಣನ ಮೇಲಣ ಪ್ರೀತಿಯಿಂದ ರಾಜ್ಯಭ್ರಷ್ಟರಾಗಿ ಸುಖವನ್ನು ತೊರೆದು ಶರಪೀಡಿತರಾಗಿ ನವೆಯುತ್ತಿರುವರು. ಅರ್ಜುನನನ್ನು ಬಿಟ್ಟರೆ ಭೀಷ್ಮನ ಸಂಗಡ ಯುದ್ಧಮಾಡಬಲ್ಲವರಾರೂ ಇಲ್ಲ. ಆದರೆ ನಿನ್ನ ಸಖನಾದ ಅವನು ಭೀಷ್ಮ ದ್ರೋಣರು ನಮ್ಮ ಸೈನ್ಯವನ್ನು ಧ್ವಂಸಮಾಡುತ್ತಿದ್ದರೂ ನೋಡಿಕೊಂಡು ಉದಾಸೀನನಾಗಿರುವನು. ಭೀಮನೊಬ್ಬನು ಕೈಯಾರ ಯುದ್ಧಮಾಡುತ್ತಾನೆ. ಆದರೆ ನೂರು ವರ್ಷವಾದರೂ ಅವನಿಂದ ಹಗೆಗಳು ನಾಶವಾಗರು. ಮುಂದೇನು ಗತಿ? ಕೃಷ್ಣ!" ಎಂದನು.

ಅದನ್ನು ಕೇಳಿ ಕೃಷ್ಣನು—"ಭರತಶ್ರೇಷ್ಠನೇ! ಹೆದರಬೇಡ. ಧನುಷ್ಮಂತರೂ ಶೂರರೂ ಆದ ತಮ್ಮಂದಿರೂ ಮಹಾಬಲನಾದ ಧೃಷ್ಟದ್ಯುಮ್ನನೂ ನಾನೂ ನಿನ್ನ ಹಿತಚಿಂತಕರಾಗಿರುವಲ್ಲಿ ನೀನು ಚಿಂತಿಸುವುದೇಕೆ?" ಎಂದು ನುಡಿದು ಯುಧಿಷ್ಠಿರನನ್ನು ಧೈರ್ಯಗೊಳಿಸಿದನು.

ಬೆಳಗಾಯಿತು. ಉಭಯಪಕ್ಷದವರೂ ವ್ಯೂಹಪ್ರತಿವ್ಯೂಹಗಳನ್ನು ಕಟ್ಟಿ

ಯುದ್ಧಕ್ಕೆ ನಿಂತರು. ದುರ್ಯೋಧನನು ತನ್ನ ಕಡೆಯ ಯೋಧರನ್ನು ಸಂಬೋಧಿಸಿ—"ನೀವೆಲ್ಲರೂ ರಣವೀರರು, ನೀವುಗಳೊಬ್ಬೊಬ್ಬರೇ ಪಾಂಡವರನ್ನೂ ಅವರ ಸೈನ್ಯವನ್ನೂ ಹುಟ್ಟುಗೆಡಿಸಲಾಪಿರಿ; ನೀವೆಲ್ಲರೂ ಕೂಡಿದರೆ ಏನಮಾಡಲಾರಿರಿ? ಭೀಷ್ಮನಿಂದ ರಕ್ಷಿತವಾಗಿರುವ ನಮ್ಮ ಸೈನ್ಯವು ಅಪರಿಮಿತವಾದುದು; ಭೀಮನಿಂದ ರಕ್ಷಿತವಾಗಿರುವ ಅವರ ಬಲವು ಪರಿಮಿತವಾದುದು. ನಮಗೇನು ಭಯ?" ಎಂದು ತನ್ನ ಸೈನ್ಯವನ್ನು ಹುರಿಗೊಳಿಸಿದನು.

ಆ ದಿನ ಭೀಷ್ಮಾರ್ಜುನರೂ ದ್ರೋಣ ಧೃಷ್ಟದ್ಯುಮ್ನರೂ ಆದಿಯಾದ ನಮ ಮಲ್ಲರು ಕಾದಿ ತಮ್ಮ ವಿಕ್ರಮವನ್ನು ತೋರಿದರು. ಅರ್ಜುನನು ಕೌರವ ಸೇನೆಯನ್ನು ಭಂಜಿಸಿದನು. ಭೀಷ್ಮನು ತಮ್ಮ ಸೇನೆಯು ಭಂಗಪಟ್ಟುದನ್ನು ನೋಡಿ, "ನಮ್ಮ ಸೈನ್ಯವನ್ನು ಹೀಗೆ ಮುರಿಯಬಲ್ಲವರು ಧನಂಜಯನಲ್ಲದೆ ಬೇರೆ ಯಾರು? ಆ ಕಾಲಾಂತಕನನ್ನು ರಣದಲ್ಲಿ ಗೆಲ್ಲುವುದು ಯಾರಿಗೆ ತಾನೆ ಸಾಧ್ಯ" ಎಂದನು.

ಮೂರನೆಯ ದಿನವೂ ಅರ್ಜುನನು ಕೌರವ ಸೈನ್ಯವನ್ನು ಬಾಣಗಳಿಂದ ಹೊಡೆದು ಕೆಡವಿದನು. ಬಹು ಜನರು ಮಡಿದರು. ಹತಶೇಷರು ಹೆದರಿ ಓಡಿದರು. ದುರ್ಯೋಧನನು ಧೈರ್ಯಗೆಟ್ಟು ಭೀಷ್ಮನ ಬಳಿಗೆ ಹೋಗಿ—"ತಾತ! ದ್ರೋಣ ಕೃಪಾಚಾರ್ಯರು ಮೊದಲಾದ ಅಸ್ತ್ರವಿದ್ಯಾವಿಶಾರದರೂ ನೀನೂ ಬದುಕಿರುವಾಗಲೇ ನಮ್ಮ ಭಟರು ದೆಸೆಗೆಟ್ಟು ಓಡಿಹೋಗುತ್ತಿದ್ದಾರೆ. ಇದು ನನಗೆ ಮಾನವಲ್ಲ. ದಿಟವಾಗಿಯೂ ನೀನು ಪಾಂಡವರಿಗೆ ಅನುಗ್ರಹ ಮಾಡುತ್ತಿದ್ದೀಯೆ. ಹಾಗಲ್ಲದಿದ್ದರೆ ಈ ಕೊಲೆಯನ್ನು ನೋಡಿ ನೀನೆಂದಿಗೂ ಅವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ನೀನು ಪಾಂಡವರ ಮೇಲೆ ಯುದ್ಧ ಮಾಡೆನೆಂದು ಮೊದಲೇ ಹೇಳಿದ್ದರೆ, ಕರ್ಣನ ಸಂಗಡ ಆಲೋಚಿಸಿ ತಕ್ಕ ಹರುವನ್ನು ಮಾಡುತ್ತಿದ್ದೆನು. ನೀನು ನನ್ನನ್ನು ಕೈಬಿಡುವುದು ನ್ಯಾಯವಲ್ಲವೆನ್ನುವ ಪಕ್ಷಕ್ಕೆ ನಿನ್ನ ಪ್ರತಾಪಕ್ಕೆ ತಕ್ಕಂತೆ ಯುದ್ಧಮಾಡು" ಎಂದು ಭೀಷ್ಮನನ್ನು ಹಂಗಿಸಿದನು.

ಅದನ್ನು ಕೇಳಿ ಭೀಷ್ಮನು—"ದುರ್ಯೋಧನ! ದೇವೇಂದ್ರನು ಕೂಡ ಪಾಂಡವರನ್ನು ಗೆಲ್ಲಲಾರನೆಂದು ನಿನಗೆ ಎಷ್ಟೋ ಬಾರಿ ಹೇಳಿದೆನು. ನನ್ನ ಮಾತನ್ನು ನೀನು ಸಡ್ಡೆಮಾಡಲಿಲ್ಲ. ನಾನು ಮುದುಕ; ಕೈಯಲ್ಲಾಗುವಷ್ಟಿಗೂ ಕಾದುವೆನು. ಈ ಹೊತ್ತು ಪಾಂಡವರನ್ನೂ ಅವರ ಸೈನ್ಯವನ್ನೂ ಮರ್ದನಮಾಡುವೆನು" ಎಂದನು.

ಯುದ್ಧವು ಅತಿ ಭೀಷಣವಾಯಿತು. ಪಾಂಡವ ಸೈನ್ಯದಲ್ಲಿ ಹಾಹಾಕಾರವು ಹುಟ್ಟಿತು. ಭೀಷ್ಮಾರ್ಜುನರು ಒಬ್ಬರಮೇಲೊಬ್ಬರು ಶರವರ್ಷವನ್ನು ಕರೆದರು. ಭೀಷ್ಮನು ಮೊಮ್ಮಗನ ಕೈಚಳಕವನ್ನು ನೋಡಿ—"ಸಾಧು! ಪಾರ್ಥ! ಸಾಧು! ಮಹತ್ಕಾರ್ಯವು ನಿನಗೊಪ್ಪುವುದು. ನಾನು ಪ್ರೀತನಾದೆನು. ಸಂಕೋಚ ಪಡಬೇಡ. ಯುದ್ಧಮಾಡು" ಎಂದು ಅರ್ಜುನನನ್ನು ಕೊಂಡಾಡಿದನು.

ಆದರೂ, ಆ ವೃದ್ಧಮಲ್ಲನು ಪಾಂಡವ ಸೈನ್ಯವನ್ನು ಬಿಡದೆ ಬಾಣಗಳಿಂದ ಕತ್ತರಿಸಿದನು. ಹಲವರು ಸತ್ತರು, ಹಲವರು ರಥಯೋಧರು ಕೂಡ ಬೆದರಿ ಕವಚಗಳನ್ನು ಕಿತ್ತು ಈಡಾಡಿ ಪಲಾಯನಮಾಡಿದರು. ತಾತನು ಮೊಮ್ಮಗನೆಂದು ಅರ್ಜುನನನ್ನು ಬಿಡಲಿಲ್ಲ. ಅರ್ಜುನನು ಭೀಷ್ಮನ ಶರಘಾತದಿಂದ ನೊಂದರೂ, ತಾತನ ಮೇಲಣ ಗೌರವದಿಂದ ಮೃದುವಾಗಿ ಕಾದಿದನು. ಕುರುಸೇನೆಯು ಪಾಂಡವರ ಸೈನ್ಯವನ್ನು ಮುಸುಕಿ ಅಪ್ಪಳಿಸಿತು. ಆಗ ಕೃಷ್ಣನು ಚಕ್ರವನ್ನು ಹಿಡಿದು ಭೀಷ್ಮದ್ರೋಣಾದಿಗಳನ್ನು ಸಂಹರಿಸಿಬಿಡುವೆನೆಂದು ಭೀಷ್ಮನೆಡೆಗೆ ಪಾದಚಾರಿಯಾಗಿ ಹೊರಟನು.

ಕೃಷ್ಣನು ಚಕ್ರಪಾಣಿಯಾಗಿ ಬರುತ್ತಿರುವುದನ್ನು ನೋಡಿ ಭೀಷ್ಮನು ಉತ್ಸಾಹಗೊಂಡು—"ಬಾ, ದೇವೇಶ! ಸರ್ವಶರಣ್ಯನೇ! ನಮೋನಮಃ! ಚಕ್ರಪಾಣಿಯೇ! ನನ್ನನ್ನು ರಥದಿಂದ ಕೆಡವು. ಇಂದು ನಾನು ನಿನ್ನ ಚಕ್ರದಿಂದ ಹತನಾದರೆ ನನಗೆ ಇಹಪರಗಳೆರಡರಲ್ಲಿಯೂ ಶ್ರೇಯಸ್ಸಾಗುವುದು. ನೀನು ನನ್ನ ಬಳಿಗೆ ದಯೆಮಾಡಿ ನನ್ನನ್ನು ಮೂರು ಲೋಕಗಳಲ್ಲಿಯೂ ಸಂಭಾವಿತನೆನಿಸಿದೆ, ಮಹಾನುಭಾವ!" ಎಂದನು.

ಭೀಷ್ಮನ ಮಾತ ಕೇಳುತ್ತಲೆ ಕೃಷ್ಣನು ಕೋಪಗೊಂಡು—"ಈಗಾಗುತಿರುವ ಕೊಲೆಗೆ ನೀನೇ ಮೂಲ. ನಿನ್ನ ಕಣ್ಣಮುಂದೆಯೇ ದುರ್ಯೋಧನನು ಹತನಾಗುವನು. ಧರ್ಮಮಾರ್ಗದಲ್ಲಿರುವ ಮಂತ್ರಿಯು ದ್ಯೂತಾಸಕ್ತನಾದ ರಾಜನನ್ನು ತಡೆಯಬೇಕು. ಅಷ್ಟೇ ಅಲ್ಲ, ಧರ್ಮವನ್ನುಲ್ಲಂಘಿಸುವ ಕುಲಕಳಂಕನನ್ನು ಪರಿತ್ಯಜಿಸಬೇಕು" ಎಂದು ಜರಿದನು.

ಆ ಮಾತಿಗೆ ಭೀಷ್ಮನು—"ಕೃಷ್ಣ! ವಿಧಿಯನ್ನು ಮೀರುವುದು ಯಾರಿಗೂ ಸಾಧ್ಯವಲ್ಲ. ನಾನು ದುರ್ಯೋಧನನನ್ನು ತ್ಯಜಿಸಿಬಿಡೆಂದು ಧೃತರಾಷ್ಟ್ರನಿಗೆ ಎಷ್ಟೋ ಬಗೆಯಲ್ಲಿ ಹೇಳಿದೆನು; ಅವನು ಕೇಳಲಿಲ್ಲ. ಯಾದವರು ಕುಲರಕ್ಷಣಾರ್ಥವಾಗಿ ಕಂಸನನ್ನು ತ್ಯಜಿಸಿದರೆಂದು ದೃಷ್ಟಾಂತವನ್ನು ಕೂಡ ಕೊಟ್ಟೆನು" ಎಂದನು.

ಆ ವೇಳೆಗೆ ಪಾರ್ಥನು ರಥದಿಂದ ದುಮ್ಮಿಕ್ಕಿ ಓಡಿಹೋಗಿ ಕೃಷ್ಣನ ಎರಡು

ಕಾಲುಗಳನ್ನೂ ಬಿಗಿಯಾಗಿ ಹಿಡಿದು—"ಕೃಷ್ಣ! ಕೋಪಮಾಡಬೇಡ. ನಮಗೆ ನೀನೇ ಗತಿ. ನಾನೇ ಹೋಗಿ ಕೌರವರನ್ನು ನಾಶಮಾಡಿಬಿಡುವೆನು ನೀನು ಆ ಕೆಲಸಕ್ಕೆ ಹೋಗಬೇಡ" ಎಂದು ಹೇಳಿ ಕೃಷ್ಣನನ್ನು ಅಡ್ಡಹಾಕಿ ಮತ್ತೆ ರಥವನ್ನೇರಿ ಭೀಷ್ಮದ್ರೋಣ ದುರ್ಯೋಧನಾದಿಗಳನ್ನು ಕ್ಷತವಿಕ್ಷತ ರನ್ನಾಗಿ ಮಾಡಿದನು. ಆ ವೇಳೆಗೆ ಸಂಜೆಯಾಗಲು ಎಲ್ಲರೂ ಶಿಬಿರಕ್ಕೆ ಹೊರಟರು.

ನಾಲ್ಕನೆಯ ದಿವಸ ಕುರುಪಾಂಡವರು ಸಮ ವಿಕ್ರಮದಿಂದ ಕಾದಿದರು. ಕೌರವರ ಕಡೆಯ ಪಟುಭಟರನೇಕರು ಹತರಾದರು. ಭೀಮನು ದುರ್ಯೋಧನನ ಎಂಟು ಮಂದಿ ತಮ್ಮಂದಿರನ್ನು ಕೊಚ್ಚಿ ಕೆಡವಿದನು.

ಸೋದರರು ಮಡಿದರೆಂದು ಶೋಕ ಸಂತಪ್ತನಾಗಿ ದುರ್ಯೋಧನನು ಪ್ರಾಜ್ಞನಾದ ಭೀಷ್ಮನ ಬಳಿಗೆ ಹೋಗಿ—"ತಾತ! ದ್ರೋಣಕೃಪ ಮೊದಲಾದ ನೀವುಗಳು ಮಹಾರಥರು, ಮಲ್ಲರು, ಸತ್ಕುಲಪ್ರಸೂತರು. ಪರಾಕ್ರಮದಲ್ಲಿ ನಿಮ್ಮ ಮುಂದೆ ಪಾಂಡವರಲ್ಲ. ಆದರೂ ಪಾಂಡವರು ಯಾರ ಬಲದಿಂದ ನಮ್ಮನ್ನು ಕ್ಷಣಕ್ಷಣಕ್ಕೂ ಜಯಿಸುತ್ತಿದ್ದಾರೋ ಕಾಣೆನು" ಎಂದನು.

ಭೀಷ್ಮನು—"ರಾಯ! ಅವರು ಕೃಷ್ಣನ ಮರೆಹೊಕ್ಕಿರುವರು, ಕೃಷ್ಣನು ಅವರನ್ನು ಒಲಿದಿರುವನು. ಆದುದರಿಂದಲೇ ಲೋಕದಲ್ಲಿ ಅವರನ್ನು ಜಯಿಸ ತಕ್ಕವರು ಹಿಂದಿರಲಿಲ್ಲ, ಇಂದಿಲ್ಲ, ಮುಂದಿರರು. ನೀನು ಪಾಂಡವರ ಸಂಗಡ ಸಂಧಿಮಾಡಿಕೊ; ಅದರಿಂದ ನಿನಗೊಬ್ಬನಿಗೇ ಅಲ್ಲ, ಲೋಕಕ್ಕೇ ಕ್ಷೇಮ ವಾಗುವುದು" ಎಂದುತ್ತರವನ್ನು ಕೊಟ್ಟನು.

ದುರ್ಯೋಧನನು ತಾತನಿಗೆ ನಮಸ್ಕಾರಮಾಡಿ ಶಯನಕ್ಕೆ ತೆರಳಿದನು.

ಬೆಳಗಾಯಿತು. ರಣಭೇರಿ ಮೊಳಗಿತು. ಎರಡು ಪಡೆಯವರೂ ಸಂಜೆಯ ವರೆಗೂ ಹೋರಾಡಿ ಘಾಸಿಪಟ್ಟು, ಭಗ್ನಮನೋರಥರಾಗಿ ಇರುಳ ಕಳೆಯ ಲಿಕ್ಕೆ ಬಿಡಾರವನ್ನು ಹೊಕ್ಕರು.

ಕೌರವ ಭಟರು ಅಗಣಿತರಾದರೂ, ಭೈರವಮೂರ್ತಿಯನ್ನು ತಾಳಿ ಕಾದಿದರೂ, ವ್ಯೂಹರಚನೆಯಲ್ಲಿ ಯಾವ ಕೊರತೆಯಿಲ್ಲದಿದ್ದರೂ, ದುರ್ಯೋ ಧನನು ತನ್ನ ಸೈನ್ಯವು ಪೆಟ್ಟುತಿಂದು ಸೋತುದಲ್ಲದೆ, ತಾನೂ ಪೆಟ್ಟುತಿಂದು ಯಥಾಪ್ರಕಾರವಾಗಿ ಅಜ್ಜಯ್ಯನ ಹತ್ತಿರ ಹೋಗಿ—"ಪಾಂಡವರು ನಮ್ಮ ಸೈನ್ಯವನ್ನು ಬಡಿದು ಭಂಗಪಡಿಸಿದರು. ಭೀಮನು ಬಿಟ್ಟ ಬಾಣಗಳಿಂದ ನಾನೂ ಪೆಟ್ಟುತಿಂದೆನು. ಅವನ ಕೋಪಾಟೋಪವನ್ನು ನೋಡಿದ ಮಾತ್ರಕ್ಕೆ ನನಗೆ ಪ್ರಜ್ಞೆ ತಪ್ಪಿತು. ಈಗೀಗ ನಾನು ತೆಪ್ಪರಿಸಿಕೊಳ್ಳುತ್ತಿದ್ದೇನೆ. ಸತ್ತ

ಸಂಧನೇ! ನಿನ್ನ ಅನುಗ್ರಹದಿಂದ ನನಗೆ ಜಯವಾಗಬೇಕೇ ಹೊರತು ಬೇರೆಯೇನು ಗತಿಯನ್ನೂ ಕಾಣೆನು" ಎಂದು ಮೊರೆಯಿಟ್ಟನು.

ಭೀಷ್ಮನು—"ನಿನಗೆ ಜಯವಾಗಲೆಂದೇ ನಾನು ನನ್ನ ಸಾಹಸವೆಲ್ಲವನ್ನೂ ವೆಚ್ಚಮಾಡುತ್ತಿದ್ದೇನೆ. ಆದರೆ ಪಾಂಡವರು ಅಸಹಾಯಶೂರರು, ಪ್ರಚಂಡರು, ಯಶಸ್ವಿಗಳು, ಅಸಂಖ್ಯೇಯರು. ಅವರು ನಿನ್ನ ಮೇಲೆ ವಿಷವನ್ನು ಕಾರುತ್ತಿದ್ದಾರೆ. ಉದ್ದಂಡರಾದಾ ನಿನ್ನ ವೈರಿಗಳನ್ನು ಹೇಗೆ ತಾನೆ ಗೆಲ್ಲಬಹುದು? ನಾನೆಂತೂ ಪ್ರಾಣದಾಸೆಯನ್ನು ಬಿಟ್ಟು ನಿನಗಾಗಿ ಯುದ್ಧಮಾಡುತ್ತೇನೆ. ನನ್ನಂತೆಯೇ ದ್ರೋಣಾದಿಗಳೂ ನಿನಗಾಗಿ ತಲೆ ತೆರುವುದಕ್ಕೆ ಸಿದ್ಧರಾಗಿರುವರು" ಎಂದನು.

ಏಳನೆಯ ದಿವಸದ ಯುದ್ಧವೂ ಪ್ರಹಾರದಲ್ಲಿಯೇ ಪರ್ಯವಸಾನವಾಯಿತು. ಎಂಟನೆಯ ದಿವಸ ಸೈನ್ಯಗಳೆರಡೂ ಮತ್ತೆ ಎದೆಯೊಡ್ಡಿ ರಣದಲ್ಲಿ ನಿಂತು ಅಸ್ತ್ರ ಶಸ್ತ್ರಗಳನ್ನು ಹಿಡಿದು ಬಡಿದಾಡಿದುವು. ಒಂದು ಕಡೆ ಭೀಷ್ಮ ದ್ರೋಣಾದಿ ಅಸಹಾಯಶೂರರೂ ಇನ್ನೊಂದು ಕಡೆ ಭೀಮಾರ್ಜುನಾದಿ ಕಡುಗಲಿಗಳೂ ಪರಬಲವನ್ನು ಧೂಳೀಪಟಲಮಾಡಿದರು. ಭೀಮನಿಂದ ದುರ್ಯೋಧನನ ಎಂಟು ಮಂದಿ ಸೋದರರು ಹತರಾದರು.

ದುರ್ಯೋಧನನು ಭ್ರಾತೃವಿಯೋಗದಿಂದ ಕಣ್ಗೆಟ್ಟು—"ಮಹಾಪ್ರಭುವೆ! ಎಂಟು ಮಂದಿ ತಮ್ಮಂದಿರು ಪ್ರಾಣಬಿಟ್ಟರು. ಪಡೆಯು ಕ್ಷಣಕ್ಷಣಕ್ಕೂ ಸವೆಯುತ್ತಿದೆ. ನಮ್ಮ ಪಾಡನ್ನು ನೋಡಿ ನೋಡಿ ನೀನು ನಮ್ಮನ್ನು ಉಪೇಕ್ಷೆಮಾಡುತ್ತಿದ್ದೀಯೆ. ನಿನ್ನನ್ನು ನಂಬಿ ನಾನು ಕೆಟ್ಟೆನು. ಅಯ್ಯೋ ನನ್ನ ದುರ್ದೈವವೇ!" ಎಂದು ಅಜ್ಜಯ್ಯನ ಮುಂದೆ ಗೋಳಿಟ್ಟನು.

ಆ ನಿಷ್ಠುರೋಕ್ತಿಗಳನ್ನು ಕೇಳಿ, ಕಣ್ಣೀರು ಸುರಿಸುತ್ತ ಭೀಷ್ಮನು—"ದುರ್ಯೋಧನ! ಇದೆಲ್ಲವೂ ಮುಂಗಂಡುದೇ ಅಲ್ಲವೆ? ಹೀಗೇ ಆಗುವುದೆಂದು ನಿನ್ನ ಆಪ್ತರೆಲ್ಲರೂ ಮೊರೆಯಿಡಲಿಲ್ಲವೆ? ನಾನಾಗಲಿ ಆಚಾರ್ಯನಾಗಲಿ ಪಾಂಡವರ ಸಂಗಡ ಯುದ್ಧಮಾಡಿ ಬದುಕಿ ಬರುವೆವೆಂಬ ಆಸೆ ನನಗಿಲ್ಲ. ಭೀಮಸೇನನು ನಿಮ್ಮನ್ನು ಎಲ್ಲಿ ಕಂಡರಲ್ಲಿ ತೀರಿಸಿಬಿಡುವನು. ಇದು ಸತ್ಯ. ಸ್ವರ್ಗವೇ ಗತಿಯೆಂದು ದೃಢಮನಸ್ಸು ಮಾಡಿ ಯುದ್ಧಮಾಡು. ಸುರಾಸುರರು ಕೂಡ ಪಾಂಡವರನ್ನು ಜಯಿಸಲಾರರು. ಇನ್ನು ಅವರಿಗೆ ನಾವೆಷ್ಟರವರು?" ಎಂದೆಚ್ಚರಿಸಿದನು.

ಆ ವೇಳೆಗೆ ಮಧ್ಯಾಹ್ನವಾಯಿತು. ಬರಬರುತ್ತ ಸಂಗ್ರಾಮವು ಘನ ಘೋರತರವಾಯಿತು. ಸಂಜೆಯ ವೇಳೆಗೆ ಸೈನ್ಯಗಳೆರಡೂ ಪರಸ್ಪರ

ಮರ್ದಿತವಾಗಿ, ಭಗ್ನವಾಗಿ, ಭ್ರಾಂತವಾಗಿ ತಂತಮ್ಮ ಪಾಳೆಯಕ್ಕೆ ಹಿಂದಿರು ಗಿದುವು.

ಆಯಿರುಳು ದುರ್ಯೋಧನನು ತನ್ನ ದಂಡು ನುಗ್ಗಾದುದನ್ನು ನೋಡಿ ಉತ್ಸಾಹಹೀನನಾಗಿ, ಶಕುನಿ ದುಃಶಾಸನಾದಿ ದುರ್ಮಂತ್ರಿಗಳನ್ನು ಕೂಡಿ— "ಕರ್ಣ! ಭೀಷ್ಮ ದ್ರೋಣ ಕೃಪಾದಿಗಳು ಪಾರ್ಥನ ಮೇಲೆ ಕೈಮಾಡರು. ನಮ್ಮ ಸೈನ್ಯವು ಕ್ಷೀಣವಾಗುತ್ತಿದೆ. ತಮ್ಮಂದಿರು ಮಡಿದರು. ಪಾಂಡವರ ಪೌರುಷವು ಅಖಂಡಿತವಾದುದು; ಅವರು ಸೋಲುವರಲ್ಲ. ಮುಂದೇನು ಗತಿ?" ಎಂದನು.

ಅದನ್ನು ಕೇಳುತ್ತಲೆ ಕರ್ಣನು—"ಭರತಶ್ರೇಷ್ಠನೇ! ಚಿಂತಿಸಬೇಡ; ನಾನಿದ್ದೇನೆ. ಭೀಷ್ಮನಿಗೆ ಪಾಂಡವರಲ್ಲಿ ಪಕ್ಷಪಾತ. ಅವನು ದಿನವೂ ಅವರಿಗೆ ಸಾಹಾಯ್ಯವನ್ನು ಮಾಡುತ್ತಿದ್ದಾನೆ. ಅಲ್ಲದೆ, ಅವನು ಅಹಂಕಾರಿ, ರಣ ಪ್ರಿಯನು. ಅವನು ಹೇಗೆ ತಾನೆ ಪಾಂಡವರನ್ನು ಸಂಹಾರಮಾಡುವನು? ಹೇಗೆ ತಾನೆ ಯುದ್ಧವನ್ನು ಕೊನೆಮುಟ್ಟಿಸುವನು? ಹೋಗು, ಸಂಭಾವಿತ ನಾದಾ ಮುದುಕನನ್ನು ರಣರಂಗವನ್ನು ಬಿಟ್ಟು ಬರಹೇಳು, ಬಿಲ್ಲುಬಾಣ ಗಳನ್ನು ಕೆಳಗೆ ಇಡಹೇಳು. ಭೀಷ್ಮನು ಅಸ್ತ್ರ ಶಸ್ತ್ರಗಳನ್ನು ಕೆಳಗಿಡಲಿ ಪಾಂಡವರೂ ಅವರ ಬಳಗವೂ ಸತ್ತರೆಂದು ತಿಳಿ" ಎಂದನು.

ದುರ್ಯೋಧನನು ಪರಿವಾರಸಮೇತನಾಗಿ ಭೀಷ್ಮನ ನಿವಾಸಕ್ಕೆ ಹೋಗಿ ಅಭಿವಂದಿಸಿ ಕೈಜೋಡಿಸಿಕೊಂಡು ನಿಂತು ಕಣ್ಣೀರು ಸುರಿಸುತ್ತ ಗದ್ಗದ ಸ್ವರದಿಂದ—"ಶತ್ರುಸೂದನನೇ! ನಿನ್ನನ್ನು ನಚ್ಚಿ ನಾನು ಪಾಂಡವರ ಮೇಲೆ ಯುದ್ಧಕ್ಕೆ ತೊಡಗಿದೆನು. ಪ್ರಭುವೇ! ನನ್ನಲ್ಲಿ ಕೃಪೆಯಿಟ್ಟು ಪಾಂಡವರನ್ನು ನಿಗ್ರಹಿಸು. ನೀನು ಅವರನ್ನು ನಿಗ್ರಹಿಸುವೆನೆಂದು ಹೇಳಿದೆ; ನಿನ್ನ ಮಾತನ್ನು ಸತ್ಯವೆನಿಸು. ಪಾಂಡವರ ಮೇಲಣ ಪ್ರೀತಿಯಿಂದಲೋ ಮಂದಭಾಗ್ಯನಾದ ನನ್ನ ಮೇಲಣ ಕೋಪದಿಂದಲೋ ನೀನು ಪಾಂಡವರನ್ನು ಉಳಿಸ ಬೇಕೆಂದಿರುವ ಪಕ್ಷಕ್ಕೆ ರಣಧೀರನಾದ ಕರ್ಣನು ಯುದ್ಧಮಾಡಲಿ ಅನುಜ್ಞೆಯನ್ನು ಕೊಡು" ಎಂದು ಬೇಡಿದನು.

ವೃದ್ಧ ಭೀಷ್ಮನು ದುರ್ಯೋಧನನ ಕಟುಭಾಷೆಯನ್ನು ಕೇಳಿ ನೊಂದರೂ ಅಪ್ರಿಯವಾದ ಮಾತನ್ನೊಂದನ್ನೂ ಆಡದೆ ಬಹಳ ಹೊತ್ತು ಯೋಚಿಸಿ ನಿಟ್ಟುಸಿರುಬಿಡುತ್ತ—"ದುರ್ಯೋಧನ! ನನ್ನನ್ನೇಕೆ ಇಂತಹ ವಾಕ್ಯಗಳಿಂದ ನೋಯಿಸುತ್ತೀಯೆ? ನನ್ನ ಕೈಯಲ್ಲಾದ ಮಟ್ಟಿಗೂ ನಿನಗೆ ಪ್ರಿಯವಾದು ದನ್ನೇ ಮಾಡುತ್ತಿದ್ದೇನೆ; ನಿನ್ನ ನಿಮಿತ್ತವಾಗಿ ಪ್ರಾಣವನ್ನು ಬಿಡುವುದಕ್ಕೂ

ಸಿದ್ಧನಾಗಿದ್ದೇನೆ. ಆದರೆ ಅರ್ಜುನನು ಶೂರನು, ಅಜೇಯನು ಎಂಬುದನ್ನು ನೀನು ಕಾಣೆಯಾ? ಅವನ ಮಿಕ್ಕ ಸಾಹಸಕಾರ್ಯಗಳೆಲ್ಲವೂ ಹೋಗಲಿ; ವಿರಾಟನಗರದಲ್ಲಿ ಅವನೊಬ್ಬನೇ ನಮ್ಮೆಲ್ಲರನ್ನೂ ಅಪ್ಪಳಿಸಲಿಲ್ಲವೇ? ಅವನು ಅಜೇಯನೆಂಬುದಕ್ಕೆ ಆ ನಿದರ್ಶನವೊಂದು ಸಾಲದೆ? ದ್ರೋಣಾಚಾರ್ಯನನ್ನೂ ನನ್ನನ್ನೂ ರಣದಲ್ಲಿ ಗೆದ್ದು ನಮ್ಮ ಕವಚಗಳನ್ನು ಕಿತ್ತುಕೊಳ್ಳಲಿಲ್ಲವೆ? ಆ ನಿದರ್ಶನವು ಸಾಲದೆ? ಗೋಗ್ರಹಣದಲ್ಲಿ ಧನುಷ್ಮಂತನಾದ ಅಶ್ವತ್ಥಾಮನನ್ನು ಸೋಲಿಸಲಿಲ್ಲವೆ? ಅದೂ ಹೋಗಲಿ; ಈಗ ಪೌರುಷವನ್ನು ಕೊಚ್ಚುತ್ತಿರುವ ಕರ್ಣನ ವಸ್ತ್ರವನ್ನು ಕಿತ್ತು ಉತ್ತರನಿಗೆ ಕೊಡಲಿಲ್ಲವೆ? ಇನ್ನೆಷ್ಟು ನಿದರ್ಶನಗಳು ಬೇಕು? ನೀನು ಅವಿವೇಕಿ; ಈ ಮಾತನ್ನಾಡಬಹುದು ಈ ಮಾತನ್ನಾಡ ಬಾರದು ಎಂಬುದನ್ನು ಯೋಚಿಸದೆಯೇ ಮಾತನ್ನಾಡುತ್ತೀಯೆ. ನೀನಾಗಿ ಬೇಕೆಂದು ಪಾಂಡವರನ್ನು ಕೆಣಕಿದೆ, ಅವರ ಕೂಡೆ ವೈರವನ್ನು ಕಟ್ಟಿಕೊಂಡೆ. ಈಗ ಅವರ ಸಂಗಡ ಯುದ್ಧಮಾಡು, ನಿನ್ನ ಪ್ರತಾಪವನ್ನು ತೋರಿಸು. ನಾನಂತೂ ಯಾರ ಮೇಲೆ ಬೇಕಾದರೂ ಯುದ್ಧಮಾಡುತ್ತೇನೆ. ಶಿಖಂಡಿಯ ಮೇಲೆ ಮಾತ್ರ ನನ್ನ ಬಾಣವನ್ನು ಬಿಟ್ಟು ಅದಕ್ಕೆ ಕಳಂಕವನ್ನು ತಾರೆನು. ಪಾಂಡವರು ನನ್ನನ್ನು ಕೊಂದರೆ ನನಗೆ ಯಮಪುರಿಯಾಗುವುದು, ನಾನು ಅವರನ್ನು ಕೊಂದರೆ ನಿನಗೆ ರಾಜ್ಯವಾಗುವುದು. ನಾನು ಶಿಖಂಡಿಯನ್ನು ಮಾತ್ರ ಕಣ್ಣೆತ್ತಿ ನೋಡೆನು" ಎಂದನು.

ಉದಯವಾಗುತ್ತಲೆ ಪಡೆಗಳೆರಡೂ ರಣಾಂಗಣದಲ್ಲಿ ಮೇಳೈಸಿ ಹೋರಾಡ ತೊಡಗಿದುವು. ಭೀಷ್ಮನು ತಾನು ಹೇಳಿದಂತೆಯೇ ಪಾಂಡವರ ದಂಡನ್ನು ನುಚ್ಚುನುರಿಮಾಡಿದನು. ಅರ್ಜುನನು ಅರೆಮನಸ್ಸಿನಿಂದ ಕಾದುತ್ತಿರುವುದನ್ನೂ ಭೀಷ್ಮನು ಪಾಂಡವರ ಸೈನ್ಯವನ್ನು ಕೊಚ್ಚುತ್ತಿರುವುದನ್ನೂ ನೋಡಿ ಕೃಷ್ಣನು ರಥವಿಂದಿಳಿದು ತಾನೇ ಭೀಷ್ಮನನ್ನು ಕೊಲ್ಲುವೆನೆಂದು ಮತ್ತೆ ಹೊರಟನು. ಆಗ ಅರ್ಜುನನು ತಾನು ಭೀಷ್ಮನನ್ನು ಕೊಂದು ಹಗೆಗಳೆಲ್ಲರನ್ನೂ ನಿಪಾತ ಮಾಡುವೆನೆಂದು ಆಣೆಯಿಟ್ಟುಕೊಂಡು ಕೃಷ್ಣನನ್ನು ತಡೆದನು.

ಒಡನೆಯೇ ಅರ್ಜುನನು ಕೌರವಸೈನ್ಯವನ್ನೂ, ಭೀಷ್ಮನು ಪಾಂಡವ ಸೈನ್ಯವನ್ನೂ ನಾಶಮಾಡುತ್ತಹೋದರು. ಸೂರ್ಯಾಸ್ತಮಯಕ್ಕೆ ಪಾಂಡವರ ಪಡೆಯು ಮುರಿದು ತಟ್ಟುಬದ್ದಿತು. ಅವರ ವೀರಪ್ರಮುಖರು ಕೈಗೆಟ್ಟರು. ದುರ್ಯೋಧನಾದಿಗಳು ತಮ್ಮ ಕೈ ಮೇಲಾಯಿತೆಂದು ಸಡಗರದಿಂದ ಭೀಷ್ಮನ ಅಡಿಗೆರಗಿ ಅವನನ್ನು ಪೂಜಿಸಿ ಸುಮ್ಮಾನದಿಂದ ಇರುಳನ್ನು ಕಳೆದರು.

ಯುಧಿಷ್ಠಿರನು ಭೀಷ್ಮನ ಅಖಂಡಿತ ಪ್ರತಾಪವನ್ನೂ ತನಗಾದ ಭಂಗ

ವನ್ನೂ ನೆನೆನೆನೆದು ಮರುಗುತ್ತ ತನ್ನ ಮಿತ್ರ ಪ್ರಮುಖರೊಡಗೂಡಿ—"ಕೃಷ್ಣ! ಭೀಷ್ಮನು ಪ್ರಚಂಡನು. ಅವನನ್ನು ಗೆಲ್ಲುವುದು ಸಾಧ್ಯವಲ್ಲ. ಅವನಿಂದ ನಮ್ಮ ಸೈನ್ಯವು ಕ್ಷೀಣವಾಯಿತು. ಇನ್ನು ಯುದ್ಧವು ನನಗಿಷ್ಟವಿಲ್ಲ. ರಾಜ್ಯದಾಸೆಯಿಂದ ಪರಾಕ್ರಮವನ್ನು ತೋರಿಸುವುದಕ್ಕೆ ಹೋಗಿ ಕೆಟ್ಟೆನು. ನನ್ನ ದೆಸೆಯಿಂದ ನನ್ನ ತಮ್ಮಂದಿರು ರಾಜ್ಯಭ್ರಷ್ಟರಾದರು. ದ್ರೌಪದಿಯ ಪಾಡಂತೂ ಕೇಳಬೇಡ. ಹೀಗಿರುವಲ್ಲಿ, ನನಗೆ ವನವಾಸವೇ ಲೇಸೆನಿಸುವುದು. ನನಗೆ ಜೀವದ ಮೇಲೆ ಆಸೆಯಿಲ್ಲದೆ ಇಲ್ಲ. ಆದರೆ ಜೀವವನ್ನುಳಿಸಿಕೊಳ್ಳುವುದೇ ದುರ್ಲಭವಾಗಿದೆ. ಏನಮಾಡಲಿ? ನಾನೂ ನನ್ನ ತಮ್ಮಂದಿರೂ ನಿನ್ನ ಅನುಗ್ರಹಕ್ಕೆ ತಕ್ಕವರಾದ ಪಕ್ಷದಲ್ಲಿ ಧರ್ಮಕ್ಕೆ ವಿರೋಧವಿಲ್ಲದಂತೆ ನಾವೇನು ಮಾಡಬಹುದು ಹೇಳು" ಎಂದನು.

ಕೃಷ್ಣನು—"ಧರ್ಮಪುತ್ರ! ನೀನು ಮರುಗಬೇಡ. ಯಾರು ಪಾಂಡುಪುತ್ರರಿಗೆ ಆಗದವರೋ ಅವರು ನನಗೂ ಆಗದವರು. ನಿನ್ನವರೇ ನನ್ನವರು, ನನ್ನವರೇ ನಿನ್ನವರು. ನಿನ್ನ ತಮ್ಮ ಅರ್ಜುನನು ನನ್ನ ಸಖನು, ನನ್ನ ಸಂಬಂಧಿ, ನನ್ನ ಶಿಷ್ಯನು. ಅರ್ಜುನನಿಗೆಂದರೆ ನನ್ನ ಮೈಯ ಖಂಡವನ್ನು ಕತ್ತರಿಸಿ ಕೊಡುವೆನು; ನನಗೆಂದರೆ ಅವನು ಪ್ರಾಣವನ್ನಾದರೂ ಕೊಡುವನು. ಅವನು ಹೇಳಲಿ, ನಾನು ಭೀಷ್ಮನನ್ನು ಇಲ್ಲವೆನಿಸುವೆನು ಅಥವಾ, ಅವನೇ ಆ ಕೆಲಸವನ್ನು ಮಾಡಲಿ; ಅವನು ಮಾಡಲಾಪನು. ಭೀಷ್ಮನಿಗೆ ವಯಸ್ಸಾಯಿತು, ಕರ್ತವ್ಯಜ್ಞಾನವಿಲ್ಲ" ಎಂದನು.

ಯುಧಿಷ್ಠಿರನು—"ಕೃಷ್ಣ! ನೀನೊಬ್ಬನು ನನಗೆ ನಾಥನಾಗಿ ನನ್ನ ಪರವಾಗಿದ್ದರೆ ನನ್ನಿಷ್ಟಾರ್ಥವೆಲ್ಲವೂ ಕೂಡಿಬರುವುದು. ನೀನು ಯುದ್ಧ ಮಾಡೆನೆಂದು ಶಪಥಮಾಡಿದೆ. ನನ್ನ ಗೌರವಕ್ಕೋಸ್ಕರ ನಿನ್ನ ನುಡಿಯನ್ನು ಹುಸಿಯೆನಿಸೆನು. ಯುದ್ಧಮಾಡದೆಯೇ ನಮಗೆ ಸಾಹಾಯ್ಯಮಾಡು. ಭೀಷ್ಮನು ಕೂಡ ನಮ್ಮ ಪರವಾಗಿ ಯುದ್ಧಮಾಡನು; ಆದರೆ ಸಮಯದಲ್ಲಿ ಮಂತ್ರಿಯಂತೆ ಆಲೋಚನೆಯನ್ನು ಹೇಳುವೆನೆಂದು ಮಾತುಕೊಟ್ಟಿರುವನು. ಅವನಲ್ಲಿ ಹೋಗೋಣ" ಎಂದನು.

ಯುಧಿಷ್ಠಿರಾದಿಗಳು ಕೃಷ್ಣನ ಸಮೇತರಾಗಿ ಹೋಗಿ ಶಸ್ತ್ರಕವಚಗಳನ್ನುಳಿದು ತಲೆಬಾಗಿ ಭೀಷ್ಮನನ್ನು ವಂದಿಸಲು, ಕುಶಲಪ್ರಶ್ನೆಗಳಾದ ಬಳಿಕ ಭೀಷ್ಮನು—"ನೀವು ಬಂದ ಕಾರ್ಯವೇನು? ಯುದ್ಧವೊಂದನ್ನು ಬಿಟ್ಟು ನಿಮ್ಮ ಹಿತಾರ್ಥವಾಗಿ ಎಂತಹ ದುಷ್ಕರಕಾರ್ಯವನ್ನಾದರೂ ಮಾಡುವೆನು. ನನ್ನಿಂದೇನಾಗಬೇಕು ಹೇಳಿ" ಎಂದು ಕೇಳಿದನು.

ಅದಕ್ಕೆ ಯುಧಿಷ್ಠಿರನು ಇಂತೆಂದನು :—"ಪ್ರಾಜ್ಞನೇ! ಅಪರಸೂರ್ಯ ನಂತಿರುವ ನಿನ್ನಿದಿರಿಗೆ ನಿಂತು ನಿನ್ನ ಪ್ರತಾಪವನ್ನು ಯಾರೂ ಸೈರಿಸಲಾರರು; ದೇವಾಸುರರೂ ನಿನ್ನನ್ನು ಗೆಲ್ಲಲರಿಯರು, ಕೊಲ್ಲಲರಿಯರು. ಇನ್ನು ನಾವೆಷ್ಟ ರವರು? ನಮ್ಮ ಸೈನ್ಯವು ಭಗ್ನವಾಯಿತು, ಭಟರು ಹತವೀರ್ಯರಾದರು. ಈ ಸ್ಥಿತಿಯಲ್ಲಿ ನಾವು ನಿನ್ನನ್ನು ಗೆಲ್ಲುವ ಬಗೆ ಹೇಗೆ ಹೇಳು, ಮಹಾಪ್ರಭುವೇ!"

ಭೀಷ್ಮನು—"ಕೌಂತೇಯಾ! ನೀನು ಹೇಳುವುದು ದಿಟ. ನನ್ನ ಪ್ರಾಣ ವಿರುವವರೆಗೂ ನಿಮಗೆ ಜಯವಾಗದು. ನನ್ನನ್ನು ಕೊಲ್ಲಿರಿ. ನಾನು ಅಜೇಯ ನೆಂಬುದನ್ನು ನೀವು ತಿಳಿದಿರುವುದು ನಿಮ್ಮ ಪುಣ್ಯವೇ ಸರಿ. ನಾನೊಬ್ಬನು ಹತನಾದರೆ ಎಲ್ಲರೂ ಹತರಾಗುವರು. ನೀವು ನನ್ನನ್ನು ಕೊಲ್ಲದಿದ್ದರೆ ಸತ್ಯ ವಾಗಿಯೂ ಈ ಯುದ್ಧವು ಕೊನೆಮುಟ್ಟದು" ಎಂದು ನುಡಿದನು.

ಯುಧಿಷ್ಠಿರನು—"ಹಾಗಾದರೆ, ಕಾಲಾಂತಕನಾದ ನಿನ್ನನ್ನು ಕೊಲ್ಲುವುದು ತಾನೆ ಹೇಗೆ?" ಎಂದು ಕೇಳಿದನು.

ಭೀಷ್ಮನು—"ಮಹಾಬಾಹುವೇ ನಾನು ದ್ರುಪದರಾಯನ ಮಗನಾದ ಶಿಖಂಡಿಯ ಸಂಗಡ ಯುದ್ಧ ಮಾಡೆನೆಂಬುದನ್ನು ನೀನು ಬಲ್ಲೆ. ಅರ್ಜುನನು ಅವನನ್ನು ಮುಂದಿಟ್ಟುಕೊಂಡು ನನ್ನ ಮೇಲೆ ಯುದ್ಧಮಾಡಲಿ, ನಿನಗೆ ಜಯವಾಗುವುದು. ಶಿಖಂಡಿಯು ನನ್ನ ಮೇಲೆ ಶರವರ್ಷವನ್ನು ಕರೆದರೂ ನಾನು ಅವನ ಮೇಲೆ ನನ್ನ ಬಾಣವನ್ನು ಬಿಡೆನು" ಎಂದನು.

ಆ ಬಳಿಕ ಎಲ್ಲರೂ ಕುರುಪಿತಾಮಹನ ಅಡಿಗೆರಗಿ ಅವರವರ ಬಿಡಾರಕ್ಕೆ ಹೊರಟರು. ಆದರೆ ಪರಲೋಕ ದೀಕ್ಷಿತನಾದ ತಾತನ ಮಾತನ್ನು ಕೇಳಿ ಅರ್ಜುನನು ದುಃಖಸಂತಪ್ತನಾಗಿ—"ಮಾಧವ! ನಾನು ಅಜ್ಜಯ್ಯನ ಸಂಗಡ ಹೇಗೆ ಯುದ್ಧಮಾಡಲಿ; ನನ್ನನ್ನು ಎತ್ತಿ, ಮುದ್ದಿಸಿ, ಸಾಕಿ, ಸಲಹಿ, ಬೆಳೆ ಯಿಸಿದವನನ್ನು ಹೇಗೆ ಕೊಲ್ಲಲಿ? ನಮ್ಮ ಸೈನ್ಯವೇ ನಾಶವಾಗಲಿ, ನನಗೆ ವಧೆಯೇ ಆಗಲಿ; ಆ ಪ್ರಾಜ್ಞನನ್ನು, ಆ ವೃದ್ಧನನ್ನು, ಆ ಧೀರೋದಾರನನ್ನು, ಆ ಕುರುಕುಲಶ್ರೇಷ್ಠನನ್ನು ನಾನು ಕೊಲ್ಲೆನು" ಎಂದನು.

ಆಗ ಕೃಷ್ಣನು—"ಭೀಷ್ಮನನ್ನು ಕೊಲ್ಲುವೆನೆಂದು ನೀನು ಪ್ರತಿಜ್ಞೆಮಾಡಿ ಈಗ ಒಲ್ಲೆನೆಂದರೆ ತೀರುವುದೆ? ಕ್ಷತ್ರಿಯನಾಗಿ ಹುಟ್ಟಿ ನೀನು ಹೀಗೆನ್ನಬಹುದೆ? ತನ್ನನ್ನು ಕೊಲ್ಲಬಂದ ಹಗೆಯನ್ನು ವೃದ್ಧನಾಗಲಿ, ಪೂಜ್ಯನಾಗಲಿ, ಗುಣ ಸಂಪನ್ನನಾಗಲಿ ತಾನು ಕೊಲ್ಲುವುದು ಧರ್ಮವೆಂದು ಶಾಸ್ತ್ರಜ್ಞರು ಹೇಳುವರು. ಅಸೂಯೆಪಡದೆ ಯುದ್ಧಮಾಡುವುದೂ, ಪ್ರಜೆಗಳನ್ನು ರಕ್ಷಿಸುವುದೂ, ಯಜ್ಞಮಾಡುವುದೂ ಕ್ಷತ್ರಿಯರಿಗೆ ಶಾಶ್ವತವಾದ ಧರ್ಮ. ಯುದ್ಧ

ದುರ್ಮದನಾದ ಭೀಷ್ಮನನ್ನು ರಥದಿಂದ ಕೆಡವು. ಅವನು ಸತ್ತಲ್ಲದೆ ಈ ಲೋಕಕ್ಷಯಕರವಾದ ಯುದ್ಧವು ನಿಲ್ಲದು; ನಿಮಗೆ ಜಯವಾಗದು'' ಎಂದುಪ ದೇಶಮಾಡಿ ಅರ್ಜುನನನ್ನು ಕಾಳೆಗಕ್ಕೆ ಹುರಿಮಾಡಿದನು.

ಕುರುವೃದ್ಧನ ಸೇನಾಧಿಪತ್ಯದ ಕಡೆಯ ದಿನವು ಉದಯವಾಯಿತು. ಭೇರಿ ಮೃದಂಗ ಶಂಖ ಧ್ವನಿ ಮೊಳಗಿತು. ರಣರಂಗವು ಕೋಲಾಹಲ ಪೂರ್ಣವಾಯಿತು. ಪಾಂಡವರು ಸೈನ್ಯವನ್ನು ವ್ಯೂಹರಿಸಿ ಶಿಖಂಡಿಯನ್ನು ಮುಂಕೊಂಡು ಯುದ್ಧಾಂಗಣವನ್ನು ಹೊಕ್ಕರು. ಹಾಗೆಯೇ, ಕೌರವರು ವ್ಯೂಹವನ್ನು ರಚಿಸಿ ತಮ್ಮ ಸೈನ್ಯದ ಅಗ್ರದಲ್ಲಿ ಮಹಾರಥ ಭೀಷ್ಮನನ್ನಿಟ್ಟು ಕೊಂಡು ಪಾಂಡವರಿಗೆ ಮಾರಾಂತರು. ಒಡನೆಯೇ ಆ ಚಂಡವಿಕ್ರಮನು ವೈರಿಬಲವನ್ನು ನಾಶಮಾಡತೊಡಗಿದನು. ಇತ್ತ, ಅಪರಾಜಿತನಾದ ಸವ್ಯ ಸಾಚಿಯು ರಿಪುಬಲವು ತಲ್ಲಣಿಸುವಂತೆ ಸಿಂಹನಾದವನ್ನು ಮಾಡಿ ಅಂಬಿನ ಮಳೆಗರೆದನು.

ದುರ್ಯೋಧನನು ಅರ್ಜುನನ ಬಲ್ಮೆಯನ್ನು ನೋಡಿ—'' ಗಾಂಗೇಯಾ! ನೋಡು, ಅರ್ಜುನನು ಕೃಷ್ಣನನ್ನು ಸಾರಥಿಯನ್ನಾಗಿಟ್ಟುಕೊಂಡು ಮೇಲೆ ಮೇಲೆ ಬಾಣಗಳನ್ನೆಸೆದು ನಮ್ಮ ಸೈನ್ಯವನ್ನು ಭಂಜಿಸುತ್ತಿದ್ದಾನೆ. ಭೀಮಸೇನ ಮುಖ್ಯರು ಕೂಡ ನಮ್ಮ ಸೈನ್ಯವನ್ನು ಸಂಹಾರಮಾಡುತ್ತಿದ್ದಾರೆ. ಭಟರು ಚದರುತ್ತಿರುವರು. ಈ ಮಹಾರಣದಲ್ಲಿ ನಮ್ಮ ಪಡೆಗೆ ನಿನ್ನಾಶ್ರಯವಲ್ಲದೆ ಬೇರೆಯೇನಿದೆ? ಪ್ರಭುವೇ!'' ಎಂದು ತನ್ನ ವಿಪದ್ಭೀತಿಯನ್ನು ತೋರಿಸಿದನು.

ಅದಕ್ಕೆ ಭೀಷ್ಮನು ಒಂದು ಮುಹೂರ್ತ ಆಲೋಚಿಸಿ—'' ಮಹಾಬಲನೇ! ಕೇಳು. ನಾನು ದಿನಕ್ಕೆ ಹತ್ತು ಸಾವಿರ ಕ್ಷತ್ರಿಯರನ್ನು ಕೊಲ್ಲದೆ ರಣದಿಂದ ಹಿಮ್ಮೆಟ್ಟೆನೆಂದು ಪ್ರತಿಜ್ಞೆಮಾಡಿದೆನು. ನಾನು ನುಡಿದಂತೆ ನಡೆದೆನು. ಈ ಹೊತ್ತಾದರೋ ನಾನು ಪಾಂಡವರನ್ನು ಸಂಪೂರ್ಣವಾಗಿ ತೀರಿಸಿಬಿಡುವೆನು; ಇಲ್ಲವೇ, ಅವರೇ ನನ್ನನ್ನು ತೀರಿಸಿಬಿಡುವರು. ಹೇಗೇ ಆಗಲಿ ಈ ಹೊತ್ತು ನಿನ್ನ ಋಣವನ್ನು—ನೀನು ಹಾಕಿದ ಕೂಳಿನ ಋಣವನ್ನು—ನನ್ನ ಒಡಲನ್ನಾ ದರೂ ತೆತ್ತು ಹರಿಸಿಬಿಡುವೆನು '' ಎಂದನು.

ಅಂದು ಭೀಷ್ಮನು ತನ್ನ ಪೌರುಷವೆಲ್ಲವನ್ನೂ ತೋರಿಸಿ ಪಾಂಡವರ ಸೈನ್ಯ ವನ್ನು ಮಥನಮಾಡಿ ಅವರ ಅಂತಃಸಾರವೆಲ್ಲವನ್ನೂ ಸೆಳೆದುಹಾಕಿದನು. ಆ ವೀರನು ಬಿಟ್ಟ ಬಾಣಗಳಿಂದ, ರಣದಲ್ಲಿ ಹಿಮ್ಮೆಟ್ಟದೆ ಕಾದುತ್ತಿದ್ದ ಅಜ್ಞಾತ ನಾಮಗೋತ್ರರಾದ ಶೂರರನೇಕರು ಮಡಿದರು. ಭೀಷ್ಮನ ಉರವಣೆಯನ್ನು ನೋಡಿ ಅರ್ಜುನ ಶಿಖಂಡಿ ಧೃಷ್ಟದ್ಯುಮ್ನಾದಿ ಪಾಂಡವ ಪ್ರಮುಖರು

ಅವನನ್ನು ಮುತ್ತಿದರು. ದುರ್ಯೋಧನಾದಿಗಳು ಭೀಷ್ಮನ ರಕ್ಷಣಾರ್ಥವಾಗಿ ಅವರನ್ನಿದಿರಿಸಿ ಹುರಿದುಂಬಿ ಹೆಣಗಿದರು. ಕೊಲೆಯು ಅಪರಿಮಿತವಾಯಿತು.

ಆ ಹತ್ತನೆಯ ದಿನ ಭೀಷ್ಮನು ಪಾಂಡವರ ಪಡೆಯನ್ನು ಸುಟ್ಟು ಬೇಸತ್ತು ಕೊಲೆಗೆ ಹೇಸಿ ತನ್ನ ಜೀವದ ಮೇಲಣ ಅಭಿಮಾನವನ್ನು ತೊರೆದು ಇನ್ನು ರಣದಲ್ಲಿ ಮಾನವಶ್ರೇಷ್ಠರನ್ನು ಕೊಲ್ಲೆನೆಂದು ನಿಶ್ಚಯಿಸಿ ಕ್ಷಿಪ್ರದಲ್ಲಿ ತಾನೇ ತನ್ನ ವಧೆಯನ್ನು ಬಯಸಿ ಸಮೀಪದಲ್ಲಿ ಕಾಣುತ್ತಿದ್ದ ಯುಧಿಷ್ಠಿರನನ್ನು ಕರೆದು ಇಂತೆಂದನು :—'ಮಹಾ ಪ್ರಾಜ್ಞನೇ! ನೀನು ಧರ್ಮಸಾರವನ್ನು ಬಲ್ಲವನು. ಧರ್ಮಸಮ್ಮತವಾಗಿಯೂ ಸ್ವರ್ಗಕ್ಕೆ ಸೋಪಾನವಾಗಿಯೂ ಇರುವ ಒಂದು ಪಾಯವನ್ನು ಹೇಳುತ್ತೇನೆ, ಕೇಳು. ಈ ನನ್ನ ದೇಹದಲ್ಲಿ ನನಗೆ ಬೇಸರವಾಗುತ್ತಿದೆ. ಅದನ್ನು ಕಾಪಾಡುವುದು ನನಗಿಷ್ಟವಿಲ್ಲ. ಸಹಸ್ರ ಸಹಸ್ರ ಪ್ರಾಣಿಗಳನ್ನು ಕೊಂದು ಬಹು ಕಾಲವನ್ನು ಕಳೆದೆನು; ಇನ್ನು ಸಾಕು. ನೀನು ದಿಟವಾಗಿಯೂ ನನ್ನ ಹಿತವನ್ನು ಕೋರುವನಾದರೆ ಪಾರ್ಥನನ್ನು ಮುಂದುಮಾಡಿಕೊಂಡು ಸರ್ವಪ್ರಯತ್ನದಿಂದಲೂ ನನ್ನನ್ನು ಕೊಲ್ಲಿಸು."

ಯುಧಿಷ್ಠಿರನು ಪಿತಾಮಹನ ಮನೋಗತವನ್ನರಿತು—"ಹೊರಡಿರಿ, ಹೊಯಿರಿ, ಕಡಿಯಿರಿ, ಭೀಷ್ಮನನ್ನು ಗೆಲ್ಲಿರಿ" ಎಂದು ತನ್ನ ಪಡೆಯನ್ನು ಹುರಿಗೊಳಿಸಿ, ಭೀಷ್ಮನ ಮೇಲೆ ಹಾಯಲು ಕೈಬೀಸಿದನು. ಅರ್ಜುನನೂ ಭೀಷ್ಮನೂ ಒಬ್ಬರಮೇಲೊಬ್ಬರು ಬಾಣಗಳನ್ನು ಎಸೆಯುತ್ತ, ಒಬ್ಬರ ಬಾಣಗಳನ್ನೊಬ್ಬರು ಖಂಡಿಸುತ್ತ ಬಿಡದೆ ಹೋರಾಡಿದರು. ಶಿಖಂಡಿಯೂ ಭೀಷ್ಮನನ್ನು ಸಂತತವಾಗಿ ಬಾಣಗಳಿಂದ ಘಾತಿಸಿದನು. ಆದರೂ ಭೀಷ್ಮನು ಅವನನ್ನು ಕಣ್ಣೆತ್ತಿ ನೋಡಲಿಲ್ಲ, ಅವನ ಬಾಣಗಳನ್ನೂ ಲಕ್ಷ್ಯಮಾಡಲಿಲ್ಲ, ಅವನ ಮೇಲೆ ತನ್ನ ಬಾಣವನ್ನು ಪ್ರಯೋಗಮಾಡಲೂ ಇಲ್ಲ. ಅರ್ಜುನನ ಬಾಣಗಳು ಮಾತ್ರ ಬರಸಿಡಿಲು ಒಡೆದಂತೆ ಅವನ ವಕ್ಷಸ್ಥಲವನ್ನು ಭೇದಿಸುತ್ತಿದ್ದುವು. ಪ್ರಾಣಾಂತಕವಾದ ಆ ವೀರನ ಬಾಣಗಳನ್ನು ಸ್ಪರ್ಶಮಾತ್ರದಿಂದ, "ಇದು ಶಿಖಂಡಿಯ ಬಾಣವಲ್ಲ, ಇದು ಶಿಖಂಡಿಯ ಬಾಣವಲ್ಲ" ಎಂದು ಹೇಳುತ್ತ ಆ ಮಲ್ಲನು ಶಿಖಂಡಿಯ ಬಾಣಗಳನ್ನು ತೃಣವಾಗೆಣಿಸಿ ಅರ್ಜುನನ ಮೇಲೆಯೇ ತನ್ನ ಪ್ರತಿ ಬಾಣಗಳನ್ನು ಬಿಡುತ್ತ ಹೋದನು. ಈ ಪ್ರಕಾರವಾಗಿ ಬಹಳ ಹೊತ್ತು ಕದನವು ನಡೆದ ಬಳಿಕ ಅರ್ಜುನನು ತನ್ನ ಪಡೆಯ ಕೂಡೆ ಕುರುಸೇನೆಯೊಳಗೆ ನುಗ್ಗಿದನು. ಅವನ ಬಾಣಹತಿಯನ್ನು ತಾಳಲಾರದೆ ಸೈನಿಕರು ಎಲ್ಲಿನವರಲ್ಲಿ ರಣರಂಗದಿಂದೋಡಿದರು. ಪಾಂಡವರ ಕಡೆಯ ಜೋದರು ಭೀಷ್ಮನ ಪೈಗಾವಲದಳವನ್ನು ಮುತ್ತಿ ಭಂಜಿಸಿದರು. ಅರ್ಜುನನು ತೀಕ್ಷ್ಣ ಶರಗಳಿಂದ ಭೀಷ್ಮ

ನನ್ನು ಹೊಡೆದು ಮೈಯೆಲ್ಲ ಗಾಯಮಾಡಿದನು. ಒಡನೆಯೇ ಆ ವೃದ್ಧವೀರನ ನೊಂದು, ಕೈಕಾಲುಗಳು ಸೋತು ಬಳಲುತ್ತ, ಪೂರ್ವಕ್ಕೆ ತಲೆಯಿಟ್ಟು ಸೂರ್ಯಾಸ್ತಮಯವಾಗುವ ವೇಳೆಗೆ ದುರ್ಯೋಧನಾದಿ ಧೃತರಾಷ್ಟ್ರ ಮಕ್ಕಳ ಕಣ್ಣಿದಿರಿಗೆ ರಥದಿಂದ ಬಿದ್ದನು. ಭೀಷ್ಮನು ವಿರಥನಾದರೂ ಅವ ಮೈ ನೆಲವನ್ನು ಸೋಕಲಿಲ್ಲ. ಅವನನ್ನು ಮುಸುಕಿದ ಶರಜಾಲವೇ ಅವನಿ ಹಾಸಿಗೆಯಾಯಿತು. ಕುರುಪಿತಾಮಹನು ಉತ್ತರಾಯಣವನ್ನು ಇದಿರ ನೋಡುತ್ತ ಶರಶಯ್ಯೆಯಲ್ಲಿ ಪವಡಿಸಿದನು.

ತಮಗೆ ವಜ್ರಪಂಜರದಂತಿದ್ದ ತಾತನು ಕೆಳಗೆ ಬಿದ್ದುದನ್ನು ಕಂಡು ದುರ್ಯೋಧನಾದಿಗಳು ಭಯಭ್ರಾಂತರಾಗಿ ವಿಷಾದಮಗ್ನರಾದರು. ಇತ್ತಂಡ ದವರೂ ಕಾಳಗವನ್ನು ನಿಲ್ಲಿಸಿ ಅಸ್ತ್ರಶಸ್ತ್ರಗಳನ್ನು ಇಳಿದು ಭೀಷ್ಮನ ಹತ್ತಿರ ಬಂದು ಕಣ್ಣೀರ ಸುರಿಸುತ್ತ, ಅವನಡಿಗೆರಗಿ ಕೈಮುಗಿದು ನಿಂತರು.

ಭೀಷ್ಮನು ಕಣ್ದೆರದು ಪ್ರಸನ್ನವದನನಾಗಿ ಕುಶಲಪ್ರಶ್ನೆಮಾಡಿ ದುರ್ಯೋಧನನನ್ನೂ ಅವನ ತಮ್ಮಂದಿರನ್ನೂ ಕರೆದು—"ಮಕ್ಕಳಿರಾ! ನನ್ನ ತಲೆ ಜೋಲಾಡುತ್ತಿದೆ, ತಲೆಗಿಂಬು ಕೊಡುವಿರಾ?" ಎಂದನು.

ದುರ್ಯೋಧನನು ಮೆತ್ತನೆಯ ದಿಂಬುಗಳನ್ನು ತರಿಸಿದನು. ಅವುಗಳನ್ನು ನೋಡಿ ಭೀಷ್ಮನು ಮಂದಸ್ಮಿತನಾಗಿ—"ಮಗನೇ! ಈ ದಿಂಬುಗಳು ಈ ಹಾಸಿಗೆಗೆ ತಕ್ಕುವಲ್ಲ" ಎಂದು ಅರ್ಜುನನ ಕಡೆಗೆ ತಿರುಗಿದನು.

ಅರ್ಜುನನು ಆ ಸುವ್ರತನ ಇಂಗಿತವನ್ನರಿತು ಅಶ್ರುಪೂರ್ಣಲೋಚನನಾಗಿ ಅಭಿವಾದನೆಮಾಡಿ—"ಆರ್ಯನೇ! ನಾನು ಅರ್ಜುನ, ದಾಸ, ನನ್ನಿಂದೇನಾಗ ಬೇಕು? ಅಪ್ಪಣೆಯಾಗಲಿ" ಎಂದನು.

ಭೀಷ್ಮನು—"ನನ್ನ ತಲೆಯ ದೆಸೆಗೇನೂ ಇಲ್ಲ. ನೀನು ಧನುರ್ಧರ ಶ್ರೇಷ್ಠನು, ಕ್ಷತ್ರಿಯಧರ್ಮವನ್ನು ಬಲ್ಲವನು; ನನ್ನ ತಲೆಯು ಕೆಳಕ್ಕೆ ಏನಾದರೂ ಕೊಡು" ಎಂದನು.

ಆ ಮಾತನ್ನು ಕೇಳಿದೊಡನೆಯೇ, ಅರ್ಜುನನು ಅಜ್ಜಯ್ಯನ ಪಾದಕ್ಕೆರಗಿ ಗಾಂಡೀವಕ್ಕೆ ಮೂರು ಬಾಣಗಳನ್ನು ತೊಡಿಸಿ ಆತನ ಹೆಡತಲೆಗೆ ಗುರಿಯಿಟ್ಟನು. ಅರ್ಜುನನ ಶರತ್ರಯವು ಭೀಷ್ಮನ ತಲೆಗಿಂಬಾಯಿತು. ಅರ್ಜುನನು ಹೆತ್ತಯ್ಯನ ಮನೋರಥವನ್ನು ಪೂರ್ಣಮಾಡಿದನು.

ಭೀಷ್ಮನು ಮೊಮ್ಮಗನ ವೀರೋಪಚಾರಗಳಿಂದ ಸುಪ್ರೀತನಾಗಿ— "ಮಗನೇ! ನನ್ನ ಹಾಸಿಗೆಗೆ ತಕ್ಕ ತಲೆದಿಂಬನ್ನು ಕೊಟ್ಟೆ. ರಣಾಂಗಣದಲ್ಲಿ

ಇಂತಹ ಹಾಸಿಗೆಯಲ್ಲಿ ಇಂತಹ ದಿಂಬಿನ ಮೇಲೆ ತಲೆಯಿಟ್ಟು ಪವಡಿಸುವುದೇ ಧರ್ಮನಿಷ್ಠರಾದ ಕ್ಷತ್ರಿಯರ ವ್ರತ" ಎಂದು ನುಡಿದನು.

ಆ ಬಳಿಕ ಆತನು ಕೆಲದಲ್ಲಿದ್ದ ನರಪತಿಗಳನ್ನು ಸಂಬೋಧಿಸಿ—"ರಾಜವರ್ಯರೇ! ವೀರಶ್ರೇಷ್ಠನಾದ ಧನಂಜಯನು ನನಗೆ ಎಂತಹ ದಿಂಬನ್ನು ಕೊಟ್ಟಿದ್ದಾನೆ, ನೋಡಿರಿ. ಸೂರ್ಯನು ಉತ್ತರಾಯಣಕ್ಕೆ ಬರುವ ವರೆಗೂ ನಾನು ಈ ಹಾಸಿಗೆಯಲ್ಲಿ ಮಲಗಿದ್ದು ಆ ಬಳಿಕ ಈ ದೇಹವನ್ನು ಬಿಡುವೆನು. ಈಗಲಾದರೂ ವೈರವನ್ನು ತೊರೆದು ಯುದ್ಧವನ್ನು ಸಾಕುಮಾಡಿರಿ" ಎಂದು ಹೇಳಿ ಸುಮ್ಮನಾದನು.

ಆಗ ದುರ್ಯೋಧನನ ಆಜ್ಞಾನುಸಾರವಾಗಿ ಕುಶಲರಾದ ಚಿಕಿತ್ಸಕರು ಉಪಕರಣಸಹಿತರಾಗಿ ಭೀಷ್ಮನು ಮಲಗಿದ್ದಲ್ಲಿಗೆ ಬಂದರು.

ಭೀಷ್ಮನು ದುರ್ಯೋಧನನನ್ನು ಕುರಿತು—"ವತ್ಸ! ಚಿಕಿತ್ಸಕರಿಗೆ ತಕ್ಕ ಬಹುಮಾನವನ್ನು ಕೊಟ್ಟು ಕಳುಹಿಸು. ಈಗ ನಾನಿರುವ ಅವಸ್ಥೆಯಲ್ಲಿ ಅವರಿಂದಾಗಬೇಕಾದುದೇನೂ ಇಲ್ಲ. ನನಗಾಗಬೇಕಾದುದು ಕ್ಷತ್ರಿಯನಿಗೆ ತಕ್ಕ ಸದ್ಗತಿ. ಸಕಾಲದಲ್ಲಿ ಶರಸಹಿತವಾಗಿ ನನ್ನನ್ನು ದಹನಮಾಡಿರಿ" ಎಂದನು.

ದುರ್ಯೋಧನನು ತಕ್ಕ ಸಂಭಾವನೆಯನ್ನು ಕೊಟ್ಟು ವೈದ್ಯರನ್ನು ಬೀಳ್ಕೊಟ್ಟನು. ಭೀಷ್ಮನನ್ನು ಬಳಸಿ ನೆರೆದಿದ್ದ ಕ್ಷತ್ರಿಯ ವೀರರೆಲ್ಲರೂ ಅವನ ಅಮಾನುಷಕರ್ತವ್ಯನಿಷ್ಠೆಯನ್ನೂ ಮಹತ್ತರವಾದ ತೇಜಸ್ವಿತೆಯನ್ನೂ ನೋಡಿ ವಿಸ್ಮಯದಿಂದ ಸ್ತಬ್ಧರಾದರು. ಕೌರವಪಾಂಡವರು ಶರಶಯ್ಯಾಶಾಯಿಯಾದ ಭೀಷ್ಮನಿಗೆ ಮೂರು ಪ್ರದಕ್ಷಿಣೆಮಾಡಿ ಅವನ ಚರಣಯುಗಳಕ್ಕೆರಗಿ ಸುತ್ತಲೂ ಕಾವಲಿಟ್ಟು ಪಾಳೆಯಕ್ಕೆ ತೆರಳಿದರು.

ಕೃಷ್ಣನು ಸಕಾಲಕ್ಕೆ ಪಾಂಡವರ ಬಳಿಗೆ ಹೋಗಿ—"ಧರ್ಮಪುತ್ರ ಭಾಗ್ಯವಶದಿಂದ ನಿನಗೆ ಜಯವಾಯಿತು. ಮನುಷ್ಯರಿಂದ ಅವಧ್ಯನಾದ ಆ ಮಹಾರಥನು ನಿನ್ನ ಭಾಗ್ಯವಶದಿಂದ ನಿನ್ನ ಕಣ್ಣು ಬಿದ್ದಮಾತ್ರಕ್ಕೇ ದಗ್ಧನಾದನು" ಎಂದನು.

ಯುಧಿಷ್ಠಿರನು—"ಕೃಷ್ಣ! ನಿನ್ನ ಪ್ರಸಾದದಿಂದ ವಿಜಯವಾಗುವುದು, ನಿನ್ನ ಕ್ರೋಧದಿಂದ ಪರಾಜಯವಾಗುವುದು; ನನ್ನದೇನಿದೆ? ಭಕ್ತರಿಗೆ ಅಭಯದಾತನಾದ ನೀನು ನಮಗೆ ಶರಣ್ಯ; ಯುದ್ಧದಲ್ಲಿ ನೀನು ಯಾರಿಗೆ ರಕ್ಷಕನೋ ಯಾರ ಹಿತಚಿಂತಕನೋ ಅವರಿಗೆ ಜಯವಾಗುವುದು ಆಶ್ಚರ್ಯವಲ್ಲ" ಎಂದನು.

ಪ್ರಭಾತವಾಗುತ್ತಲೆ ಎಲ್ಲರೂ ಭೀಷ್ಮನನ್ನು ನೋಡುವುದಕ್ಕೆ ಹೋದರು. ಭೀಷ್ಮನು ಮೊದಲಿನಂತೆಯೇ ಶರಶಯ್ಯೆಯಲ್ಲಿ ಮಲಗಿದ್ದನು. ಅವನ ಮುಖಮಂಡಲದಲ್ಲಿ ವಿವರ್ಣದ ಸುಳಿವೇ ಇರಲಿಲ್ಲ, ಕಣ್ಣುಗಳಲ್ಲಿ ವಿಕಾರವಿರಲಿಲ್ಲ, ಹಣೆಯಲ್ಲಿ ಮನಃಕ್ಲೇಶದ ಚಿಹ್ನೆ ಇರಲಿಲ್ಲ. ಅವನು ಶರಶಯ್ಯೆಯಲ್ಲಿ ಶಾಂತಭಾವದಿಂದ ಕೃಷ್ಣಪರಮಾತ್ಮನ ಧ್ಯಾನದಲ್ಲಿದ್ದನು. ಅವನ ಪ್ರಶಾಂತಭಾವವನ್ನೂ ಧ್ಯಾನತತ್ಪರತೆಯನ್ನೂ ನೋಡಿ ಅಲ್ಲಿ ಬಂದಿದ್ದವರೆಲ್ಲರೂ ಆಶ್ಚರ್ಯಪಡುತ್ತ ಪಾದಕ್ಕೆ ಬಿದ್ದು ಅಂಜಲಿಬದ್ಧರಾಗಿ ನಿಂತರು.

ಆಗ ಭೀಷ್ಮನು ದಾಹವಾಗುವುದೆಂದನು. ಒಡನೆಯೇ ದುರ್ಯೋಧನಾದಿಗಳು ಭೀಷ್ಮನಿಗೆ ನಾನಾ ವಿಧ ಭಕ್ಷ್ಯ ಭೋಜ್ಯ ಪಾನೀಯಗಳನ್ನು ತರಿಸಿಟ್ಟರು.

ಭೀಷ್ಮನು ಆ ಪದಾರ್ಥಗಳನ್ನು ನೋಡಿ—"ಮಕ್ಕಳಿರಾ! ನಾನು ಶರತಲ್ಪಶಾಯಿಯಾಗಿರುವುದು ನಿಮಗೆ ಕಾಣುತ್ತಿಲ್ಲವೆ? ಇದು ಭೋಗಕ್ಕೆ ಸಮಯವಲ್ಲ, ಪ್ರಯಾಣದ ಸಮಯ" ಎಂದು ಅರ್ಜುನನನ್ನು ನೋಡಿ—"ವತ್ಸ! ನಿನ್ನ ಶರಜಾಲವು ನನ್ನನ್ನು ಆವರಿಸಿದೆ, ಮೈಯೆಲ್ಲವೂ ಉರಿಯುತ್ತಿದೆ, ಬಾಯೊಣಗುತ್ತಿದೆ; ಈ ಸಂಕಟದಲ್ಲಿ ನನಗೆ ಹಿತವಾದ ಪಾನೀಯವನ್ನು ತಂದುಕೊಡುವುದಕ್ಕೆ ನೀನೊಬ್ಬನೇ ಸಮರ್ಥನು. ನನಗೆ ಒಳ್ಳೆಯ ತಣ್ಣೀರನ್ನು ತಂದುಕೊಟ್ಟು ದಾಹವನ್ನು ತೀರಿಸುವೆಯಾ?" ಎಂದನು.

ಆ ಕ್ಷಣವೇ ಅರ್ಜುನನು ಭೀಷ್ಮನಿಗೆ ನಮಸ್ಕಾರಮಾಡಿ ಗಾಂಡೀವಕ್ಕೆ ಬಾಣವನ್ನು ತೊಡಿಸಿ, ಭೀಷ್ಮನ ಬಲಮಗ್ಗಲಲ್ಲಿ ನೆಲವನ್ನು ಭೇದಿಸಿದನು. ಬಾಣದಿಂದೊಡೆದ ಭೂಗರ್ಭದಿಂದ ತಣ್ಣನೆಯ ಸಿಹಿನೀರಧಾರೆ ಹೊರಟು ಸರಿಯಾಗಿ ಭೀಷ್ಮನ ಬಾಯಿಗೆ ಬೀಳಲಾರಂಭಿಸಿತು. ಎಲ್ಲರೂ ಅರ್ಜುನನ ಈ ವಿಚಿತ್ರ ಕೌಶಲವನ್ನು ನೋಡಿ ಬೆರಗಾದರು; ಅವರ ಶರೀರವು ರೋಮಾಂಚಿತವಾಯಿತು; ಗುಂಡಿಗೆ ಹಾರಿತು.

ಭೀಷ್ಮನು ಅಮೃತದಂತಿದ್ದ ಆ ಸುಶೀತಲ ಸ್ವಾದೋದಕವನ್ನು ಕುಡಿದು ಆಪ್ಯಾಯಿತನಾಗಿ—"ಮಗನೇ! ಲೋಕಾತೀತವಾದ ನಿನ್ನ ಸಾಮರ್ಥ್ಯದಿಂದ ನನ್ನ ಪ್ರಾಣಹೋಗುವ ಸಮಯದಲ್ಲಿ ತಣ್ಣನೆಯ ನೀರನ್ನು ಒರಿಸಿ ನನ್ನ ಬಾಯಾರಿಕೆಯನ್ನು ತೀರಿಸಿದೆ. ನಿನ್ನಂತಹ ಧೀರೋದಾರನಿಗೆ ಇದೊಂದು ಮಹತ್ಕಾರ್ಯವಲ್ಲ. ನಾನು ನಿನ್ನ ಸಾಹಸವನ್ನು ಮೆಚ್ಚಿದೆನು. ವಾಸುದೇವನ ಸಾಹಾಯ್ಯದಿಂದ ನೀನಿನ್ನೂ ಮಹತ್ಕಾರ್ಯಗಳನ್ನು ಮಾಡುವೆ. ನೀನು ನರರಲ್ಲಿ ಶ್ರೇಷ್ಠನು, ಧನುರ್ಧಾರಿಗಳಲ್ಲಿ ನಿನಗೆ ಸಮಾನರಿಲ್ಲ. ನಿನ

ಮಂಗಳವಾಗಲಿ! ದಾಯಾದ ಮತ್ಸರವನ್ನು ಬಿಟ್ಟು ಸಂಧಿಯನ್ನು ಮಾಡಿಕೊ ಎಂದು ನಾನು ದುರ್ಯೋಧನನಿಗೆ ಇನ್ನಿಲ್ಲದಷ್ಟು ಹೇಳಿದೆನು; ಧರ್ಮವತ್ಸಲನಾದ ವಿದುರನೂ ಆಚಾರ್ಯ ದ್ರೋಣನೂ ಶಾಸ್ತ್ರನಿಷ್ಠ ವಾಸುದೇವನೂ ಸುಶೀಲ ಸಂಜಯನೂ ಇವರೆಲ್ಲರೂ ಅದೇ ಸದುಪದೇಶವನ್ನು ಮಾಡಿದರು. ಆದರೂ ಆ ದುರಾತ್ಮನಿಗೆ ಬುದ್ಧಿ ಬರಲಿಲ್ಲ. ಅವನು ವಯೋವೃದ್ಧರೂ ಜ್ಞಾನವೃದ್ಧರೂ ಆದವರ ಸುಭಾಷಿತವನ್ನು ಉಪೇಕ್ಷೆಮಾಡಿ ಕಲಹಕ್ಕೆ ನಿಂತನು. ಕಡೆಗೆ ಭೀಮನಿಂದ ಅವನು ಹತನಾಗದೆ ಹೋಗನು" ಎಂದನು.

ದುರ್ಯೋಧನನು ಭೀಷ್ಮನ ಮಾತನ್ನು ಕೇಳಿ ಖಿನ್ನನಾದನು. ಅವನನ್ನು ನೋಡಿ ಭೀಷ್ಮನು ಇಂತೆಂದು ನುಡಿದನು:—"ರಾಜನೇ! ಅವಧರಿಸು, ಕೋಪವನ್ನು ಬಿಡು. ಪಾರ್ಥನು ಅಮೃತದಂತಿರುವ ಸುಶೀತಲ ಜಲಧಾರೆಯನ್ನು ನಿರ್ಮಾಣಮಾಡಿದುದನ್ನು ನೋಡಿದೆಯಾ? ಲೋಕದಲ್ಲಿ ಇಂತಹ ಕಾರ್ಯವನ್ನು ಬೇರೆ ಯಾರೂ ಮಾಡಲಾರರು. ಆಗ್ನೇಯಾದಿ ಸಮಸ್ತವಾದ ಅಸ್ತ್ರಗಳನ್ನು ಈ ನರಲೋಕದಲ್ಲಿ ಧನಂಜಯನೊಬ್ಬನು ಬಲ್ಲನು, ದೇವಕೀಪುತ್ರ ಕೃಷ್ಣನೊಬ್ಬನು ಬಲ್ಲನು. ಈ ಪಾಂಡುಪುತ್ರನನ್ನು ಜಯಿಸಲಳವಲ್ಲ. ಈ ಮಹಾತ್ಮನ ಕಾರ್ಯಗಳು ಅಮಾನುಷವಾದುವು. ಸತ್ಯಸಂಪನ್ನನೂ ಯುದ್ಧಭೂಷಣನೂ ಶೂರನೂ ಆದ ಅವನ ಸಂಗಡ ಸಂಧಿಮಾಡಿಕೊ. ಮಹಾಬಾಹು ಕೃಷ್ಣನು ಕೋಪಿಸಿಕೊಳ್ಳುವುದಕ್ಕೆ ಮುಂಚೆಯೇ ಶೂರರಾದ ಪಾರ್ಥರ ಸಂಗಡ ಸಂಧಿಮಾಡಿಕೊ. ಸಮರದಲ್ಲಿ ಹತಶೇಷರಾಗಿರುವ ನಿನ್ನ ಸೋದರರು ಜೀವಸಹಿತವಿರುವಾಗಲೆ ಸಂಧಿಮಾಡಿಕೊ. ಯುಧಿಷ್ಠಿರನು ಕೆಂಡಗಣ್ಣನಾಗಿ ನಿನ್ನ ಸೈನ್ಯವನ್ನು ನೋಡಿ ಸುಡುವುದಕ್ಕೆ ಮುಂಚೆಯೇ ಸಂಧಿಯಾಗಲಿ. ಭೀಮಸೇನ ನಕುಲ ಸಹದೇವರು ನಿನ್ನ ಸೈನ್ಯವನ್ನು ನಾಶಮಾಡುವುದಕ್ಕೆ ಮುಂಚೆಯೇ ಪಾಂಡವವೀರರಿಗೂ ನಿನಗೂ ಸೌಹಾರ್ದವುಂಟಾಗುವುದು ಕ್ಷೇಮತರ. ಎಲೈ! ಅನಘನೇ! ನಾನಾಡುವ ಮಾತನ್ನು ಗ್ರಹಿಸು. ಅದರಿಂದ ನೀನು ಮಾತ್ರವೇ ಅಲ್ಲ, ನಿನ್ನ ಕುಲವೂ ಉಳಿಯುವುದು. ನನ್ನ ಅಂತವೇ ಯುದ್ಧಾಂತವಾಗಲಿ. ಇದುವರೆಗೂ ಅರ್ಜುನನು ಮಾಡಿದುದೇ ಸಾಕು; ಉಳಿದಿರುವವರಾದರೂ ಉಳಿಯಲಿ; ಮನಸ್ಸುಮಾಡು. ಅರ್ಧರಾಜ್ಯವನ್ನು ಪಾಂಡವರಿಗೆ ಕೊಡು. ಯುಧಿಷ್ಠಿರನು ಇಂದ್ರಪ್ರಸ್ಥಕ್ಕೆ ಹೋಗಲಿ. ಕೌರವೇಂದ್ರ! ರಾಜನ್ಯರಲ್ಲಿ ನೀನು ನೀಚನೂ ಮನೆಮುರುಕನೂ ಎಂಬ ಅಪಖ್ಯಾತಿಗೆ ಗುರಿಯಾಗಬೇಡ. ಪಾಂಡವರೂ ನೀವೂ ಒಬ್ಬರನ್ನೊಬ್ಬರು ಪ್ರೀತಿಸುತ್ತ ಕಲೆತಿರಿ. ತಂದೆಯು

ಮಗನನ್ನೂ ಸೋದರಳಿಯನು ಸೋದರಮಾವನನ್ನೂ ಸೇರಲಿ. ಸಕಾಲದಲ್ಲಿ ನಾನಾಡಿರುವ ಈ ಮಾತುಗಳನ್ನು ಮೋಹವಶದಿಂದ ಬುದ್ಧಿಶೂನ್ಯನಾಗಿ ಉಪೇಕ್ಷಿಸಿದರೆ ಮುಂದೆ ನೀನು ವ್ಯಥೆಪಡಬೇಕಾಗುವುದು. ಜೋಕೆ ನಾನಾಡುವುದೆಲ್ಲವೂ ದಿಟ. ಈಗಲಾದರೂ ಯುದ್ಧವನ್ನು ಬಿಡು. ನನ್ನ ಸಾವೇ ಈ ಯುದ್ಧಕ್ಕೆ ಕಡೆಯಾಗಲಿ.”

ಇಂತೆಂದು ನುಡಿದು ಭೀಷ್ಮನು ಸುಮ್ಮನಾದನು. ಈ ಹಿತವಚನವು ದುರ್ಯೋಧನನಿಗೆ ರುಚಿಸಲಿಲ್ಲ. ರಾಜರೆಲ್ಲರೂ ತಂತಮ್ಮ ಆಲಯಕ್ಕೆ ಹೊರಟು ಹೋದರು.

ಭೀಷ್ಮನು ವಿರಥನಾದನೆಂದು ಕೇಳಿ, ಕರ್ಣನು ಹೆದರಿ ತ್ವರೆಯಾಗಿ ಬಂದು ಶರಶಯ್ಯೆಯಲ್ಲಿ ಕಣ್ಮುಚ್ಚಿ ಮಲಗಿದ್ದ ಆ ಮಹಾತ್ಮನನ್ನು ನೋಡಿ ಕಣ್ಣೀರ ಸುರಿಸುತ್ತ ಅವನ ಪಾದಕ್ಕೆ ಬಿದ್ದು—“ಕುರುಶ್ರೇಷ್ಠನೇ! ನಾನು ರಾಧೇಯ, ಯಾರನ್ನು ಕಂಡಾಗಲೆಲ್ಲ ನೀನು ದ್ವೇಷಿಸುತ್ತಿದ್ದೆಯೊ ಆ ರಾಧೇಯ” ಎಂದನು.

ಹಾಗನ್ನುತ್ತಲೆ ಕುರುವೃದ್ಧನು ಮೆಲ್ಲಗೆ ಕಣ್ದೆರೆದು ತಂದೆಯು ಮಗನನ್ನು ಅಪ್ಪಿಕೊಳ್ಳುವಂತೆ ಒಂದು ಕೈಯಿಂದ ಅವನನ್ನು ಕಟ್ಟಿಕೊಂಡು ಪ್ರೀತಿ ಪೂರ್ವಕವಾಗಿಂತೆಂದನು:—“ಬಾರಯ್ಯ! ಬಾ! ನೀನು ನನಗೆ ಸಮಗೈ ಯೆಂದು ನನ್ನ ಸಂಗಡ ಸ್ಪರ್ಧಿಸುತ್ತಿದ್ದವನಲ್ಲವೆ? ನೀನು ನನ್ನ ಬಳಿ ಬಾರದೆ ಹೋಗಿದ್ದರೆ ನಿನಗೆ ಒಳ್ಳೆಯದಾಗುತ್ತಿರಲಿಲ್ಲ. ಮಗನೇ! ನಿನ್ನಲ್ಲಿ ನನಗೆ ದಿಟವಾಗಿಯೂ ದ್ವೇಷವಿಲ್ಲ. ನಿನಗೆ ತೇಜೋವಧೆಯನ್ನು ಮಾಡಲೆಳಸಿ ನಿನ್ನ ಗರ್ವವನ್ನು ಮುರಿಯಬೇಕೆಂದು ನಾನು ಕಠಿಣೋಕ್ತಿಯನ್ನಾಡಿದೆನು. ನೀನು ನಿಷ್ಕಾರಣವಾಗಿ ಪಾಂಡವರನ್ನು ದ್ವೇಷಿಸುತ್ತೀಯೆ. ನೀಚರ ಆಶ್ರಯ ದಲ್ಲಿರುತ್ತ ಮತ್ಸರದಿಂದ ಗುಣವಂತರನ್ನು ಕೂಡ ದ್ವೇಷಿಸುತ್ತೀಯೆ. ಆದುದ ರಿಂದಲೇ ನಾನು ಕೌರವರ ಮುಂದೆ ನಿನ್ನನ್ನು ಕುರಿತು ನಿಷ್ಠುರವಾದ ಮಾತು ಗಳನ್ನಾಡಿದೆನು. ರಣದಲ್ಲಿ ಶತ್ರುಗಳಿಗೆ ದುಃಸಹವಾದ ನಿನ್ನ ವೀರ್ಯವನ್ನು ಬಲ್ಲೆನು. ಬ್ರಾಹ್ಮಣರಲ್ಲಿ ನಿನಗಿರುವ ಭಕ್ತಿ, ನಿನ್ನ ಶೌರ್ಯ, ನಿನ್ನ ದಾನ ಶೀಲತೆ—ಇವೆಲ್ಲವನ್ನೂ ಬಲ್ಲೆನು. ನಿನ್ನ ನಡೆವಳಿಕೆಯಿಂದ ಕುಲದಲ್ಲಿ ಕಲಹವು ಹುಟ್ಟುವುದೆಂದು ಅಂಜಿ ನಾನು ನಿನ್ನನ್ನು ಬಯ್ಯುತ್ತಿದ್ದೆನು. ಅಸ್ತ್ರವಿದ್ಯೆಯಲ್ಲಿ ನೀನು ಅರ್ಜುನನಿಗಾಗಲಿ ಕೃಷ್ಣನಿಗಾಗಲಿ ಕಡಮೆಯಲ್ಲ. ನೀನು ಧರ್ಮದಿಂದ ಯುದ್ಧಮಾಡುವವನು. ಹಿಂದೆ ನಿನ್ನ ಮೇಲೆ ನನಗಿದ್ದ ಕ್ರೋಧವು ಇಂದು ಹರಿಯಿತು. ಪುರುಷಪ್ರಯತ್ನದಿಂದ ವಿಧಿಯನ್ನು ಮೀರಲು ಸಾಧ್ಯವಲ್ಲ. ಪಾಂಡವರು ನಿನ್ನ ಸೋದರರು; ನನ್ನ ಇಷ್ಟವನ್ನು ನೀನು ಪೂರೈಸುವವ

ನಾದರೆ ಸೋದರರಾದ ಪಾಂಡವರೊಡಗೂಡು. ನನ್ನೊಂದಿಗೆ ನಿಮ್ಮ ವೈರವು ಹೋಗಲಿ. ಈ ಹೊತ್ತು ಭೂಪತಿಗಳ ಪೀಡೆಗಳೆಲ್ಲವೂ ತೊಲಗಿಹೋಗಲಿ.''

ಕರ್ಣನು ಇಂತೆಂದನು:—"ಮಹಾಬಾಹುವೇ! ನೀನು ಹೇಳುವುದೆಲ್ಲವೂ ಯಥಾರ್ಥವೇ. ಆದರೆ ಬಹುಕಾಲ ದುರ್ಯೋಧನನ ಐಶ್ವರ್ಯವನ್ನು ಭೋಗಿಸಿ ಈಗ ಅದನ್ನು ಹುಸಿಯೆನಿಸೆನು. ವಸುದೇವಸುತನು ಪಾಂಡವರ ಪಕ್ಷದಲ್ಲಿ ಹೇಗೆ ದೃಢವ್ರತನಾಗಿರುವನೋ ಹಾಗೆ ನಾನು ದುರ್ಯೋಧನನ ಪರವಾಗಿ ನಿಂತು ಧನವನ್ನೂ ತನುವನ್ನೂ ಸತಿಸುತರನ್ನೂ ಯಶಸ್ಸನ್ನೂ—ಅಷ್ಟೇಕೆ? ಸರ್ವಸ್ವವನ್ನೂ ದುರ್ಯೋಧನನಿಗೋಸ್ಕರ ತ್ಯಜಿಸಲು ಸಿದ್ಧನಾಗಿರುವೆನು. ಸುಯೋಧನನನ್ನು ಆಶ್ರಯಿಸಿ ನಾನು ನಿತ್ಯವೂ ಪಾಂಡವರ ಮನಸ್ಸನ್ನು ನೋಯಿಸುತ್ತಿದ್ದೆನು. ಯಾವುದು ಅನಿವಾರ್ಯವೋ ಅದು ಆಗಿಯೇ ತೀರುವುದು. ಪಾಂಡುಪುತ್ರರನ್ನೂ ವಾಸುದೇವನನ್ನೂ ಯಾರೂ ಜಯಿಸಲಾರರು. ಇದನ್ನು ನಾನು ಬಲ್ಲೆನು. ಆದರೂ ಅವರ ಸಂಗಡ ನಾನು ಯುದ್ಧಮಾಡಿಯೇ ತೀರುವೆನು. ಪಾಂಡವರ ಮೇಲೆ ನನಗಿರುವ ಈ ದಾರುಣ ವೈರವನ್ನು ಬಿಡುವುದು ನನಗೆ ಶಕ್ಯವಲ್ಲ. ಸ್ವಧರ್ಮಕ್ಕನುಸಾರವಾಗಿ ಸಂತೋಷದಿಂದ ಧನಂಜಯನ ಸಂಗಡ ಯುದ್ಧಮಾಡುತ್ತೇನೆ. ತಾತ! ನನಗೆ ಸುಮುಖನಾಗು. ಯುದ್ಧಕ್ಕೆ ಅನುಜ್ಞೆಕೊಡು. ಕ್ರೋಧದಿಂದಲೋ ಚಪಲದಿಂದಲೋ ನಾನಾಡಿದ ದುರುಕ್ತಿಯನ್ನೂ ಮಾಡಿದ ಅಕೃತ್ಯವನ್ನೂ ಮನ್ನಿಸು."

ಭೀಷ್ಮನು—"ಹಾಗಾದರೆ ಅನುಜ್ಞೆಯನ್ನು ಕೊಡುತ್ತೇನೆ. ಸ್ವರ್ಗಾಪೇಕ್ಷೆಯಿಂದ ಯುದ್ಧಮಾಡು. ಕೋಪತಾಪಗಳನ್ನು ಬಿಟ್ಟು ಸಜ್ಜನವರ್ತನವನ್ನು ಅನುಸರಿಸಿ ನಿರಹಂಕಾರಿಯಾಗಿ ಯುದ್ಧಮಾಡು. ಧನಂಜಯನು ನಿನಗೆ ವೀರಸ್ವರ್ಗವನ್ನು ಕಾಣಿಸುವನು. ಸಂಧಿಗಾಗಿ ನಾನು ಮಾಡಿದ ಪ್ರಯತ್ನವು ಸಾಗದೆ ಹೋಯಿತು; ಚಿಂತೆಯಿಲ್ಲ. ಎಲ್ಲಿ ಧರ್ಮವೋ ಅಲ್ಲಿ ಜಯವು ಸಿದ್ಧವಾಗಿರುವುದು" ಎಂದನು.

ಕರ್ಣನು ಭೀಷ್ಮನ ಮನ್ನಣೆಯನ್ನೂ ಸುಮುಖತೆಯನ್ನೂ ಕೈಕೊಂಡು ಪ್ರಣಾಮವನ್ನು ಮಾಡಿ ರಥವನ್ನೇರಿ ದುರ್ಯೋಧನನ ಬಳಿಗೆ ಹಿಂದಿರುಗಿದನು.

ಭೀಷ್ಮನು ಹತ್ತು ದಿನಗಳು ಯುದ್ಧಮಾಡಿ ಅರ್ಜುನನ ಶರಘಾತದಿಂದ ವಿರಥನಾಗಿ ಉತ್ತರಾಯಣವನ್ನು ನಿರೀಕ್ಷಿಸುತ್ತ ಶರಶಯ್ಯೆಯಲ್ಲಿ ಮಲಗಿರಲು ಯುದ್ಧದ ಪಾಡಿಗೆ ಯುದ್ಧವು ನಡೆಯುತ್ತಿದಿತು. ಭೀಷ್ಮನ ತರುವಾಯ ದುರ್ಯೋಧನನು ದ್ರೋಣಾಚಾರ್ಯನಿಗೆ ವೀರಪಟ್ಟವನ್ನು ಕಟ್ಟಿದನು. ವೃದ್ಧನಾದ ಆಚಾರ್ಯನು ಧೃಷ್ಟದ್ಯುಮ್ನನ ಸಂಗಡ ಐದು ದಿನಗಳು ಯುದ್ಧಮಾಡಿ

ಬಳಲಿ ಆ ದ್ರುಪದನಂದನನಿಂದ ಹತನಾದನು. ದ್ರೋಣಾಚಾರ್ಯನ ವಧೆಯ ದೆಸೆಯಿಂದ ಕುರುಸೇನೆಯು ಸತ್ವಗೆಟ್ಟರೂ, ಜಯದಾಶೆಯು ದೂರವಾದರೂ ದುರ್ಯೋಧನನು ಕಲಿಕರ್ಣನನ್ನು ಸೇನಾಪತಿಯನ್ನಾಗಿಟ್ಟು ಮತ್ತೆ ಕದನಕ್ಕೆ ಹೊರಟನು. ಕರ್ಣಾರ್ಜುನರ ಭೀಷಣ ಯುದ್ಧವಾರಂಭವಾಯಿತು. ಅರ್ಜುನನು ದ್ರೋಣಾಚಾರ್ಯನ ಶಿಷ್ಯನಾದರೆ, ಕರ್ಣನು ದ್ರೋಣಾಚಾರ್ಯನ ಗುರುವಾದ ಪರಶುರಾಮನ ಶಿಷ್ಯ; ಅರ್ಜುನನ ಧನುಸ್ಸು ಗಾಂಡೀವವಾದರೆ, ಕರ್ಣನ ಧನುಸ್ಸು ಅದಕ್ಕಿಂತ ಉತ್ಕೃಷ್ಟವಾದ ವಿಜಯ; ಕೃಷ್ಣನು ಅರ್ಜುನನ ಸಾರಥಿಯಾದರೆ, ಮಹಾವೀರ ಶಲ್ಯನು ಕರ್ಣನ ಸಾರಥಿ. ಇಬ್ಬರೂ ಅಸ್ತ್ರವಿದ್ಯೆಯಲ್ಲಿ ಸಮಾನರು. ಇಬ್ಬರೂ ಒಬ್ಬರನ್ನೊಬ್ಬರು ಕೊಲ್ಲಲು ಬಹು ದಿನಗಳಿಂದ ಪ್ರತಿಜ್ಞೆ ಮಾಡಿದ್ದರು. ಅರ್ಜುನನು ಭೀಷ್ಮದ್ರೋಣರ ವಧೆಯ ವಿಷಯದಲ್ಲಿ ಉದ್ಯಮಶೀಲನಾಗಿರಲಿಲ್ಲ; ಕರ್ಣನನ್ನು ಕೊಲ್ಲುವ ವಿಷಯದಲ್ಲಿ ಮಾತ್ರ ದೃಢಯತ್ನ ಮಾಡಿದನು. ಕುಂತಿಯು ಕರ್ಣನಿಗೆ ಅವನ ಜನ್ಮವೃತ್ತಾಂತವನ್ನು ತಿಳಿಸಿ ತನ್ನ ಐವರ ಮಕ್ಕಳ ಪ್ರಾಣಭಿಕ್ಷೆಯನ್ನು ಕೇಳಿದಳು. ಕರ್ಣನು ತಾಯಿಗೆ ಯುಧಿಷ್ಠಿರ, ಭೀಮ, ನಕುಲಸಹದೇವರ ಪ್ರಾಣಭಿಕ್ಷೆಯನ್ನು ಕೊಟ್ಟು ಅರ್ಜುನನ ಪ್ರಾಣಭಿಕ್ಷೆಯನ್ನು ಕೊಡಲೊಪ್ಪದೆ, "ಅವನನ್ನು ಕೊಲ್ಲುವೆನು, ಇಲ್ಲವೆ ಅವನಿಂದ ಕೊಲ್ಲಿಸಿಕೊಳ್ಳುವೆನು" ಎಂದು ಹೇಳಿಬಿಟ್ಟನು. ಕಡೆಗೆ, ಈ ಧನುರ್ಧರರಿಗೆ ನಡೆದ ಮಹಾಯುದ್ಧದಲ್ಲಿ ಅರ್ಜುನನ ಬಾಣದಿಂದ ಕರ್ಣನು ಹತನಾದನು. ಕರ್ಣನ ಮರಣಾನಂತರ ದುರ್ಯೋಧನನು ಶೋಕದಲ್ಲಿ ಮುಳುಗಿ ಎತ್ತ ನೋಡಿದರೂ ಆಶಾಲೇಶವನ್ನೂ ಕಾಣದೆಹೋದರೂ ಯುದ್ಧವನ್ನು ಮಾತ್ರ ಬಿಡಲಿಷ್ಟಪಡಲಿಲ್ಲ; ದೈವವು ಪ್ರಬಲವಾದುದೆಂದೆಣಿಸಿ ಪ್ರಭಾತವಾಗುತ್ತಲೆ ಯುದ್ಧಮಾಡುವುದೇ ಸರಿಯೆಂದು ನಿಶ್ಚಯಿಸಿ, ಶಲ್ಯನನ್ನು ಸೇನಾಪತಿಯನ್ನಾಗಿ ನೇಮಿಸಿ ಹತಶಿಷ್ಟವಾದ ಸೇನೆಯೊಡನೆ ಯುದ್ಧಕ್ಕೆ ಹೊರಟನು. ಆ ಯುದ್ಧದಲ್ಲಿ ಶಲ್ಯನು ಪಾಂಡವರ ಸೈನ್ಯವನ್ನು ಕೊಂದು ತನ್ನ ಸೈನ್ಯವನ್ನು ಕೊಲ್ಲಿಸಿಕೊಂಡು ಮಧ್ಯಾಹ್ನದಲ್ಲಿ ಯುಧಿಷ್ಠಿರನಿಂದ ಹತನಾದನು. ಒಡನೆಯೇ ದುರ್ಯೋಧನನು ಬಂಧುಗಳನ್ನು ನೀಗಿಕೊಂಡು ಶತ್ರುಭಯದಿಂದ ರಣರಂಗವನ್ನು ಬಿಟ್ಟೋಡಿಹೋಗಿ ಒಂದು ಘೋರ ಸರೋವರವನ್ನು ಪ್ರವೇಶಮಾಡಿದನು. ಅಪರಾಹ್ಣದಲ್ಲಿ ಭೀಮಸೇನನು ಅವನನ್ನು ರೇಗಿಸಿ ಸರೋವರದಿಂದ ಹೊರಗೆ ಬರುವಂತೆಮಾಡಿ ಗದಾಯುದ್ಧದಲ್ಲಿ ಅವನ ತೊಡೆಗಳನ್ನು ಸೀಳಿ ಕೆಡವಿದನು. ಆ ಸ್ಥಿತಿಯಲ್ಲಿ ದುರ್ಯೋಧನನು ಅಶ್ವತ್ಥಾಮನನ್ನು ಸೇನಾಪತಿಯನ್ನಾಗಿ ವರಿಸಿದನು. ಅಶ್ವತ್ಥಾಮನು ಮಹಾರಥರಾದ ಕೃಪ ಕೃತವರ್ಮ

ರೊಡನೆ ಕಾಳರಾತ್ರಿಯಲ್ಲಿ ಪಾಂಡವರ ಶಿಬಿರವನ್ನು ಹೊಕ್ಕು ದ್ರೌಪದಿಯ ಐವರು ಮಕ್ಕಳನ್ನು ಕೊಂದನು. ಅಶ್ವತ್ಥಾಮನಾದಿಗಳಿಗೂ ಪಾಂಚಾಲರಿಗೂ ನಡೆದ ಕದನದಲ್ಲಿ ಧೃಷ್ಟದ್ಯುಮ್ನ ಶಿಖಂಡಿ ಮೊದಲಾದ ಪಾಂಚಾಲ ವೀರರೆಲ್ಲರೂ ಹತರಾದರು. ಪಾಂಡವರ ಕಡೆಯಲ್ಲಿ ಯುಧಿಷ್ಠಿರಾದಿ ಐವರೂ ಕೃಷ್ಣನೂ ಸಾತ್ಯಕಿಯೂ ಉಳಿದರು. ಈ ಕೊಲೆಯಾದ ಒಡನೆಯೇ ಅಶ್ವತ್ಥಾಮಾದಿ ಅಮಾತ್ಯರು ದುರ್ಯೋಧನನು ಬಿದ್ದಿದ್ದೆಡೆಗೆ ಹೋಗಿ ಕೊಲೆಯ ಸುದ್ದಿಯನ್ನು ಅವನಿಗೆ ತಿಳಿಸಿದರು. ದುರ್ಯೋಧನನು ಆ ವಾರ್ತೆಯನ್ನು ಕೇಳಿ—"ನನಗೆ ಯಾರೂ ಮಾಡದ ಉಪಕಾರವನ್ನು ನೀನು ಮಾಡಿದೆ; ಪಾಂಡವರ ಸೇನಾಪತಿಯಾದ ಆ ನೀಚ ಧೃಷ್ಟದ್ಯುಮ್ನನನ್ನೂ ಶಿಖಂಡಿಯನ್ನೂ ಬಡಿದುಹಾಕಿದೆ; ನಿಮ್ಮೆಲ್ಲರಿಗೂ ಶುಭವಾಗಲಿ. ನಾವು ಮತ್ತೆ ಸ್ವರ್ಗದಲ್ಲಿ ಒಬ್ಬರನ್ನೊಬ್ಬರು ಕಾಣೋಣ" ಎಂದು ನುಡಿದು ಪ್ರಾಣಬಿಟ್ಟನು.

ಶೋಕಸಂತಪ್ತರಾದ ಧೃತರಾಷ್ಟ್ರನೂ ಗಾಂಧಾರಿಯೂ ಅಂತಃಪುರದ ಸ್ತ್ರೀಯರೊಡನೆ ಹಸ್ತಿನಾಪುರದಿಂದ ರಣರಂಗಕ್ಕೆ ಹೊರಟರು. ಹತಶೇಷರಾದ ಆ ಕೌರವರೂ ಯುಧಿಷ್ಠಿರಾದಿ ಪಾಂಡವರೂ ಕುಂತಿಯೂ ದ್ರೌಪದಿಯೂ ರಣರಂಗದಲ್ಲಿ ಸತ್ತುಬಿದ್ದಿದ್ದ ಮಕ್ಕಳು, ಸೋದರರು, ಗಂಡಂದಿರು ಮೊದಲಾದ ಪ್ರಿಯಬಂಧುಗಳನ್ನು ನೋಡಿ ನೋಡಿ ಹಂಬಲಿಸಿದರು; ಒಬ್ಬರನ್ನೊಬ್ಬರು ಸಂತೈಸಿದರು; ತಮ್ಮ ಆರ್ತಸ್ವರವನ್ನು ದಿಕ್ತಟಕ್ಕೆ ಮುಟ್ಟಿಸಿದರು. ಈ ರೋದನಮಧ್ಯದಲ್ಲಿ ಪ್ರಾಜ್ಞನಾದ ಯುಧಿಷ್ಠಿರನು ಮರಣವೇ ವೈರಕ್ಕೆ ಕಡೆಯೆಂದೆಣಿಸಿ ಉದಾರಭಾವವನ್ನುಳ್ಳವನಾಗಿ ಸಮಸ್ತ ಬಂಧುಮಿತ್ರ ಜ್ಞಾತಿ ಭಟರ ಮೃತದೇಹಗಳನ್ನೂ ದಹನಮಾಡಿಸಿದನು. ಎಲ್ಲರೂ ಗಂಗಾತೀರಕ್ಕೆ ಹೋಗಿ ಸತ್ತವರಿಗೆ ಜಲಪ್ರದಾನಮಾಡಿ ಒಂದು ತಿಂಗಳಕಾಲ ಅಲ್ಲಿಯೇ ವಾಸಮಾಡುತ್ತಿದ್ದರು.

ಲೋಕಭಯಂಕರವಾದ ಕುರುಪಾಂಡವರ ಯುದ್ಧವು ಈ ತೆರದಲ್ಲಿ ಕೊನೆಮುಟ್ಟಿತು; ಹದಿನೆಂಟು ಅಕ್ಷೌಹಿಣೀ ಸೇನೆಯು ನಾಶವಾಯಿತು.

ಹದಿಮೂರನೆಯ ಅಧ್ಯಾಯ

ಯುದ್ಧಶೇಷ, ಯುಧಿಷ್ಠಿರನ ವಿಷಾದ, ವಿಷಾದವನ್ನು ಕುರಿತ ಸಂವಾದ, ರಾಜ್ಯಾಭಿಷೇಕ

ಯುದ್ಧಾರಂಭದಲ್ಲಿ, ಮಹಾಧನುರ್ಧರನಾದ ಅರ್ಜುನನು ರಣರಂಗದಲ್ಲಿ ನಿಂತು ಗುರುಜನರನ್ನೂ ಸ್ವಜನರನ್ನೂ ನೋಡುತ್ತಲೆ ಕೃಪಾಪರವಶನಾಗಿ ಯುದ್ಧ ಮಾಡಲೊಲ್ಲೆನೆಂದು ಸಾರಥಿಯಾದ ಶ್ರೀ ಕೃಷ್ಣನ ಸಂಗಡ ವಾದಿಸಿದಂತೆಯೇ ಯುದ್ಧಾಂತದಲ್ಲಿ ಕುರುಕುಲ ಚೂಡಾಮಣಿಯಾದ ಯುಧಿಷ್ಠಿರನು ಘೋರಸಮರದಿಂದ ವಿಮುಕ್ತನಾಗಿ ನಿಷ್ಕಂಟಕರಾಜ್ಯವನ್ನು ಸಂಪಾದಿಸಿಯೂ ರಾಜ್ಯಭಾರವನ್ನು ವಹಿಸದೆ ರಣರಂಗದಲ್ಲಿ ಮಡಿದುಬಿದ್ದಿದ್ದ ಜ್ಞಾತಿಗಳನ್ನು ನೋಡಿ, ಅದರೊಳಗೂ ಏಕೋದರನಾದ ಕರ್ಣನನ್ನು ನೋಡಿ ಶೋಕಸಂತಪ್ತನಾಗಿ ಪಾಪಶಂಕೆಯಿಂದ ಪಶ್ಚಾತ್ತಾಪಪಡುತ್ತ ವೈರಾಗ್ಯವನ್ನು ತಾಳಿ ಅರ್ಜುನನ ಸಂಗಡ ಇಂತೆಂದನು :—

"ನಾವು ಭಿಕ್ಷಾವೃತ್ತಿಯನ್ನು ಅವಲಂಬಿಸಿದ್ದಿದ್ದರೆ ಜ್ಞಾತಿಗಳನ್ನು ನಿರ್ಮೂಲಮಾಡಿ ಈ ದುರ್ಗತಿಗೆ ಬರುತ್ತಿರಲಿಲ್ಲ. ಹೇಯವಾದ ನಮ್ಮ ವೃತ್ತಿ ನಮ್ಮ ಬಾಹುಬಲ, ನಮ್ಮ ರಾಜ್ಯಲೋಭ—ಇವೇ ನಮ್ಮ ದುರ್ಗತಿಗೆ ಮೂಲ. ಕ್ಷಮಾಶೀಲರೂ ಅಹಿಂಸಾಪರರೂ ಸತ್ಯವಚನನಿರತರೂ ಆದ ವನಚಾರಿಗಳು ಎಂತಹ ಪುಣ್ಯಾತ್ಮರೊ! ನಾವಾದರೊ, ಲೋಭ ಮೋಹ ದಂಭಪರವಶರಾಗಿ ಜ್ಞಾತಿಗಳನ್ನು ಕೊಂದು ಮಾಡಬಾರದ ಪಾಪವನ್ನು ಮಾಡಿದೆವು. ಸುಖವಾದರೂ ಉಂಟೇ ಎಂದರೆ—ಬಂಧುಗಳು ಹೋದಬಳಿಕ ತ್ರೈಲೋಕ್ಯಾಧಿಪತ್ಯವು ಬಂದರೂ ಸುಖವೆಲ್ಲಿಯದು? ನಮ್ಮ ಸರ್ವಸ್ವವೂ ಹೋಗಿದ್ದರೂ ಬಂಧುಗಳನ್ನು ನಿಗ್ರಹಿಸಬಾರದಾಗಿದ್ದಿತು. ತಪಸ್ಸುಮಾಡಿ ಎಷ್ಟೋ ವ್ರತೋಪವಾಸಗಳನ್ನು ಆಚರಿಸಿ ಮಕ್ಕಳನ್ನು ಪಡೆದು, ಪಡೆದ ಮಕ್ಕಳು ಬದುಕುವರೆ? ಬದುಕಿದವರು ಬಲಿಷ್ಠರಾಗುವರೆ? ಬಲಿಷ್ಠರು ಸಂಭಾವಿತರಾಗುವರೆ? ತಮ್ಮ ಇಹಪರ ಸುಖಕ್ಕೆ ಅನುಕೂಲರಾಗುವರೆ ಎಂದೀ ಬಗೆಯಲ್ಲಿ ಫಲದಾಶೆಯಿಂದ ಚಿಂತಿಸುತ್ತಿದ್ದ ತಾಯಿತಂದೆಗಳ ಮನೋರಥಗಳೆಲ್ಲವೂ ನಮ್ಮಿಂದ ಭಗ್ನವಾದುವು. ಆ ನಿರ್ಭಾಗ್ಯರಾದ ಧಾರ್ತರಾಷ್ಟ್ರರೂ ಕೃತಾರ್ಥರಾಗಲಿಲ್ಲ, ನಾವೂ ಕೃತಾರ್ಥರಾಗಲಿಲ್ಲ. ಧೃ

ರಾಷ್ಟ್ರನು ಪುತ್ರಸ್ನೇಹಕ್ಕೊಳಗಾಗಿ ದುರ್ನೀತಿ ಪರಾಯಣನಾದ ಮಗನನ್ನು ರಾಷ್ಟ್ರೇಶ್ವರನನ್ನಾಗಿ ಮಾಡಿದನು. ಪಾಪಿ ದುರ್ಯೋಧನನ ದುರ್ಬುದ್ಧಿಯಿಂದಲೇ ಈ ನಮ್ಮ ಕುಲವು ನಿಪಾತವಾಯಿತು. ಅವನ ದುರಾಗ್ರಹದಿಂದ ನಾವೂ ಕ್ರೋಧವಶರಾದೆವು. ಧನಂಜಯನೇ! ಶತ್ರುವಧೆಯಿಂದ ನಮ್ಮ ಕ್ರೋಧವೇನೋ ಶಾಂತವಾಯಿತು; ಈಗ ನನ್ನನ್ನು ಶೋಕವು ದಹಿಸುತ್ತಿದೆ. ರಾಜ್ಯವನ್ನೂ ಅನಿತ್ಯವಾದ ಸಂಸಾರಸುಖವನ್ನೂ ಬಯಸಿ ಜ್ಞಾತಿಗಳನ್ನು ಕೊಲ್ಲಿಸಿ ಪಾಪವನ್ನು ಕಟ್ಟಿಕೊಂಡೆನು. ಈ ಪಾಪಪರಿಹಾರಕ್ಕೆ ತ್ಯಾಗವೇ ಉತ್ತಮೋಪಾಯವೆಂದು ಪ್ರಾಜ್ಞರು ನುಡಿದಿರುವರು. ಆದುದರಿಂದ ನಾನು ರಾಜ್ಯವನ್ನೂ ಗೃಹಸ್ಥಾಶ್ರಮವನ್ನೂ ಪರಿತ್ಯಾಗಮಾಡಿ ಫಲಮೂಲಗಳನ್ನು ತಿಂದುಕೊಂಡು ವನವಾಸಿಯಾಗಿಯೋ ಸರ್ವಕರ್ಮಗಳನ್ನೂ ಪರಿತ್ಯಾಗ ಮಾಡಿ ಭಿಕ್ಷಾನ್ನವನ್ನು ತಿಂದುಕೊಂಡು ಸಂನ್ಯಾಸಿಯಾಗಿಯೋ ಇರುವೆನು. ನೀನು ಈ ನಮ್ಮ ನಿಷ್ಕಂಟಕರಾಜ್ಯವನ್ನಾಳು."

ವಾದದಲ್ಲಿ ಕುಶಲನಾದ ಅರ್ಜುನನು ಹಿರಿಯಣ್ಣನ ಮಾತಿಗೆ ಲೇಗಿ— "ಅಯ್ಯೋ ದುಃಖವೇ! ಹಗೆಯನ್ನು ಕೊಂದು ಸ್ವಧರ್ಮದಿಂದ ಸಂಪಾದಿಸಿದ ರಾಜ್ಯವನ್ನು ಬುದ್ಧಿಲಾಘವದಿಂದ ಬಿಡುವರುಂಟೆ? ಈ ಭಾಗ್ಯಕ್ಕೆ ಈ ಮಹೀಪಾಲರೆಲ್ಲರನ್ನೂ ಕ್ರೋಧದಿಂದ ಏಕೆ ಕೊಲ್ಲಿಸಿದೆ? ಕ್ಷತ್ರಿಯಕುಲದಲ್ಲಿ ಹುಟ್ಟಿ ಕ್ಷಾತ್ರಬಲದಿಂದ ರಾಜ್ಯವನ್ನು ಗೆದ್ದು ಈಗ ಕ್ಷತ್ರಿಯವೃತ್ತಿಯನ್ನು ಜರಿದು ಧರ್ಮಾರ್ಥಗಳನ್ನು ತೊರೆದು ಕಾಡಿಗೆ ಹೋಗುವುದು ಮರುಳುತನವಲ್ಲವೆ? ಧರ್ಮಾರ್ಜನೆಗೆ ಅರ್ಥವೇ ಸಾಧನವಲ್ಲವೆ? ಧನದಿಂದ ದಾನಧರ್ಮಗಳು, ಧನದಿಂದ ಸ್ವರ್ಗ, ಧನದಿಂದ ಕುಲ, ಧನದಿಂದ ಮಾನ, ಧನದಿಂದ ಪ್ರಾಣಯಾತ್ರೆ, ಧನದಿಂದ ಸರ್ವವೂ ಸಾಧ್ಯವಾಗುವುದು. ಧನಹೀನನಿಗೆ ಇಹವೂ ಇಲ್ಲ, ಪರವೂ ಇಲ್ಲ. ಯಾವನು ನಮ್ಮ ಧನವನ್ನು ಅಪಹರಿಸುವನೋ ಅವನು ನಮ್ಮ ಧರ್ಮವನ್ನೂ ಅಪಹರಿಸುವನು. ಅಂತಹವನಿಗೆ ಕ್ಷಮೆಯನ್ನು ತೋರಿಸುವುದು ಧರ್ಮವೆ? ಅವನನ್ನು ದಂಡಿಸುವುದು ಅಧರ್ಮವೆ? ಮಹಾರಾಜನೆ! ರಾಜ್ಯವು ನಿನ್ನದಾಗಿದೆ. ರಾಜ್ಯವನ್ನು ಪರಿಪಾಲಿಸು. ಹಾಗೆ ಮಾಡೆನೆಂದರೆ ರಾಜ್ಯಪಾಪವೆಲ್ಲವೂ ನಿನಗೆ ಬರುವುದು" ಎಂದು ನುಡಿದನು.

ತರುವಾಯ ಭೀಮಸೇನನಿಂತೆಂದನು :—"ಮಹಾರಾಜನೇ! ನೀನು ಅರ್ಥಜ್ಞಾನವಿಲ್ಲದ ವೇದಪಾಠಕನೇ ಹೊರತು ತತ್ತ್ವಜ್ಞಾನವುಳ್ಳವನಲ್ಲ. ರಾಜಧರ್ಮವನ್ನು ಹೇಯವೆಂದೆಣಿಸಿ ಕರ್ತವ್ಯಕರ್ಮಗಳನ್ನು ಬಿಟ್ಟು ಅಲಸನಾಗಿರಬೇಕೆಂದಿದ್ದ ಪಕ್ಷದಲ್ಲಿ ಧಾರ್ತರಾಷ್ಟ್ರರನ್ನು ವಿನಾಶಮಾಡಿದುದಕ್ಕೇನು

ಫಲ? ಘಾಸಿಗೊಂಡು ಬಾವಿಯನ್ನು ತೋಡಿ ಬಳಲಿದುದಕ್ಕೆ ಮೈ ಕೆಸರಾದು
ಫಲವೆ? ಭರತಕುಲಶ್ರೇಷ್ಠನೇ! ಕ್ಷತ್ರಿಯರೊಳಗೆ ಕ್ಷಮಾವಂತನು, ಅಹಿಂಸ
ತ್ಮನು, ಕರುಣಾಳು ಆದವನು ನೀನೊಬ್ಬನೇಯೆ? ಈ ನಿನ್ನ ಅಗಾಧ ಬು
ಮೊದಲೇ ತಿಳಿದಿದ್ದಪಕ್ಷದಲ್ಲಿ ನಾವು ಶಸ್ತ್ರವನ್ನು ಹಿಡಿಯುತ್ತಿರಲಿ
ಈ ಘೋರ ಪ್ರಾಣಿಹತ್ಯವೂ ಆಗುತ್ತಿರಲಿಲ್ಲ. ನಮ್ಮ ರಾಜ್ಯವನ್ನು ನಾ
ತೆಗೆದುಕೊಳ್ಳುವುದಕ್ಕಾಗಿ ಶತ್ರುಗಳನ್ನು ಕೊಂದೆವು; ಇದು ತಪ್ಪೆ? ನಾ
ಗತಿಹೀನರಿಗೆ ಗತಿಯೆನಿಸಿಕೊಂಡು ನಮ್ಮ ಒಡವೆಯನ್ನು ನಾವು ತೆಗೆ
ಕೊಳ್ಳದೆ ಬಿಟ್ಟಿದ್ದರೆ ಜನರೇನೆನ್ನುತ್ತಿದ್ದರು? ಕ್ಷತ್ರಿಯರಿಗೆ ಸಂನ್ಯಾಸ
ಸಲ್ಲದು. ನೀನು ಕ್ಷತ್ರಿಯಕುಲದಲ್ಲಿ ಹುಟ್ಟಿದವನು. ಅವರವರ ವರ್ಣಾಶ್ರ
ಧರ್ಮದಿಂದ ಅವರವರಿಗೆ ಸಿದ್ಧಿಯಾಗುವುದು ನಿಶ್ಚಯವೆನ್ನುವ ಪಕ್ಷದ
ನಿನ್ನ ಕುಲಧರ್ಮವಾದ ಪ್ರಜಾಪಾಲನೆಯನ್ನು ಮಾಡುವುದರಿಂದ ನಿನ
ಸಿದ್ಧಿಯಾಗುವುದೇ ಹೊರತು ಬಿಡುವುದರಿಂದಾಗದು. ನಾನು ಸಂನ್ಯಾ
ನಾನು ಯಾರನ್ನೂ ಕಾಡೆನು ಎಂದು ಹೇಳಿಕೊಂಡು, ವಿಹಿತಕರ್ಮವನ
ಬಿಟ್ಟು, ಕಂದಮೂಲಗಳಿಂದಲೋ ಭಿಕ್ಷಾನ್ನದಿಂದಲೋ ತನ್ನ ಒಂ
ಹೊಟ್ಟೆಯನ್ನು ಹೊರೆದುಕೊಂಡ ಮಾತ್ರಕ್ಕೇ ಯಾವನೊಬ್ಬನೂ ಸದ್ಗ
ಯನ್ನು ಹೊಂದನು. ಕರ್ಮವು ಅವಶ್ಯಕರ್ತವ್ಯವು. ನೋಡು ಜಗತ್ತೆಲ್ಲವ
ಕರ್ಮನಿರತವಾಗಿರುವುದು.”

ಪ್ರಾಜ್ಞನಾದ ನಕುಲನು ಅಣ್ಣನ ಶೋಕವನ್ನೂ ಶೋಕದಿಂದುಂಟಾ
ವೈರಾಗ್ಯವನ್ನೂ ಚಿಂತಿಸುತ್ತ—“ಮಹಾರಾಜನೇ! ಯಜ್ಞವನ್ನು ಮಾ
ಧರ್ಮಲಬ್ಧವಾದ ವಿತ್ತದಿಂದ ಭೂರಿದಕ್ಷಿಣೆಯನ್ನು ಕೊಟ್ಟು ಜಿತೇಂದ್ರಿ
ನಾಗಿರುವವನೇ ಯಥಾರ್ಥ ತ್ಯಾಗಿ. ಆಶ್ರಮಗಳೊಳಗೆ ಗೃಹಸ್ಥಾಶ್ರಮವ
ಶ್ರೇಷ್ಠವೆಂದು ಪ್ರಾಜ್ಞರು ಹೇಳುವರು. ಗೃಹಸ್ಥಾಶ್ರಮದಲ್ಲಿ ಧರ್ಮಾರ್ಥ
ಕಾಮಗಳೆಂಬ ತ್ರಿವರ್ಗವನ್ನೂ ಸಂಪಾದಿಸಬಹುದು. ರಾಜನು ಪ್ರಮಾದದಿಂ
ತನ್ನ ಕರ್ತವ್ಯದಲ್ಲಿ ಉದಾಸೀನನಾದರೆ ದುಷ್ಟರು ಮಲೆತು ಪ್ರಜೆಗಳನ
ಕಾಡಿಸರೆ? ಪ್ರಜಾರಕ್ಷಕನೂ ಅಲ್ಲದೆ ದಾತೃವೂ ಅಲ್ಲದೆ ಇರುವ ರಾಜನ
ಧರ್ಮಭ್ರಷ್ಟನಾಗದೆ ಹೋಗನು. ವನವಾಸಿಯಾದ ಮಾತ್ರಕ್ಕೇ ಯಾವನ
ತ್ಯಾಗಿಯೆನಿಸಿಕೊಳ್ಳನು. ಕುಟುಂಬಧರ್ಮಿಯಾಗಿ, ವಿಷಯರಾಶಿಗಳ ನಡು
ಇದ್ದು ವಿಷಯಾಭಿಲಾಷೆಯನ್ನು ತೊರೆಯಬಲ್ಲವನೇ ತ್ಯಾಗಿ. ಹಿಂದೆ ನಿ
ಈ ಕ್ಷತ್ರಿಯ-ಧರ್ಮವನ್ನು ಶಿಷ್ಟರು ಆಚರಿಸಿದರು, ನಿನ್ನ ಪೂರ್ವಿಕ
ಗೌರವಿಸಿದರು. ನೀನೂ ಅವರ ಹೆಜ್ಜೆಯನ್ನು ಹಿಡಿದು ನಡೆ” ಎಂದನು.

ಆ ಬಳಿಕ ಸಹದೇವನಿಂತೆಂದನು :—"ರಾಜ್ಯವನ್ನೂ ರಾಜೈಶ್ವರ್ಯವನ್ನೂ ಬಿಟ್ಟುಹೋದ ಮಾತ್ರಕ್ಕೇ ಸಿದ್ಧಿಯಾಗುವುದೆ? ನರಾಧಿಪನೇ! 'ಈ ರಾಜ್ಯವನ್ನು ನಾನು ಗೆದ್ದೆನು' ಎಂಬ ಅಹಂಕಾರವೂ, 'ಈ ರಾಜ್ಯವು ನನ್ನದು, ನನ್ನ ಮತ್ತು ನನ್ನವರ ಸುಖಕ್ಕಾಗಿರುವುದು' ಎಂಬ ಮಮಕಾರವೂ ನಮ್ಮ ದುಃಖಕ್ಕೆ ಮೂಲ. ಅಹಂಕಾರಮಮಕಾರಗಳನ್ನು ಬಿಟ್ಟಲ್ಲದೆ ದುಃಖವು ತೊಲಗದು. ಬಾಹ್ಯವಸ್ತುಗಳನ್ನು ಕಣ್ಣೆತ್ತಿ ನೋಡದೆ ಇಂದ್ರಿಯವ್ಯಾಪಾರಗಳನ್ನು ತಡೆದು ಮನಸ್ಸಿನಲ್ಲಿ ಮಾತ್ರ ವಿಷಯಸುಖವನ್ನು ನೆನೆನೆನೆದು ಬಯಸುತ್ತಿದ್ದರೆ ಅದು ತ್ಯಾಗವೆನಿಸದು; ಅದು ಸಂನ್ಯಾಸವೂ ಅಲ್ಲ, ಧರ್ಮವೂ ಅಲ್ಲ; ಅದರಿಂದ ಸುಖವೂ ಇಲ್ಲ, ಸಿದ್ಧಿಯೂ ಇಲ್ಲ. ಬಲವಿಕ್ರಮಗಳಿಂದ ರಾಜ್ಯವನ್ನು ಸಂಪಾದಿಸಿ ಅದನ್ನು ಪಾಲಿಸದಿರುವರುಂಟೆ? ನೀನು ಹಿರಿಯನು, ಬಲ್ಲವನು; ನಾನು ಕಿರಿಯನು, ಅಜ್ಞನು; ತಪ್ಪಾಗಲಿ, ಒಪ್ಪಾಗಲಿ, ಈ ನನ್ನ ದುಃಖಪ್ರಲಾಪವನ್ನು ಮನ್ನಿಸು."

ತರುವಾಯ, ಅಭಿಜನಸಂಪನ್ನೆಯಾದ ದ್ರೌಪದಿಯು ದುಃಖಪಡುತ್ತ—"ಪಾರ್ಥಿವನೇ! ಜಯೈಷಿಯಾಗಿ ಸಮರಕ್ಕೆ ಹೋಗಿ ದುರ್ಯೋಧನನನ್ನೂ ಅವನ ಚತುರಂಗಬಲವನ್ನೂ ಮರ್ದನಮಾಡಿ ರಾಜ್ಯವನ್ನು ವಶಮಾಡಿಕೊಂಡು ಬ್ರಾಹ್ಮಣೋತ್ತಮರಿಗೆ ಭೂರಿದಕ್ಷಿಣೆಯನ್ನು ಕೊಟ್ಟು ನಮ್ಮ ಇಷ್ಟಾರ್ಥಗಳೆಲ್ಲವನ್ನೂ ಭೋಗಿಸುವೆವು ಎಂದು ನೀನು ಯುದ್ಧಕ್ಕೆ ಮುಂಚೆ ಹೇಳಲಿಲ್ಲವೆ? ಈಗ ನೀನು ಹಂಬಲಿಸುವುದೇಕೆ? ಬ್ರಹ್ಮನು ಲೋಕರಕ್ಷಣಾರ್ಥವಾಗಿಯೇ ಕ್ಷತ್ರಿಯರಾಜರನ್ನು ನಿರ್ಮಾಣಮಾಡಿರುವನು. ದುಷ್ಟರನ್ನು ದಂಡಿಸದೆ ಲೋಕವನ್ನು ರಕ್ಷಿಸಲಾಗುವುದೆ? ಮಹಾಪ್ರಭುವೇ! ಸತ್ಕುಲದಲ್ಲಿ ಹುಟ್ಟಿ ಮಹಾಕಾಯನೂ ಮಹಾವೀರ್ಯನೂ ಎನಿಸಿಕೊಂಡು ಸಚ್ಚರಿತ್ರನಾಗಿ ಆಯಾ ಸ್ಥಾನದಲ್ಲಿ, ಆಯಾ ಕಾಲದಲ್ಲಿ, ಕ್ಷಮೆಯನ್ನೂ ಕ್ರೋಧವನ್ನೂ ನಿಗ್ರಹಾನುಗ್ರಹಶಕ್ತಿಗಳನ್ನೂ ತೋರಿಸಬಲ್ಲವನೇ ಧರ್ಮಜ್ಞನೆನಿಸಿಕೊಳ್ಳುವನು; ಅವನೇ ವರ್ಣಾಶ್ರಮಧರ್ಮಗಳಿಗೆ ಪ್ರಭು, ರಕ್ಷಕನು. ಲೋಕಪಾಲಕರೂ ಮಹಾತ್ಮರೂ ಆದ ಪಾಂಡವರು, ಧರ್ಮಭ್ರಷ್ಟರೂ ದುರಾತ್ಮರೂ ಆದ ಕೌರವರನ್ನು ಧರ್ಮದಿಂದಲೋ ಛಲದಿಂದಲೋ ಬಲದಿಂದಲೋ ನಾಶಮಾಡಿದುದು ಪಾಪವಲ್ಲ. ಜಗತ್ಪತೇ! ಭೂತದಯೆ, ದಾನ, ಅಧ್ಯಯನ, ತಪ—ಇವು ಬ್ರಾಹ್ಮಣರ ಪ್ರಧಾನಧರ್ಮಗಳು. ದುಷ್ಟನಿಗ್ರಹ, ಶಿಷ್ಟಪರಿಪಾಲನೆ, ರಣವಿಕ್ರಮ—ಇವು ಕ್ಷತ್ರಿಯರ ಮುಖ್ಯಧರ್ಮಗಳು. ನೀನು ಅಧ್ಯಯನಮಾಡಿ ರಾಜ್ಯವನ್ನು ಸಂಪಾದಿಸಿದೆಯಾ? ಯಾಚನೆಮಾಡಿ ಸಂಪಾದಿಸಿ

ದೆಯಾ? ದಾಸವನ್ನಾಗಿ ಪರಿಗ್ರಹಿಸಿದೆಯಾ? ಇಲ್ಲ, ಸಾಮೋಪಾ
ದಿಂದಲೆ? ಹೇಳು. ದ್ರೋಣ, ಕರ್ಣ, ಅಶ್ವತ್ಥಾಮ, ಕೃಪಾದಿ ಶಾರ್ದೂ
ಗಳಿಂದ ಅಭಿರಕ್ಷಿತವಾದ ಅದ್ಭುತ ಚತುರಂಗಬಲವನ್ನು ಕ್ಷಾತ್ರತೇಜದಿ
ಮರ್ದನಮಾಡಿಯಲ್ಲವೆ ನೀನು ರಾಜ್ಯವನ್ನು ಜಯಿಸಿದೆ? ಅದಕ್ಕೆ ಶೋ
ವೇಕೆ? ನೀವೈವರೂ ಅಸಹಾಯಶೂರರು; ಐವರೊಳಗೊಬ್ಬನನ್ನು ಕೈಹಿ
ದಿದ್ದರೂ ನಾನು ಸುಖದಿಂದಿರಬಹುದಾಗಿದ್ದಿತು. ಐವರನ್ನು ಮದುವೆಯಾದ
ನನಗೆ ಈ ಪಾಡು ಬರಬಹುದೆ? ಐವರು ಮಕ್ಕಳನ್ನು ನೀಗಿಕೊಂಡೆನ
ಆದರೂ ನಾನು ಸಾಯಲಿಲ್ಲವಲ್ಲಾ! ಸ್ತ್ರೀಜಾತಿಯಲ್ಲಿ ನನ್ನಂತಹ ಅಧ
ಯುಂಟೆ? ಜನಾಧಿಪನೇ! ಫಲಕ್ಕೆ ಬಂದ ಸಮಯದಲ್ಲಿ ನಿನ್ನ ಸಾ
ಕಾರ್ಯಗಳೆಲ್ಲವನ್ನೂ ವ್ಯರ್ಥಗೊಳಿಸುತ್ತೀಯಲ್ಲಾ! ನಿನ್ನಂತಹ ಹು
ರುಂಟೆ? ನೀನು ಜ್ಯೇಷ್ಠನೆಂದು ನಿನ್ನನ್ನು ನೋಡಿ ನಿನ್ನಂತೆಯೇ ನಿ
ತಮ್ಮಂದಿರೂ ಉನ್ಮತ್ತರಾಗಿದ್ದಾರೆ. ಅವರು ಬುದ್ಧಿವಂತರಾಗಿದ್ದಿದ್ದರೆ ನಿನ್ನ ನ
ಕಟ್ಟಿಹಾಕಿ ಅವರೇ ರಾಜ್ಯಭಾರವನ್ನು ವಹಿಸುತ್ತಿದ್ದರು. ರಾಜವ್ಯಾಸ
ದಮ್ಮಯ್ಯ! ನೀನು ರಾಜ್ಯವನ್ನು ತ್ಯಜಿಸಬೇಡ, ಪೃಥ್ವೀದೇವಿಯನ
ಸ್ವೀಕಾರಮಾಡು, ಪ್ರಜೆಗಳನ್ನು ಧರ್ಮದಿಂದ ಪಾಲಿಸು, ದ್ವಿಜೋತ್ತಮ
ಧನವಸನಗಳನ್ನು ದಾನಮಾಡು" ಎಂದು ಮೊರೆಯಿಟ್ಟಳು.

ಅರ್ಜುನನು ದ್ರೌಪದಿಯ ಮಾತನ್ನೇ ಸಮರ್ಥಿಸುತ್ತ ಮತ್ತಿಂತೆಂದನು:
"ಪ್ರಾಜ್ಞನೇ! ದಂಡವಿಧಾನದಿಂದ ಧನಧಾನ್ಯಗಳೂ ಪ್ರಾಣಮಾನಗಳ
ಸುರಕ್ಷಿತವಾಗಿರುವುವು. ಲೋಕದಲ್ಲಿ ಯಮದಂಡಕ್ಕೆ ಅಂಜಿ ಕೆಲವ
ರಾಜದಂಡಕ್ಕೆ ಅಂಜಿ ಕೆಲವರು, ಪರಲೋಕಭಯದಿಂದ ಕೆಲವರು, ಸಮಾ
ಭಯದಿಂದ ಕೆಲವರು, ಅಪರಾಧವನ್ನು ಮಾಡಲು ಹೆದರುವರು. ಬ್ರಹ್ಮಚಾ
ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿ—ಇವರೆಲ್ಲರೂ ದಂಡಭಯದಿಂದ ತಂತಮ
ಧರ್ಮದಲ್ಲಿರುವರು. ದುಷ್ಟರ ಬಾಧೆ ನಿವಾರಿಸುವುದಕ್ಕೋಸ್ಕರವೇ ದಂ
ವಿಧಾನವು ಹುಟ್ಟಿರುವುದು. ದುಷ್ಟರನ್ನು ಶಿಷ್ಟರನ್ನಾಗಿ ಮಾಡುವುದಕ್ಕೋ
ಸ್ಕರವೇ ಧರ್ಮಪ್ರವಚನವು ಏರ್ಪಟ್ಟಿರುವುದು. ಯಥಾನ್ಯಾಯವಾಗಿ ದಂ
ವನ್ನು ಪ್ರಯೋಗಮಾಡದಿದ್ದರೆ ಬಲಿಷ್ಠರು ಕಾಮಕ್ರೋಧಗಳ ವಶರಾ
ದುರ್ಬಲರನ್ನೂ ಸಜ್ಜನರನ್ನೂ ಹುರಿದು ಮುಕ್ಕಿಬಿಡರೆ? ಲೋಕವನ
ಮುಳುಗಿಸರೇ? ಸರ್ವಕಾರ್ಯಗಳಲ್ಲಿಯೂ ಧರ್ಮಾಧರ್ಮಗಳು ಸಂಕ
ವಾಗಿರುವುವು. ದಂಡವಿಧಾನವು ಹಿಂಸಾತ್ಮಕವೆಂಬುದೇನೋ ನ
ಹಾಗೆಂದು ಲೋಕಕಂಟಕರನ್ನು ದಂಡಿಸದೆ ಬಿಟ್ಟರೆ ಪ್ರಪಂಚವೇ ದು

ಪಾಲಾಗದೆ? ಹಿಂಸಾಪ್ರವೃತ್ತಿ ಹೆಚ್ಚದೆ? ಧರ್ಮಕ್ಕೆ ಹಾನಿಯುಂಟಾಗದೆ? ಶಸ್ತ್ರವನ್ನು ಹಿಡಿದು ಅನ್ಯಾಯವಾಗಿ ಕೊಲ್ಲಬಂದ ಆತತಾಯಿಯನ್ನು ಆತ್ಮರಕ್ಷಣಾರ್ಥವಾಗಿ ಕೊಲ್ಲುವುದು ಪಾಪವಲ್ಲ. ಧರ್ಮಜ್ಞನೆ! ಪುಣ್ಯಪಾಪಮಿಶ್ರವಾದ ಈ ಪ್ರಪಂಚದಲ್ಲಿ ಪುರಾತನ ಧರ್ಮವನ್ನು ಆಚರಿಸು, ಮಹಾಪ್ರಭುವೇ!"

ಈ ಹಲವು ಬಗೆಯಲ್ಲಿ ಭೀಮಾರ್ಜುನರು ರಾಜ್ಯಭಾರವನ್ನು ವಹಿಸೆಂದು ಯುಧಿಷ್ಠಿರನನ್ನು ಬೇಡಿದರೂ ಕೇಳದೆ—"ಅರ್ಜುನ! ಕರ್ಮವನ್ನು ಮಾಡು, ಕರ್ಮವನ್ನು ಬಿಡು—ಎಂಬೀ ಎರಡೂ ವೇದವಚನಗಳೆಂಬುದನ್ನು ನಾನು ಬಲ್ಲೆನು. ನೀನು ಕೇವಲ ಶಸ್ತ್ರಜ್ಞ, ಶಾಸ್ತ್ರಜ್ಞನಲ್ಲ; ರಣದಲ್ಲಿ ಕಾದಬಲ್ಲವನಾದರೂ ತತ್ತ್ವವನ್ನರಿಯಲು ಸಮರ್ಥನಲ್ಲ. ನನಗೆ ತತ್ತ್ವೋಪದೇಶವನ್ನು ಮಾಡಬರಬೇಡ. ಆದರೆ ಭ್ರಾತೃಸ್ನೇಹದಿಂದ ನೀನಾಡಿದ ಮಾತೇನೋ ನ್ಯಾಯವೆ; ಅದಕ್ಕೆ ನಾನು ಸಂತೋಷಪಡುತ್ತೇನೆ" ಎಂದು ಅರ್ಜುನನಿಗೂ—"ಭೀಮ! ನೀನು ಅಸಂತುಷ್ಟನು; ಮಹೀಪತಿಗೂ ಒಂದೇ ಹೊಟ್ಟೆಯಲ್ಲವೆ? ಅದಕ್ಕಾಗಿ ಇಂತಹ ಪ್ರಾಣಹತ್ಯವನ್ನು ಮಾಡಬಹುದೆ? ಆಶೆಯನ್ನು ಬಿಟ್ಟು ಮಾತಾಡು" ಎಂದು ಭೀಮನಿಗೂ ಉತ್ತರವನ್ನು ಕೊಟ್ಟನೇ ಹೊರತು ರಾಜ್ಯವಾಳುವ ಸುದ್ದಿಯನ್ನೇ ಎತ್ತಲಿಲ್ಲ. ಅಷ್ಟು ಮಾತ್ರವಲ್ಲದೆ, "ರಾಜ್ಯಕಾರ್ಯಗಳಲ್ಲಿ ತೊಡಗುವುದರಿಂದ ಧರ್ಮವನ್ನು ಮಾತ್ರವೇ ಅಲ್ಲ, ಅಧರ್ಮವನ್ನು ಕೂಡ ಮಾಡಬೇಕಾಗುವುದು; ಪುಣ್ಯವನ್ನು ಮಾತ್ರವೇ ಅಲ್ಲ, ಪಾಪವನ್ನೂ ಕಟ್ಟಿಕೊಳ್ಳಬೇಕಾಗುವುದು; ಮತ್ತೆ ಮತ್ತೆ ಜನ್ಮವೆತ್ತಬೇಕಾಗುವುದು. ಆದುದರಿಂದ ಸರ್ವ ಕರ್ಮಗಳನ್ನೂ ಪರಿತ್ಯಾಗಮಾಡುವೆನು" ಎಂದು ನಿಶ್ಚಯಿಸಿ, ಕಡೆಗೆ ಪ್ರಾಣಪರಿತ್ಯಾಗ ಮಾಡುವೆನೆಂದು ಸಂಕಲ್ಪಮಾಡಿ, ವ್ಯಾಸರ ಮುಂದೆ ಇಂತೆಂದು ಹಂಬಲಿಸಿದನು:—

"ನಾನು ಜ್ಞಾತಿಘಾತುಕನು. ರಾಜ್ಯಕಾಮುಕನಾಗಿ ಸ್ವವಂಶವನ್ನು ಉಚ್ಛೇದನಮಾಡಿದೆನು. ಶೈಶವದಲ್ಲಿ ಯಾವನ ತೊಡೆಯ ಮೇಲೆ ಆಡಿಕೊಂಡಿದ್ದೆನೋ, ಬಾಲ್ಯದಲ್ಲಿ ನನ್ನನ್ನು ಯಾವನು ಸಾಕಿಸಲಹಿದನೋ ಆ ಗಾಂಗೇಯನನ್ನು ನಾನು ರಾಜ್ಯಾಕಾಂಕ್ಷೆಯಿಂದ ರಣದಲ್ಲಿ ಕೆಡವಿಸಿದೆನು. ಯಾವ ವೀರನು ಕುರುಕ್ಷೇತ್ರದಲ್ಲಿ ನಿಂತು ಪರಶುರಾಮನ ಸಂಗಡ ಕಾದಿ ಜೈಯಿಸಿಕೊಂಡನೋ ಆ ವೀರನನ್ನು ಪಾಪಿಯಾದ ನಾನು ಅಲ್ಪಕಾಲ ಸುಖಕ್ಕೋಸ್ಕರ, ಅಸ್ಥಿರವಾದ ರಾಜ್ಯಕ್ಕೋಸ್ಕರ, ಕೊಲ್ಲಿಸಿದೆನು. ಅಶ್ವತ್ಥಾಮನು ಸತ್ತನೆಂದು ಬಗುಳಿ, ಧನುರ್ಧರಶ್ರೇಷ್ಠನೂ ಸರ್ವರಾಜಪೂಜಿತನೂ

ಆದ ಆಚಾರ್ಯನನ್ನು ವಂಚಿಸಿದೆನು. ಗುರುದ್ರೋಹಿಯಾದ ನಾನು ಯಾ
ಲೋಕಕ್ಕೆ ಹೋಗುವೆನೊ! ಜ್ಯೇಷ್ಠ ಭ್ರಾತೃ ಕರ್ಣನನ್ನು—ಯಾವ ಧೀರ
ರಣದಿಂದ ಹಿಂಜರಿಯದೆ ಕಾದುತ್ತಿದ್ದನೋ ಆ ಧೀರನನ್ನು—ಕೊಲ್ಲಿಸಿ ಭ್ರಾ
ದ್ರೋಹಿಯಾದೆನು. ಅಭಿಮನ್ಯುವನ್ನು—ಬಾಲನನ್ನು! ದ್ರೋಣಾಚಾರ್ಯ
ನಿಂದ ಪಾಲಿತವಾದ ವಾಹಿನಿಯನ್ನು ಪ್ರವೇಶಮಾಡೆಂದು ಹೇಳಿ, ಕೊಲ್ಲಿ
ದೆನು. ಅಂದು ಮೊದಲು ನಾನು ಶಿಶುಹತ್ಯಮಾಡಿದವನಂತೆ ಲಜ್ಜೆಯಿಂ
ತಲೆಬಾಗಿ, ಕೃಷ್ಣಾರ್ಜುನರಿಗೆ ಮೋರೆ ತೋರಿಸಲಾರದಿದ್ದೇನಲ್ಲ! ಐವ
ಮುದ್ದುಮಕ್ಕಳನ್ನು ಕಳೆದುಕೊಂಡು ದುಃಖಿಸುತ್ತಿರುವ ದ್ರೌಪದಿಯನ
ನೋಡಿ ಸಹಿಸಬಹುದೆ? ನಾನು ಅಪರಾಧಿ, ಪಾಪಿ, ಪೃಥ್ವೀನಾಶಕನ
ಈ ಸ್ಥಳವನ್ನು ಬಿಟ್ಟೇಳೆನು, ಅನ್ನವನ್ನು ತಿನ್ನೆನು, ಜಲಪಾನ ಮಾಡೆನ
ಪ್ರಾಯೋಪವೇಶಮಾಡಿ ಪ್ರಾಣವನ್ನು ಬಿಡುವೆನು. ತಪೋಧನನೇ! ನಾ
ಕುಲಾಂತಕನು, ಗುರುಘಾತುಕನು. ಈ ನನ್ನ ಕಳೇಬರವನ್ನು ತ್ಯಜಿಸುವೆನ
ಅಪ್ಪಣೆಕೊಡು; ಕೊಟ್ಟು ಇಷ್ಟಬಂದ ಕಡೆಗೆ ಹೋಗು. ತಾವೆಲ್ಲರೂ ನನ
ಅನುಜ್ಞೆಯನ್ನು ಕೊಡಿರಿ."

ಹೀಗೆ ಯುಧಿಷ್ಠಿರನು ಶೋಕಾಧಿಕ್ಯದಿಂದ ಪ್ರಾಣತ್ಯಾಗ ಮಾಡಲಿಚ್ಛಿ
ಎಲ್ಲರ ಅನುಜ್ಞೆಯನ್ನೂ ಬೇಡಿದನು. ವ್ಯಾಸರು ಯುಧಿಷ್ಠಿರನನ್ನು ಸಮಾಧಾ
ಗೊಳಿಸಲು ಯತ್ನಿಸಿ—"ಹುಟ್ಟುವುದೂ ಸಾಯುವುದೂ ಪ್ರಪಂಚಧರ್ಮ
ಸತ್ತವರಿಗೆ ಶೋಕಪಡುತ್ತ ಕರ್ತವ್ಯಕರ್ಮವನ್ನು ಬಿಡುವುದು ಯುಕ್ತವ
ಲೋಕರಕ್ಷಣೆಯು ಕ್ಷತ್ರಿಯರ ಕರ್ತವ್ಯ, ಅವರ ಸ್ವಧರ್ಮ; ಶುಭಾಶುಭಗಳಿ
ಮೂಲವಾದ ಸ್ವಧರ್ಮವನ್ನು ಬಿಡುವುದು ಯಾರಿಗೂ ಶ್ರೇಯಸ್ಕರವ
ದುರ್ಯೋಧನಾದಿಗಳು ಧರ್ಮಘಾತುಕರು. ಯಾರು ಪಾಪಬುದ್ಧಿಯಿಂ
ಪಾಪಮಾಡಿ, ಮಾಡಿದ ಮೇಲೆಯೂ ಆ ಬುದ್ಧಿಯನ್ನು ಬಿಡದೆ ಲಜ್ಜೆಗೆಟ
ಪಾಪವನ್ನು ಮಾಡುತ್ತಿರುವರೋ, ದಯಾದಾಕ್ಷಿಣ್ಯ ಲೇಶವೂ ಇಲ್ಲದೆಯೆ
ಕಂಟಕರಾಗಿ ವರ್ತಿಸುವರೋ, ಅವರು ಕ್ಷಮಾರ್ಹರಲ್ಲ, ವಧಾರ್ಹರು. ಮಹ
ರಾಜನೇ! ನೀನು ಸತ್ಕುಲದಲ್ಲಿ ಹುಟ್ಟಿದವನು, ರುಚಿಪೂರ್ವಕವಾಗಿ ನರಹಿಂ
ಮಾಡಿದವನಲ್ಲ. ಇಚ್ಛೆಯಿಲ್ಲದವನಾದರೂ ಕೌರವರ ಅಪರಾಧಗಳ ದೆಸೆಯಿಂ
ಅವರನ್ನು ನಿಗ್ರಹಿಸಿದೆ; ನಿಗ್ರಹಿಸಿ, ಪಾಪವಲ್ಲದಿದ್ದರೂ ಅದಕ್ಕಾಗಿ ಪರಿತಾ
ಪಡುತ್ತಿದ್ದೀಯೆ; ಅವರನ್ನು ಕೊಂದವನು ನೀನಲ್ಲ, ಭೀಮನಲ್ಲ, ಅರ್ಜುನನಲ್ಲ
ಅವರ ಅಪರಾಧಗಳಿಂದಲೇ ಅವರು ಹತರಾದರು. ಅವರ ವಿನಾಶಕಾಲ ಬಂದಿತ
ಅವರು ಸತ್ತರು. ನೀನು ಶೋಕಪಡುವುದೇಕೆ? ಕ್ಷತ್ರಿಯವೃತ್ತಿಯ

ಹಿಂಸಾತ್ಮಕವಾದುದರಿಂದ ನೀನು ನಿಂದ್ಯವೆಂದರೂ ನೀನು ಉದ್ದೇಶಿಸಿರುವ ಪ್ರಾಣತ್ಯಾಗವು ಶ್ಲಾಘ್ಯವಲ್ಲ; ಬದುಕಿದ್ದರೆ ಪ್ರಾಯಶ್ಚಿತ್ತವನ್ನಾದರೂ ಮಾಡಿಕೊಳ್ಳಬಹುದು. ಮಹಾರಾಜನೇ! ಅಶ್ವಮೇಧಯಾಗವನ್ನು ಮಾಡಿ ನಿನ್ನ ಪಾಪಶಂಕೆಯನ್ನು ಪರಿಹರಿಸಿಕೊ? ಇನ್ನೇನು; ರಣದಲ್ಲಿ ಸತ್ತ ಮಹೀಪಾಲರ ರಾಷ್ಟ್ರಗಳಿಗೆ ಹೋಗಿ ಅವರವರ ಸೋದರರು, ಪುತ್ರರು, ಪೌತ್ರರು— ಯಾರಿದ್ದರೆ ಅವರಿಗೆ ಯಥಾನ್ಯಾಯವಾಗಿ ರಾಜ್ಯಾಭಿಷೇಕಮಾಡು. ಗರ್ಭಸ್ಥರಾದ ಬಾಲರೂ ನಿನ್ನ ದಯೆಗೆ ಪಾತ್ರರೇ; ಅವರನ್ನು ಮರೆಯಬೇಡ. ಕುಮಾರರು ಇಲ್ಲದೆಡೆಯಲ್ಲಿ ಕನ್ನೆಯರಿಗೆ ಪಟ್ಟವನ್ನು ಕಟ್ಟು. ಹಾಗೆ ಮಾಡುವುದರಿಂದ ಸ್ತ್ರೀಯರು ತಮ್ಮ ಕಷ್ಟನಷ್ಟಗಳನ್ನು ಮರೆತು ಶೋಕವನ್ನು ಕಳೆದು ಹರ್ಷಚಿತ್ತರಾಗುವರು. ಈ ವಿಧದಲ್ಲಿ ಸಕಲ ರಾಷ್ಟ್ರಗಳನ್ನೂ ಸಂತೈಸಿ ಶೋಕವನ್ನು ಬಿಟ್ಟು ಸ್ವಧರ್ಮವನ್ನು ನಡೆಸು.”

ಇನ್ನೂ ಯುಧಿಷ್ಠಿರನ ಮನೋವ್ಯಾಧಿಯು ಪರಿಹರಿಯಲಿಲ್ಲ. ವನವಾಸ, ಸಂನ್ಯಾಸ, ಪ್ರಾಯೋಪವೇಶ, ಇವಾವುದೂ ತನಗೆ ವಿಧೇಯವಲ್ಲದಿರುವ ಪಕ್ಷಕ್ಕೆ ತಾನು ಪುನೀತನಾಗುವುದು ಹೇಗೆ? ತನಗೇನು ಗತಿ—ಎಂದು ಕಳವಳಿಸುತ್ತ ಯಾವ ಯಾವ ಕರ್ಮಗಳಿಗೆ ಯಾವ ಯಾವ ಪ್ರಾಯಶ್ಚಿತ್ತವು ವಿಹಿತವಾಗಿದೆ ಎಂದು ಪ್ರಶ್ನೆ ಮಾಡಿ ವ್ಯಾಸರಿಂದ ತಿಳಿದುಕೊಂಡನು, “ಮಹಾಮುನಿಯೇ! ಈ ನಿನ್ನ ಉಪದೇಶದಿಂದ ಹರ್ಷಚಿತ್ತನಾದೆನು. ದ್ವಿಜಶ್ರೇಷ್ಠನೇ! ಧರ್ಮವನ್ನು ಆಚರಿಸುವುದೂ, ರಾಜ್ಯಕಾರ್ಯವನ್ನು ನಿರ್ವಹಿಸುವುದೂ— ಇವೆರಡೂ ಒಂದಕ್ಕೊಂದು ವಿರುದ್ಧ ವ್ಯಾಪಾರವಾಗಿರುವುವು. ಈ ವಿರೋಧವನ್ನು ಸಮಂಜಸಮಾಡಲರಿಯದೆ ನಿತ್ಯವೂ ಕಳವಳಪಡುತ್ತಿದ್ದೇನೆ. ರಾಜಧರ್ಮ, ಚಾತುರ್ವರ್ಣ್ಯಧರ್ಮ, ಆಪದ್ಧರ್ಮ—ಎಂಬೀ ಧರ್ಮಗಳನ್ನು, ಧರ್ಮವನ್ನು ಅವಲಂಬಿಸಿ ಪೃಥ್ವಿಯನ್ನು ಜಯಿಸುವ ಹದನವನ್ನೂ ನಿನ್ನಿಂದ ಕೇಳಿ ತಿಳಿಯಲಪೇಕ್ಷಿಸುತ್ತೇನೆ, ತಪೋನಿಧಿಯೇ!” ಎಂದು ನುಡಿದನು.

ಅದಕ್ಕೆ ವ್ಯಾಸರು—“ಮಹಾರಾಜನೇ! ಸಕಲಧರ್ಮಗಳನ್ನೂ ವಿಸ್ತಾರವಾಗಿ ತಿಳಿಯಬೇಕೆಂಬ ಕುತೂಹಲವಿದ್ದರೆ, ವೃದ್ಧಪಿತಾಮಹನಾದ ಭೀಷ್ಮನನ್ನು ಕೇಳು. ಅವನು ಧರ್ಮಗಳೆಲ್ಲವನ್ನು ಬಲ್ಲವನು; ಧರ್ಮರಹಸ್ಯವನ್ನು ಕುರಿತು ನೀನು ಪಡುವ ಸಂಶಯಗಳನ್ನು ಬಗೆಹರಿಸುವುದಕ್ಕೆ ಅವನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ” ಎಂದರು.

ಆ ಮಾತನ್ನು ಕೇಳಿ ಯುಧಿಷ್ಠಿರನು—“ಜ್ಞಾತಿಗಳನ್ನು ಹಾಳುಮಾಡಿ ಲೋಕಕ್ಕೇ ಅಪರಾಧಿಯಾಗಿ ನಾನು ಅಜೇಯನಾದ ಆ ಯೋಧನನ್ನು

ಮೋಸದಿಂದ ಕೆಡವಿಸಿ ಅವನಿಗೆ ನನ್ನ ಮೋರೆಯನ್ನು ಹೇಗೆ ತೋರಿಸಲಿ
ಎಂದು ಉತ್ತರಕೊಟ್ಟನು.

ಆ ಮಾತನ್ನು ಕೇಳಿ ಯದುಶ್ರೇಷ್ಠನಾದ ಶ್ರೀಕೃಷ್ಣನು ಚಾತುರ್ವಣ್ಯ
ಹಿತವನ್ನು ಚಿಂತಿಸುತ್ತ, ಯುಧಿಷ್ಠಿರನನ್ನು ಸಂಬೋಧಿಸಿ ಇಂತೆಂ
ನುಡಿದನು:—

"ನೃಪೋತ್ತಮನೇ! ನೀನು ಹೀಗೆ ಬಿಡದೆ ವ್ಯಥೆಪಡುತ್ತಿರುವು
ಸರಿಯಲ್ಲ; ಭಗವಾನ್ ವ್ಯಾಸನು ಹೇಳಿದಂತೆ ಮಾಡು. ಮಹಾತ್ಮರಾ
ಬ್ರಾಹ್ಮಣರೂ ಬಲವೀರ್ಯಸಂಪನ್ನರಾದ ಸೋದರರೂ ನಿನ್ನನ್ನು ಯಾ
ಸುತ್ತ ನಿಂತಿರುವರು. ಹತಶೇಷರಾದ ರಾಜರೂ, ರಾಜ್ಯದ ನಾಲ್ಕು ವರ್ಣ
ಪ್ರಜಾಪ್ರಮುಖರೂ ಇಲ್ಲಿ ನೆರೆದಿರುವರು. ದ್ರೌಪದಿಯೂ ನಿನ್ನನ್ನು ಬೇ
ತ್ತಿದ್ದಾಳೆ. ನಿನ್ನ ಹಿತೈಷಿಗಳಾದ ನಮ್ಮೆಲ್ಲರ ಪ್ರಾರ್ಥನೆಯನ್ನೂ ನೆರವೇ
ಲೋಕವನ್ನುದ್ಧಾರಮಾಡು."

ಯುಧಿಷ್ಠಿರನು ಶ್ರೀಕೃಷ್ಣನ ಮಾತನ್ನು ಕೇಳಿದೊಡನೆಯೇ, ಯಾ
ವಿಚಾರವನ್ನೂ ಮಾಡದೆ, ಪ್ರಾಯೋಪವೇಶಮಾಡುವೆನೆಂದು ನಿಶ್ಚಯಿ
ಕುಳಿತಿದ್ದ ಸ್ಥಳವನ್ನು ಬಿಟ್ಟು ಕುಟುಂಬಪರಿವಾರಸಮೇತನಾಗಿ ಧೃತರಾಷ್ಟ
ನನ್ನು ಮುಂದುಮಾಡಿಕೊಂಡು ಕುರುನಗರಕ್ಕೆ ಹೊರಟು ಸರ್ವಾಲಂಕ
ಭೂಷಿತವಾಗಿದ್ದ ಅರಮನೆಯನ್ನು ಹೊಕ್ಕನು. ಅಲ್ಲಿ ಶ್ರೀಕೃಷ್ಣನು ಸಕ
ಬಂಧುಮಿತ್ರರ, ಪುರಜನ ರಾಷ್ಟ್ರಜನರ ಸಮಕ್ಷದಲ್ಲಿ ಸರ್ವತೋಭದ್ರಾಸ
ವೆಂಬ ಪೀಠದ ಮೇಲೆ ದ್ರೌಪದೀಸಮೇತ ಯುಧಿಷ್ಠಿರನನ್ನು ಕುಳ್ಳಿರಿಸಿ ಸಕ
ವೈಭವದೊಂದಿಗೆ ಶಾಸ್ತ್ರೋಕ್ತವಾಗಿ ಪೂರ್ಣಪಾಂಚಜನ್ಯದಿಂದ ಆತನಿ
ರಾಜ್ಯಾಭಿಷೇಕ ಮಾಡಿದನು. ಶ್ರೀಕೃಷ್ಣನ ಅನುಜ್ಞೆಯಿಂದ ರಾಜರ್ಷಿ ಧೃ
ರಾಷ್ಟ್ರನೂ ನೆರೆದಿದ್ದ ಪ್ರಜೆಗಳೂ ಯುಧಿಷ್ಠಿರನಿಗೆ ಅಭಿಷೇಕಮಾಡಿದರು.

ಇಂತು, ದುಷ್ಟನಿಗ್ರಹ ಶಿಷ್ಟಪರಿಪಾಲನಾರ್ಥವಾಗಿ ಮಾನುಷದೇಹವನ
ತಾಳಿದ ಶ್ರೀಕೃಷ್ಣನು ಕುಂತೀಪುತ್ರನಿಗೆ ರಾಜ್ಯಾಭಿಷೇಕವನ್ನು ಮಾ
ನಿಷ್ಕಂಟಕ ಧರ್ಮಸಾಮ್ರಾಜ್ಯವನ್ನು ಸಂಸ್ಥಾಪನೆ ಮಾಡಿದನು.

ಅಭಿಷಿಕ್ತನಾದಕೂಡಲೆ ಯುಧಿಷ್ಠಿರನು ಭೀಮಸೇನನಿಗೆ ಯುವರಾ
ಪಟ್ಟವನ್ನು ಕಟ್ಟಿ ಅರ್ಜುನ ನಕುಲ ಸಹದೇವರನ್ನೂ, ನೀತಿಜ್ಞನಾದ ವಿದು
ಸರ್ವಗುಣಸಂಪನ್ನನಾದ ವೃದ್ಧ ಸಂಜಯ, ಧೌಮ್ಯ, ಯುಯುತ್ಸು ಪ್ರಭೃ
ಗಳನ್ನೂ ಅವರವರ ಯೋಗ್ಯತಾನುಗುಣವಾದ ಉದ್ಯೋಗಗಳಲ್ಲಿಟ್ಟು
'ಧೃತರಾಷ್ಟ್ರನು ಸಮಸ್ತರಾಜ್ಯಕ್ಕೂ ನಿಮಗೂ ನನಗೂ ನಾಥನು

ಅವನ ಇಷ್ಟಾನುಸಾರವಾಗಿ ಸರ್ವರೂ ನಡೆಯುವುದು” ಎಂದು ಆಜ್ಞೆ ಮಾಡಿದನು.

ಆ ಬಳಿಕ, ಉದಾರಬುದ್ಧಿಯುಳ್ಳ ಮಹಾರಾಜನು, ಯುದ್ಧದಲ್ಲಿ ಸತ್ತ ಜ್ಞಾತಿಪ್ರಭೃತಿಗಳಿಗೂ ಬಂಧುಮಿತ್ರರಿಲ್ಲದ ರಾಜರಿಗೂ ಶ್ರಾದ್ಧವನ್ನು ಮಾಡಿ, ಸಹಧರ್ಮಿಣಿಯಾದ ದ್ರೌಪದಿಯೊಡನೆ ಕೂಡಿ ದ್ರೋಣ, ಕರ್ಣ, ಧೃಷ್ಟದ್ಯುಮ್ನ, ಅಭಿಮನ್ಯು, ಘಟೋತ್ಕಚ, ವಿರಾಟ, ದ್ರುಪದ ಪ್ರಭೃತಿಗಳನ್ನೂ, ದ್ರೌಪದಿಯ ಪಂಚಪುತ್ರರನ್ನೂ ಉದ್ದೇಶಿಸಿ ಬ್ರಾಹ್ಮಣರಿಗೆ ಧನ ರತ್ನ ಗೋವುಗಳನ್ನು ದಾನಮಾಡಿ, ಯುದ್ಧದಲ್ಲಿ ಸತ್ತ ವೀರರ ಹೆಂಡಿ ಮಕ್ಕಳಿಗೆ ಜೀವನೋಪಾಯಗಳನ್ನು ಕಲ್ಪಿಸಿ ಸಲಹಿದನು. ಈ ರೀತಿಯಲ್ಲಿ ದಯಾಳುವಾದ ಯುಧಿಷ್ಠಿರನು ಶತ್ರುಮಿತ್ರರ ಋಣವನ್ನು ತೀರಿಸಿ ಕೃತಕೃತ್ಯನಾದನು.

ಹದಿನಾಲ್ಕನೆಯ ಅಧ್ಯಾಯ

ಯುಧಿಷ್ಠಿರನಿಗೆ ಧರ್ಮೋಪದೇಶ, ಭೀಷ್ಮನ ಸ್ವರ್ಗಾರೋಹಣ

ಯುಧಿಷ್ಠಿರನು ಬೇಡವೆಂದರೂ ಶ್ರೀಕೃಷ್ಣನು ಅವನಿಗೆ ಪಟ್ಟಾಭಿಷೇಕವನ್ನು ಮಾಡಿದನು. ದುಷ್ಟ ದುರ್ಯೋಧನನ ಸ್ವಾರ್ಥಪರತೆಯಿಂದ, ಕುರುಕುಲಕ್ಕೇ ಅಲ್ಲ, ಲೋಕಕ್ಕೇ ಎಷ್ಟು ಅನಿಷ್ಟವುಂಟಾಯಿತೋ, ಪ್ರಕೃತದಲ್ಲಿ ಯುಧಿಷ್ಠಿರನ ಸ್ವಾರ್ಥವೈರಾಗ್ಯದಿಂದ ಲೋಕಕ್ಕೆ ಅಷ್ಟು ಅನಿಷ್ಟವು ಪ್ರಾಪ್ತವಾಗುವ ಸಂಭವವು ಕಂಡಿತು. ಯುಧಿಷ್ಠಿರನು ಅಹಿಂಸಾಪರನು, ಕ್ಷಮಾಶೀಲನು, ಸತ್ಯವ್ರತನು, ಕರುಣಾಳು; ಆದರೆ ಬಂಧುವಿಯೋಗದ ದೆಸೆಯಿಂದ ಸ್ವಧರ್ಮವಿಮುಖನು. ರಾಜ್ಯಭಾರವನ್ನು ಕೈಕೊಂಡರೆ ತಾನು ಧರ್ಮದ ಜೊತೆಗೆ ಹಿಂಸಾದಿ ಅಧರ್ಮಗಳನ್ನೂ ಮಾಡಬೇಕಾಗುವುದೆಂಬ ಭಯದಿಂದ ರಾಜ್ಯವನ್ನೂ ರಾಜ್ಯಸುಖವನ್ನೂ ತೊರೆದು ಸಂನ್ಯಾಸಿಯಾಗುವ ಆಲೋಚನೆ ಮಾಡುತ್ತಿದ್ದನು. ಜ್ಯೇಷ್ಠನ ದೃಷ್ಟಾಂತವನ್ನು ಅನುಸರಿಸಿ ಅರ್ಜುನಾದಿಗಳೂ ವೈರಾಗ್ಯವನ್ನು ತಾಳುವವರಾಗಿದ್ದಿದ್ದ ಪಕ್ಷದಲ್ಲಿ ಕುರುರಾಜ್ಯವು ಅರಾಜಕವಾಗುತ್ತಿದ್ದಿತು; ಇಲ್ಲವೆ, ಅಪರ ದುರ್ಯೋಧನನ ಕರ ಕವಳವಾಗುತ್ತಿದ್ದಿತು. ಅಹಿಂಸೆ, ಕ್ಷಮಾಶೀಲತೆ, ಸತ್ಯವಚನ—ಇವು ಧರ್ಮಲಕ್ಷಣಗಳಾದರೂ,

ಯುಧಿಷ್ಠಿರನ ಸ್ವಭಾವಸಿದ್ಧವಾದ ಗುಣಗಳಾದರೂ, ತನ್ನ ಬಂಧುಗಳು ಹ
ವಾಗುವುದಕ್ಕೆ ಮುಂಚೆ, ಆ ಧರ್ಮಗಳಿಗೆ ಅಪವಾದಗಳುಂಟೆಂದು ಒಪ್ಪಿಯೇ
ಸಾಮಾನ್ಯಕಾಲದಲ್ಲಿ ನಿತ್ಯಧರ್ಮವನ್ನು ಆಚರಿಸದವರೂ, ನಿತ್ಯಧರ್ಮಕ್ಕೆ
ವಿರುದ್ಧವಾದರೂ ಸಂಕಟಕಾಲದಲ್ಲಿ ಆಪದ್ಧರ್ಮವನ್ನು ಆಚರಿಸದವರೂ
ಇಬ್ಬರೂ ಮೂರ್ಖರೇ ಎಂದು ಹೇಳಿದವನು, ಯುದ್ಧವು ಆಪದ್ಧರ್ಮವಾದರೂ
ಆತ್ಮರಕ್ಷಣೆ, ಸ್ವಜನರಕ್ಷಣೆ, ದೇಶರಕ್ಷಣೆ—ಇವುಗಳಿಗೆ ಉಪಾಯಾಂತರವಿಲ್ಲ
ಅನನ್ಯೋಪಾಯವಾಗಿದ್ದರೂ, ಅದು ಸಂಪೂರ್ಣವಾಗಿ ಅಧರ್ಮವೆಂದೆ
ಭಾವಿಸಿದನು. ಯುಧಿಷ್ಠಿರನು ಕೃಷ್ಣಭಕ್ತ; ಕೃಷ್ಣನು ಕಾಮಕ್ರೋಧವಿ
ದವನು, ಸರ್ವಜ್ಞನು, ಧರ್ಮೈಕಪರನು ಎಂದು ಯುಧಿಷ್ಠಿರನು ಸಂಪೂರ್ಣ
ವಾಗಿ ನಂಬಿದ್ದನು; ಅಂತಹ ಕೃಷ್ಣನು ಪಾಪನಿವಾರಣೆಗಾಗಿಯೂ ಲೋ
ಹಿತಾರ್ಥವಾಗಿಯೂ ನಿರ್ಮಿಸಿದ ಚಾತುರ್ವರ್ಣ್ಯ ವಿಭಾಗದಿಂದ ತನ್ನ ಪಾಲಿ
ಬಂದ ಕ್ಷತ್ರಿಯಧರ್ಮವನ್ನು ಶೋಕ ಮೋಹ ಪರವಶನಾಗಿ ಹೇ
ವೆಂದೆಣಿಸಿ, ಸ್ವಧರ್ಮ ಪರಿತ್ಯಾಗಮಾಡುವುದೂ, ಪರಧರ್ಮ ಸ್ವೀಕಾ
ಮಾಡುವುದೂ, ಆಶ್ರಿತರನ್ನು ರಕ್ಷಿಸದಿರುವುದೂ, ಭೃತ್ಯರನ್ನು ಸಲಹದಿ
ವುದೂ, ಶರಣಾಗತರನ್ನು ತ್ಯಜಿಸುವುದೂ ಅಧರ್ಮಗಳಾದರೂ, ತನ್ನ ಮುಖ
ಕರ್ತವ್ಯಗಳಾದ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಬಿಡುವ ಆಲೋಚ
ಯನ್ನೇ ಮಾಡುತ್ತಿದ್ದನು. ಯುಧಿಷ್ಠಿರನಿಗೆ ಧರ್ಮೋಪದೇಶವನ್ನು ಮಾ
ಅವನ ಶೋಕಮೋಹವನ್ನು ಹೋಗಲಾಡಿಸುವುದಕ್ಕೆ ತಾನು ಶಕ್ತನಾದರ
ರಾಜನೀತಿಜ್ಞನಾದ ಕೃಷ್ಣನು ಆ ಕಾರ್ಯವನ್ನು ಭೀಷ್ಮನಿಂದ ಮಾಡಿಸಿ
ತನ್ನ ಉದ್ದೇಶವು ನೆರವೇರುವುದೆಂದು ಭಾವಿಸಿ ಯುಧಿಷ್ಠಿರನ ಸಂಗಡ ಭೀಷ್ಮ
ಬಳಿಗೆ ಹೊರಟನು.

ಭರತಪಿತಾಮಹನಾದ ಭೀಷ್ಮನು ಓಘವತೀ ತೀರದಲ್ಲಿ ಋಷಿಗಳಿಂ
ಪರಿವೃತನಾಗಿ ಶರಶಯ್ಯೆಯಲ್ಲಿ ಮಲಗಿ, ದಿವಾಕರನು ಉತ್ತರಾಯಣವನ
ಪ್ರವೇಶಮಾಡಿದುದನ್ನರಿತು, ಶುಚಿರ್ಭೂತನಾಗಿ ಏಕಾಗ್ರಚಿತ್ತದಿಂದ ಅಂಜ
ಬದ್ಧನಾಗಿ—"ಕೃಷ್ಣಾ! ಸತ್ಯವು ಹೇಗೆ ವಿಷ್ಣುಮಯವೊ, ಸರ್ವವೂ ಹೇ
ವಿಷ್ಣುಮಯವೊ, ಹಾಗೆ ನನ್ನ ಮನಸ್ಸೂ ವಿಷ್ಣುಮಯವಾಗಲಿ; ನನ್ನ ಪಾ
ಗಳೆಲ್ಲವೂ ನಾಶವಾಗಲಿ. ನಾನು ನಿನ್ನ ಭಕ್ತ, ನಿನ್ನ ಶರಣಾಗತ, ನನಗೆ ಸದ್ಗ
ಯನ್ನು ನೀಡು. ದೇವೋತ್ತಮನೇ! ನನಗೆ ಯಾವುದು ಶ್ರೇಯಸ್ಸೊ
ಅದನ್ನು ದಯೆಮಾಡು" ಎಂದು ಪ್ರಾರ್ಥಿಸುತ್ತ ಕೃಷ್ಣನಲ್ಲಿಯೇ ಮನಸ್ಸಿ
'ಕೃಷ್ಣಾಯನಮಃ' ಎಂದು ಪ್ರಣಾಮಮಾಡಿದನು.

ಅದನ್ನರಿತು ಭಕ್ತವತ್ಸಲನಾದ ಕೃಷ್ಣನು ಯುಧಿಷ್ಠಿರಾದಿಗಳನ್ನೊಡಗೊಂಡು ಓಘವತೀ ತೀರಕ್ಕೆ ಹೊರಟನು. ಸಾಯಂ ಸೂರ್ಯನ ಸಮಪ್ರಭೆಯುಳ್ಳ ಭೀಷ್ಮನನ್ನು ದೂರದಿಂದ ನೋಡಿ ಎಲ್ಲರೂ ರಥದಿಂದಿಳಿದು ಅಲ್ಲಿ ನೆರೆದಿದ್ದ ಮುನಿವೃಂದಕ್ಕೆ ಅಭಿವಂದಿಸಿದ ಬಳಿಕ ಯದುಪುಂಗವನೂ ಕೌರವರೂ ತಪೋವೃದ್ಧನಾದ ಭೀಷ್ಮನ ಸುತ್ತಲೂ ಕುಳಿತರು. ನಂದಿಹೋಗುತ್ತಿರುವ ಅಗ್ನಿಜ್ವಾಲೆಯಂತೆ ಬೆಳಗುತ್ತಿದ್ದ ಭೀಷ್ಮನನ್ನು ನೋಡಿ ದೀನಮನಸ್ಸುಳ್ಳವನಾಗಿ ಕೃಷ್ಣನು—"ಮಹಾಬಾಹುವೇ! ಜ್ಞಾನೇಂದ್ರಿಯಗಳು ಪ್ರಸನ್ನವಾಗಿವೆಯೋ? ಬುದ್ಧಿಯು ವ್ಯಾಕುಲವಿಲ್ಲದೆ ಇದೆಯೋ? ನೋವು ವಾಸಿಯೋ? ಮನಃಕ್ಲೇಶವನ್ನು ಅನುಭವಿಸುವುದಕ್ಕಿಂತ ಶರೀರಕ್ಲೇಶವನ್ನು ಅನುಭವಿಸುವುದು ಕಷ್ಟ. ಸಣ್ಣದಾದ ಸಿಗುರು ಹೊಕ್ಕರೂ ಮೈಯ ನೋವನ್ನು ತಾಳಿಕೊಳ್ಳುವುದು ಶ್ರಮ; ಇನ್ನು, ನೂರಾರು ಬಾಣಗಳು ಮೈಯಲ್ಲಿ ನಾಟಿರುವಾಗ ಯಾತನೆಯನ್ನು ಅನುಭವಿಸುವುದು ಶ್ರಮವೆಂದು ಹೇಳಬೇಕೆ?" ಎಂದು ಕುಶಲಪ್ರಶ್ನೆ ಮಾಡಿ—"ಭೀಷ್ಮ! ನೀನು ಪ್ರಾಜ್ಞ, ಧರ್ಮಜ್ಞ, ಧರ್ಮೈಕತತ್ಪರನು, ಸತ್ಯವಂತನು, ಶೂರನು; ಮೃತ್ಯುವು ಕೂಡ ನಿನ್ನ ಆಜ್ಞೆಯಲ್ಲಿರುವುದು. ನೀನು ಭೂಲೋಕವನ್ನು ಬಿಟ್ಟ ತರುವಾಯ ನಿನ್ನ ಜ್ಞಾನವೆಲ್ಲವೂ ನಿನ್ನ ಸಂಗಡಲೇ ಹೋಗಿಬಿಡುವುದು. ನಿನ್ನಿಂದ ಧರ್ಮವೃತ್ತಾಂತವನ್ನು ಕೇಳಬೇಕೆಂದೇ ಇವರೆಲ್ಲರೂ ಬಂದಿರುವರು. ಯುಧಿಷ್ಠಿರನು ಬಹುಶ್ರುತನಾದರೂ ಜ್ಞಾತಿವಿಯೋಗದಿಂದ ಕಳವಳಪಡುತ್ತಿದ್ದಾನೆ. ಧರ್ಮಾರ್ಥಯುಕ್ತವಾದ ನಿನ್ನ ಸತ್ಯವಾಕ್ಕಿನಿಂದ ಅವನ ಶೋಕವನ್ನು ಶಮನಮಾಡು" ಎಂದನು.

ಆಗ ಭೀಷ್ಮನು ಕೃತಾಂಜಲಿಯಾಗಿ, "ಲೋಕನಾಥನೇ! ನಿನ್ನ ಮಾತನ್ನು ಕೇಳಿ ನಾನು ಹರ್ಷಚಿತ್ತನಾದೆನು. ವಾಕ್ಪತಿಯೇ! ಹೇಳತಕ್ಕುದೆಲ್ಲವೂ ನಿನ್ನ ವಾಕ್ಕಿನಲ್ಲಿಯೇ ಅಡಗಿರಲಾಗಿ ನಿನ್ನ ಸನ್ನಿಧಿಯಲ್ಲಿ ನಾನು ಹೇಳತಕ್ಕುದೇನಿದೆ? ಕೃಷ್ಣಾ! ಶರತಾಪದಿಂದ ನನ್ನ ಶರೀರವು ದುರ್ಬಲವಾಗಿದೆ; ಮಾತಾಡುವುದಕ್ಕೆ ಶಕ್ತಿ ಸಾಲದು; ಪ್ರಾಣವಾಯುಗಳು ಹೊರಡಲು ತ್ವರೆಮಾಡುತ್ತಿವೆ; ಬುದ್ಧಿ ಭ್ರಮಿಸುತ್ತಿದೆ. ಈ ಅವಸ್ಥೆಯಲ್ಲಿ ನಾನು ಉಪದೇಶಮಾಡುವುದು ಹೇಗೆ? ಕೃಷ್ಣ! ನನಗೆ ದಿಕ್ಕುಗಳೂ ಭೂಮ್ಯಾಕಾಶಗಳೂ—ಒಂದೂ ಕಾಣುವುದಿಲ್ಲ; ಕೇವಲ ನಿನ್ನ ಪ್ರಭಾವದಿಂದ ಪ್ರಾಣವನ್ನಿಟ್ಟುಕೊಂಡಿದ್ದೇನೆ. ನೀನು ಸಕಲವನ್ನೂ ಬಲ್ಲವನು; ಧರ್ಮಕರ್ಮಗಳೆಲ್ಲಕ್ಕೂ ನೀನೇ ಮೂಲ. ನೀನೇ ಯುಧಿಷ್ಠಿರನಿಗೆ ಉಪದೇಶವನ್ನು ಮಾಡು. ನೀನಿರುವಲ್ಲಿ ನಾನು ಉಪದೇಶಮಾಡುವುದೆಂದರೇನು? ಗುರುವಿನ ಮುಂದೆ ಶಿಷ್ಯನೆ?" ಎಂದನು.

ಕೃಷ್ಣನು—"ಕೌರವಧುರಂಧರನೇ! ನಿನ್ನ ಮಾತು ನಿನಗೊಪ್ಪುವುದು ನೀನು ಮಹಾತ್ಮನು, ಶಾಸ್ತ್ರಾರ್ಥವನ್ನು ಬಲ್ಲವನು, ಕ್ಷಮಾಶೀಲನು; ನನ್ನ ವರವನ್ನು ಹಿಡಿ, ನಿನ್ನ ನೋವೂ ಬಳಲಿಕೆಯೂ ಹೋಗುವುವು; ನಿನ್ನ ಬುದ್ಧಿಯು ತಿಳಿಯಾಗುವುದು; ನೀನು ಬಲ್ಲ ತತ್ತ್ವಗಳೆಲ್ಲವೂ ಸ್ಫೂರ್ತಿಗ ಬರುವುವು; ಸಮಸ್ತ ಭೂತಭವಿಷ್ಯತ್ತೂ ನಿನಗೆ ಕರತಲಾಮಲಕವಾಗುವುದು ಎಂದನು.

ತರುವಾಯ ಎಲ್ಲರೂ ಭೀಷ್ಮನಿಗೆ ನಮಸ್ಕಾರಮಾಡಿ ತಂತಮ್ಮ ಮನೆಗಳಿಗೆ ಹೊರಟುಹೋದರು.

ಮರುದಿವಸ ಎಲ್ಲರೂ ಬಂದು ಭೀಷ್ಮನನ್ನು ಬಳಸಿ ಕುಳಿತರು. ಕೃಷ್ಣನು "ರಾಜಸತ್ತಮನೇ! ರಾತ್ರಿ ಸುಖವಾಗಿ ನಿದ್ದೆಹೋದೆಯಾ? ಬುದ್ಧಿಯು ತಿಳಿಯಾಗಿದೆಯೆ? ಮೈಯು ನೋವಿಲ್ಲವಲ್ಲವೆ? ಮನಸ್ಸಿನಲ್ಲಿ ವ್ಯಾಕುಲವಿಲ್ಲ ವಲ್ಲವೆ?" ಇಂತೆಂದು ಕುಶಲಪ್ರಶ್ನೆಮಾಡಲಾಗಿ ಭೀಷ್ಮನು—"ಕೃಷ್ಣ ನಿನ್ನ ಅನುಗ್ರಹದಿಂದ ನನ್ನ ದಾಹ ಮೋಹ ಶ್ರಮಗಳೆಲ್ಲವೂ ಹೋದುವು ನನಗೆ ಯಾವ ವಿಧವಾದ ಯಾತನೆಯೂ ಇಲ್ಲ, ನೆಮ್ಮದಿಯಾಗಿದ್ದೇನೆ. ನಿನ್ನ ಪ್ರಸಾದಬಲದಿಂದ ಶಿಷ್ಟಪ್ರೋಕ್ತವಾದ ದೇಶ ಜಾತಿ ಕುಲಶ್ರೇಣೀ ಧರ್ಮ ಗಳೆಲ್ಲವೂ ನನ್ನ ಹೃದಯದಲ್ಲಿ ಬಂದು ನಿಂತಿವೆ; ಬುದ್ಧಿ ನಿರ್ಮಲವಾಗಿರುವುದು ನಿನ್ನ ಧ್ಯಾನಮಾತ್ರದಿಂದ ನಾನು ಯೌವನಸಂಪನ್ನನಂತೆ ದೃಢಕಾಯ ನಾಗಿರುವೆನು; ಈಗ ಲೋಕಹಿತಾರ್ಥವಾಗಿ ಯುಧಿಷ್ಠಿರನಿಗೆ ಸಮಸ್ತ ಧರ್ಮಗಳನ್ನೂ ಉಪದೇಶಮಾಡಬಲ್ಲೆನು. ಆದರೂ ಯುಧಿಷ್ಠಿರನಿಗೆ ನೀನೇ ಏಕೆ ಉಪದೇಶವನ್ನು ಮಾಡೆ?" ಎಂದು ಕೇಳಿದನು.

ಆದಕ್ಕೆ ಕೃಷ್ಣನು—"ಕೌರವನೇ! ಸಮಸ್ತ ಹಿತಾಹಿತಕ್ಕೂ ನಾನೇ ಮೂಲವೆಂಬುದನ್ನು ನೀನು ಕಾಣೆಯಾ? ನಾನು ಪೂರ್ಣ ಯಶಸ್ಸುಳ್ಳವನೆಂದ ಯಾರೂ ವಿಸ್ಮಯಬಡರು. ನಿನ್ನ ಯಶಸ್ಸು ಲೋಕದಲ್ಲಿ ಪಸರಿಸಿ ಶಾಶ್ವ ವಾಗಿ ನೆಲಸಬೇಕೆಂಬುದೇ ನನ್ನ ಸಂಕಲ್ಪ. ನಿನ್ನ ಉಪದೇಶವು ವೇದವಾಕ್ಯ ನಂತೆ ಸರ್ವಕಾಲಕ್ಕೂ ಪ್ರಮಾಣವಾಗಿರುವುದು. ಅಲ್ಲದೆ, ನೀನು ವಯೋ ವೃದ್ಧನು; ನಿನ್ನ ನಡೆನುಡಿಗಳು ಶ್ರುತಿಗನುಸಾರವಾಗಿರುವುವು; ಜನ್ಮಪ್ರಭೃ ನೀನು ಪಾಪಲೇಶವನ್ನೂ ಮಾಡಿದವನಲ್ಲ. ಧರ್ಮೋಪದೇಶವನ್ನು ಬಯಸ ವವರಿಗೆ ಉಪದೇಶಮಾಡುವುದು ಜ್ಞಾನಿಗಳ ಕರ್ತವ್ಯ. ನೀನು ಸಕಲ ಧರ್ಮ ವೇತ್ತೃವೆಂದು ರಾಜರೆಲ್ಲರೂ ಹೊಗಳುವರು. ತಂದೆಯೋಪಾದಿಯಲ್ಲಿ ನೀನು ಈ ಭೂಪಾಲನಿಗೆ ನೀತಿಯನ್ನು ಬೋಧಿಸು" ಎಂದನು.

ಆ ಮಾತನ್ನು ಕೇಳಿ ಭೀಷ್ಮನು ಪ್ರಫುಲ್ಲಚಿತ್ತನಾಗಿ ಉಪದೇಶಮಾಡಲೊಪ್ಪಿ, "ಧರ್ಮಾತ್ಮನೂ ಸದಾಚಾರಸಂಪನ್ನನೂ ಆದ ಯುಧಿಷ್ಠಿರನು ಧರ್ಮಕರ್ಮಗಳನ್ನು ಕುರಿತು ಪ್ರಶ್ನೆಮಾಡಲಿ, ನಾನು ಧರ್ಮಗಳನ್ನು ಹೇಳುವೆನು" ಎಂದನು.

ಆ ಭೂಪಾಲನು ಪೂಜ್ಯರಾದ ಗುರುಹಿರಿಯರನ್ನೂ ಜ್ಞಾತಿಗಳನ್ನೂ ಮಿತ್ರರನ್ನೂ ಕೊಂದು ತಾನು ಅಪರಿಮಿತ ನರಹತ್ಯಮಾಡಿದೆನೆಂದು ನಿನ್ನಿದಿರಿಗೆ ಬರಲು ನಾಚುತ್ತಾನೆ ಎಂದು ಕೃಷ್ಣನು ಹೇಳಿದನು.

ಆ ಮಾತಿಗೆ ಭೀಷ್ಮನು—"ಅಧ್ಯಯನ ದಾನ ತಪಸ್ಸುಗಳನ್ನು ಮಾಡುವುದು ಹೇಗೆ ಬ್ರಾಹ್ಮಣರ ಧರ್ಮವೋ ಹಾಗೆ ಯುದ್ಧಮಾಡಿ ರಣರಂಗದಲ್ಲಿ ದೇಹವನ್ನು ತ್ಯಜಿಸುವುದು ಕ್ಷತ್ರಿಯರ ಧರ್ಮ. ಅನ್ಯಾಯವಾದ ಯುದ್ಧದಲ್ಲಿ ಪ್ರವರ್ತಿಸುವವರು ತಂದೆಯಾಗಲಿ, ತಾತನಾಗಲಿ, ಗುರುವಾಗಲಿ, ಬಂಧುವಾಗಲಿ—ಅವರನ್ನು ಕ್ಷತ್ರಿಯರಾದವರು ಕೊಲ್ಲುವುದು ಅಧರ್ಮವಲ್ಲ; ಅದು ಅವರ ವಿಹಿತಕರ್ಮ. ಯಮನಿಯಮಗಳನ್ನು ತಿರಸ್ಕರಿಸಿ ಸನಾತನಧರ್ಮಸೇತುವನ್ನುಲ್ಲಂಘಿಸುವ ಪಾಪಿಷ್ಠರು ಯಾರೇ ಆಗಲಿ ಅವರನ್ನು ಯುದ್ಧದಲ್ಲಿ ನಿಗ್ರಹಿಸುವ ಕ್ಷತ್ರಿಯನು ಧರ್ಮಜ್ಞನೆನಿಸಿಕೊಳ್ಳುವನು. ಅವನಿಗೆ ಇಹದಲ್ಲಿ ಕೀರ್ತಿಯೂ ಪರದಲ್ಲಿ ಸ್ವರ್ಗವೂ ಲಭಿಸುವುದು" ಎಂದನು.

ಭೀಷ್ಮನು ಹಾಗೆನ್ನುತ್ತಲೆ ಯುಧಿಷ್ಠಿರನು ವಿನಯಭಾವದಿಂದ ಭೀಷ್ಮನ ಮುಂದೆ ಹೋಗಿ ಅವನ ಪಾದಗಳೆರಡನ್ನೂ ಹಿಡಿದು ನಮಸ್ಕಾರಮಾಡಿ ಕೈಜೋಡಿಸಿಕೊಂಡು ನಿಂತನು. ವೃದ್ಧಪಿತಾಮಹನು ಪ್ರೀತಿಯಿಂದ ಯುಧಿಷ್ಠಿರನ ಮಂಡೆಯನ್ನಾಘ್ರಾಣಿಸಿ, "ಕುಳಿತುಕೊ, ಪ್ರಶ್ನೆಮಾಡು, ಹೆದರಬೇಡ" ಎಂದನು.

ಯುಧಿಷ್ಠಿರನು ಕೃಷ್ಣನಿಗೆ ಪ್ರಣಾಮಮಾಡಿ ಪಿತಾಮಹನನ್ನು ಅಭಿವಂದಿಸಿ ಅಲ್ಲಿ ಕುಳಿತಿದ್ದ ಗುರುಜನರ ಅನುಜ್ಞೆಯನ್ನು ಪಡೆದು ತಾತನಿಗೆ ಇಂತೆಂದು ಪ್ರಶ್ನೆಗಳನ್ನು ಹಾಕತೊಡಗಿದನು :—

"ಧರ್ಮವೇತ್ತೃಗಳು ರಾಜಧರ್ಮವು ಪರಮಧರ್ಮವೆಂದು ಹೇಳುವರು. ಈ ಧರ್ಮವನ್ನು ನಿರ್ವಹಿಸುವುದು ಸುಲಭವಲ್ಲವೆಂದೆಣಿಸುತ್ತೇನೆ. ಸಮಸ್ತ ಜೀವಲೋಕಕ್ಕೆ ರಾಜಧರ್ಮವೇ ಆಶ್ರಯವಾಗಿರುವುದು. ಧರ್ಮಾರ್ಥಕಾಮಗಳೆಂಬ ತ್ರಿವರ್ಗಕ್ಕೂ ಅದೇ ಆಧಾರ; ಮೋಕ್ಷಕ್ಕೂ ಅದೇ ಸಾಧನ; ಲೋಕನಿಯಂತ್ರಣಕ್ಕೂ ಅದೇ ಉಪಾಯ. ಆದುದರಿಂದಲೇ ರಾಜರ್ಷಿಗಳು ಆ ಧರ್ಮವನ್ನು ಆಚರಿಸುವರು. ರಾಜನು ಆ ಧರ್ಮವನ್ನು ಅರಿಯದಿದ್ದರೆ

ಲೋಕವು ಕೆಟ್ಟು ಅವ್ಯವಸ್ಥೆಗೆ ಬರುವುದು ; ಸಕಲವಾದ ಅಮಂಗಳಗಳೂ ಅ ಧರ್ಮದಿಂದ ತೊಲಗುವುವು. ನೀನು ಜ್ಞಾನಿಗಳಲ್ಲಿ ಶ್ರೇಷ್ಠನೆಂದು ವಾಸು ದೇವನು ಹೇಳುತ್ತಾನೆ. ಮೊದಲು ನನಗೆ ರಾಜಧರ್ಮವನ್ನು ಹೇಳು" ಎಂದು ಯುಧಿಷ್ಠಿರನು ಪಿತಾಮಹನನ್ನು ಬೇಡಿಕೊಂಡನು.

ಭೀಷ್ಮನು, "ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ ಬ್ರಾಹ್ಮಣೇಭ್ಯೋ ನಮಃ" ಎಂದು ವಂದನಾಪೂರ್ವಕವಾಗಿ ಧರ್ಮೋಪದೇಶ ವನ್ನು ಉಪಕ್ರಮಿಸಿದನು :—

"ಯುಧಿಷ್ಠಿರನೇ! ಪ್ರಜಾರಂಜನವನ್ನು ಬಯಸುವ ರಾಜರು ದೇವದ್ವಿಜ ರನ್ನು ವಿಧ್ಯುಕ್ತವಾಗಿ ಪೂಜಿಸಬೇಕು. ಅದರಿಂದ ಅವರು ಧರ್ಮದ ಋಣವನ್ನು ತೀರಿಸುವರಲ್ಲದೆ ಪ್ರಜೆಗಳ ಭಕ್ತಿವಿಶ್ವಾಸಕ್ಕೂ ಪಾತ್ರರಾಗುವರು. ರಾಜರು ತಮ್ಮ ಇಷ್ಟಾರ್ಥಗಳನ್ನು ಕೇವಲ ದೈವದಿಂದಲೇ ಪಡೆಯರು. ಇಷ್ಟಸಿದ್ಧಿಗೆ ಪುರುಷಪ್ರಯತ್ನವೂ ಅತ್ಯಾವಶ್ಯಕವು. ಗುಣವಂತನೂ ಶೀಲವಂತನೂ ಜಿತೇಂದ್ರಿಯನೂ ಆದ ರಾಜನು ಸರ್ವದಾ ಶ್ರೀಮಂತನಾಗಿರುವನು. ಸಹ ಧರ್ಮಚಾರಿಣಿಯಾದ ಗರ್ಭಿಣಿಯು ತನಗೆ ಪ್ರಿಯವಾದುದನ್ನು ವರ್ಜಮಾಡಿ ಗರ್ಭದಲ್ಲಿರುವ ಮಗುವಿನ ಹಿತವನ್ನು ಸಾಧಿಸುವಂತೆ ಧರ್ಮಾನುವರ್ತಿಯಾದ ರಾಜನು ಆತ್ಮಸುಖವನ್ನು ಪರಿತ್ಯಜಿಸಿ ಪ್ರಜೆಗಳ ಹಿತವನ್ನು ಸಾಧಿಸುವನು. ದುರ್ಗಗಳಲ್ಲಿ ನರದುರ್ಗವೇ ಶ್ರೇಷ್ಠವಾದುದು. ಆದುದರಿಂದ ಪ್ರಾಜ್ಞರಾದ ರಾಜರು ನಾಲ್ಕು ವರ್ಣದವರ ಪ್ರೀತಿವಿಶ್ವಾಸವನ್ನು ಸಂಪಾದಿಸಬೇಕು. ಪಾಂಡವನೇ! ಸಂಕಟಕಾಲದಲ್ಲಿ ಧೈರ್ಯವನ್ನು ಬಿಡದಿರು. ಧೀರನಾದ ರಾಜನ ಆಜ್ಞೆಯನ್ನು ಉಲ್ಲಂಘಿಸಲು ಎಲ್ಲರೂ ಹೆದರುವರು. ನೀನು ನಿತ್ಯವೂ ಉದ್ಯೋಗರತನಾಗಿರು ; ಉದ್ಯೋಗವು ಪುರುಷಲಕ್ಷಣವು. ಉದ್ಯಮಶೀಲ ನಲ್ಲದ ರಾಜನು ಅಪ್ರಯೋಜಕನೆಂದೆನಿಸಿಕೊಳ್ಳುವನು.

"ಅಧ್ಯಯನವಿಮುಖರಾದ ಬ್ರಾಹ್ಮಣರೂ ಯುದ್ಧವಿಮುಖರಾದ ಕ್ಷತ್ರಿ ಯರೂ ಲೋಕದಲ್ಲಿ ಬಾಳರು. ಪ್ರಜಾಪಾಲನೆ, ಸತ್ಯರಕ್ಷಣೆ, ವ್ಯವಹಾರ ದಲ್ಲಿ ಋಜುತ್ವ, ಪರವಿತ್ತವನ್ನು ಆಶಿಸದಿರುವುದು, ಕೊಡತಕ್ಕುದನ್ನು ಸಕಾಲದಲ್ಲಿ ಕೊಡುವುದು, ವಿಕ್ರಾಂತನಾಗಿರುವುದು—ಇವು ರಾಜನ ಅವಶ್ಯ ಧರ್ಮಗಳು. ರಾಜರು ದ್ಯೂತ ಮದ್ಯಪಾನಾದಿ ದುರಾಚಾರಗಳಲ್ಲಿ ಆಸಕ್ತ ರಾಗಿರಬಾರದು. ಯುಧಿಷ್ಠಿರನೇ! ಸಜ್ಜನರ ವರ್ತನವನ್ನು ಆಚರಿಸು, ವರ್ಣಾ ಶ್ರಮಧರ್ಮಗಳನ್ನು ರಕ್ಷಿಸು, ಸತ್ಯಭಾಷಿಯಾಗಿರು, ದಂಡಿಸುವಲ್ಲಿಯಾಗಲಿ ಕ್ಷಮಿಸುವಲ್ಲಿಯಾಗಲಿ ಪಾತ್ರಾಪಾತ್ರವನ್ನು ವಿವೇಚನೆ ಮಾಡದಿರಬೇಡ.

ತಿಳಿವಳಿಕೆಯಿಲ್ಲದೆ ಪ್ರಹಾರಮಾಡಬೇಡ; ಹಗೆಗಳನ್ನು ನಿಗ್ರಹಿಸಿ ಶೋಕಪಡಬೇಡ; ನಿಷ್ಕಾರಣವಾಗಿ ಕ್ರೋಧಮಾಡಬೇಡ; ಅಪಕಾರಿಗಳಿಗೆ ಮೃದುವಾಗಿರಬೇಡ. ಪಣ್ಯದ್ರವ್ಯಗಳನ್ನು ಕೊಂಡು ಮಾರುವ ಸಲುವಾಗಿ ಊರೂರುಗಳಲ್ಲಿ ಅಲೆಯುವ ವರ್ತಕರಿಗೆ ಹೆಚ್ಚು ತೆರಿಗೆಗಳನ್ನು ಹಾಕಿ ಪೀಡಿಸದಿರು. ಬೇಸಾಯ ಮಾಡುವವರು ಪೀಡಿತರಾಗಿ ನಿನ್ನ ರಾಜ್ಯವನ್ನು ಬಿಟ್ಟು ಹೋಗದಂತೆ ನೋಡಿಕೊ. ರಾಜರ ಭಾರವನ್ನು ಹೊತ್ತಿರುವವರೇ ಪ್ರಜೆಗಳ ಭಾರವನ್ನು ಕೂಡ ಹೊತ್ತಿರುವರು. ಕಾಮಾರ್ಥಗಳಿಗೆ ಸಂಬಂಧಪಟ್ಟ ಉದ್ಯೋಗಗಳಲ್ಲಿ ಲೋಭಿಗಳನ್ನೂ ಮೂರ್ಖರನ್ನೂ ಇಡಬೇಡ. ಅಪ್ರಯೋಜಕರೂ ಕಾಮಕ್ರೋಧ ಪರತಂತ್ರರೂ ಆದವರನ್ನು ಅಧಿಕಾರದಲ್ಲಿಟ್ಟರೆ ಪ್ರಜೆಗಳು ಕ್ಲೇಶಪಡುವರು.

"ರಾಜರು ಯುದ್ಧವಿಲ್ಲದೆಯೇ ವಿಜಯವನ್ನು ಪಡೆಯಬೇಕು. ಯುದ್ಧದಿಂದ ಗಳಿಸಿದ ವಿಜಯವು ನಿಂದ್ಯವು. ಮೂಲವು ದೃಢವಾಗಿಲ್ಲದಿರುವಲ್ಲಿ ಹೊಸರಾಜ್ಯವನ್ನು ಜಯಿಸಹೋಗುವ ರಾಜನಿಗೆ ಏಳಿಗೆಯಾಗದು. ಯಾವ ರಾಜನ ರಾಷ್ಟ್ರವು ವಿಶಾಲವಾಗಿಯೂ ಧನಧಾನ್ಯ ಸಮೃದ್ಧವಾಗಿಯೂ, ಸಚಿವರೂ ಯೋಧರೂ ಸಂತುಷ್ಟರಾಗಿಯೂ ಇರುವರೋ ಆ ರಾಜನು ದೃಢಮೂಲನೆನ್ನಬಹುದು. ಭೂಪಾಲರು ಅಧರ್ಮದಿಂದ ರಾಜ್ಯವನ್ನು ಗೆಲ್ಲಲು ಆಶಿಸಬಾರದು. ಅಧರ್ಮದಿಂದ ಸಂಪಾದಿಸಿದ ರಾಜ್ಯವು ಸ್ಥಿರವಲ್ಲ; ಅದು ರಾಜನಿಗೂ ರಾಜ್ಯಕ್ಕೂ ಕೂಡ ಅನಿಷ್ಟಕಾರಿ. ಧರ್ಮಲಬ್ಧವಿಜಯಕ್ಕೆ ಅಧಿಕವಾದ ಲಾಭವು ಯಾವುದೂ ಇಲ್ಲ.

"ಪ್ರಜಾರಕ್ಷಣೆಯೇ ರಾಜಧರ್ಮದ ಸಾರ. ಇನ್ನು ಯಾವ ಧರ್ಮವೂ ಅವರಿಗೆ ಅಷ್ಟು ಪ್ರಶಸ್ತವಲ್ಲ. ಕ್ಷತ್ರಿಯರಾಜರು ಇರುವುದೇ ಲೋಕರಕ್ಷಣೆಗೆ. ದಂಡವಿಧಾನವಿಲ್ಲದೆ ಲೋಕರಕ್ಷಣೆ ಸಾಧ್ಯವಲ್ಲ. ಆದಿಯಲ್ಲಿ ರಾಜ್ಯವೂ ಇರಲಿಲ್ಲ, ರಾಜನೂ ಇರಲಿಲ್ಲ; ದಂಡವಾಗಲಿ, ದಂಡನೀತಿಯಾಗಲಿ ದಂಡಾಧಿಕಾರಿಯಾಗಲಿ ಇರಲಿಲ್ಲ; ಜನರು ಒಬ್ಬರನ್ನೊಬ್ಬರು ಬಾಧಿಸದೆ ಒಬ್ಬರ ಯೋಗಕ್ಷೇಮವನ್ನೊಬ್ಬರು ವಹಿಸುತ್ತಿದ್ದರು. ಕಾಲಕ್ರಮದಲ್ಲಿ ಜನರು ಕಾಮಕ್ರೋಧ ಪರತಂತ್ರರಾಗಿ ನ್ಯಾಯಾನ್ಯಾಯವನ್ನು ವಿವೇಚನೆಮಾಡದೆ ಸ್ವೇಚ್ಛೆಯಿಂದ ನಡೆಯಲಾರಂಭಿಸಿ ಒಬ್ಬರನ್ನೊಬ್ಬರು ಬಾಧಿಸತೊಡಗಿದರು; ಧರ್ಮವು ನಾಶವಾಯಿತು. ಆಗ ಲೋಕರಕ್ಷಣಾರ್ಥವಾಗಿ ರಾಜನು ನಿರ್ಮಾಣವಾದನು; ಸಂಗಡಲೇ ರಾಜ್ಯ ರಾಜನೀತಿ ದಂಡನೀತಿ—ಇವೂ ನಿರ್ಮಾಣವಾದುವು. ನೀನು ದುಷ್ಟರನ್ನು ಬಿಡದೆ ಯಥಾನ್ಯಾಯವಾಗಿ ದಂಡಿಸು. ನೀನು ಕಾಮ

ಕ್ರೋಧಗಳ ವಶನಾಗದೆ ಧರ್ಮಾರ್ಥಗಳನ್ನು ಸಂಪಾದಿಸು. ಯಾವ ರಾಜನು ಕಾಮಕ್ರೋಧಗಳ ಪರತಂತ್ರನಾಗಿ ಅರ್ಥವನ್ನು ಅನ್ವೇಷಣ ಮಾಡುವನೋ ಅವನು ಮೂರ್ಖನು; ಅವನು ಧರ್ಮಭ್ರಷ್ಟನೂ, ಕಡೆಗೆ ಅರ್ಥಹೀನನೂ ಆಗುವನು. ಆದುದರಿಂದ ಕ್ರೌರ್ಯವನ್ನು ಬಿಟ್ಟು ಅರ್ಥವನ್ನು ಗಳಿಸು, ಜಿತೇಂದ್ರಿಯನಾಗಿ ಕಾಮವನ್ನಾಚರಿಸು."

ಪಿತಾಮಹನು ಹೇಳಿದುದೆಲ್ಲವನ್ನೂ ಕೇಳಿ ಕೊನೆಗೆ ಯುಧಿಷ್ಠಿರನು "ನಾನು ರಾಜ್ಯಸುಖವನ್ನೂ ಬಯಸುವನಲ್ಲ, ರಾಜ್ಯವನ್ನೂ ಇಚ್ಛಿಸುವನಲ್ಲ. ಊಟವೇ ಬೇಡದವನಿಗೆ ಅಡಿಗೆ ಏಕೆ? ಧರ್ಮನಿಮಿತ್ತವಾಗಿ ರಾಜ್ಯವನ್ನು ಅಪೇಕ್ಷಿಸತಕ್ಕುದು. ಅದರಲ್ಲಿ ಅದೇ ಇಲ್ಲ. ರಾಜದಂಡವನ್ನು ಬಿಸುಟು ಪವಿತ್ರವಾದ ಅರಣ್ಯಕ್ಕೆ ಹೋಗಿ ಫಲಮೂಲವನ್ನು ತಿಂದುಕೊಂಡು ಜಿತೇಂದ್ರಿಯನಾಗಿ ಮುನಿವೃತ್ತಿಯನ್ನು ಅವಲಂಬಿಸಿ ಧರ್ಮಮಾರ್ಗದಲ್ಲಿರುವೆನು" ಎಂದನು.

ಆ ಮಾತನ್ನು ಕೇಳುತ್ತಲೆ ಭೀಷ್ಮನು—"ಯುಧಿಷ್ಠಿರನೇ! ನಾನು ನಿನ್ನ ಬುದ್ಧಿಯ ನೆಲೆಯನ್ನು ಬಲ್ಲೆನು. ನಿನ್ನ ಸ್ವಭಾವವು ಅತಿ ಮೃದುವಾದುದು. ಆದರೆ ಯಾವಾಗಲೂ ಮೃದುತ್ವದಿಂದಲೇ ರಾಜ್ಯವಾಳುವುದು ಸಾಧ್ಯವಲ್ಲ. ನೀನು ಅತಿ ಮೃದುಮನಸ್ಸುಳ್ಳವನು, ಅತ್ಯಾರ್ಯನು, ಅತಿಧಾರ್ಮಿಕನು; ಆದರೆ ದುರ್ಬಲನು. ಆದುದರಿಂದಲೇ ಯಾರೂ ನಿನ್ನನ್ನು ಸಡ್ಡೆಮಾಡರು. ಶೌರ್ಯ, ಬಲ, ಸತ್ಯ—ಈ ಗುಣಗಳು ನಿನಗಿರಲೆಂದು ನಿಮ್ಮ ತಂದೆ ಪ್ರಾರ್ಥಿಸುತ್ತಿದ್ದನು; ಮಹತ್ವ, ಬಲ, ಔದಾರ್ಯ—ಈ ಗುಣಗಳಿರಲೆಂದು ನಿಮ್ಮ ತಾಯಿಯು ಪ್ರಾರ್ಥಿಸುತ್ತಿದ್ದಾಳೆ. ದೇವತೆಗಳೂ ಪಿತೃಗಳೂ ತಮ್ಮ ಹವಿರ್ಭಾಗಕ್ಕೆ ಕಾದಿರುವರು. ದಾನ, ಅಧ್ಯಯನ, ಯಜ್ಞ, ಪ್ರಜಾಪರಿಪಾಲನೆ—ಈ ಕರ್ಮಗಳು ಧರ್ಮವಾಗಲಿ, ಅಧರ್ಮವಾಗಲಿ, ಅವನ್ನು ಮಾಡುವುದಕ್ಕೇ ನೀನು ಹುಟ್ಟಿರುವುದು. ಅವುಗಳಿಂದಲೇ ನಿನ್ನ ನರಜನ್ಮವು ಈಡೇರುವುದು. ಗೃಹಿಯಾಗಲಿ ಬ್ರಹ್ಮಚಾರಿಯಾಗಲಿ ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ, ಯಾವನೇ ಆಗಲಿ ಸ್ವಧರ್ಮಮಾರ್ಗದಲ್ಲಿ ನಡೆಯುತ್ತಿರುವಲ್ಲಿ ಎಡವದೆ ಇರನು. ಗುಣಾಂಶವು ಅಧಿಕವಾಗಿಯೂ ದೋಷವು ಅಲ್ಪವಾಗಿಯೂ ಇರುವ ಉದಾರಕರ್ಮವನ್ನು ಬಿಡುವುದಕ್ಕಿಂತ ಮಾಡುವುದೇ ಶ್ರೇಯಸ್ಕರವು; ಅದು ಪಾಪವಲ್ಲ. ದುರ್ಜನರನ್ನು ಶಿಕ್ಷಿಸು, ಸಜ್ಜನರನ್ನು ರಕ್ಷಿಸು; ಸಾಧುಗಳಿಗೂ ಸುಹೃದಯರಿಗೂ ನೀನು ನೆಳಲಾಗಿರು" ಎಂದನು.

ಅಹಿಂಸೆ, ಸತ್ಯ, ಅಕ್ರೋಧ, ಕ್ಷಮೆ—ಇವೇ ಧರ್ಮಲಕ್ಷಣಗಳು

ಲೋಕವ್ಯವಹಾರದಲ್ಲಿ ದೇಶ ಕಾಲ ಭೇದದಿಂದ ಹಿಂಸೆ, ಅನೃತ, ಕ್ರೋಧ— ಇವನ್ನೇ ರಾಜರು ಧರ್ಮಗಳನ್ನಾಗಿ ಅಂಗೀಕರಿಸುವುದರಿಂದ, ತಾನು ಲೋಕಕ್ಕೆ ಹೊರಚಾಗಿರಬೇಕೆಂದು ಯುಧಿಷ್ಠಿರನು ಅರಣ್ಯವಾಸವನ್ನು ಬಯಸುತ್ತಿದ್ದನು. ಆ ಭ್ರಮೆಯನ್ನು ಹೋಗಲಾಡಿಸುವ ಸಲುವಾಗಿ ಭೀಷ್ಮನು ಇಂತೆಂದು ರಾಜಧರ್ಮದ ಮಾಹಾತ್ಮ್ಯವನ್ನು ಹೇಳಿದನು:—

"ರಾಜ್ಯವಿರುವುದು ಧರ್ಮಪಾಲನೆಗೆ, ರಾಜನ ಸ್ವೇಚ್ಛಾಪೂರ್ತಿಗಲ್ಲ. ಸರ್ವ ಪ್ರಾಣಿಗಳೂ ಧರ್ಮದ ಆಶ್ರಯದಿಂದ ಸುರಕ್ಷಿತವಾಗಿರುವುವು. ಧರ್ಮವು ರಾಜನ ಆಶ್ರಯದಿಂದ ಸುರಕ್ಷಿತವಾಗಿರುವುದು. ಭೂತದಯೆಯೂ ಭೂತ ರಕ್ಷಣೆಯೂ ಪರಮಧರ್ಮಗಳಾದುದರಿಂದ, ಕ್ಷತ್ರಿಯಧರ್ಮವು ನಿಂದ್ಯವಲ್ಲ. ಯಾವುದರಿಂದ ಭೂಭಾರವು ಕಳೆಯುವುದೋ ಲೋಕಕ್ಕೆ ಹಿತವಾಗುವುದೋ ಲೋಕಸಂಗ್ರಹವು ಸಾಧ್ಯವಾಗುವುದೋ ಅದನ್ನೇ ಪ್ರಾಜ್ಞರು ಧರ್ಮವೆನ್ನು ವರು. ಇಹಪರಲೋಕಗಳನ್ನು ಪರಿಭಾವಿಸಿಯೇ ಋಷಿಗಳು ಲೋಕಹಿತಾರ್ಥ ವಾಗಿ ದಂಡನೀತಿಯನ್ನು ನಿರ್ಮಿಸಿದರು. ದುಷ್ಟರನ್ನು ನಿಗ್ರಹಿಸಿ ಪ್ರಜೆಗಳನ್ನು ಪಾಲಿಸುವುದು ಅಧರ್ಮವಲ್ಲ. ಪ್ರಾಜ್ಞನೇ! ಕ್ಷಮೆಯಿಂದಾಗಲಿ ಸತ್ಯದಿಂದಾ ಗಲಿ ಪ್ರಜಾಸಮೂಹದ ಯೋಗಕ್ಷೇಮಕ್ಕೆ ಹಾನಿಬರುವ ಸಂಧವದಲ್ಲಿ ಹಿಂಸೆಯೇ ಧರ್ಮವಾಗುವುದು, ಅನೃತವೂ ಗ್ರಾಹ್ಯವೆನಿಸಿಕೊಳ್ಳುವುದು. ಪಾಪವನ್ನು ನಿವಾರಿಸದಿದ್ದರೆ ಧರ್ಮವು ಕ್ಷೀಣವಾಗುವುದು; ಲೋಕವು ಕೆಡುವುದು. ಮಹಾರಾಜನೇ! ನಿನ್ನ ಸ್ವಧರ್ಮವು ಶ್ರೇಷ್ಠವಾದುದು; ಅದನ್ನು ಪ್ರಯತ್ನಪೂರ್ವಕವಾಗಿ ಪಾಲಿಸು. ಹಿಂದೆ ಜನಕಮಹಾರಾಜನು 'ನನ್ನ ವಿತ್ತವು ಅನಂತವಾದುದು; ಆದರೂ ಅದರಲ್ಲಿ ಕಾಸುವೀಸವೂ ನನ್ನದಲ್ಲ. ಮಿಥಿಲಾನಗರವು ಬೆಂದುಹೋದರೂ ನನ್ನದೇನೂ ಹೋಗುವುದಿಲ್ಲ' ಎಂದು ಮಮಕಾರಶೂನ್ಯನಾಗಿ ರಾಜ್ಯೈಶ್ವರ್ಯವನ್ನು ಲೋಕಹಿತಾರ್ಥವಾಗಿ ಮಾಸಲುಕಟ್ಟಿ ರಾಜ್ಯವಾಳಿ ಸಿದ್ಧಿಯನ್ನು ಪಡೆದನು. ನೀನೂ ಆ ವಿದೇಹ ರಾಜನಂತೆ ಅಹಂಕಾರಮಮಕಾರಗಳನ್ನು ಬಿಟ್ಟು ನಿನ್ನ ರಾಜ್ಯವನ್ನು ಲೋಕಾ ನುಗ್ರಹಾರ್ಥವಾಗಿ ಪರಿಪಾಲಿಸು. ಅದರಿಂದ ನಿನ್ನನ್ನು ಪಾಪಲೇಶವೂ ಸೋಂಕದು; ಅಷ್ಟೇ ಅಲ್ಲ, ಉತ್ತಮಲೋಕವೂ ಪ್ರಾಪ್ತವಾಗುವುದು."

ಈ ಪ್ರಕಾರವಾಗೆಲ್ಲ ಭೀಷ್ಮನು ಯುಧಿಷ್ಠಿರನಿಗೆ ರಾಜಧರ್ಮೋಪದೇಶ ವನ್ನು ಮಾಡಲುಪಕ್ರಮಿಸಿ, ಆಪದ್ಧರ್ಮ ಮೋಕ್ಷಧರ್ಮಗಳನ್ನು ವಿಸ್ತಾರ ವಾಗಿ ಬೋಧಿಸಿ, ಧರ್ಮಾರ್ಥದಾನಾದಿ ಸಕಲ ವಿಷಯಗಳಲ್ಲಿಯೂ ಅವನಿಗಿದ್ದ ಸಂದೇಹಗಳನ್ನು ಪರಿಹರಿಸಿ ಮೌನವನ್ನು ತಾಳಿದನು.

ಭೀಷ್ಮನು ಸುಮ್ಮನಾಗುತ್ತಲೆ ಅವನನ್ನು ಬಳಸಿ ಜ್ಞಾನಾರ್ಥಿಗಳಾ ಕುಳಿತಿದ್ದ ರಾಜರೆಲ್ಲರೂ ಸ್ವಲ್ಪಹೊತ್ತು ಸ್ತಿಮಿತರಾಗಿ ಕುಳಿತರು. ಆ ಯುಧಿಷ್ಠಿರನು ಧೀಮಂತನಾದ ಕೃಷ್ಣನ ಸಮೇತನಾಗಿ ಹೋಗಿ ಭೀಷ್ಮ ಅಡಿಗೆರಗಿ ಹೋಗಿಬರಲು ಅನುಜ್ಞೆಯನ್ನು ಬೇಡಿದನು.

ಭೀಷ್ಮನು ಇಂತೆಂದು ಅನುಜ್ಞೆಯನ್ನು ಕೊಟ್ಟನು:—"ಹಸ್ತಿನಾಪುರ ಹೊರಡು. ಇನ್ನು ನಿನ್ನ ಶೋಕವನ್ನು ಬಿಟ್ಟು ಮನಸ್ಸನ್ನು ಧರ್ಮದಲ್ಲಿ ಸ ಯಾಗಿ ನಿಲ್ಲಿಸಿ ಶ್ರದ್ಧೆಯಿಂದ ಅನ್ನದಾನ ದ್ರವ್ಯದಾನಗಳನ್ನು ಮಾಡು ದೇವತೆಗಳನ್ನೂ ಪಿತೃಗಳನ್ನೂ ತೃಪ್ತಿಗೊಳಿಸು; ಅದರಿಂದ ನಿನಗೆ ಶ್ರೇ ಸ್ಸುಂಟು. ಪ್ರಜೆಗಳೆಲ್ಲರನ್ನೂ ರಂಜಿಸು. ಸುಹೃದಯರಿಗೆ ಆಶ್ರಯವನ ಕೊಟ್ಟು ಆದರಿಸು. ಪಾರ್ಥಿವನೇ! ಇನ್ನು ಹೊರಡು. ನಾನು ಭೂಲೋ ವನ್ನು ಬಿಡುವ ಸಮಯಕ್ಕೆ ಸಿದ್ಧವಾಗಿ ಬಾ."

ಕೌಂತೇಯನು ಪಿತಾಮಹನ ಪಾದಕ್ಕೆ ಬಿದ್ದು ಧೃತರಾಷ್ಟ್ರನನ ಗಾಂಧಾರಿಯನ್ನೂ ಮುಂದುಮಾಡಿಕೊಂಡು ಋಷಿಗಳು ಭ್ರಾತೃಗಳು ಮಂತ್ ಗಳು ಪುರಜನ ರಾಷ್ಟ್ರಜನರು—ಇವರೆಲ್ಲರ ಸಮೇತನಾಗಿ ಶ್ರೀಕೃಷ್ಣನನ ಒಡಗೊಂಡು ಹಸ್ತಿನಾಪುರಕ್ಕೆ ಹೋಗಿ ಅಲ್ಲಿ ಪರಿವಾರವನ್ನೆಲ್ಲ ಯಥ ನ್ಯಾಯವಾಗಿ ಆದರಿಸಿ ಬೀಳ್ಕೊಟ್ಟನು. ತರುವಾಯ, ಪತಿಪುತ್ರರನ ಕಳೆದುಕೊಂಡ ಹೆಂಗಸರನ್ನು ಅರ್ಥದಾನ ಪೂರ್ವಕವಾಗಿ ಸಂತೈಸುತ್ತ ದ್ವಿಜರು, ಯೋಧಪ್ರಮುಖರು, ಪುರವಾಸಿಗಳು, ಪ್ರಜಾಸಾಮಾನ್ಯರು ಹರಸುವಂತೆ ರಾಜ್ಯಕಾರ್ಯಗಳನ್ನು ಮಾಡುತ್ತ ಐವತ್ತು ದಿನಗಳು ಹಸ್ತಿನ ಪುರದಲ್ಲಿದ್ದನು. ಬಳಿಕ ಕೌರವ ವ್ಯಾಘ್ರನ ನಿರ್ಯಾಣಕಾಲವನ್ನು ಸ್ಮರಿ ಕೊಂಡು, ಆತನ ಸಂಸ್ಕಾರಕ್ಕೆ ಬೇಕಾದ ಸಂಭಾರವೆಲ್ಲವನ್ನೂ ತೆಗೆಯಿ ಕೊಂಡು ಕುಟುಂಬಪರಿವಾರಸಹಿತನಾಗಿ ಕೃಷ್ಣನ ಸಂಗಡ ತಾತನಿದ್ದೆಡೆ ಹೊರಟನು. ವ್ಯಾಸನಾರದಾದಿ ಋಷಿಗಳಿಂದಲೂ ರಾಜರಿಂದಲೂ ಪರಿವೃ ನಾಗಿ ವೀರಶಯನದಲ್ಲಿ ಧ್ಯಾನಪರನಾಗಿ ಮಲಗಿದ್ದ ತಾತನ ಸಮೀಪಕ್ಕೆ ಸೋದರರೊಡಗೊಂಡು ಹೋಗಿ ಅಡಿಗೆರಗಿ—"ಜಾಹ್ನವೀ ಸುತನೇ ನಮಸ್ಕಾರಮಾಡುತ್ತೇನೆ. ನಾನು ಯುಧಿಷ್ಠಿರ, ನಿನ್ನ ಅಪ್ಪಣೆಯಂತೆ ಅಗ್ನಿ ಸಹಿತವಾಗಿ ಬಂದಿದ್ದೇನೆ. ಆಚಾರ್ಯರೂ, ಋತ್ವಿಜರೂ, ಬ್ರಾಹ್ಮಣರ ಬಂದಿದ್ದಾರೆ. ನಿನ್ನ ಪುತ್ರ ಧೃತರಾಷ್ಟ್ರ ಮಹಾರಾಜನೂ ನನ್ನ ತಮ್ಮಂದಿರು ಮಂತ್ರಿಗಳು, ರಾಜರು ಆದಿಯಾಗಿ ಸರ್ವರೂ ಬಂದು ನಿಂತಿದ್ದಾರೆ; ಕೃಷ್ಣನು ಇಲ್ಲಿಯೇ ಇದ್ದಾನೆ. ನಿನ್ನ ಅಪ್ಪಣೆಯಂತೆ ಎಲ್ಲವೂ ಸಿದ್ಧವಾಗಿದೆ" ಎಂದನು

ಆ ಮಾತನ್ನು ಕೇಳಿ ಭೀಷ್ಮನು ಮೆಲ್ಲಗೆ ಕಣ್ದೆರದು ತನ್ನ ಸುತ್ತಲಿದ್ದ ಭಾರತರೆಲ್ಲರನ್ನೂ ನೋಡಿ, ಯುಧಿಷ್ಠಿರನ ಕೈಯನ್ನು ಹಿಡಿದುಕೊಂಡು ಮೇಘ ಗಂಭೀರಸ್ವರದಿಂದ—"ಕೌಂತೇಯನೇ! ಅಮಾತ್ಯರೊಡನೆ ನೀನು ಸಕಾಲಕ್ಕೆ ಬಂದಿರುವುದು ನನ್ನ ಪುಣ್ಯವೇ ಸರಿ. ದಿವಾಕರನು ಉತ್ತರಾಯಣವನ್ನು ಪ್ರವೇಶಮಾಡಿದ್ದಾನೆ. ನಾನು ಐವತ್ತೆಂಟು ರಾತ್ರಿಗಳು ಈ ಶರಶಯನದಲ್ಲಿ ಮಲಗಿದ್ದು ನೂರು ವರ್ಷಗಳನ್ನು ಕಳೆದಂತೆ ಕಳೆದೆನು. ಇದು ಮಾಘಮಾಸ, ಶುಕ್ಲಪಕ್ಷ, ಅಷ್ಟಮಿ" ಎಂದು ನುಡಿದು ಆ ಯೋಗಿಯು ಧೃತರಾಷ್ಟ್ರನ ಕಡೆಗೆ ತಿರುಗಿ—

"ರಾಜನೇ! ನೀನು ಬಹುಶ್ರುತರಾದ ಬ್ರಾಹ್ಮಣರ ಉಪಾಸನೆ ಮಾಡಿದವನು; ವೇದಾದಿ ಸಕಲ ಶಾಸ್ತ್ರಗಳನ್ನೂ ಧರ್ಮಶಾಸ್ತ್ರಗಳನ್ನೂ ಬಲ್ಲವನು; ಶೋಕಿಸಬೇಡ; ಆಗುವುದಾಯಿತು. ದೇವರಹಸ್ಯಗಳೆಲ್ಲವನ್ನೂ ನೀನು ವ್ಯಾಸಾದಿಗಳಿಂದ ಕೇಳಿದ್ದೀಯೆ. ಯುಧಿಷ್ಠಿರಾದಿಗಳು ಪಾಂಡುವಿನ ಮಕ್ಕಳು ಹೇಗೋ ಹಾಗೆ ಧರ್ಮತಃ ನಿನ್ನ ಮಕ್ಕಳಾಗಿಯೂ ಇರುವರು. ಅವರು ಗುರುಶುಶ್ರೂಷೆಯಲ್ಲಿ ನಿರತರು. ನೀನು ಅವರನ್ನು ಸಲಹು. ಧರ್ಮರಾಜನು ಶುದ್ಧಾತ್ಮನು, ನಿನ್ನಾಜ್ಞೆಯಲ್ಲಿರುವವನು, ಅಹಿಂಸಾಪರನು. ನಿನ್ನ ಮಕ್ಕಳು ದುರಾತ್ಮರು, ಕ್ರೋಧ ಲೋಭಪರರು; ಈರ್ಷ್ಯಾಪರತಂತ್ರರಾಗಿ ದುಷ್ಟ ಕಾರ್ಯಗಳನ್ನು ಮಾಡುತ್ತಿದ್ದರು; ಅವರನ್ನು ಕುರಿತು ನೀನು ಹಂಬಲಿಸಬೇಡ" ಎಂದು ಸಮಾಧಾನ ಹೇಳಿದನು.

ಆ ಬಳಿಕ ಕೌರವನು ಮಹಾಬಾಹುವಾದ ವಾಸುದೇವನನ್ನು ಸಂಬೋಧಿಸಿ—"ದೇವ ದೇವೇಶ! ನಮಸ್ಕಾರ! ಪುರುಷೋತ್ತಮನೇ! ನೀನು ಸರ್ವಲೋಕಶರಣ್ಯ; ನನ್ನನ್ನು ಸಲಹು. ಇಹಲೋಕದಿಂದ ಹೊರಡುವೆನು; ಅನುಜ್ಞೆಯನ್ನು ಕೊಡು. ಪಾಂಡವರಿಗೆ ನೀನೇ ದಿಕ್ಕು; ಅವರನ್ನು ರಕ್ಷಿಸು. ನಾನು ದುರ್ಯೋಧನನಿಗೆ—ಯತಃ ಕೃಷ್ಣಸ್ತತೋ ಧರ್ಮಃ ಯತೋ ಧರ್ಮಸ್ತತೋ ಜಯಃ—'ಎಲ್ಲಿ ಕೃಷ್ಣನೋ ಅಲ್ಲಿ ಧರ್ಮ; ಎಲ್ಲಿ ಧರ್ಮವೋ ಅಲ್ಲಿ ಜಯ' ಎಂದು ಅಡಿಗಡಿಗೂ ಹೇಳುತ್ತ ವಾಸುದೇವನ ಸಮಾಶ್ರಯವನ್ನು ಸಂಪಾದಿಸಿ ಪಾಂಡವರ ಸಂಗಡ ಸಂಧಿಮಾಡಿಕೊ, ಇದು ಸಮಯ, ಇದು ಸಮಯ ಎಂದು ಸಾರಿಸಾರಿಗೂ ಮೊರೆಯಿಟ್ಟೆನು. ಆ ಮೂರ್ಖನು ನನ್ನ ಮಾತನ್ನು ಕೇಳದೆ ಪೃಥ್ವಿಯನ್ನು ನಾಶಮಾಡಿದನು. ಕಡೆಗೆ ತಾನೂ ಹತನಾದನು" ಎಂದು ನುಡಿದನು.

ಭಾ
ಗಂ

ವ್ಯಾ
ಹೇ
ಗು

ಬೇಡ
ಅ
ಧಿಸಿ —

ಘು
ಅಲ್ಲಿ
ನೇ

ಹ